# THE BOOK WAS DRENCHED

UNIVERSAL LIBRARY

OU_198598

UNIVERSAL LIBRARY

ಮನೋಹರ ಗ್ರಂಥಮಾಲೆಯ ಒಂಬತ್ತನೆಯ ಕುಸುಮ

# ಕಾಳರಾತ್ರಿ

(ಆಧ್ಯಾತ್ಮಿಕ ಜೀವನ ಚಿತ್ರ)

ಮಧುರಚೆನ್ನ

ಡಿಸೆಂಬರ ೧೯೩೪]

[ಬೆಲೆ ೧೨ ಆಣೆ

ಪ್ರಕಾಶಕರು:

**ಗೋವಿಂದ ಭೀಮಾಚಾರ್ಯ ಜೋಶಿ**

ಮನೋಹರ ಗ್ರಂಥಮಾಲಾ ಕಾರ್ಯಾಲಯ

ಧಾರವಾಡ

ಮುದ್ರಕರು:

**ಬಳವಂತ ನಾರಾಯಣ ಬಾಗಲವಾಡಿ**

ಮೋಹನ ಮುದ್ರಾಲಯ ಧಾರವಾಡ

# ಅರಿಕೆ

ಕ್ಷಮಿಸಬೇಕು:—

ಈ 'ಕಾಳರಾತ್ರಿ'ಯು ಡಿಸೆಂಬರ ಮೊದಲ ವಾರದೊಳಗಾಗಿ ಚಂದಾದಾರರ ಕೈಸೇರಬೇಕಾಗಿತ್ತು. ಆದರೆ ಕಾಗದಗಳು ವೇಳೆಗೆ ಸರಿಯಾಗಿ ಒರಲಿಲ್ಲ; ಬಂದ ಮೇಲೂ ರೇಲ್ವೆರಸೀದಿಯನ್ನು ಕಂಪನಿಯವರು ಕಳೆದುಕೊಂಡದ್ದರಿಂದ ನಮ್ಮ ಕೈಗೆ ಬರಬೇಕಾದರೆ ಮತ್ತೆ ೧೫—೨೦ ದಿನ ತಡವಾಯಿತು. ಹೀಗೆ ಅಕಲ್ಪಿತ ಅಡಚಣೆಯು ಬಂದೊದಗಿದ್ದರಿಂದ ಇದು ಹೊರಡಲು ವಿಲಂಬವಾಯಿತು. ಸಹೃದಯರಾದ ಚಂದಾದಾರರು ಅನ್ಯಥಾಭಾವಿಸದೆ ನಮ್ಮನ್ನು ಕ್ಷಮಿಸಬೇಕು.

ಭರವಸೆ:—

ಕಾಳರಾತ್ರಿಗಾಗಿ ಹಾದೀ ನೋಡಿ ನೋಡಿ ಬೇಸತ್ತಿದ್ದ ಚಂದಾದಾರರಿಗೆಲ್ಲ ಈಗ ಸಂಭವಿಸಿದ ಕಾಲವಿಲಂಬದ ಅವಕಾಶವನ್ನು ಎರಡು ತಿಂಗಳಲ್ಲಿಯೆ ತುಂಬಿ ಕೊಡುತ್ತೇವೆಂದು ನಾವು ವಿಶ್ವಾಸದಿಂದ ಭರವಸೆ ಕೊಡುತ್ತೇವೆ.

ಕಾಳರಾತ್ರಿ:—

ಕಾಳರಾತ್ರಿಯ ಬಗ್ಗೆ ಹೇಳಬೇಕಾದುದನ್ನೆಲ್ಲ ಶ್ರೀ. ದ. ರಾ. ಬೇಂದ್ರೆಯವರೂ, ಮಧುರಚೆನ್ನರೂ ಮುನ್ನುಡಿಯಲ್ಲಿ ಹೇಳಿಯೇ ಬಿಟ್ಟಿದ್ದಾರೆ. ಈ ತರಹದ ಗ್ರಂಥಗಳನ್ನು ಚಂದಾದಾರರಿಗೆ ಕೊಡಬಹುದೇ? ಎಂಬುದರ ವಿಷಯಕ್ಕೆ ಮಾತ್ರ ಒಂದೆರಡು ಮಾತು ಹೇಳಬಯಸುತ್ತೇವೆ.

ಕಾಳರಾತ್ರಿಯು ಕೆಲವರಿಗೆ ಹಿಡಿಯುವದಿಲ್ಲೆಂಬ ಮಾತನ್ನು ನಾವೂ ಒಪ್ಪುತ್ತೇವೆ; ಆದೇಕೆ? ಬಹಳ ಜನರಿಗೆ ಹಿಡಿಯುವುದಿಲ್ಲೆಂಬದನ್ನೂ ಒಪ್ಪುತ್ತೇವೆ. ನಾವು ಹೋದ ವರ್ಷದಲ್ಲಿ ಕೊಟ್ಟ ತ್ರಿಪುರದಹನಕ್ಕೂ ಇದೇ ರೀತಿಯ ಅಭಿಪ್ರಾಯವಿದ್ದಿತು. ತ್ರಿಪುರದಹನವನ್ನು ತೆಗಳಿದವರೆಲ್ಲ 'ನಮಗೆ ತಿಳಿಯಲಿಲ್ಲ' ಎಂದೇ ಹೇಳಿದರು. ಆದರೆ ಅದೇ ತ್ರಿಪುರ

ದಹನವನ್ನು ತಲೆಯಮೇಲಿಟ್ಟುಕೊಂಡು ಕುಣಿದಾಡಿದವರೂ ಉಂಟು, (ಇದು ಅತಿಶಯೋಕ್ತಿಯಲ್ಲ) ಎಂಬ ಮಾತನ್ನೂ ನಾವು ತೆಗಳುವವರಿಗೆ ತಿಳಿಸದಿರಲಾರೆವು. ಹಾಗೇ ಕಾಳರಾತ್ರಿಯು ಒಗ್ಗದಿಯೂ ಸಂಭವಿಸಬಹುದು. ಇದು ನಮಗೆ ತಿಳಿದಿಲ್ಲವೆಂತಲ್ಲ. ಬಹುಜನರಿಗಾಗಿ ನಾವು ಆರು ಪುಸ್ತಕಗಳಲ್ಲಿ ಐದು ಪುಸ್ತಕಗಳನ್ನು ಕೊಟ್ಟಿದ್ದೇವೆ, ಕೊಡುತ್ತಲಿದ್ದೇವೆ, ಕೊಡಬೇಕೆಂದಿದ್ದೇವೆ. ತ್ರಿಪುರದಹನ, ಕಾಳರಾತ್ರಿಗಳಂತಹ ಪುಸ್ತಕಗಳಿಗಾಗಿಯೇ ಹಾತೊರೆಯುವ ಜನರಿದ್ದಾರೆ. ಅವರು ಕಡಿಮೆ ಇರಬಹುದು. ಆದರೆ ಅವರ ಒಳಗಿನ ಅಪೇಕ್ಷೆಯನ್ನು ನಾವು ಮರೆಯಲಾಗುವುದಿಲ್ಲ. ಅಂತಹ ಜನರಿಗಾಗಿ ಒಂದು ವರ್ಷದಲ್ಲಿ ಒಂದು ಇಂತಹ ಪುಸ್ತಕವನ್ನು ಕೊಡುವುದು ಅನ್ಯಾಯವಲ್ಲವಷ್ಟೇ ?

ಕನ್ನಡಿಗರಲ್ಲಿ ಬೇಡಿಕೆ:-

ಕನ್ನಡ ಸಾಹಿತ್ಯದಲ್ಲಿ ಹೊಸಬಗೆಯ ಪುಸ್ತಕಗಳನ್ನು ಪ್ರಸಿದ್ಧಿಸಿ, ನವಚೈತನ್ಯವನ್ನು ಹುಟ್ಟಿಸುತ್ತಿರುವ ಈ ಮನೋಹರ ಗ್ರಂಥಮಾಲೆಗೆ ಕನ್ನಡಿಗರೆಲ್ಲರೂ ಉದಾರಾಂತಃಕರಣದಿಂದ ಬೆಂಬಲಕೊಡಬೇಕೆಂದು ನಾವು ಬೇಡಿಕೊಳ್ಳುತ್ತೇವೆ. ಪೋಷಕರಾಗಿಯಾಗಲಿ, ಸಹಾಯಕರಾಗಿಯಾಗಲಿ, ಕೊನೆಗೆ ಚಂದಾದಾರರಾಗಿಯಾಗಲಿ, ನಮ್ಮ ಬೇಡಿಕೆಯನ್ನು ಕನ್ನಡಿಗರು ಪೂರ್ಣಗೊಳಿಸಬೇಕೆಂದು ನಮ್ಮ ಆಶೆ.

ಕೃತಜ್ಞತೆ.-

ತಮ್ಮ ದೈಹಿಕ ಕಷ್ಟಗಳಲ್ಲಿಯೂ ಕೂಡಾ ನಮ್ಮ ಸಲುವಾಗಿ ಈ 'ಕಾಳರಾತ್ರಿ'ಯನ್ನು ಬರೆದುಕೊಟ್ಟುದಕ್ಕಾಗಿ ನಾವು 'ಮಧುರಚೆನ್ನ'ರಿಗೆ ತುಂಬಾ ಋಣಿಯಾಗಿದ್ದೇವೆ. ನಮ್ಮ ಮಾಲೆಯ ಪುಸ್ತಕಗಳೆಲ್ಲ ೧೫೦ ಪುಟಗಳಷ್ಟೇ ಇರುವುದರಿಂದ 'ಕಾಳರಾತ್ರಿ'ಯ ಇನ್ನೊಂದು ಭಾಗವು ಹಾಗೆಯೇ ಉಳಿಯಿತು. ಅದನ್ನೂ ಯಥಾವಕಾಶ ಮಾಲೆಯಿಂದಲೇ ಕೊಡಬೇಕೆಂದು ಮಾಡಿಕೊಂಡಿದ್ದೇವೆ.

**ಸಂಚಾಲಕರು**

# ಮುನ್ನುಡಿ

ಗೆಳೆಯ 'ಮಧುರ ಚೆನ್ನ'ರ 'ನನ್ನನಲ್ಲ' (ಕವನಸಂಗ್ರಹ), 'ಪೂರ್ವರಂಗ'ಗಳಾದ ಮೇಲೆ ಈ 'ಕಾಳರಾತ್ರಿ' ಬರುತ್ತಿದೆ. 'ಮರ್ಕಟ ವಿಚಾರ'ದಲ್ಲಿ ಕುತರ್ಕಗಳೊಡನೆ ಗುದ್ದಾಡಿ ಬುದ್ಧಿಯ ಬಲವನ್ನು ಪಡೆದು, 'ಮಧುರಗೀತ'ದಲ್ಲಿ ಹೃದಯಶುದ್ಧಿಯನ್ನು ಹೊಂದಿ 'ನನ್ನನಲ್ಲ'ದಲ್ಲಿ ಸಂಜೀವನಸ್ಪರ್ಶದಿಂದ ಶಾಂತಿಗರ್ಭಾದಾನವನ್ನು ಪಡೆದರು ಇವರು. 'ಪೂರ್ವರಂಗ'ದಲ್ಲಿ ಇದರ ಕಥೆ ಹೇಳಲಾಗಿದೆ. ಆದರೆ ಶಾಂತಿಯಿಂದ ಆನಂದಕ್ಕೆ ಅಲಕ್ಕನೆ ಜಿಗಿಯಲು ಬರುವದಿಲ್ಲ. ಇಟ್ಟ ಗರ್ಭವು ನೆಲೆಹಿಡಿದು ನಿಲ್ಲಬೇಕು, ಬೆಳೆಯಬೇಕು; ಅದಕ್ಕೆ ಕಾಲವು ಬೇಕು. ಹಾದಿಯಲ್ಲಿ ಕುತ್ತುಗಳಿವೆ. ಸ್ವಾತ್ಮಶಾಂತಿಯು ಸರ್ವಾತ್ಮಪ್ರೇಮ ದಲ್ಲಿ ಮಾಗದಿದ್ದರೆ ಪರಮಾತ್ಮನ ಆನಂದಕ್ಕೆ ಬೇರೆ ಹಾದಿಯಿಲ್ಲ. 'ಕಾಳ ರಾತ್ರಿ'ಯಲ್ಲಿ ಶಾಂತಿಯು ಸ್ಥಾಯಿಯಾಗಿ ನಿಂತು ಕರುಣೆಯ ಕುರುಹು ಗಳನ್ನು ಕಂಡು ಪ್ರೇಮದ ಪಾಠಗಳನ್ನು ಕಲಿಯಲು ಹವಣಿಸುತ್ತಿದೆ. 'ಕಾಳರಾತ್ರಿ'ಯು ಓಸರಿಸಿ ನಸುಕು ಹರಿಯಲಿದೆ.

'ಪೂರ್ವರಂಗ'ದೊಳಗಿನ 'ವೈಷಮ್ಯಖಂಡ'ದಲ್ಲಿ ಪ್ರಕಟವಾದ ಕೆಲವಿಚಾರಗಳು ಕೆಲವರಿಗೆ ನೋವು ಉಂಟುಮಾಡಿವೆ ಎಂದು ನಾನು ಕೇಳಿದ್ದೇನೆ. ಜ್ಞಾನಭಿಕ್ಷುವಿನ ಪರವಾಗಿ ನಾನು ಇಷ್ಟು ಹೇಳಬಲ್ಲೆ—ಜ್ಞಾನಭಿಕ್ಷುವು ಈಗ ಹೊರಟಿರುವದು ಬೇರೆಯವರ ಬೆಲೆಯನ್ನು ಕಟ್ಟಲು ಅಲ್ಲ; ತನ್ನ ನೆಲೆಯನ್ನು ಹುಡುಕಲು. ಅಲ್ಲಲ್ಲಿ ಬೆಲೆಯ ಮಾತು ಬಂದರೆ ಅದು ಪ್ರಾಸಂಗಿಕ, ಪ್ರಮುಖವಲ್ಲ. ಇದೂ ಅಲ್ಲದೆ, ಆ ಬೆಲೆಯು ಜ್ಞಾನಭಿಕ್ಷುವಿನ ತಿಳುವಳಿಕೆಯ ಶಕ್ತಿ ಅಶಕ್ತಿಗಳನ್ನು ಸೂಚಿಸುವದು. ಜ್ಞಾನಭಿಕ್ಷುವಿಗಿಂತ ಅಧಿಕಪ್ರಜ್ಞರಾದ ಜನರು ಅವನ ಮಾತಿಗೆ ನೊಂದು ಕೊಳ್ಳುವ ಕಾರಣವಿಲ್ಲ.

ಇಂಥ ಪುಸ್ತಕಗಳ ಪ್ರಯೋಜನವೇನು ? ಎಂದು ಕೇಳುವ ಜನರೂ ಇದ್ದಾರೆ. ಕನ್ನಡ ಅಭಿನವಸಾಹಿತ್ಯದಲ್ಲಿ ಈ ಬಗೆಯ ಬರೆವಣಿಗೆಯೂ

ಒಂದು ಭೂಷಣವಾಗಿದೆ. ಇದು ಸತ್ಯಸಾಹಿತ್ಯ. 'ಕಾಳರಾತ್ರಿ'ಯ ಶೈಲಿಯಲ್ಲಿ ಒಂದು ಪ್ರಭಾವವಿದೆ, ಸ್ಥೈರ್ಯವಿದೆ; ವರ್ಣನೆಗಳಲ್ಲಿ ಸೊಗಸಿದೆ; ವಿಚಾರಗಳನ್ನು ಸಂಕ್ಷೇಪವಾಗಿಯೂ ವಿಸ್ತಾರವಾಗಿಯೂ ಮಂಡಿಸುವಲ್ಲಿ ಜಾಣ್ಮೆಯಿದೆ, ಜೋಕೆಯಿದೆ: ಎಲ್ಲೆಲ್ಲಿಯೂ ಪ್ರಾಮಾಣಿಕತೆಯು ಹೊರಸೂಸುತ್ತಿದೆ, ನಟನೆಯಿಲ್ಲ; ಪಗರಣವಿಲ್ಲ. ಇಲ್ಲಿಯ ವಾಸ್ತವತೆಯಲ್ಲಿ ಪ್ರಸನ್ನಗಂಭೀರತೆಯು ಅಲ್ಲಲ್ಲಿ ಸೇಡಿಕೊಂಡಿದೆ. ಸಾಹಿತ್ಯದೃಷ್ಟಿಯಿಂದ ಕೂಡ ಇದು ಬೇಕಾದ ಪುಸ್ತಕವು.

ಬರೆದವರೇನು ಮಹಾ ಅನುಭಾವಿಗಳೋ ? ಎಂದು ದರ್ಪದಿಂದ ದಿಟ್ಟಿಸಿ ಕೇಳಬಹುದು. 'ಅಂಧನ ಶಿಶು' ಎಂದು ಬರೆದವರೇ ಹೇಳಿದ್ದಾರೆ. ಇದು ವಿನಯವಲ್ಲ; ಸತ್ಯ. ಅಂತೂ ಮೇಲಿನ ಜಾತಿಗೆ ಸೇರಿದವರು ಎನ್ನಿ– ಎಂದು ಕೆಣಕಿ ಕೇಳಬಹುದು. ಮೇಲೋ-ಕೀಳೋ ಅದು ಜನರು ಕೊಡಬೇಕಾದ ಬೆಲೆ. ಅವರು ತಮ್ಮ ಜೀವದ ರೀತಿಯನ್ನು ಜಗದ ಮುಂದಿಟ್ಟಿದ್ದಾರೆ. ಸಂತೆಯಲ್ಲಿ ಮನೆಯನ್ನು ಕಟ್ಟಿ ಶಬ್ದಕ್ಕೆ ಹೆದರುವ ಸ್ವಭಾವದವರೇನೂ 'ಮಧುರಚೆನ್ನ'ರಲ್ಲ. ಅನುಭವವಿಲ್ಲದೆ ಶಾಸ್ತ್ರವು ಉಪಯೋಗಕ್ಕೆ ಬಾರದು ಎಂದು ಅವರೇ ಸಾರುತ್ತಿರುವಾಗ ಅವರೀ ಗ್ರಂಥದಿಂದ ಕ್ರಾಂತಿಯಾದೀತೆಂದು ಅವರೂ ನಂಬಿ ಕೂತಿಲ್ಲ. ವಸಂತ ಪ್ರಾರಂಭವಾದ ಕೂಡಲೆ ಎಲ್ಲ ಕೋಗಿಲೆಗಳೇನು ಕೂಡಿಯೇ ಕೂಗುವದಿಲ್ಲ; ಎಲ್ಲ ಗಿಡಗಳೂ ಒಮ್ಮೆಲೆ ಚಿಗಿಯುವದಲ್ಲ. ಕರ್ನಾಟಕದೊಳಗಿನ ಆಧ್ಯಾತ್ಮವಸಂತಸಮಯವನ್ನು ಸೂಚಿಸುವ ಕುಕಿಲು, ಚಿಗುರು ಇವರ ಬರೆಹ. ಬೇರೆ ಕೋಗಿಲಗಳಿಗೆ ಕಂಠ ಬರಬಹುದು, ಮಾಮರಗಳಿಗೆ ಚಿಗುರೊಡೆಯಬಹುದು ಈ ಸೂಚಕಧ್ವನಿಯಿಂದ.

ಈ ಪುಸ್ತಕದೊಳಗಿನ ಕೆಲವು ಮಾತುಗಳು ಅಷ್ಟು ಸಯುಕ್ತಿಕವಾಗಿ ತೋರಲಾರವು; ದೀಪದ ದೃಷ್ಟಾಂತ, ಗಡಿಯಾರದ ಸೂಚನೆ, ಜ್ಯೋತಿಷ್ಯದ ವಿಚಾರ ಮೊದಲಾದುವು ಅದಕ್ಕೆ ಉದಾಹರಣೆಗಳು. ಅವು ಬರೆಯುವವರ ಲಹರಿಗಳು ಎಂದು ಬಿಡಬಹುದು. ಗ್ರಂಥದ ನಿಜವಾದ ಕೆಚ್ಚು ಆತ್ಮದ 'ಕಾಳರಾತ್ರಿ'ಯ ಮಾನಸಶಾಸ್ತ್ರದಲ್ಲಿದೆ. ಮಧುರಚೆನ್ನರು ತಮ್ಮ ಅನುಭವಕ್ಕೆ ಹತ್ತೂದಿಕ್ಕಿನಿಂದ ಶಾಸ್ತ್ರದ,ಅನುಭಾವಿಗಳ,

ಪ್ರಮಾಣಗಳನ್ನೊದಗಿಸಿದ್ದಾರೆ. ಲೇಖಕರು ಶಾಲೆಯಲ್ಲಿ ಕಲಿತದ್ದು ಕನ್ನಡ ಮುಲ್ಕೀಪರೀಕ್ಷೆಯ ವರೆಗೆ. ಇರುವದು ಹಳ್ಳಿಯಲ್ಲಿ. ಯಾವಾಗಲೂ ಹತ್ತರದಲ್ಲಿರುವ ಗೆಳೆಯರೂ ಅದೇ ಜಾತಿಗೆ ಸೇರಿದವರು. ಆದರೆ 'ಮಧುರಚೆನ್ನರ' ಜ್ಞಾನಲಾಲಸೆಯು ಅವರ ಸಾಧನೆಯಂತೆಯೇ ಅತಿ ತೀವ್ರತರವಾದದ್ದು. ಜೇನಹಂಕ ಚಿನಿವಾಲನಂತೆ ತನ್ನ ಕಡೆಗೆ ಬಂದದ್ದು, ಎಂಥ ಬಂಗಾರವೆಂದು ಅದರ ಬಣ್ಣವನ್ನು ಬೇರೆ ಬೇರೆ ಒರೆಗಲ್ಲಿಗೆ ಹಚ್ಚುವದು ಅವರ ಅವಿಶ್ರಾಂತ ಉತ್ಸಾಹ, ಪ್ರಯತ್ನ, ವಿವೇಕ. ಇಂಗ್ಲೀಷ, ಮರಾಠೀ, ಸಂಸ್ಕೃತ, ಬಂಗಾಲೀ, ಹಿಂದೀ ಸಾಹಿತ್ಯಗಳನ್ನು ಅನುಕೂಲಿಸಿದಷ್ಟೂ ತಿರುವಿಹಾಕಿದ್ದಾರೆ ಸ್ವಪ್ರಯತ್ನದಿಂದ ಅವರ ಅಂತಃಕರಣದಂತೆಯೇ ಅವರ ಬುದ್ಧಿಯೂ ಚೂಪಾಗಿದೆ. 'ಕಾಳರಾತ್ರಿ'ಯಲ್ಲಿ ಇದಕ್ಕೆ ಸಾಕಷ್ಟು ಪ್ರತ್ಯಂತರಗಳಿವೆ. ಇಷ್ಟಾಗಿ ಅವರ ವಯಸ್ಸು ಮೂವತ್ತರ ಸೀಮೆಯನ್ನು ಈಗ ದಾಟಲಿದೆ. ಇಂಥವರ ಆಯುರಾರೋಗ್ಯವೂ ನಾಡಿನ ಭಾಗ್ಯದಲ್ಲೊಂದು. ಅವರ ಬರೆಹಗಳನ್ನೋದಿ ನಾಡಿನಲ್ಲಿ ಆಧ್ಯಾತ್ಮಿಕ ಜಾಗೃತಿಯೂ ವಿವೇಕವೂ ಕುದುರಿದರೆ ಅದಕ್ಕಿಂತ ಬೇರೆ ಸಾಫಲ್ಯವುಂಟೇ ? ಅವರ ಅನುಭವ ಬೇರೆಯವರಿಗೆ ಉದ್ದೀಪನ ಮಾತ್ರ. ಕನ್ನಡನಾಡನ್ನು ಮುಸುಕಿದ ಕಾಳರಾತ್ರಿಯು ಹರಿದು ಹೋಗುವ ವರೆಗೆ ಅನೇಕ ಚಿಕ್ಕೆಗಳು ಬೇಕು. ಸೂರ್ಯಚಂದ್ರಮರು ಬರುವ ಕಾಲಕ್ಕೆ ಬರುವರು.

'ಕಾಳರಾತ್ರಿ'ಯಲ್ಲಿ ಜ್ಞಾನಭಿಕ್ಷುವಿನ ಸತ್ಯದೃಷ್ಟಿಗೆ ಬದ್ಧ ಚತುರ್ಮುಖ ಸಿದ್ಧಾಂತವು ವಿಚಾರದ ಆಳವನ್ನೂ ವಿಸ್ತಾರವನ್ನೂ ಸೂಚಿಸುವದು. ಪರಸ್ಪರ ವಿರುದ್ಧ ಸಿದ್ಧಾಂತಗಳಲ್ಲಿ ಒಂದು ಸುಳ್ಳಿರಲೇಬೇಕು ಎಂಬುದು ಇಂದು ವಿಚಾರದ ಭೌತಿಕ ವಾದ. ಒಂದೇ ಕಾಲಕ್ಕೆ ಒಂದೇ ಸ್ಥಳದಲ್ಲಿ ಎರಡುವಸ್ತುಗಳಿರಲಾರವು ಎಂಬುದರ ಉಪಸಿದ್ಧಾಂತವಿದ್ದಂತೆ. ವಸ್ತುವೆಂದರೇನು ಎಂಬ ಮಾತನ್ನು ಸದ್ಯಕ್ಕೆ ಬದಿಗಿಟ್ಟು, ಕಂಡದ್ದೆ ವಸ್ತುರೂಪ ಎಂದಿಟ್ಟುಕೊಂಡರೆ ಒಂದೇ ಕಾಲಕ್ಕೆ ಒಂದೇ ಸ್ಥಳದಲ್ಲಿರುವ ವಸ್ತುವು ಅನೇಕರಿಗೆ ಅನೇಕರೂಪವಾಗಿ ತೋರುವದೆಂಬುದು ತೀರ ವಾಸ್ತವಸತ್ಯವೆಂದು ಕಂಡುಬರುವದು. ಕುರುಡರು ಆನೆಯ ಗುರು

ತಿಸುವ ನ್ಯಾಯದಂತಲ್ಲ; ಕಣ್ಣಿದ್ದವರು ಯಾವ ವಸ್ತುವನ್ನೂ ನೋಡು ವಾಗ ಅನುಭವಕ್ಕೆ ಬರುವ ನ್ಯಾಯವಿದು. ದೃಷ್ಟಿಯು ವ್ಯಾಪ್ತಿಯು ಸ್ವರೂಪದಷ್ಟಿಲ್ಲ. ಆದಕಾರಣ ದರ್ಶನಗಳಲ್ಲೆಲ್ಲ ರೂಪದ ವರ್ಣನೆಯೂ ಸ್ವರೂಪದ ಸೂಚನೆಯೂ ಇದೆ. ಇಂದಿನ ಭಾಷಾ ಸಂಕೇತವೂ ಇಂದಿನ ದೃಷ್ಟಿಯಂತೆ ಸಂಕುಚಿತವಾಗಿದೆ. ದೃಷ್ಟಿಭೇದದಿಂದ ರೂಪಭೇದವು, ರೂಪಭೇದದಿಂದ ದರ್ಶನಭೇದವೂ ಉಂಟಾಗಿರುವದಲ್ಲದೆ, ಭೇದಕ್ಕೆ ವಿರೋಧದ ಛಾಯೆ ತಾಕಿ ರೂಪದೊಳಗಿನ ಸ್ವರೂಪದ ಧ್ವನಿಯು ಗೋಚ ರವಾಗುವದು ಮರೆಯಾಜಿ, ಖಂಡನಮಂಡನ ಶಾಸ್ತ್ರಶಸ್ತ್ರದಿಂದ ಅಖಂಡವು ಖಂಡಿತವಾಗಿಯೂ **ಖಂಡಿತ**ವಾಗಿದೆ. ಸತ್ಯದ ಸಕಲ ಸೀಮೆ ಗಳನ್ನೊಳಗೊಳ್ಳುವ ದೃಷ್ಟಿ ಬೇಕಾಗಿದೆ ನಮಗೆ. ಪ್ರಕೃತಿಧರ್ಮಸಂಕೇತ, ಜೀವಪಿಂಡಸಂಕೇತ, ವಿಶ್ವಬ್ರಹ್ಮಾಂಡಸಂಕೇತ, ಪರಮೇಶಸಂಕೇತ ಈ ನಾಲ್ಕು ಕೋಣಗಳನ್ನು 'ಮಧುರಚೆನ್ನ'ರು ಕಂಡಿದ್ದಾರೆ. ಅದ ನ್ನುಂಡು ಅದು ಮೈಗೊಂಡ ಹೊತ್ತಿಗೆ ಪ್ರೇಮದ ಉದಯ.

ಪ್ರೇಮವೆಂಬ ಶಬ್ದವು ಹೊಲೆಬಳಕೆಗಿಳಿದುಬಿಟ್ಟಿದೆ. ಮಹತ್ತಮ ವಾದ ಶಬ್ದಗಳ ಹಣೆಬರಹವೇ ಇದೋ! ರಾಗ, ಅನುರಾಗ, ಆಕರ್ಷಣ, ಆಸೆ, ವಾಸನೆ, ಇಚ್ಛೆ, ಸ್ವಾಮಿ-ಗುರು-ಮಾತಾಪಿತೃ- ದೇವತಾ ಭಕ್ತಿ ಸ್ವರಾಜ್ಯ-ಸಾಮ್ರಾಜ್ಯ- ವೈರಾಜ್ಯ-ಸ್ವಾತಂತ್ರ್ಯಗಳ ಊರ್ಮಿ, ಕಾಮ- ರತಿ, ಇವೆಲ್ಲವೂ ಪ್ರೇಮದ ರೂಪಗಳು. 'ಅಹಿಂಸಾ ಪ್ರತಿಷ್ಠಾಯಾಂ ವೈರತ್ಯಾಗಃ' ಎಂದು ದರ್ಶನವು ಸಾರಿದ್ದರೂ ಇತಿಹಾಸವು ಮಾತ್ರ ವೈರಿಗಳಿಲ್ಲದ ವಿಭೂತಿಗಳನ್ನು ಇನ್ನೂ ತೋರಿಸಿಲ್ಲ. ಅಹಿಂಸಾಸಿದ್ಧನಲ್ಲಿ ಪಶುಪಕ್ಷಿ ಕ್ರಿಮಿಕೀಟಕಗಳು ವೈರವನ್ನು ಬಿಡಬಹುದು, ಮಾನವನು ಬಿಡಬಹುದೇ? ಅತಿ ದುಃಖಕ್ಕೂ ವಿಚಲನೆ ಹೊಂದದ ಯೋಗಿಗಳಿರಬ ಹುದು, ಆದರೆ ಇನ್ನೊಬ್ಬರಿಗೆ ದುಃಖಕೊಡಬೇಕೆಂಬ ಮಾನವನ ಪ್ರವೃ ತ್ತಿಯನ್ನು ನಿವೃತ್ತಿಗೊಳಿಸುವ ಸಾಮರ್ಥ್ಯವು ಮಾನವ ಮಹಾತ್ಮರ ಪ್ರೇಮರಸಾಯನದಲ್ಲಿ ಪರಿಪಾಕಕ್ಕೆ ಬಂದಿಲ್ಲವೆನ್ನಬೇಕಾಗುವದು. ಅಜಾತಶತ್ರುವೂ ಶತ್ರುಗಳಿರದೆ ಇರಲಿಲ್ಲ. ಪ್ರೇಮವು ಇಂದು ಅತಿಮಾನ ವರ ಕಣಸಾಗಿದೆ, ಬರಲಿರುವ ಪ್ರತಿದೇವನ ಮನಸ್ಸೇ ಅದೋ, ಕಾಲವು ಸಾಕ್ಷಿಗೊಡಬೇಕು.

**ದ. ರಾ. ಬೇಂದ್ರೆ**

# ಕಾಳರಾತ್ರಿ

## (ಮಧ್ಯರಂಗ)

"ವಿದ್ಯಾನಾಂ ಅಧ್ಯಾತ್ಮ ವಿದ್ಯಾ"

—ಗೀತೆ

"*It is no small matter,*
*to gain or to lose*
*the Kingdom*
*of God.*"

—IMITATION OF CHRIST

'ಮಧುರಚೆನ್ನ'

ಒಂದು ವರ್ಷದಲ್ಲಿ ೧೫೦ ಪುಟಗಳುಳ್ಳ ಆರು ಸರಸ ಗ್ರಂಥಗಳು

ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩-೮-೦ ಮಾತ್ರ

ಮನೋಹರ ಗ್ರಂಥಮಾಲೆಯ ೧೦ನೆಯ
ಕುಸುಮ

# ಧರ್ಮಸೆರೆ

**[ಸಾಮಾಜಿಕ ಕಾದಂಬರಿ]**

ಬರೆದವರು:

**'ಜಡಭರತ'**

ಓಂ

# ಬರೆಹಗಾರನ ಬಿನ್ನಹ

"*The more you go inward or upward, the more the view of things changes...........*"

—Shree Aurabindo 23-3-1932

"ನೀನು ಅಂತರ್ಮುಖನಾದ ಹಾಗೆ ಇಲ್ಲವೆ ಮೇಲಕ್ಕೇರಿದ ಹಾಗೆ ವಸ್ತುಗಳ ವಿಷಯದಲ್ಲಿರುವ ನಿನ್ನ ದೃಷ್ಟಿಯು ಪಲ್ಲಟಿಸುತ್ತಹೋಗುವದು"

—ಶ್ರೀ ಅರವಿಂದರ 'ಇಹ ಜಗತ್ತಿನ ಒಗಟು'— ಪುಟ ೬೨

**ನನ್ನ ನಾಡಿನ ಅಣ್ಣಗಳಿರಾ!**

ನಾನು ಎಲ್ಲಕ್ಕಿಂತ ಮೊದಲಿಗೆ ತಮಗೆ ಅರಿಕೆ ಪಡಿಸುವುದೇನಂದರೆ, **ಅನುಭಾವಿಯೆಂದು ಅನಿಸಿಕೊಳ್ಳುವ ಸಲುವಾಗಿ ನಾನು ನನ್ನ ಈ ಆತ್ಮಕಥೆಯನ್ನು ಬರೆದಿಲ್ಲ;** ಅನುಭಾವರಾಜ್ಯದ ಅಸ್ತಿತ್ವದ ಸತ್ಯಾಸತ್ಯತೆಯನ್ನರಿಯಲೆಳಸಿ ನನ್ನಂತೆ ಬಳಲಿ ಬೆಂದು ಬೆಂಡಾಗುತ್ತಿರುವ ತರುಣ ಜಿಜ್ಞಾಸುಗಳಿಗೆ ತಿಲಮಾತ್ರವಾದರೂ ಉಪಯೋಗವಾಗಬೇಕೆಂಬ ಹೃದಯದ ಒಂದು ಊರ್ಮಿಯು ಹೊರತು ಇದಕ್ಕೆ ಅನ್ಯ ಅಹಂಕಾರದ ಸೋಂಕು ಲೇಶಮಾತ್ರವೂ ಇಲ್ಲವೆಂದು ನಾನು ಸತ್ಯಸತ್ಯವಾಗಿ ಹೇಳುತ್ತೇನೆ. ಹೀಗೆಂದೊಡನೆ ನನಲ್ಲಿಯ ಅಹಂಕಾರವು ಸಂಪೂರ್ಣವಾಗಿ ಲಯವಾಗಿದೆಯೆಂದು ನಾನು ಪ್ರತಿಪಾದಿಸುವೆನೆಂದು ತಾವು ತಿಳಿದುಕೊಳ್ಳಬಹುದು. ಹಾಗೇನೂ ಇಲ್ಲ; ಅದರ ವಿಷದ ಹಲ್ಲುಗಳು ಮಾತ್ರ ಬಿದ್ದುಹೋಗಿವೆಯೆಂದು ಸಂದೇಹವಿಲ್ಲದೆ ಹೇಳಬಲ್ಲೆನಾದರೂ ಅದರ ಮೊಳಕೆಯೇ ಮುರಿದು ಹೋಗಿದೆಯೆಂದು ನಾನು ಸರ್ವಥಾ ತಿಳಿದುಕೊಂಡಿಲ್ಲವೆಂದು ತಮಗೆ ಪುನಃ ಪುನಃ ನಿವೇದಿಸದಿರಲಾರೆನು. ಆದರೆ ಇಲ್ಲಿ ನಾನು ಹಾಗೆ ಹೇಳಿದುದರ ಅರ್ಥವು ಇಷ್ಟೇ: ಅದೇನೆಂದರೆ– ಅನುಭಾವ ಶಿಖರದ ಮೇಲೆ ಏರಬೇಕೆಂಬ ಆಶೆ ನನಗಿದೆಯೇ ಹೊರತು

ಏರಿದವನೆಂದು ಅನಿಸಿಕೊಳ್ಳುವುದಕ್ಕೆ ನಾನಿದೆಲ್ಲಾ ಆಟವನ್ನು ಹೂಡಿಲ್ಲ. ನನ್ನ ನಾಡಿನ ಅಣ್ಣತಮ್ಮಂದಿರಿಗೆ ನನ್ನ ಈ ಮಾತಿನ ಮನವರಿಕೆಯಾಗದೆ ಹೋದರೆ ನನ್ನ ಈ ಸರ್ವಶ್ರಮವು ವ್ಯರ್ಥವೆಂಬುದು ನನಗೆ ತುಂಬಾ ತಿಳಿದ ಮಾತು.

ಇದರಂತೆಯೇ ನನ್ನ ಗುಣಾವಗುಣಗಳ ವಿಷಯದಲ್ಲಿಯೂ ನಾನು ತಮಗೆ ಮಂಕುಬೂದಿಯನ್ನು ಮಂತ್ರಿಸಿ ಬಿಡಬೇಕೆಂದು ಹವಣಿಸುತ್ತಿದ್ದೇನೆಂದು ಎಣಿಸದಿರಿ. ಹಾಗೆ ಮಾಡಿ ನಾನು ತಮ್ಮಿಂದ ಏನು ಗಳಿಸಿಕೊಳ್ಳಬಯಸುತ್ತಿದ್ದೇನು ? ಅಲ್ಲದೆ ಹಾಗೆ ಕುತಂತ್ರದಿಂದ ಗಳಿಸಿಕೊಂಡದ್ದಾದರೂ ಏನು ದಿನ ಬದುಕಿ ಬಾಳೀತು ! ಹುಮಾಯೂನನ ಪಕಾಲಿಯವನಂತೆ ತುಸುವಾದರೂ ಮೆರೆಯಬೇಕೆಂಬ ಆಶೆಯುಳ್ಳವನು ಹಾಗೆ ಮಾಡಿದರೂ ಮಾಡಬಹುದೆಂದು ಅನ್ನುವಾ. ಆದರೆ ನನ್ನ ಆಶೆ ಏನೆಂಬುದನ್ನು ಮೊದಲಿಗೇ ಅರಿಕೆಪಡಿಸಿರುವೆನಲ್ಲ ! ಸತ್ಯಸತ್ಯವಾಗಿಯೂ ನನ್ನ ಅಂತರಾಳದ ಆಶೆಯು ಇಷ್ಟುಮಾತ್ರವೆ: ‘ನನ್ನ ನಾಡಿನ ನವ ಅಧ್ಯಾತ್ಮಿಗಳ ದಾರಿಯ ದಣಿವು ಆರಿ ಅವರಲ್ಲಿ ತುಸುವಾದರೂ ಮುಂದಿನ ಆಶೆ ಭರವಸೆ ಹುಟ್ಟುವಂತಾದರೆ ನನ್ನ ಸರ್ವಶ್ರಮವು ಸಾರ್ಥಕವಾದಂತಾಗುವದು! ಆದುದರಿಂದ ನನ್ನ ಗುಣಾವಗುಣಗಳ ಬಗೆಗೆ ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ— ಉತ್ಕಟವಾದ ಆಕಾಂಕ್ಷೆ (Aspiration) ಯೊಂದರ ಹೊರತು ನನ್ನಲ್ಲಿ ಹೆಚ್ಚಿನ ಯಾವ ಸದ್ಗುಣವೂ ಎಂದೂ ಇಲ್ಲ. ಆದೊಂದೇ ಪಾಶುಪತಾಸ್ತ್ರವು ನನ್ನ ಅಂತರಂಗದ ಖಾಂಡವವನವನ್ನೆಲ್ಲ ದಹಿಸಿ ತನಗೆ ದಾರಿಯನ್ನು ಮಾಡಿಕೊಂಡು ಇಲ್ಲಿಯವರೆಗೆ ಮುಂದುವರಿದು ಬಂದಿತು. ಅದು ಇನ್ನೂ ಉಪಶಮನ ಹೊಂದಿಲ್ಲ. ಅದಕ್ಕೆಂತಲೇ ನನಗೆ ಇನ್ನೂ ಮುಂದುವರಿಯುವ ಭರವಸೆಯಿದೆ. ಹೀಗೆ ಹೇಳಿ ತಮ್ಮ ಕೈಯೊಳಗಿಂದ ನಾನು ಕೊಸರಿಕೊಂಡು ಜಾರಲೆಳಸುವೆನೆಂದು ಎಣಿಸದಿರಿ. ನಾನು ಹುಚ್ಚುಹೊಳೆಯ (Emotionalism) ಮನುಷ್ಯನೆಂಬುದು ಇಂದಿನ ವರೆಗಿನ ನನ್ನ ಕವಿತೆಗಳನ್ನೋದಿದವರಿಗೆ ಬೇರೆ ಹೇಳಿಕೊಡಬೇಕಾಗಿಲ್ಲವಷ್ಟೇ? ಇದೊಂದೇ ಮಾತಿನ ಸಲುವಾಗಿ ನನ್ನ ಹಿರಿಗೆಳೆಯರಾದ ಶ್ರೀ. ಬೇಂದ್ರೆಯವರಿಗೂ ನನಗೂ ಆರೇಳು ವರುಷ

ಗಳ ಹಿಂದೆ ಮೇಲಿಂದ ಮೇಲೆ ಮತಭೇದವು ಬರುತ್ತಿದ್ದಿತು. “ ವಿವೇಕವನ್ನು ಮರೆತರೆ ಆಗದು ” ಎಂಬುದು ಅವರ ಪಕ್ಷ; “ ವಿವೇಕವೇ ಇಲ್ಲದಿದ್ದರೆ ಅದಕ್ಕೇನು ಮಾಡಬೇಕು ? ಇಂದು ನಮಗೆ ಸತ್ಯವೆಂದು ತೋರಿದಂತೆ ನಾವು ನಡೆದರೆ, ತಪ್ಪಿ-ತಾಕಿ ಕೊನೆಗೆ ನಾವು ತಾನಾಗಿಯೇ ವಿವೇಕಕ್ಕೆ ಹೋಗಿ ಮುಟ್ಟದಿರಲಾರೆವು. ” ಎಂಬುದು ನನ್ನ ಮತ. ಅಂದಿನ ಆ ಮಾತು ಇಂದಿಗೆ ನೂರಕ್ಕೆ ತೊಂಬಂತ್ರೊಂಬತ್ತರಷ್ಟು ಸತ್ಯವಾಗಿ ಬಿಟ್ಟಿದ್ದರಿಂದಲೇ ನಮ್ಮಿಬ್ಬರ ಮತಭೇದವೀಗ ತುಂಬಾ ಮಟ್ಟಿಮರೆಯಾಗಿ ಹೋಗಿದೆ. ಆದರೆ ತೊಂಬತ್ತರೊಂಬತ್ತರಷ್ಟು ಬದಲಾವಣೆಯಾಗಿದ್ದರೂ ಒಂದರಷ್ಟಾದರೂ ಇನ್ನೂ ಉಳಿದುಕೊಂಡೇ ಇದೆಯಾದುದರಿಂದ ಅದೂ ಅಷ್ಟು ಯಾವಾಗ ಲೋಪಿಸುವದೋ ಆಗ ನಾನು ನನ್ನ ಗುಣಾವಗುಣಗಳದೇ ಒಂದು ಇತಿಹಾಸವನ್ನು ಸ್ವತಂತ್ರಗ್ರಂಥವಾಗಿ ಬರೆಯುವೆನೆಂಬ ಭರವಸೆಯನ್ನು ನನ್ನ ನಾಡಿನ ಅಣ್ಣತಮ್ಮಂದಿರಿಗೆ ಕೊಡದಿರಲಾರೆನು. ಇನ್ನು ಮುಂದಿನ ನನ್ನ ಸಾಧನಪಥದಲ್ಲಿ ಗುಣಗಳ ಅಪರಾಪ್ರಕೃತಿಯು (Lower nature) ಪರಾಪಕೃತಿಗೆ (Higher nature) ಪಲ್ಲಟಿಸುವುದು ಹೇಗೆಂಬುದೇ ನನಗೆ ನೋಡಲಿಕ್ಕೆ ಸಿಗತಕ್ಕದ್ದಿದೆ. ಆಗಿನ ನನ್ನ ಆತ್ಮಕಥೆಯೆಂದರೆ ಅದರದೇ ಒಂದು ಇತಿಹಾಸವಾಗುವದಿರುವುದರಿಂದ ವಾಚಕರು ನನ್ನನ್ನು ಅಲ್ಲಿಯವರೆಗೆ ಒಂದಿಷ್ಟು ಉಲಿಯುದಿರಬೇಕೆಂದು ಹಾರೈಸುವೆ. ಕೀಡಿ ಹೋಗಿ ಪಾತರಗಿತ್ತಿಯಾಗುವ ಮೊದಲು ನಡುವೆ ಒಂದು ಪ್ಯೂಪಾಸ್ಟೇಜ್ ಎಂಬುದು (ಸತ್ತಿಲ್ಲ ಬದುಕಿಲ್ಲವೆನ್ನುವಂಥ ಸ್ತಬ್ಧತೆಯು) ಒರುತ್ತಿರುತ್ತದಷ್ಟೇ ? ನನ್ನ ಗುಣಗಳ ರಾಜ್ಯವೀಗ ಆ ಸ್ಟೇಜಿನಲ್ಲಿದೆಯೆಂದಿಷ್ಟು ಮಾತ್ರ ಹೇಳಿಬಿಡುವೆನು. ಇದೀಗ ನನ್ನಲ್ಲಿ ಅನಿಗ್ರಹಕ್ಕಿಂತ ಹೆಚ್ಚಿನ ಅವಗುಣವಿಲ್ಲ; ಉತ್ಕಟೇಚ್ಛೆಗಿಂತ ಹೆಚ್ಚಿನ ಸದ್ಗುಣವಿಲ್ಲ. ಒಟ್ಟಾರೆ ಮೇಲೆ ಅಹಂಕಾರವನ್ನು ಕುರಿತು ಹೇಳಿದ ಮಾತನ್ನೇ ಇಲ್ಲಿಯೂ ಸಮನ್ವಯಿಸಿಕೊಳ್ಳಲಿಕ್ಕೆ ಎಷ್ಟೂ ಅಡ್ಡಿಯಿಲ್ಲ.

“ ಪೂರ್ವರಂಗ ” ದ ಕೊನೆಯಲ್ಲಿ ನಾನು— ಅಲ್ಲಿಗೆ ಪೂರ್ಣಯೋಗದ ಪೂರ್ವಪಲ್ಲವಿಯು ಆರಂಭವಾಯಿತೆಂದು ಹೇಳಿರುವೆನಷ್ಟೇ ?

ಶ್ರೀ ಅರವಿಂದರ ಪೂರ್ಣಯೋಗವು ದ್ವಿಮುಖಿಯಾಗಿದೆ. ಅದರ ಒಂದು ಮುಖವು ಸಮರ್ಪಣ, ಇನ್ನೊಂದು ಆತ್ಮಶಕ್ತಿ.(Surrender ಮತ್ತು Will) ಒಂದು ವಿಶ್ವಾಂತರ್ಗತನಾದ ದೇವನಿಗೆ ಸಂಬಂಧಿಸಿದುದಾದರೆ, ಮತ್ತೊಂದು ಆತ್ಮಾಂತರ್ಗತನಾದ ದೇವನಿಗೆ ಸಂಬಂಧಿಸಿದ್ದು. ದೇವನ ಬಾಹ್ಯಾಂತಃಸ್ವರೂಪಗಳೆರಡರ ಸಿದ್ಧಿಯು ಅರವಿಂದರ ಯೋಗದ ಮೂಲ ಮಂತ್ರವು. ಇವೆರಡರಲ್ಲಿ ಮೊದಲನೆಯದರ ಸ್ವರೂಪವನ್ನು ಅವರ "ಯೋಗ ಆ್ಯಂಡ್ ಇಟ್ಸ್ ಆಬ್ಜೆಕ್ಟ್ಸ್" (ಯೋಗದ ಗೊತ್ತು ಗುರಿ) ಎಂಬ ಪುಸ್ತಕದಲ್ಲಿಯೂ ಎರಡನೆಯದನ್ನು "ಯೋಗಿಕ್‌ಸಾಧನ" ಎಂಬುದರಲ್ಲಿಯೂ ನಾವು ನೋಡಬಹುದು. "ಕಾಳರಾತ್ರಿ" ಯ ಕೊನೆಯಲ್ಲಿ ಜ್ಞಾನಭಿಕ್ಷುವು ಈ ಎರಡನೆಯದಾದ ಅಂತರ್ಗತರಾಜ್ಯದ ಪೂರ್ವಪೀಠಿಕೆಗೆ ಬಂದು ಸೇರಿದನು. * ಈ ಎರಡನೆಯ ಪುಸ್ತಕದಲ್ಲಿ ಅರವಿಂದರು (ಉತ್ತರಯೋಗಿಯೆಂಬ ತಮ್ಮ ಅನ್ವರ್ಥಕನಾಮದಿಂದ) ವಿವರಿಸಿರುವ ಸಾಧನಕ್ರಮವೇ ನಮ್ಮ ನಾಯಕನ ಇನ್ನು ಮುಂದಿನ ಪ್ರಯಾಣಪಥವು. ಸಂಕಲ್ಪಶಕ್ತಿಯು ಮೂಲಸ್ವಭಾವವನ್ನು ಸಂಪೂರ್ಣವಾಗಿ ಹೇಗೆ ಪರಿವರ್ತಿಸುವುದೆಂಬುದನ್ನು ನಾವು ಆ ವಿಭಾಗದಲ್ಲಿ ನೋಡಬಲ್ಲೆವು. ತಾವೆಲ್ಲರೂ ಅದರ ವಿವರವನ್ನು ಅರಿತುಕೊಳ್ಳುವುದಕ್ಕೆ ಬಲವಾಗಿ ಅಪೇಕ್ಷಿಸಿದರೆ ತಮ್ಮ ಆ ಅಪೇಕ್ಷಾಬಲವೇ ನಮ್ಮ ನಾಯಕನನ್ನು ಮುಂದಿನ ಪಯಣಕ್ಕೆ ನೆರವುಗೋಲಿನಂತೆ ಆಧಾರವಾಗಿ ಆತನ ಮುಂದಿನ ಇತಿಹಾಸವನ್ನು ಪೂರ್ಣಗೊಳಿಸುವುದಕ್ಕೆ ಕಾರಣವಾಗದಿರದೆಂದು ನನ್ನ ಅಂತಃಕರಣದಲ್ಲಿ ದೃಢವಾದ ಶ್ರದ್ಧೆಯಿದೆ. ಯಾಕೆಂದರೆ ಆತನ ಇನ್ನು ಮುಂದಿನ ಅವಸ್ಥೆಗಳು ಕೇವಲ ಅವನ ವೈಯುಕ್ತಿಕ ಸುಖಸ್ವಚ್ಛಂದತೆಗಳ ಸಲುವಾಗಿ ಬರತಕ್ಕವುಗಳಾಗಿರದೆ, ಲೋಕಜೀವನಕ್ಕೂ ಸಾಧಕ

---

* ಜಾನ್ ಬನಿಯನ್ನನ ಪರಿಭಾಷೆಯಲ್ಲಿ— ಮರಣದ ನೆರಳಿನ ತಗ್ಗಿನಲ್ಲಿ ಯಾತ್ರಿಕನಿಗಾಗುವ ಸೂರ್ಯೋದಯವು ಇದೇ. ನಮ್ಮ ನಾಯಕನಿಗೆ ತನ್ನ ಕಾಳರಾತ್ರಿಯು ಹರಿದು ಬೆಳಗಾಗಹತ್ತಿದುದು ಗೊತ್ತಾದ ಬಳಿಕ ಮೂವತ್ತಾರು ದಿನಗಳ ಮೇಲೆ (ಅಂದರೆ ಅಕ್ಟೋಬರ್ ೯ಕ್ಕೆ) ಸೂರ್ಯೋದಯವಾದದ್ದು ಹೌದೆನಿಸಿತು. ಸಾಧಕಜೀವನದಲ್ಲಿ ಇಲ್ಲಿಗೊಂದು ಹೊಸ ಅಂಕವೇ ಆರಂಭವಾಗುವದು.

ಜೀವನಕ್ಕೂ ಬೆಸಿಕೆಹಾಕುವುದೇ ಅವುಗಳ ಬರುವಿಕೆಯ ಮುಖ್ಯ ಉದ್ದೇಶ್ಯವಾಗಿರುತ್ತಿರುತ್ತದೆ. ಹೀಗೆಂದ ಬಳಿಕ ಲೋಕಾಪೇಕ್ಷೆಯ ಇಚ್ಛಾಬಲವು ಅದಕ್ಕೆ ಸಹಾಯಕವಾಗದಿರದೆಂಬ ನನ್ನ ಬಲವಾದ ಅನಿಸಿಕೆಯು ನಿರಾಧಾರವಲ್ಲವೆಂಬುದು ಸ್ಪಷ್ಟ.

ಇದಿರಲಿ. ಸದ್ಯದ ಪುಸ್ತಕವಾದ "ಕಾಳರಾತ್ರಿ" ಅಥವಾ "ಮಧ್ಯರಂಗ" ವೆಂಬುದರ ಕಡೆಗೆ ಹೊರಳುವಾ. ಅದಕ್ಕಿಂತ ಮೊದಲಿಗೆ— "ಪೂರ್ವರಂಗದ ಕೊನೆಗೆ ಜ್ಞಾನಭಿಕ್ಷುವು ಎಲ್ಲಿಗೆ ಒಂದು ಮುಟ್ಟಿದನೆಂಬುದೇ ನಮಗೆ ತಿಳಿಯದು" ಎಂದು ಬಹಳ ದಿನಗಳಿಂದ ನನ್ನ ಕಿವಿಗೆ ಬೀಳುತ್ತಿರುವ ಲೋಕಾಭಿಪ್ರಾಯವನ್ನು ಕುರಿತು ಒಂದಿಷ್ಟು ಸ್ಪಷ್ಟಪಡಿಸುವುದು ಅಗತ್ಯವೆಂದು ನನಗೆ ಅನಿಸುತ್ತದೆ. **ನಾವೆಲ್ಲರೂ "ಸಾಕ್ಷಾತ್ಕಾರ" ವೆಂದು ಯಾವುದಕ್ಕೆ ತಿಳಿದುಕೊಂಡಿರುವೆವೋ ಅದು ಬಹಳವೆಂದರೆ ಬಹಳ ದೊಡ್ಡ ಅವಸ್ಥೆಯು. ಪೂರ್ವರಂಗದ ಕೊನೆಗೆ ಹೇಳಿದ್ದು ಅದಲ್ಲ.** ಅದು ಮಹಾಸಾಕ್ಷಾತ್ಕಾರದ ಒಂದು ಒಂಟು ಕಿರಣವು. ಅದಕ್ಕೆ ಅನುಭಾವಮಾನಸಶಾಸ್ತ್ರಜ್ಞನಾದ 'ರಿಚರ್ಡ್‌ಬಕಿ'ಯು (Cosmic conciousness) "ವಿಶ್ವಚೇತನ" ವೆಂದು ಹೆಸರಿಟ್ಟಿದ್ದಾನೆ. ಅಲ್ಲಿ ಈಶನ ವಿಶ್ವಾಂತರ್ಯಾಮಿತ್ವದ ಘನವಾದ ಅನಿಸಿಕೆಯು ಸಾಧಕನಿಗೆ ಬರುತ್ತಿರುತ್ತದೆ. ಉಪನಿಷತ್ತುಗಳಲ್ಲಿ ಅಧಿದೈವತಜ್ಞಾನವೆಂದು "ಯಸ್ಯಪೃಥಿವೀ ಶರೀರಂ" ಮುಂತಾದ ವಾಕ್ಯಗಳಿಂದ ವರ್ಣಿಸಿದ ಸ್ಥಿತಿಯೇ ಅದು.

ಅದರ ಮುಂದಿನ ಪಥದಲ್ಲಿ ಬರುವ ಆಧ್ಯಾತ್ಮಿಕ ಪುನರ್ವಿಯೋಗದ ಕಡುಕಷ್ಟದ ಕತೆಯೇ ಈ 'ಕಾಳರಾತ್ರಿ' ಅಥವಾ 'ಮಧ್ಯರಂಗ' ವೆಂಬುದು. ಪೂರ್ವಂಗದ ಬಹುಕಾಲದ ಉದ್ರೇಕದಿಂದ (Emotionalism) ಸೆಳೆತಬಿದ್ದು ಅಂತರಿಂದ್ರಿಯ ಬಹಿರಿಂದ್ರಿಯಗಳೆಲ್ಲ ಬಲವಾಗಿ ಸವಿದು ಕೊಂಕಿರುವುದರಿಂದ ಮುಂದೆ ಅವು ನೆಲಹಿಡಿದು ಬಿಡುವವು. ಅದರ ಮೂಲಕವೇ ಈ ಪುನರ್ವಿಯೋಗದ ವಿಪರೀತ ಸ್ಥಿತಿಯು ಬರುವದು. ಇಲ್ಲಿಯ ಒಂದು ವಿಶೇಷವೇನೆಂದರೆ **ಸಾಧಕನ ಒಳಗಿನ ಮಹದಾಕಾಂಕ್ಷೆಯು** (Aspiration) **ಜೀವಹಿಡಿದು ಉಳಿದುಕೊಂಡರೆ**

**ಮಾತ್ರ ಅವನು ಇದರೊಳಗಿಂದ ದಾಟುವನು.** ಇಲ್ಲದಿದ್ದರೆ ಈ ಜನ್ಮದ ಮಟ್ಟಿಗೆ ಅವನ ಪ್ರಗತಿಯು ಇಲ್ಲಿಗೇ ಕುಂಠಿತವಾಯಿತೆಂದು ತಿಳಿಯಬೇಕು. ಆಧುನಿಕ ಅನುಭಾವ ಶಾಸ್ತ್ರಜ್ಞರಲ್ಲೊಬ್ಬರಾದ ಅಂಡರ್ ಹಿಲ್ಲರು ತಮ್ಮ 'ಮಿಸ್ಟಿಸಿಜಂ' ಅಥವಾ 'ಅನುಭಾವವಿದ್ಯೆ' ಎಂಬ ಗ್ರಂಥದಲ್ಲಿ "ಕಾಳರಾತ್ರಿಗಿಂತ ಹಿಂದಿದ ಅವಸ್ಥೆಗೇ ಬಹುಜನ ಸಾಧಕರ ನಿಂತು ಬಿಡುವರು. ಹೆಚ್ಚಿನ ಉತ್ಕಟೇಚ್ಛೆಯವರು ಮಾತ್ರ ಇದರಲ್ಲಿ ಕಾಲಿಡುವರು." ಎಂದು ಹೇಳಿದ್ದಾರೆ. **ಪಶ್ಚಿಮದೇಶದ ಇಂದಿನ ಅಧ್ಯಾತ್ಮ ಪ್ರಗತಿಗೆ ಅದು ಸೀಮಾರೇಷೆಯಾಗಿದ್ದರೂ ಆಗಿರ ಬಹುದು. ಆದರೆ ನಮ್ಮ ನಾಡಿನಲ್ಲಿ ನೋಡಿದರೆ ಕಾಳರಾತ್ರಿಯು ಹಿಮ್ಮಗ್ಗಲಿಗೆ ಆ ಗೆರೆಯನ್ನು ಕೊರೆಯದೆ ಮುಂದಿನ ಬದಿಗೆ ಅದನ್ನೆಳೆಯಬೇಕೆಂದು ನನಗೆ ಅನಿಸುತ್ತದೆ.** ಅರವಿಂದರ 'ಯೌಗಿಕ ಸಾಧನ' ವೆಂಬ ಪುಸ್ತಕದಲ್ಲಿಯೂ ಈ ಮಾತಿಗೆ ಸಾಕ್ಷಿಯು ಸಿಗುತ್ತದೆ. ಅದನ್ನು ನಾನು ಪ್ರಸ್ತುತ ಪುಸ್ತಕದ ಒಂದು ಪ್ರಕರಣದಲ್ಲಿ ಉಲ್ಲೇಖಿಸಿ ದ್ದೇನೆ. ವಾಚಕರು ಅದನ್ನು ಅಲ್ಲಿ ನೋಡಬಹುದು. ನಮ್ಮ ನಾಡಿನ ಇಂದಿನ ಬಹು ಸಾಧಕರು ಈ ಕಾಳರಾತ್ರಿಯಲ್ಲಿಯೇ ಬಿದ್ದುಕೊಂಡಿದ್ದಾ ರೆಂದು ನನಗೆ ಸ್ಪಷ್ಟವಾಗಿ ತೋರುತ್ತದೆ. ಅವರಿಗೆ ಏಳಲಿಕ್ಕೆ ಉಪಾ ಯವೇ ಇಲ್ಲವೇನು? ಎಂದು ಅಂದರೆ, ನಾನು ಈ ಮಾತಿಗೆ ಇಷ್ಟೇ ಹೇಳ ಬಯಸುವೆ: ಅದೇನೆಂದರೆ– ತಮ್ಮ ಪ್ರಗತಿಯು ಕುಂಠಿತವಾಗಿದೆಯೆಂಬು ದರ ಕಡೆಗೆ ಅವರ ಲಕ್ಷ್ಯವು ಎಲ್ಲಕ್ಕೂ ಮೊದಲಿಗೆ ಹೊರಳಬೇಕು. ಬಳಿಕ್ಕ 'ಇದೊಂದು ಅವಸ್ಥೆ. ಇದು ದಾಟಬಲ್ಲದು.' ಎಂಬುದು ಪುರಾತನ ಅನುಭಾವಿಗಳ ಜೀವನ ಚರಿತ್ರ ನಿರೀಕ್ಷಣದಿಂದ ಮನದಟ್ಟಾಗಬೇಕು. ಆ ಮೇಲೆ ತಾವು ಇಷ್ಟಕ್ಕೇ ಸಿದ್ಧಪುರುಷರೆಂದು ತಿಳಿದುಕೊಂಡು ಜಂಬರ ಹೂಡಿಕೊಂಡು ಕುಳಿತದ್ದು ತಪ್ಪೆಂದೂ ಇನ್ನೂ ಮುಂದೆ ತಮ್ಮ ಪಯಣವು ಉಳಿದಿದೆಯೆಂದೂ ಅವರಿಗೆ ಗೊತ್ತಾಗಬೇಕು. ಇಷ್ಟಾದರೆ ಅವರು ಪುನಃ ಕಿತ್ತಿ ಏಳದಿರಲಾರರೆಂದು ನನಗೆ ಬಲವಾಗಿ ಅನಿಸುತ್ತದೆ. ಉತ್ಕಟೇಚ್ಛೆಯು (Aspiration) ತಿರುಗಿ ಜ್ವಾಲಾಮಯಮಾನಸ್ಥಿತಿಗೆ ಬಂದರೆ ಪ್ರಗತಿಗೆ

ಚಾಲನೆಯು ಸಿಗಲಿಕ್ಕೇಬೇಕೆಂಬುದು ನಿಸರ್ಗಸಿದ್ಧನಿಯಮವೇ ಆಗಿದೆ. ಹೆಚ್ಚಿಗೇನು ಹೇಳಲಿ?

ಈಗ ನನ್ನ “ **ಪೂರ್ವರಂಗ** ” ವೆಂಬ ಪುಸ್ತಕದ ಮೇಲಿನ ಒಂದೆರಡು ಆಕ್ಷೇಪಣೆಗಳಿಗೆ ಸ್ವಲ್ಪ ಮಾತಿನಲ್ಲಿ ಉತ್ತರವನ್ನು ಕೊಡಬೇಕಾದುದು ಅತ್ಯಾವಶ್ಯಕವೆಂದು ನನಗೆ ತೋರುತ್ತದೆ. ಈ ಆಕ್ಷೇಪಣೆಗಳಲ್ಲಿ ಮುಖ್ಯವಾದುವುಗಳು ಮೂರು ಮಾತ್ರ. ಅವುಗಳನ್ನೆಲ್ಲ ಕ್ರಮವಾಗಿ ವಿಮರ್ಶಿಸುವೆ—

(೧) ‘ ಪ್ರೇಮ ’ ಪತ್ರಿಕೆಯಲ್ಲಿ ಶ್ರೀಮಾನ್ ತಾರಾನಾಥರಾಯರು ಎತ್ತಿದ ಆಕ್ಷೇಪಣೆಯು ಬಹಳ ಮಹತ್ತ್ವದ್ದು. ಅದೇನೆಂದರೆ— “ ಜ್ಞಾನಭಿಕ್ಷುವಿನ ಅವಸ್ಥೆಯು ಭ್ರಮೆಯೇಕೆ ಆಗಿರಬಾರದು ? ” ಈ ಮಾತಿಗೆ ಉತ್ತರವಿಷ್ಟೆ: ಅದೇನೆಂದರೆ– ಸ್ವತಃ ಸಾಧಕರಿಗೇ ಎಷ್ಟೋ ಸಾರೆ ತಮ್ಮದು ತಮಗೆ ಹಾಗೆ ಅನಿಸುತ್ತಿರುತ್ತದೆ. ಯಾಕೆಂದರೆ— ಕಾಳರಾತ್ರಿಯ ಮೆಟ್ಟಲಿಗೆ ಬಂದಾಗ ಮೊದಲಿಗೆ ‘ ಪುನರ್ವಿಯೋಗ ’ ದ ಸಯುಕ್ತಿಕ ಕಾರಣವೇ ಗೊತ್ತಾಗಲಾರದ್ದರಿಂದ ತನಗೆ ಇದಕ್ಕಿಂತ ಮುಂಚೆ ಬಂದ ಅವಸ್ಥೆಯು ಮೆದುಳಿನ ವಿಕಾರವೇನಾದರೂ ಆಗಿರಬಹುದೇ? ಎಂದು ಎಷ್ಟೋ ಸಾಧಕರಿಗೆ ಅನಿಸಿದುದರ ಉದಾಹರಣೆಗಳನ್ನು ಅಂಡರ್‌ಹಿಲ್ಲರ ಪುಸ್ತಕದಲ್ಲಿ ಹೇರಳವಾಗಿ ಕಾಣಬಹುದು. ಅಷ್ಟೇಕೆ? ಶ್ರೀರಾಮಕೃಷ್ಣ ಪರಮಹಂಸರ ಹಾಗೂ ಶ್ರೀ ವಿವೇಕಾನಂದರ ಜೀವನದಲ್ಲಿಯೇ ಸ್ಪಷ್ಟವಾಗಿ ಇದನ್ನು ಕಾಣಬಹುದು. ಆದುದರಿಂದ ಶ್ರೀ. ತಾರಾನಾಥರ ಆಕ್ಷೇಪಣವು ಪೊಳ್ಳಾದುದಲ್ಲವೆಂದು ಪುನಃ ಪುನಃ ಒಪ್ಪಿಕೊಳ್ಳುವೆನಾದರೂ ಆಕ್ಷೇಪಣಕ್ಕೆ ನನ್ನ ಈ ಮೇಲ್ಕಂಡ ಉತ್ತರವು ಸಮರ್ಪಕವೂ ಸಯುಕ್ತಿಕವೂ ಆಗಿದೆಯೆಂದು ಧಾರಾಳವಾಗಿ ಹೇಳದೆ ಇರಲಾರೆನು.

(೨) ‘ ಪ್ರಬುದ್ಧ ಕರ್ಣಾಟಕ’ದ ವಿಮರ್ಶೆಯಲ್ಲಿ ಒಂದು ಆಕ್ಷೇಪಣೆಯು ಹೀಗೆ ಎತ್ತಲ್ಪಟ್ಟಿದೆ– “ಪೂರ್ವರಂಗದಲ್ಲಿ ತತ್ತ್ವಜ್ಞಾನವು ಎಷ್ಟು ಮಾತ್ರಕ್ಕೂ ಇಲ್ಲ.” ಇದರ ಉತ್ತರವು ಬಹಳೇ ಸುಲಭ ! ಅದೇನೆಂದರೆ– “ ಅದು ತತ್ತ್ವಜ್ಞಾನದ ಪುಸ್ತಕವೇ ಅಲ್ಲ; ಅದು ಅನುಭಾವ ಪಥದ

ಒಂದು ಚಿಕ್ಕ ನಕ್ಷೆ ಮಾತ್ರ. ತತ್ತ್ವಜ್ಞಾನ ಅಥವಾ ಫಿಲಾಸಫಿ-ಮತ್ತು ಅನುಭಾವ ಅಥವಾ ಮಿಸ್ಟಿಸಿಜಮ್ ಎಂಬುವುಗಳು ಎರಡು ಸ್ವತಂತ್ರ ಶಾಖೆಗಳು ಒಂದು ಬುದ್ಧಿಪ್ರಧಾನ, ಇನ್ನೊಂದು ಭಾವ ಪ್ರಧಾನ.'' ಆದುದರಿಂದ ಆ ಪುಸ್ತಕವು ಯಾವ ವಿಷಯದ ಮೇಲೆ ಬರೆದುದಾಗಿದೆಯೆಂಬುದನ್ನು ಮರೆತು ಒಂದು ವಿಷಯದ ವಸ್ತುವನ್ನು ಇನ್ನೊಂದು ವಿಷಯದ ಒರೆಗಲ್ಲಿಗೆ ತಿಕ್ಕಿದರೆ ಹಾಗೆ ಆಕ್ಷೇಪಣೆ ಹೊರಡುವುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ.

(೩) '' ಸತ್ಸಂಗ '' ಎಂಬ ಪ್ರಕರಣದಲ್ಲಿ ತತ್ತ್ವಜ್ಞಾನದ **ಪ್ರೊ**ಫೇಸರರೊಬ್ಬರ ವಿಷಯದಲ್ಲಿ ಬರೆದ ಕೆಲವು ಮಾತುಗಳು ಬಹಳ ಕಟುವಾದುವುಗಳೆಂದು ನನ್ನ ಗೆಳೆಯರಲ್ಲಿ ಕೆಲವರು ಆಕ್ಷೇಪಿಸಿರುವರು. ಇದಕ್ಕೆ ನನ್ನ ಉತ್ತರವೇನೆಂದರೆ– ಅಲ್ಲಿರುವ ಶಬ್ದಗಳು ಕಟುವಾದವುಗಳೆಂದು ನಾನು ಒಪ್ಪಿಕೊಳ್ಳುತ್ತೇನೆ. ಮತ್ತು ಆ ಘನವಿದ್ವಾಂಸರೂ ಅನುಭಾವಪಥಿಕರೂ ಆದ ಆ ಪ್ರೊಫೇಸರರು ಮನಸಿಗೆ ಹಚ್ಚಿಕೊಂಡಿದ್ದರೆ ಅವರು ನನ್ನನ್ನು ಮನ್ನಿಸಬೇಕೆಂದು ಹಾರೈಸುವೆ. ಆದರೆ ನಾನು ಹಾಗೆ ಟೀಕಿಸಿದುದರ ಕಡೆಗೂ ಅವರು ತಮ್ಮ ಸರಿಯಾದ ಲಕ್ಷ್ಯವನ್ನು ಹೊರಳಿಸಬೇಕೆಂದು ಪ್ರಾರ್ಥಿಸುವೆ. **ಆ ಪ್ರೊಫೇಸರರು ಈಗ ಕಾಳರಾತ್ರಿಯ ಹುದುಲಿನಲ್ಲಿ ಸಿಕ್ಕುಬಿಟ್ಟಿದ್ದಾರೆಂದು ನಾನವರಿಗೆ ನಮ್ರನಾಗಿ ತೋರಿಸಿಕೊಡಲೆಳಸುವೆನು.** ಅವರ ಸುತ್ತುಮುತ್ತಲಿನವರು ಅವರ ಸಜ್ಜನಿಕೆಯ ದುರುಪಯೋಗವನ್ನು ಮಾಡಿಕೊಳ್ಳುತ್ತಿರುವುದು ಅವರಿಗೆ ಎಳ್ಳಷ್ಟು ಗೊತ್ತಾಗಬಾರದೆಂದರೆ ಅದು ಕಾಳರಾತ್ರಿಯ ಲಕ್ಷಣವಲ್ಲದೆ ಇನ್ನೇನು ? ಅವರ ಸುತ್ತಲೆಲ್ಲ ಗುರೂಪದೇಶದ ಬಹುದೊಡ್ಡದೊಂದು ಜಾತ್ರೆಯು ನೆರೆದಿದೆ. '' **ಇಂಥಾ ದೊಡ್ಡ ಪ್ರೊಫೇಸರರು ತಮ್ಮ ಸಂಸ್ಥೆಯ ಶಿಷ್ಯರಿದ್ದಾರೆಂದ ಬಳಿಕ ಉಳಿದವರದೇನು ಬೆಲೆ ?'' ಎಂದು ಆ ಸಂಸ್ಥೆಯವರ ತಿಳುವಳಿಕೆ.** ಅಲ್ಲದೆ ನವ ಶಿಕ್ಷಿತರಿಗೂ ಆ ಮಾತು ಹೇಗೋ ಹೌದೆನಿಸುತ್ತದೆ. ಹೀಗಾಗಿ ಆ ಸಂಸ್ಥೆಗೆ ಆ ಪ್ರೊಫೇಸರರೇ ಆಧಾರಸ್ತಂಭವಾಗಿ ಬಿಟ್ಟಂತಾಗಿದೆ. ಇಲ್ಲಿ ನಾನು ಹೇಳುವುದೇನೆಂದರೆ– ಆ ಪ್ರೊಫೇ

ಸರರು ಅದರೊಳಗಿರುವುದರಿಂದಲೇ ವಿಚಾರಕ್ಕವಕಾಶವಿಲ್ಲದೆ ಜನರು ಒಳ ಸೇರುವುದಕ್ಕಾಸ್ಪದವಾಗುತ್ತಾ ಇದೆ. ಆ ಸಂಸ್ಥೆಯವರಿಗೂ ಇಂಥವ ರೊಬ್ಬರು ತಮ್ಮ ಶಿಷ್ಯರಾಗಿರುವದರಿಂದ ತಮ್ಮ ಬಗೆಗೇ ಅವರಿಗೆ ಹೊರಳಿ ನೋಡಿಕೊಳ್ಳುವುದಕ್ಕೂ ಆಗದೆ ಹೋಗುತ್ತಲಿದೆ. **ಇದೀಗಿನದು ವಿಚಾರಯುಗವೆಂಬುದು ಪ್ರೋಫೇಸರರಿಗೆ ಗೊತ್ತಿಲ್ಲದ ಮಾತಲ್ಲ.** ಹೀಗಿರುವುದರಿಂದಲೂ ತಮ್ಮಿಂದ ಅಲ್ಲಿ ವಿಚಾರಕ್ಕೆ ಅಷ್ಟೊಂದು ಅವಕಾಶ ಸಿಕ್ಕದಂತಾಗಿರುವುದನ್ನು ಅರಿತು, ಇನ್ನುಮೇಲಾದರೂ ತಾವೂ ಎಚ್ಚತ್ತು, ಉಳಿದವರಿಗೂ ಎಚ್ಚರಿಸಿ, ತಾವೂ ತಮ್ಮ ಗುರುಬಂಧುಗಳೂ ಕೂಡಿಯೇ ಕಾಳರಾತ್ರಿಯೊಳಗಿಂದ ಪಾರಾಗಿ ಹೆಚ್ಚು ಹೆಚ್ಚು ಉನ್ನತ ಸ್ಥಿತಿಗೇರಿ, ಲೋಕಕ್ಕೆ ನಿಜವಾದ ಕಲ್ಯಾಣವನ್ನು ಮಾಡಲೆಂದು ನಾನು ಸರ್ವಾಂತಃಕರಣದಿಂದ ಪ್ರಾರ್ಥಿಸುವೆ. **ಅವರಿಂದ ಲೋಕಕ್ಕೆ ನಿಜ ವಾದ ಹಿತವಾಗಬೇಕೆಂದು ಆಶಿಸುತ್ತೇನೆ. ಯಾಕೆಂದರೆ ಇಂಥ ದೊಡ್ಡ ಆತ್ಮಗಳು ಲೋಕದ ಸುದೈವವನ್ನು ಯತೇಚ್ಛವಾಗಿ ತೆರೆಯಿಸಬಲ್ಲರು. ಆದರೆ ತಮ್ಮ ಕಾಳರಾತ್ರಿಯ ಪರವೆಯು ಮಾತ್ರ ಅವರಿಗೆ ಆಗಲಿಕ್ಕೆ ಬೇಕು.** ಈ ಮಾತನ್ನು ನಾನು ಅವರಿಗೊಬ್ಬರ ವಿಷಯವಲ್ಲಿದಯೇ ಹೇಳುತ್ತಿದ್ದೇನೆಂದು ಎಣಿಸಬರಿ. ನಾಡಿನಲ್ಲಿ ಯಾರಾರು ತಾವು ಸಾಧಕರೆಂದು ತಿಳಿದುಕೊಂಡಿರುವರೋ ಅವರೆಲ್ಲರಿಗೆ ನನ್ನ ಈ ಬಿನ್ನಹವು ಮನದಟ್ಟಾಗಲೆಂದು ಹಾರೈಸುವೆನು.

**ಮತ್ತೊಂದು ಮಾತು:—**

ನಾನು ಕತೆಗಾರನಲ್ಲ, ಸಂಶೋಧಕನು. ನನ್ನ ಆಧ್ಯಾತ್ಮ ಸಂಶೊಧನದ ವರದಿಯೆಂದು ಈ ಪುಸ್ತಕವನ್ನೋದಬೇಕು. ವರದಿಗೆ ಒಂದಿಷ್ಟು ಕಥೆಯ ನೆರಳು ಬಿದ್ದಿದೆಯೆಂದು ಮಾತ್ರ ಹೇಳಬಹುದು. ಕಥಾ ಲಕ್ಷಣ ವನ್ನು ಇದರಲ್ಲಿ ಹುಡುಕಾಡಿ ಫಲವಿಲ್ಲ.

ಇನ್ನೇನು ? ನನ್ನ ಭಾಷಾಶೈಲಿ. ಹಿಂದೆ ಪೂರ್ವರಂಗದ ವಿಷಯ ದಲ್ಲಿ ನನ್ನ ವಿಜ್ಞಾಪನೆಯಲ್ಲಿ ಹೇಳಿದ್ದೇ ಈಗಲೂ ಸರಿಹೋಗುತ್ತದೆ. ಯಾಕೆಂದರೆ ನಾನು ಆಗಿನಂತೆಯೇ ಈಗಲೂ ಅಶಕ್ತನಾಗಿಯೇ ಇದ್ದೇನೆ.

“ನನ್ನ ವಿಷಯದಲ್ಲಿ ನನಗೆ ತಿಳಿದಿರುವುದನ್ನೂ ತಿಳಿಯದಿರುವುದನ್ನೂ ನಾನು ನಿವೇದಿಸುವೆನು. ನನಗೆ ನನ್ನ ವಿಷಯದಲ್ಲಿ ತಿಳಿದಿರುವುದೆಲ್ಲಾ ನನ್ನ ಮೇಲೆ ಪಸರಿಸಿದ **ನಿನ್ನ** ಬೆಳಕಿನಿಂದಲೆ. ನನ್ನ ವಿಷಯದಲ್ಲಿ ನನಗೆ ತಿಳಿಯದಿರುವುದೆಲ್ಲಾ, ಎಷ್ಟು ಕಾಲ ನನಗೆ ಹಾಗೆ ಅದು ತಿಳಿಯದಿರುವುದೆಂದರೆ **ನಿನ್ನ** ಕಟಾಕ್ಷದಿಂದ ನನ್ನ ಕಾಳರಾತ್ರಿಯು ಮಧ್ಯಾಹ್ನವಾಗಿ ಮಾಡಲ್ಪಡುವ ವರೆಗೆ ಮಾತ್ರವೆ.” ಎಂದು ಪುರಾತನ ಮಹಾ ಅನುಭಾವಿಯಾದ ಸೇಂಟ್ ಅಗಸ್ಟೀನನ ಆತ್ಮನಿವೇದನ ವಚನದಿಂದಲೇ ನನ್ನ ಬಿನ್ನಹವನ್ನು ಮುಗಿಸಿ ಪುರಾತನ ನೂತನ ಸರ್ವಸಾಧಕರನ್ನು ಸರ್ವಾಂತಃಕರಣದಿಂದ ವಂದಿಸುವೆನು.

**....ಯತ್ ಕೃಪಾ ತಮಹಂ ವಂದೇ....।**

**ಓಂ ಶ್ರೀ ಓಂ.**

ಹಲಸಂಗಿ
೨೮-೧೦-೧೯೩೪

ಸರ್ವ ಸಾಧಕರ ವಿನಮ್ರಸೇವಕ
**ಮಧುರಚೆನ್ನ**

# ಕಾಳರಾತ್ರಿ

# ೧

## ಸಂಧ್ಯಾರಾಗ

“ ...   ...   ...   ಹಂ–

ಸನ ಪ್ರಭೆ ಕೂಡೆ ತೋರುವದು ॥

ಅನಿತರೊಳದು ಮಾಸುವುದು ಕೂಡೆ ಹೊಳೆವುದು ।

ಕನಸಿನಂತರೆ ನಿದ್ರೆಯಂತೆ ॥ ”

—ರತ್ನಾಕರ ಸಿದ್ಧ

ಒಂದು ವರ್ಷದಲ್ಲಿ ೧೫೦ ಪುಟಗಳುಳ್ಳ ಆರು ಸರಸ ಗ್ರಂಥಗಳು

ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩_೮_೦ ಮಾತ್ರ

ಮನೋಹರ ಗ್ರಂಥಮಾಲೆಯ ೧೧ನೆಯ

ಕುಸುಮ

# ಸಂಕ್ರಮಣ

**[ಐತಿಹಾಸಿಕ ಕಾದಂಬರಿ]**

ಬರೆದವರು:

**'ಆನಂದಕಂದ'**

ಓಂ

# ಮೊದಲನೆಯ ಭಾಗ

## (೧)

ಜ್ಞಾನಭಿಕ್ಷುವಿಗೆ ಬ್ರಹ್ಮಸಂಸ್ಪರ್ಶ (Cosmic Conciousness) ವಾಗುವ ಮುನ್ನಾ ದಿನವೇ ಮುಂದೆ ಬರಲಿರುವ ಕಾಳರಾತ್ರಿಯ (Dark night of the Soul) ಬಗೆಗೆ ಮುಂಜಾಗ್ರತೆಯ ಪೂರ್ವಸೂಚನೆಯನ್ನು ದೇವದೇವನು ಮೊದಲೇ ಕೊಟ್ಟಂತಾಗಿತ್ತು. ಅದೇನೆಂದರೆ, ಅರವಿಂದರ ಪಾಂಡೀಚೇರಿಯ ಸಂಭಾಷಣದ ಪುಸ್ತಕದಲ್ಲಿ ಒಂದು ಮಾತು ಹೀಗೆ ಹೇಳಿದ್ದಿತು: " ಸತ್ಯವನ್ನು ದೃಢಮುಷ್ಟಿಯಿಂದ ಹಿಡಿದು ಕಾಯ್ದುಕೊಳ್ಳುವುದಕ್ಕೆ ದುರಾಗ್ರಹ ಪಡಬೇಡ. ಯಾಕೆಂದರೆ ಅದು ಒಮ್ಮೊಮ್ಮೆ ಇಂಥ ಹಿಡಿತ ಬಿಗಿತಗಳ ಕೈಯಿಂದ ಕೊಸರಿಕೊಂಡು ಹೋಗುವಷ್ಟು ಕೂಡ ತರಲವಾಗುತ್ತಿರುತ್ತದೆ. ಮತ್ತು ಆಗ ಸಾಧಕನು ತಿರುಗಿ ದೇಹಾತ್ಮಬುದ್ಧಿಗೂ ಕೂಡ ಬರುತ್ತಿರುತ್ತಾನೆ. ಆದರೆ ಅದು ಅವನ ಶಾಶ್ವತವಾದ ಪತನವಲ್ಲ."

ಮರುದಿನ (೪ನೇ ಡಿಸೆಂಬರ) ನಮ್ಮ ನಾಯಕನಿಗೆ ಸೂರ್ಯೋದಯದ ವೇಳೆಗೆ ಅನಂತ ವಿಶ್ವವೊಂದು ಅಗಾಧ ವ್ಯಕ್ತಿಯಾಗಿ ಕಾಣಿಸಿದ ಕೆಲಹೊತ್ತಿನ ಮೇಲೆ ಆತನಿಗೆ ಇರುಳಲ್ಲಿ ಓದಿದ ಹಿಂದಿನ ಆ ವಾಕ್ಯವು ನೆನಪಾಗದೆ ಇರಲಿಲ್ಲ. ಆಗ ಅವನು ಹೀಗೆ ಅಂದುಕೊಂಡನು: " ಸದ್ಯದ

ಭಾವಾವೇಗವೂ, ಸತ್ಯದ ಸ್ಪಷ್ಟತೆಯೂ ಮಂದಯಿಸುವುದಂತೂ ನೈಸ ರ್ಗಿಕ. ಹಾಗಾದರೆ ಸದ್ಯದ ಶಾಂತಿಯು ಉಕ್ಕೊ ಇಳಿಯುವುದು ನಿಜ. ಅರ್ಥಾತ್ ಮತ್ತೆಯೂ ಅಶಾಂತಿಯು ದಾಳಿ ಬೆನ್ನು ಹತ್ತುವದೆಂಬಂತಾ ಯಿತು ಆದರೆ ಅದೆಷ್ಟು ವಿಪರೀತಕ್ಕೆ ಬಂದರೂ ಮುಂಚಿನದಕ್ಕೂ, ಇನ್ನು ಮುಂದಿನದಕ್ಕೂ ಮಹದಂತರವೆಂದು ತೋರದೆ ಹೋಗಲಿಕ್ಕಿಲ್ಲ. ಯಾಕೆಂದರೆ ಈ ವರೆಗಿನದು ನೆಲೆಹತ್ತದೆ ಗಾಬರಿಗೊಂಡು ಈಸುವಂತಿತ್ತು; ಆದರೆ ಇನ್ನು ಮುಂದಿನದು ನೆಲೆಹತ್ತಿ ಭರವಸದಿಂದ ಈಸುವಂತೆ ಇದೆ. ಕಷ್ಟ ನಷ್ಟಗಳ ಹೊರೆಯು ಹಿಂದಿನಷ್ಟೇ ಉಳಿದರೂ ಹೊಸದಾಗಿ ಹುಟ್ಟಿದ ಭರವಸದ ಮೂಲಕ ಅದು ಹಿಂದಿನದಕ್ಕಿಂತ ಎಷ್ಟೋ ಹಗುರೇ ಅನಿಸೀತು! ಒಟ್ಟಿಗೇನು?ಈಗಿನ ಆನಂದದ ಹೊರಹಿಗ್ಗು ಹಾರಿಹೋದರೂ ಚಿಂತಿಸುವ ಕಾರಣವಿಲ್ಲ. ಒಳಗೆ ಒತ್ತಿದ ಹೊಸ ಮುದ್ರೆಯು ಎಷ್ಟೇ ಸವೆದರೂ ಅದರ ಕುರುಹು ಸಂಪೂರ್ಣವಾಗಿ ಎಂದಿಗೂ ಅಳುಕಲಾರದು.''

ಒಂದು ವ್ಯಕ್ತಿಯು ಆನಂದವಾಗಲಿ ದುಃಖವಾಗಲಿ ಬಹುಕಾಲ ಒಂದೇ ಪರಿಮಿತಿಯ ಮೇಲೆ ಉಳಿಯಲಾರದೆಂದು ನಾವು ದೈನಂದಿನ ಜೀವನದಲ್ಲಿ ಯಾವಾಗಲೂ ಕಾಣುತ್ತಿರುವೆವು. ಇದೀಗ ಒಬ್ಬ ಏಕ ಮಾತ್ರ ಪುತ್ರನು ಇಹಲೋಕವನ್ನು ಬಿಟ್ಟನೆಂದು ತಿಳಿಯುವಾ. ಆ ಕ್ಷಣ ದಲ್ಲಿ ಆತನ ಮುಪ್ಪಿನ ತಾಯ್ತಂದೆಗಳು ದೊಡ್ಡ ದನಿಯಿಂದ ರೋದಿಸಿ ನೆಲಕ್ಕೆ ಬೀಳುತ್ತಾರೆ. ಹೀಗೇ ಕೆಲಹೊತ್ತು ಸಾಗಿ ಅವರ ಅವಸಾನವು ಕುಗ್ಗುತ್ತ ಬಂದು ಧ್ವನಿಯೂ ಇಳಿಕೆಗೆ ಬೀಳುತ್ತದೆ. ಅಷ್ಟು ಹೊತ್ತಿಗೆ ಅವರ ತೀರ ಹತ್ತುಗಡೆಯವರು ಯಾರಾದರೂ ಬಂದರೆ ಮತ್ತೆ ಶೋಕಾ ಗ್ನಿಯು ಪ್ರಜ್ವಲಿಸುತ್ತದೆ. ಕೆಲಹೊತ್ತಿನ ಮೇಲೆ ಮತ್ತೆ ಇಳಿಕೆಗೆ ಬರು ತ್ತದೆ. ಹೀಗೇ ಏರುತ್ತ ಇಳಿಯುತ್ತ ನಡೆದು ಕೊನೆಗೆ ಆ ಕುಮಾರ ನನ್ನು ಸ್ಥಾನಾಂತರ ಮಾಡುವುದಕ್ಕೆ ಆರಂಭಿಸಿದೊಡನೆ ಇವರ ರೋದ ನಕ್ಕೆ ಮಹಾಪೂರವು ಬರುತ್ತದೆ.ಅಂತೂ ಈ ವಿಧದಿಂದ ಅಂದಿನ ಕಾರ್ಯ ಕ್ರಮವೆಲ್ಲ ತೀರಿದ ಮೇಲೆ ಮುಂದೆ ಜೀವನರಂಗವು ಮೆಲ್ಲ ಮೆಲ್ಲನೆ ಇವ ರನ್ನು ತನ್ನ ಬಲೆಯಲ್ಲಿ ಸೆಳೆಯಹತ್ತುತ್ತದೆ. ಮೊದ ಮೊದಲಿಗೆ ಇವರಿಗೆ ಇನ್ನು ಮುಂದೆ ಜೀವಿಸುವುದರ ಬಗೆಗೆ ತೀವ್ರ ತಿರಸ್ಕಾರವಿರುತ್ತದೆ.

ಆದರೆ ಬರಬರುತ್ತ ಜುಲುಮೆಯಿಂದಲೋ ವಿಸ್ಮೃತಿಯಿಂದಲೋ ಮೆಲ್ಲ ಮೆಲ್ಲಗೆ ಒಂದೊಂದಾಗಿ ಜೀವನದ ಅಧ್ಯಾಯಗಳಿಗೆ ಕೈಹಚ್ಚುತ್ತಾರೆ. ಕೊನೆಗೆ ಜೀವನವೆಲ್ಲಾ ನಡೆಯುವಂತೆ ನಡೆಯುತ್ತದೆ; ಆದರೆ ಒಳಗೊಳಗೆ ಆಳವಾದ ನಿರಾಶೆಯು ಅವ್ಯಕ್ತವಾಗಿ ಮನೆಮಾಡಿಕೊಂಡೇ ಕುಳಿತು ಬಿಟ್ಟಿರುತ್ತದೆ. ಮೊದಲದಿನ ತಾಸಿನಲ್ಲಿ ಹತ್ತು ಸಲ ಶೋಕವು ಉಮ್ಮಳಿಸಿದರೆ ಮರುದಿನ ಇಡೀ ದಿನದಲ್ಲಿ ಹತ್ತುಸಾರೆ ಮಾತ್ರ. ಮೊದಲನೆಯ ವಾರದಲ್ಲಿ ದಿನಕ್ಕೆ ಹತ್ತೆಂಟು ಸಾರೆ ಕಿಚ್ಚೆದ್ದರೆ ಮುಂದಿನ ಇಡೀ ವಾರದಲ್ಲಿ ಏಳೆಂಟೇ ಸಾರೆ ಹೊರಸೂಸುತ್ತದೆ. ಹೀಗೆ ದಿನದ್ದು ದಿನಕ್ಕಿಳಿಯುವದಿಲ್ಲ; ವಾರದ್ದು ವಾರಕ್ಕಿಳಿಯುವದಿಲ್ಲ. ತಿಂಗಳದು ತಿಂಗಳಿಗೆ ಕಡಿಮೆಯಾಗುತ್ತ ಮುಂದೆ ವರುಷದಲ್ಲಿ ಹತ್ತೆಂಟು ಸಾರೆ ಮಾತ್ರ ನೆನಪಿಗೆ ಬರುತ್ತದೆ. ಒಟ್ಟಿಗೇನು ? ದುಃಖದ ಹೊರ ಉಬ್ಬರವು ಹೀಗೆ ತರಲವಾಗುತ್ತ ಹೋಗುವದೇನೋ ನಿಜವೇ ಆದರೂ ಅವರ ಅಂತರಂಗವು ಅವ್ಯಕ್ತ ನಿರಾಶೆಯದೊಂದು ಮಸಣವೇ ಆಗಿ ಇರುತ್ತದೆ. ಇದೇ ಅವ್ಯಕ್ತ ಸಂಸ್ಕಾರವೆಂಬುದು.

ದುಃಖದ ವಿಷಯದಲ್ಲಿ ಈ ಮಾತು ಹೇಗೆ ಸತ್ಯವಿದೆಯೋ ಹಾಗೆಯೇ ಹಿಗ್ಗಿನ ವಿಷಯದಲ್ಲಿಯೂ ದಿಟವಾಗಿದೆ. ಹಿಗ್ಗಿನ ಹೊರ ಉಬ್ಬರವು ಗಳಿಗೆಯದು ಗಳಿಗೆಗೆ, ದಿನದ್ದು ದಿನಕ್ಕೆ, ವಾರದ್ದು ವಾರಕ್ಕೆ, ತಿಂಗಳದು ತಿಂಗಳಿಗೆ ಕಡಿಮೆಯಾಗುತ್ತ ಹೋಗಿ ಕೊನೆಗೆ ಜೀವನದಲ್ಲಿ ಅವ್ಯಕ್ತ ಉಲ್ಲಾಸದ್ದೊಂದು ಕಾಂತಿಯು ಸದಾ ಜೀವಂತವಾಗಿ ಉಳಿದು ಬಿಡುತ್ತದೆ.

ಜ್ಞಾನಭಿಕ್ಷುವಿಗೂ ಹೀಗೆಯೇ ಆಯಿತು. ಅಂದು ಸೂರ್ಯೋದಯಕ್ಕಿದ್ದ ಆನಂದಾವೇಶವು ಮಧ್ಯಾಹ್ನಕ್ಕಿಳಿಯಲಿಲ್ಲ, ಮಧ್ಯಾಹ್ನದ್ದು ಸಂಜೆಗಿಳಿಯಲಿಲ್ಲ; ಅಂದಿನದು ಮರುದಿನವಿಲ್ಲ; ಮರುದಿನದ್ದು ಅದರ ಮರುದಿನವಿಲ್ಲ. ಹೊರ ಉಬ್ಬರವು ಹೀಗೆ ಹರಿಯುತ್ತ ಬಂದಿತಾದರೂ ಒಂದು ಬಗೆಯ ಒಳಗಿನ ಧನ್ಯತೆಯು ಹಾಗೇ ಅಚ್ಚಳಿಯದೆ ಎಚ್ಚರಾಗಿದ್ದಿತು.

## (೨)

ಈ ಪ್ರಸಂಗದಲ್ಲಿ ಜ್ಞಾನಭಿಕ್ಷುವು ತನ್ನ ದೈಹಿಕ ಅಸ್ವಸ್ಥತೆಯ ಮೂಲಕ ಆಡವಿಯ ಒಂದು ಸ್ಯಾನಿಟೋರಿಯಮ್ಮಿನಲ್ಲಿ ಇದ್ದನು. ಅವನು ಅಲ್ಲಿಗೆ ಹೋಗಿ ಇಷ್ಟು ಹೊತ್ತಿಗೆ ಆರು ತಿಂಗಳಾಗಿತ್ತು. ಬ್ರಹ್ಮಸಂಸ್ಪರ್ಶಕ್ಕಿಂತ ಒಂದೆರಡು ತಿಂಗಳು ಮುಂಚೆ ಆತನ ಹಿರಿ ಗೆಳೆಯನೊಬ್ಬನು 'ಇನ್ನೆಷ್ಟು ದಿನ ಅಲ್ಲಿರುವುದು?' ಎಂದು ಕೇಳಿದ್ದನು. ಆಗ ಈತನು ಅಲ್ಲಿಯ ತನ್ನ ವಾಸ್ತವ್ಯದ ಕಾಲಾವಧಿಯನ್ನು ಕುರಿತು ಹೀಗೆ ಹೇಳಿದ್ದನು: "ನನ್ನ ಜೀವನ ನಾಟಕದ ಹೊಸ ಅಂಕವು ಪ್ರಾರಂಭವಾಗುವ ವರೆಗೆ ನಾನು ನನ್ನ ಸಂತಪ್ತಜೀವಕ್ಕೆ ವಿಶ್ರಾಂತಿಯನ್ನೊದಗಿಸಿಕೊಳ್ಳುವುದಕ್ಕಾಗಿ ಎಲ್ಲಿಯಾದರೂ ಏಕಾಂತಸ್ಥಾನದಲ್ಲಿ ಕಾಲವನ್ನು ಕಳೆಯಲೇ ಬೇಕಾಗಿದೆ. ಈಗಿದ್ದ ಸ್ಥಳವು ನನಗೆ ಅಂಥ ಅನುಕೂಲತೆಯುಳ್ಳುದಾಗಿರುವದರಿಂದ ನನ್ನ ನವಜೀವನದ ಆರಂಭದ ವರೆಗೆ ಇಲ್ಲಿಯೇ ಇದ್ದು ಬಿಡುವೆನು."

ಆಯಿತು, ಡಿಸೆಂಬರ್ ನಾಲ್ಕನೇ ತಾರೀಖಿಗೆ ನಮ್ಮ ನಾಯಕನ ನವಜೀವನದ ಆರಂಭವಾಯಿತು! ಆಮೇಲೆ ಪೂರ್ವಸಿದ್ಧಾರ್ಥರವು ತಾನೇ ನಿಜವಾಗುವಂತೆ ಒಂದು ಸಂಗತಿಯು ಘಟಿಸಿತು. ಅದೇನೆಂದರೆ ಜ್ಞಾನಭಿಕ್ಷುವು ತನ್ನ ವೈದ್ಯರ ಹಿತಕಾರ್ಯವೊಂದರ ಸಲುವಾಗಿ ಸ್ಥಾನಾಂತರವನ್ನು ಮಾಡಲೇಬೇಕಾಯಿತು. ತಾನೀಗ ಹೋಗಬೇಕಾಗಿದ್ದ ಪಟ್ಟಣವು ತನ್ನ ಹುಟ್ಟಿದೂರಿಗೆ ಸಮೀಪದಲ್ಲಿದ್ದಿತು. ಆದರೆ ಆತನು ಈಗ ಹಾಗೆಯೇ ಮುಂದಕ್ಕೆ ತನ್ನೂರ ತನಕ ಹೋಗಿ ಬರುವ ವಿಚಾರವನ್ನೂ ಕೂಡ ಮಾಡಿರಲಿಲ್ಲ. ನಡುವಿನ ಪಟ್ಟಣದಲ್ಲಿ ಕೆಲಸ ತೀರಿಸಿಕೊಂಡೊಡನೆ ಒಂದೆರಡೇ ದಿನಗಳಲ್ಲಿ ಹಿಂದಿರುಗಬೇಕೆಂದು ಆಲೋಚಿಸಿದ್ದನು. ಆದುದರಿಂದ ಅಷ್ಟರ ಮಟ್ಟಿಗಿನ ವ್ಯವಸ್ಥೆಯೊಡನೆ ಹೊರಟು ಬಿಟ್ಟನು. ಆದರೆ ಅಲ್ಲಿ ಈತನ ಗೆಳೆಯರು ಹತ್ತೆಂಟು ದಿನ ಬಿಡಲಿಲ್ಲ. ಅಷ್ಟರಲ್ಲಿ ಊರ ಕಡೆಯಿಂದ ಬೇರೆ ಗೆಳೆಯರು ಬಂದು ಒಂದೆರಡು ದಿನಗಳ ಮಟ್ಟಿಗೆಂದು ಅತ್ತ ಕರೆದುಕೊಂಡು ಹೋದರು. ಆದರೆ ಇಷ್ಟರಲ್ಲಿ ಆತನ

ಸಚ್ಚಿನ ಸತಿಯು ಆಂತರಂಗಿಕ ಜೀವನದಲ್ಲೊಂದು ಮಹತ್ತರವಾದ ಒದ ಲಾವಣೆಯಾಗಿದ್ದಿತು. ಅವಳು ಆತನ ನವಜೀವನದ ಕಥೆಯನ್ನು ಕೇಳು ವುದಕ್ಕಿಂತ ಮುಂಚೆ ತನ್ನ ಅಲೌಕಿಕ ಪರಿವರ್ತನದ ಕಥೆಯನ್ನೇ ಒಣ್ಣಿಸಿ ಬಣ್ಣಿಸಿ ಹೇಳಿ ಇನ್ನು ಮುಂದೆ ತಾನು ಅಗಲಿ ಇರಲಾರೆನೆಂದು ಸ್ಪಷ್ಟ ವಾಗಿ ತಿಳಿಸಿದಳು. ಈ ಪರಿಯಿಂದ ನಮ್ಮ ನಾಯಕನ ಆ ನಿರ್ಜನ ವಾಸದ ಪರಿಸಮಾಪ್ತಿಯಾಯಿತು! ಆಗ ಆತನಿಗೆ ಒಹಳ ಸೋಜಿಗವೆನಿಸ ಹತ್ತಿತು. "ನನ್ನ ಜೀವನನಾಟಕದ ಹೊಸ ಅಂಕವು ಆರಂಭವಾಗುವ ವರೆಗೆ ಮಾತ್ರ ಅಲ್ಲಿ ಇರುವುದು" ಎಂದು ಹೇಳಿಸಿದ ಮಾತನ್ನು ವಿಧಿಯು ಹೀಗೆ ನೆರವೇರಿಸಿದುದು ಆತನಿಗೆ ಒಹಳ ಆಶ್ಚರ್ಯಕರವಾಗಿ ತೋರಿತು.

ಇಲ್ಲಿ ವಾಚಕರಿಗೆ 'ಆತನ ಸತಿಯ ನವಜೀವನದ ವಿಷಯವೇನು?' ಎಂಬ ಪ್ರಶ್ನೆಯು ಸಹಜವಾಗಿದೆ. ಆದುದರಿಂದ ಅದನ್ನಿಲ್ಲಿ ಹೇಳುವುದು ಅಪ್ರಾಸಂಗಿಕವೆಂದು ನಾನೆಣಿಸಲಾರೆನು.

ಜ್ಞಾನಭಿಕ್ಷುವಿನ ಸತಿ ರೋಹಿಣಿ. ಇವಳು ನಮ್ಮ ನಾಯಕನ ತಂದೆಯ **ಮಲತಂಗಿಯ** ಮಗಳು. ಈ ಮಲತನದ ಮೂಲಕ ಇವಳ ಅತ್ತೆಯ ಹೃದಯದಲ್ಲಿ ಇವಳ ವಿಷಯಕ್ಕೆ ಸಹಾನುಭೂತಿಯಿಲ್ಲ ಅತ್ತೆಗೂ ಈಕೆಯ ತಾಯಿಗೂ ಮೊದಲಿನಿಂದ ಮುನ್ನೂರು ಚುಂಗು! ಒಹುಶಃ ನಾಡಿನ ತುಂಬೆಲ್ಲಾ ಬೀಗಿತ್ತಿಯರ ಪರಸ್ಪರ ಪ್ರೇಮವು ಇಂಥ ವಿರೋಧಾತ್ಮಕವಾದದ್ದೇ ಇರುವುದಾಗಿ ತೋರುತ್ತದೆ. ಅದರಲ್ಲಿಯೂ ಇವರದು ಮಲತನದ ಸಂಬಂಧ ಬೇರೆ. ಮೇಲಾಗಿ ಇವರಿಬ್ಬರಿಗೂ ಬ್ರೆಕ್ ಬೇರೆ ಇಲ್ಲ! (ಅಂದರೆ ವಿಧವೆಯರು ಅಂತ ಅರ್ಥ.) ಇಬ್ಬರ ಗುಣವೂ ದಿವ್ಯ ಬೇರೆ! ಅಲ್ಲದೆ ಎರಡೂ ಮನೆಗಳು ಒಂದೇ ಊರಲ್ಲಿ. ಹೀಗಾಗಿ ರೋಹಿಣಿಗೆ ಎರಡೂ ಕಡೆಯ ಆಸರವಿಲ್ಲ. ಸಚ್ಚಿನ ಪತಿಯೇ ಆಸರ; ಆತನ ಜೀವದ ಗೆಳೆಯರೇ ಒಳಗ ಈಕೆಗೆ.

ಇಷ್ಟೊತ್ತಿಗೆ ಇವಳು ನೆರೆತು ಎಂಟು-ಹತ್ತು ವರುಷಗಳಾಗಿದ್ದವು. ಇನ್ನೂ ಗಂಡುಮಕ್ಕಳೇ ಹುಟ್ಟಿರಲಿಲ್ಲ. ಒಂದು ಗಂಡು ಹುಟ್ಟಿ ಸತ್ತಿದ್ದಿತು. ಒಂದು ಗರ್ಭಗಲಿತವಾಗಿ ಹೋಗಿತ್ತು. ಉಳಿದದ್ದು ಒಂದೇ ಒಂದು ಹೆಣ್ಣು. ಆದುದರಿಂದ ಇವಳ ಕಷ್ಟಕ್ಕೆ ಇನ್ನೂ ಹೆಚ್ಚು ಅವಕಾಶ

ವುಂಟಾಗಿತ್ತು. ಮನೆಯ ಸೊಸೆ ಪುತ್ರಹೀನಳಾದರೆ ಎದೆಯ ಮೇಲೊಬ್ಬ ಸವತಿ ಬರುವುದು ನಿಶ್ಚಿತ. ಮೇಲಾಗಿ ಅತ್ತೆಯ ಕಿರಿಕಿರಿಗೆ ಇನ್ನಿಷ್ಟು ಉಬ್ಬರವು ಹೆಚ್ಚು.

ಸಾಲದ ಮೂಲಕ ಆರ್ಥಿಕ ಕಷ್ಟ ಹೆಚ್ಚಿದ ಮನೆತನ; ನಚ್ಚಿನ ನಲ್ಲನಿಗೆ ಗುಣಬಾರದ ಬೇನೆ; ಅತ್ತೆಯ ಅಪಲಾಪ; ಭಯಾನಕ ಭವಿಷ್ಯ ಇಂಥ ಭೂತಗಳು ಅವಳ ಬೆನ್ನ ಮೇಲೆ! ಸರಿಯಾಗಿ ಇಂಥ ಸಂಧಿ ಕಾಲದಲ್ಲಿ ಅವಳಿಗೊಂದು ಗಂಡು ಮಗವು ಹುಟ್ಟಿತು! ಕೇಳುವದೇನು? ಅವಳಿಗೆ ಹಿಡಿಸದ ಹಿಗ್ಗು! ಈ ಹಿಗ್ಗು ಅವಳ ಅಂತರಂಗಿಕ ಶಕ್ತಿಗಳ ವಿಕಾಶಕ್ಕೆ ಹೊರಕಾರಣವಾಗಿ ಪರಿಣಮಿಸಿತು. ಆಗಿನ ತನ್ನ ಒಳ ಬದಲಾವಣೆಯ ವಿಷಯವನ್ನು ತನ್ನ ನಲ್ಲನಿದಿರಿಗೆ ತಾನೇ ವಿವರಿಸಿ ಹೇಳಿದ್ದು ಹೀಗೆ:—

" ಬಾಣಂತಿತನವನ್ನು ಅತ್ತೆ ಮಾಡಲೆಂದು ತಾಯಿಯೂ, ತಾಯಿ ಮಾಡಲೆಂದು ಅತ್ತೆಯೂ ತಮ್ಮ ತಮ್ಮ ಕದನದಲ್ಲಿ ನನ್ನನ್ನು ನಡುನೀರಲ್ಲಿ ಬಿಟ್ಟರು. ಅತ್ತೆ ತನ್ನ ಮಟ್ಟಿಗೆ ತಾನು ಉಂಡು ಹೊಲಕ್ಕೆ ಹೋಗು ವವಳು; ತಾಯಿಯಂತೂ ಓಣಿಯ ಸಮೀಪಕ್ಕೂ ಕೂಡ ಸುಳಿಯಳು. ಹೀಗಾಗಿ ನನ್ನ ಬೆಂಕಿ-ಬಿಸಿನೀರು, ಹೊಟ್ಟೆ-ನೆತ್ತಿ ಎಲ್ಲಾ ನಾನೇ ಮಾಡಿಕೊಳ್ಳುತ್ತಿದ್ದೆನು. ಹಾಕಿದ ಬಾಗಿಲು ತೆರೆಯುವ ಕಾರಣವೇ ಇರುತ್ತಿದ್ದಿಲ್ಲ. ತಿಂಗಳಗಟ್ಟಲೆ ಇಂಥ ನಿಬಿಡವಾದ ಏಕಾಂತ! ಮಗು ವನ್ನು ಮಗ್ಗಲಲ್ಲಿ ಮಲಗಿಸಿಕೊಂಡು ಅದರ ಉಲಿದಾಟವನ್ನೂ ಸ್ನಿಗ್ಧ ಸೌಂದರ್ಯವನ್ನೂ ನೋಡುತ್ತ ಒರಗಿಕೊಂಡಿರುವದು ನನ್ನ ದಿನದ ಉಳಿದ ಕೆಲಸ. ಹೀಗೆ ಏಕಾಂತ ಮತ್ತು ಹಿಗ್ಗು ಇವುಗಳ ಸಂಘರ್ಷಣ ದಿಂದ ಮೆಲ್ಲನೆ ನನಗೆ ನನ್ನ ಒಳ ಅವಸ್ಥೆಯು ಅಗಾಧವಾದ ಬದಲಾವಣೆ ಯನ್ನು ಹೊಂದುತ್ತಿದ್ದಂತೆ ಭಾಸವಾಗಹತ್ತಿತು. "

" ನೀವು ಆರೇಳು ವರುಷಗಳಿಂದ ಒಂದೇ ಸವನೆ ನನ್ನ ಮುಂದೆ ಗಂಟೆ ಬಾರಿಸುತ್ತಿದ್ದಿರಿ. ನನಗೆ ಅದು ಏನೂ ಕೇಳಿಸುತ್ತಿದ್ದಿಲ್ಲ. ಎಷ್ಟೋ ಕಾಲದಿಂದ ಒಂದೇ ಸವನೆ ನೀರು ಹನಿಸುತ್ತಿದ್ದಿರಿ; ಈ ಸಸಿಯು ಏನೂ ಕೊನರಿದ್ದಿಲ್ಲ. ಆದರೆ ಈ ನಿಬಿಡವಾದ ಏಕಾಂತದ

ಕಾಲದಲ್ಲಿ ಹತ್ತು ವರುಷದ ಜಿಳಿ ಒಮ್ಮೆಗೇ ಬೆಳೆದು ನಿಂತಂತೆ ಅನಿಸ ಹತ್ತಿತು. ನನಗೆ ಎಲ್ಲಾ ತನ್ನಿಂದ ತಾನೇ ತಿಳಿದಂತಾಗಹತ್ತಿತು. ನಿಮ್ಮ ಬಹುವರ್ಷಗಳ ಅಪರಿಮಿತ ಪರಿಶ್ರಮವು ಫಲಿಸಿತೆಂದು ಅತಿಯಾಗಿ ಹಿಗ್ಗಿದೆನು ! "

" ಈಗ ಅವರಿಗೆ ಭೆಟ್ಟಿಯಾಗಿ ಇದೆಲ್ಲ ಸಮಾಚಾರವನ್ನು ಅರು ಹಿದರೆ ಎಷ್ಟು ಹರುಷಪಟ್ಟಾರು ! ತಾನು ನೆಟ್ಟ ಸಸಿ ಅಗಾಧವಾಗಿ ಫಲಫಲಿಸಿದ್ದನ್ನು ನೋಡಿ ಅವರಿಗೆಷ್ಟು ಹಿಗ್ಗು ಆದೀತು ! ಈಗ ನಾನು ಬಾಣಂತಿ; ಅವರು ಅಲ್ಲಿ ರೋಗಿ ! ಹೇಗೆ ಭೆಟ್ಟಿಯಾಗುವುದು ?! ' ಎಂದು ಆಮೇಲೆ ಒಂದೇ ಸವನೆ ಎಣಿಕೆ ಹಾಕಹತ್ತಿದೆನು. ಕೊನೆಗೆ ದೇವನು ತಾನಾಗಿಯೇ ನಿಮ್ಮನ್ನು ಕರೆತಂದನು ! ಅಲ್ಲದೆ ಅತ್ತ ನಿಮ್ಮ ಜೀವಕ್ಕೂ ಶಾಂತಿ ಸಿಕ್ಕಿದೆ ! ಸಾಕು ಸಾಕು ಇನ್ನೇನೂ ಬೇಡ ! ಇರುವಷ್ಟು ದಿನ ಇನ್ನು ಮೇಲಾದರೂ ಒಬ್ಬರನ್ನೊಬ್ಬರು ಅರಿತು ಸುಖವಾಗಿ ಇರೋಣ !! "

ಹೀಗೆ ನಮ್ಮ ನಾಯಕನ ಸತಿಯು ಆತನನ್ನು ಅಲ್ಲಿಯೇ ತಡೆದು ನಿಲ್ಲಿಸಿಕೊಂಡು ಬಿಟ್ಟಳು. ಈತನ ಆರೈಕೆಗೆಂದು ಯಾವಾಗಲೂ ಈತ ನನ್ನು ಹಿಂಬಾಲಿಸಿಕೊಂಡಿದ್ದ ಜೀವದ ಗೆಳೆಯನಾದ ಮಂಜುಳನು ಮುಗುಳು ನಗೆ ನಕ್ಕು ಆ ಅಡವಿಯ ವೈದ್ಯಶಾಲೆಯಿದ್ದ ಪಟ್ಟಣಕ್ಕೆ ಅಲ್ಲಿದ್ದ ಈತನ ಸಾಮಾನು-ಸಡಿಗಳನ್ನೆಲ್ಲ ತರುವ ಸಲುವಾಗಿ ಹೋದನು. ಅಲ್ಲಿಯ ಅಕ್ಕರತೆಯ ವೈದ್ಯರೂ ಅವರ ಗೆಳೆಯರೂ ಜ್ಞಾನಭಿಕ್ಷುವಿನ ಆಕಸ್ಮಿಕ ಸ್ಥಳಾಂತರಕ್ಕೆ ಕನವರಿಸಿದರು, ಹಾಗೂ ನಕ್ಕರು. ಯಾಕೆಂ ದರೆ ಅಲ್ಲಿಯಿಂದ ಹೊರಡುವಾಗ ಇದಾವ ವಿಚಾರವೂ ಇದ್ದಿರಲಿಲ್ಲ.

ಇತ್ತ ರೋಹಿಣಿಯು ತನ್ನ ನಲ್ಲನಿಗೆ ತನ್ನ ಆ ಅವಸ್ಥೆಯ ಬಗೆಗೆ ಇನ್ನೂ ಹೇಳಿದ್ದೇನಂದರೆ— " ನಾನು ಹಾಗೆ ಸಮಾರು ಒಂದು ತಿಂಗಳು ದಟ್ಟ ಏಕಾಂತದಲ್ಲಿರಲು, ಮುಂದೆ ಒಂದು ದಿನ ನನ್ನ ತಾಯಿಯು ಯಾರ ಕೂಡಲೋ ಜಗಳ ಮಾಡಿಕೊಂಡು ಅದರ ಫಿರ್ಯಾದಿಯನ್ನು ನನ್ನ ಮುಂದೆ ಹೇಳುವುದಕ್ಕೆ ರಂಬಾಟದೊಡನೆ ಬಂದಳು. ಆ ಕೋಲಾ ಹಲಕ್ಕೆ ನಾನು ಅಂದೇ ಹೊಸದಾಗಿ ಬಾಗಿಲು ತೆರೆದು ಹೊರಗೆ

ಕಾಣಿಟ್ಟದ್ದು ! ಅವಳ ಕಥೆ ಕಣ್ಣಿಗೆ ಬಿದ್ದೊಡನೆಯೋ ನನ್ನ ಆ ಅಗಾಧ ಸ್ಥಿತಿಯೆಲ್ಲಾ ಸಂಪೂರ್ಣವಾಗಿ ಮಾಯವಾಯಿತು! ಈಗ ಅದರದೇನೇನೂ ಜ್ಞಾಪಕದಲ್ಲಿ ಕೂಡ ಉಳಿದಿಲ್ಲ. 'ಏನೋ ಅಗಾಧವಿತ್ತು; ಅದರಿಂದ ನನಗೆ ಎಲ್ಲಾ ತಿಳಿದಂತೆ ಅನಿಸುತ್ತಿತ್ತು' ಎಂದು ಇಷ್ಟು ಮಾತ್ರವೇ ಈಗ ನನಗೆ ಮಸಮಸಕಾಗಿ ನೆನಪಿನಲ್ಲಿದ್ದಂತೆ ಇದೆ. ಹೀಗೆ ಬಂದದ್ದು ಹೋಯಿತೇಕೆ? ನನಗೇನೂ ತಿಳಿಯದಾಗಿದೆ. ಈಗ ಆ ಅವಸ್ಥೆಯ ಅವಶೇಷಸ್ವರೂಪವಾಗಿ ನನ್ನಲ್ಲಿ ಉಳಿದದ್ದೆಂದರೆ 'ನಾನೀಗ ಹಿಂದಿನಂಥ ಕಲ್ಲಂ ಮಾತ್ರ ಇಲ್ಲ' ಎಂಬ ಅನಿಸಿಕೆಯೊಂದೇ. ''

ಅದಕ್ಕೆ ಅವಳ ಅಕ್ಕರತೆಯ ಪತಿಯು ಅವಳಿಗೆ ಅರವಿಂದರ ಆ ಅಮರವಾಣಿಯನ್ನು— 'ಸತ್ಯವನ್ನು ದೃಢಮುಷ್ಟಿಯಲ್ಲಿ ಹಿಡಿಯಲು ಹಟನಿಗ್ರಹ ಬೇಡ. ಅದು ಒಮ್ಮೊಮ್ಮೆ ಕೈಯಿಂದ ಕೊಸರುವಷ್ಟು ವಿರಲವಾಗುತ್ತಿರುತ್ತದೆ.' ಎಂಬ-ಅಂದು ತಾನೋದಿದ-ವಾಕ್ಯವನ್ನು ವಿವರಿಸಿ ಹೇಳಿ— 'ನಿಜವಾಗಿಯೂ ನೀನು ಧನ್ಯಳು. ನಿನ್ನ ಆತ್ಮವು ಜಾಗೃತವಾಯಿತು. ಅದು ಇನ್ನು ಎಷ್ಟು ಮಲಗುವದೋ ಮಲಗಲಿ, ಆದರೆ ನಿನ್ನ ಜೀವನದಲ್ಲಿ ಎಂದಿಗಾದರೂ ತನಗೆ ಅನುವು ಸಿಕ್ಕೊಡನೆ ಅದು ಮತ್ತೆ ಜಿಗಿದು ಎದ್ದುನಿಲ್ಲುವದರಲ್ಲಿ ಸಂದೇಹವಿಲ್ಲ. '' ಕಾಲೇನಾತ್ಮನಿವಿಂದತಿ '' ಯೆಂದು ಗೀತೆ ಸಾರುತ್ತಿದೆ.' ಎಂದು ಸಂತಯಿಸಿದನು.

( ೩ )

ಇಷ್ಟುಹೊತ್ತಿಗೆ ಜ್ಞಾನಭಿಕ್ಷುವಿನ ಅಂದಿನ ಆ ಆನಂದಾವೇಗವು ಎಷ್ಟೋ ಮಂದವಾಗಿದ್ದಿತು. ಮೆಲ್ಲನೆ ಜೀವದಲ್ಲೊಂದು ಬಗೆಯ ಮಂದ ಅಶಾಂತತೆಯು ವ್ಯಾಪಿಸಹತ್ತಿತು. ಬಹುತರ ಜನಸಮ್ಮರ್ದದಲ್ಲಿ ಬಂದು ಸೇರಿದ್ದೇ ಇದಕ್ಕೆ ಕಾರಣವಾಗಿತ್ತೆಂದು ಹೇಳಬಹುದು. ಆಗ ಬೆಳೆಗಾಲವಾದುದರಿಂದ ಹೊಲದಲ್ಲೇ ಗುಡಿಸಲುಹಾಕಿಕೊಂಡು ನಿಲ್ಲಬೇಕೆಂದು ಗೊತ್ತು ಮಾಡಿದನು. ಆಮೇರೆಗೆ ಮಡದಿ ಮಕ್ಕಳೊಡನೆ ಅಡವಿಗೆ ಹೋದನು.ವ್ಯವಸ್ಥೆಗೆ ಆತನ ಗೆಳೆಯನಂತೂ ಜೊತೆಯಲ್ಲಿ ಇರತಕ್ಕವನೇ. ಅಸ್ವಸ್ಥತೆ ಅಶಕ್ತತೆಗಳ ಮೂಲಕ ಅಷ್ಟು ಪರಿವಾರದೊಡನಿರುವುದೂ ಆತನಿಗೆ ಕಟಕಟಿಯೇ ಅನಿಸಹತ್ತಿತು. ಒಟ್ಟಿಗೆ ಸುಮಾರು ನಾಲ್ಕು ತಿಂಗಳು

ಹೀಗೆ ಕಾಲಕಳೆಯಿತು. ಆದರೆ ಇಲ್ಲಿ ಒಂದು ಮಾತೇನೆಂದರೆ: ಅಷ್ಟು ಕಾಲವೆಲ್ಲಾ ಒಂದೇಸವನೇ ಅಶಾಂತ ಸ್ಥಿತಿಯಿದ್ದಿತಾದರೂ ಅದು ಅಖಂಡವಾಗಿದ್ದಿಲ್ಲ. ಹತ್ತಿಪ್ಪತ್ತು ದಿನಕ್ಕೊಂದರಂತೆ ಅಷ್ಟರಲ್ಲಿ ಆರೇಳು ಖಂಡಗಳಾಗಿ ಅದು ಬಂತು. ಹೇಗೆಂದರೆ ಸುಮಾರು ೧೫–೨೦ ದಿವಸಗಳವರೆಗೆ ಏನೋ ಒಂದು ಬಗೆಯ ಸ್ತಂಭಿತ ಸ್ಥಿತಿಯಿದ್ದು, ಕೊನೆಗೊಂದು ದಿನ ಮತ್ತೆ ಯಾವುದಾದರೂ ನೆವದಿಂದ ಒಳಗಿನ ಸುಪ್ತ ಆನಂದವು ಉತ್ತೇಜಿತವಾಗುತ್ತಿತ್ತು. ಕೂಡಲೆ ಚಕ್ಕನೆ ಬೆಳಗಾದಂತಾಗುವುದು. ಇಂಥ ಒಂದು ಪ್ರಸಂಗವನ್ನು ಇಲ್ಲಿ ವರ್ಣಿಸುವೆನು.

ಕೆಲ ದಿನಗಳಿಂದ ತಲೆಯೆಲ್ಲಾ ಚಿಟ್ಟುಹಿಡಿದು ಹೋಗಿರುವಾಗ ಒಮ್ಮೆ ನಮ್ಮ ನಾಯಕನು ಒಂದು ಹಸುರಿಡಿದ ಮಾವಿನ ಗಿಡದ ಕೆಳಗೆ ಕುಳಿತು ಮೇಘದೂತವನ್ನೋದುತ್ತಿದ್ದನು. ಆದರಲ್ಲಿ "ಅಮರ ಮಿಥುನ-ಪ್ರೇಕ್ಷಣೀಯಂ" ಎಂಬ ವಾಕ್ಯವು ಹೊರಡುವದಕ್ಕೆ ಸರಿಯಾಗಿ ಜ್ಞಾನಭಿಕ್ಷುವಿನ ದೃಷ್ಟಿಯು ಜುಂಪಲು ಎಲೆಗಳ ನಡುವೆ ದಟ್ಟ ನೆರಳಲ್ಲಿ ಜೋಡಿಯಿಂದ ಕುಳಿತ ಎರಡು ಕಾಕದಂಪತಿಗಳ ಕಡೆಗೆ ಹೋಯಿತು. ಆಗ ಮಧ್ಯಾಹ್ನದ ಬಿಸಿಲ ಹೊತ್ತು. ಹಕ್ಕಿಪಕ್ಕಿಗಳೆಲ್ಲಾ ಹಾರಾಟ ಮುಗಿಸಿ ಮರಗಳಲ್ಲಿ ಬಿಸಿಲುಗಳೆಯುತ್ತಿವೆ. ಅಡವಿಯೆಲ್ಲಾ ಪ್ರಶಾಂತವಾಗಿ ಇದೆ. ಮರಗಳೆಲ್ಲಾ ಹೊಸ ಎಲೆಗಳಿಂದ ಹಸುರುಗಾರು ಕಾಣುತ್ತಿವೆ. ಹೊಲಗಳಲ್ಲೆಲ್ಲಾ ಬೆಳೆಗಳು ಬಿಗಿದು ನಿಂತಿವೆ. ಇಂಥ ಸೊಬಗಿನ ಸುತ್ತುವರಿಯಲ್ಲಿ (Back ground) ದಟ್ಟ ಎಲೆಗಳೊಳಗೆ ಆ ದಂಪತಿಗಳು ಕಣ್ಣುಮುಚ್ಚಿ ಒಂದನ್ನೊಂದು ಆಶ್ರಯಿಸಿ ನಲುಮೆಯಿಂದ ಕುಳಿತಿವೆ. ಆಗ ನಮ್ಮ ನಾಯಕನಿಗೆ ಆಗಾಧವೆನಿಸಿತು: "ಆಹಾ! ನಿಜವಾಗಿಯೂ ಇವು ಅಮರ ಮಿಥುನಗಳು! ಜೀವನದಲ್ಲಿ ಮರಣ ಮತ್ತು ವಿಯೋಗಗಳು ಎಂದೋ ಒಮ್ಮೆ ಬರಬಹುದಾದರೂ ಆ ಕೆಲವು ಉಗ್ರಕ್ಷಣಗಳ ನಲುವಾಗಿ ನಾವು ಇಡೀ ಜೀವನವನ್ನೇ ಮಸಣವನ್ನಾಗಿ ಮಾಡಿಕೊಂಡು ಬಿಡುವೆನಲ್ಲ! ಈ ಮಿಥುನವೀಗ ಸ್ವರ್ಗಸುಖದಲ್ಲಿಲ್ಲವೆ?! ಕಲ್ಪನೆಯಿಲ್ಲದೆ ಕಾಲನ ದವಡೆಗೊಮ್ಮೆ ಇವು ಬೀಳಬಹುದಾದರೂ ಅದು ಎಂದೋ ಏನೋ! ಈಗ ಸದ್ಯಕ್ಕೆ ಇವು ಸ್ವರ್ಗದಲ್ಲಿದ್ದುದು ಸುಳ್ಳೇನು?

ಜೀವನವು ಬರೀ ಭಯಾನಕ ನರಕವಲ್ಲ; ಅದು ಅತುಲನೀಯವಾದ ಸ್ವರ್ಗವೂ ಇದೆ. ಈ ಸ್ವರ್ಗವನ್ನು ಆ ನರಕದಲ್ಲಿ ಮುಳುಗಿಸಿ ಜೀವನ ವನ್ನು ಉಗ್ರಸ್ವರೂಪಕ್ಕೆ ತಂದುಕೊಳ್ಳುವುದು ತಪ್ಪು. ಈ ಪಕ್ಷಿಗಳಂತೆ ಆಗಾಗಿನ ಸ್ವರ್ಗ ನರಕಗಳನ್ನು ಆಗಾಗಿನ ಮಟ್ಟಿಗೆ ಮಾತ್ರ ಸ್ವಾಗತಿಸಿ ದರೆ ಇವುಗಳಂತೆ ನಾವೂ ಅಂದಿಗೆ ಅಮರಮಿಥುನಗಳೇ ಸರಿ!!!" ಇಂದಿನ ಈ ಪ್ರಸಂಗದಿಂದ ಹಿಂದಿನ ಹತ್ತಿಪ್ಪತ್ತು ದಿನಗಳ ಬಿಮ್ಮು ಒಮ್ಮೆಲೆ ಬಿಟ್ಟು ಬಯಲಾಯಿತು.

ಹೀಗೆ ಎರಡು ಮೂರು ಪ್ರಸಂಗಗಳು ಗತಿಸಿದವು. ಅವುಗಳ ಕಥೆಯನ್ನೆಲ್ಲಾ ತನ್ನ ಮಡದಿಗೂ ಮಿತ್ರನಿಗೂ ಆಗಾಗ ಹೇಳುತ್ತಲೇ ಇದ್ದನು. ಆ ಮೇಲೆ ಅವನು ತನ್ನ ಹಿಂದಿನ ಆ ಹಿರಿ ಅನುಭವದ ಆತ್ಮ ಗೀತವನ್ನು ಬರೆದು ಮುಗಿಸಿದನು. ಅಷ್ಟು ಹೊತ್ತಿಗೆ ಒಂದಿರುಳು ಅವನ ಗೆಳೆಯನ ಅಂತರ್ಮಾನಸವೂ ಅರಳಿತು. ಅದರ ಕಥೆ ಹೀಗಿದೆ:–

ಜ್ಞಾನಭಿಕ್ಷುವು ತನ್ನ ಗೀತವನ್ನು ಬರೆದು ಮುಗಿಸಿ ನಾಲ್ಕು ದಿನವಾಗಿತ್ತು. ಆ ನಾಲ್ಕು ದಿನವೂ ಹಗಲಿರುಳು ಆ ಹಾಡಿನ ಪ್ರಸ್ತಾಪವೇ ಪ್ರಸ್ತಾಪ. ಕೊನೆಗೊಂದು ದಿನ ಬೆಳಗಿನ ಜಾವದಲ್ಲಿ ಆತನ ಗೆಳೆಯ ಮಂಜುಳನು ಒಂದು ಕನಸು ಕಂಡು ಎಚ್ಚತ್ತು ಹೀಗೆ ಹೇಳಿದನು:–

"ಅಣ್ಣಾ ಇದೇನು ಕನಸೋ ನೆನಸೊ! ನನ್ನ ಜೀವನವೆಲ್ಲಾ ಒಂದು ಹೊಸ ಚೇತನದಿಂದ ತುಂಬಿ ಬಿಟ್ಟಿತು! ಕನಸಿನಲ್ಲಿ ನಾನೂ ನೀನೂ ಕೂಡಿ ಒಂದು ಅಡವಿಯ ಹಾದಿಯನ್ನು ಹಿಡಿದು ಎಲ್ಲಿಗೋ ಹೊರಟಿ ದ್ದೆವು. ಹಾದಿಯ ಮಗ್ಗುಲಿಗೆ ಒಂದು ಸಾಧಾರಣ ತರಹದ ಜಾಲಿಯ ಗಿಡ. ಆ ಗಿಡದ ವಿಷಯದಲ್ಲಿ ಒಂದು ಆಖ್ಯಾಯಿಕೆಯಿದ್ದಂತೆ ಆಗ ನನಗೆ ನೆನಪಿಗೆ ಬಂದಂತಾಯಿತು. ಆ ವಿಷಯವೇನೆಂದರೆ– 'ಆ ಗಿಡ ದೊಳಗೆ ಒಂದು ಸರ್ಪವಿದೆ. ಯಾರಾದರೂ ತಮ್ಮ ಜೀವನದಲ್ಲೆಲ್ಲಾ ದೇವನನ್ನು ನಿಜವಾಗಿ ಹುಡುಕಿ ನಿರಾಶೆಪಟ್ಟಿದ್ದರೆ ಅಂಥವರು ಅಲ್ಲಿಗೆ ಹೋಗಿ– "ದೇವರಿಲ್ಲ"– ಎಂದು ನುಡಿದರೆ ಆ ಹಾವು ಹೊರಗೆ ಬಂದು ಅವನಿಗೆ ಕಚ್ಚುವದು. ಅದರಿಂದ ಅವನಿಗೆ ಸಾಕ್ಷಾತ್ಕಾರವಾಗುವದು.

ಆದರೆ ಆತನು ಸತ್ಯ ಸತ್ಯವಾಗಿ ಮಾತ್ರ ದೇವನನ್ನು ಹುಡುಕಿ ದಣಿದಿರ ಬೇಕು. ''

''ಆಗ ನೀನು ಆ ಗಿಡದ ಹತ್ತರ ಹೋಗಿ ಹೀಗೆ ನುಡಿದಿ: 'ದೇವರಿದ್ದಾನೆಂಬುದು ತುಂಬಾ ಸುಳ್ಳು. ನೋಡಿದವರು ಯಾರಿದ್ದಾರೆ? ಅರವಿಂದರು ತಮಗೆ ಸಾಕ್ಷಾತ್ಕಾರವಾಗಿದೆಯೆಂದೇನೋ ಹೇಳುತ್ತಾರಾದರೂ ಅವರನ್ನಾದರೂ ನಂಬುವುದು ಯಾತರ ಮೇಲಿಂದ? ನಾವೇನು ಅವರ ಹೃದಯದಲ್ಲಿ ಕುಳಿತು ನೋಡಿ ಬಂದಿರುವೆವೋ? ನನಗೆ ಅದೊಂದೂ ಗೊತ್ತಿಲ್ಲ. ನಾನು ದೇವರಿಲ್ಲವೆಂದು ಧಾರಾಳವಾಗಿ ಹೇಳುತ್ತೇನೆ, ನೀನು ಹೀಗೆ ಅನ್ನುತ್ತಿರುವಷ್ಟರಲ್ಲಿಯೇ ಆ ಗಿಡದೊಳಗಿಂದ ಒಂದು ಚುರುಕಾದ ಹಾವು ಹಾರಿ ಬಂದು ನಿನ್ನ ಗಲ್ಲಕ್ಕೆ ಕಚ್ಚಿತು. ಕೂಡಲೆ ನಿನಗೊಂದು ವಿಚಿತ್ರವಾದ ಉನ್ಮಾದವೇರಿತು! ತಿರುಗಿ ಸ್ಮೃತಿಯು ಮೇಲೆ ಬಂದ ಬಳಿಕ ನೀನು 'ಆಹಾ! ನನಗೆ ಸಾಕ್ಷಾತ್ಕಾರವಾಯಿತಲ್ಲಾ!' ಎಂದಿ.

''ಆಗ ನಾನು ನಿನಗೆಂದೆ- 'ಅಣ್ಣಾ, ನಾನೂ ಈ ಗಿಡದ ಬಳಿಗೆ ಹೋಗಿ ಹಾಗೆ ಅನ್ನಲೇ?' ಅದಕ್ಕೆ ನೀನೆಂದಿ- 'ಅವಶ್ಯ' ಆಯಿತು ನಾನೂ ಹಾಗೆಯೇ ನೀನಾಡಿದಂತೆ ನಾಸ್ತಿಕವನ್ನಾಡಿದೆನು. ಆ ಹಾವು ಬಂತು. ಆದರೆ ನನಗೆ ಕಚ್ಚದೆ ಬರೀ ಬಾಲದಿಂದ ಗಲ್ಲಕ್ಕೆ ಹೊಡೆದು ಹೋಯಿತು. ನನಗೆ ಹೊಸದೇನೂ ಆಗಲಿಲ್ಲ! ಆಗ ನನಗೆ ಬಹಳ ದುಃಖವಾಯಿತು! 'ಅಣ್ಣಾ, ನಾನೆಂಥಾ ಪಾಪಿ! ನಾನು ದೇವನ ಸಲುವಾಗಿ ನಿಜವಾಗಿ ಅನುತಾಪವನ್ನು ಪಟ್ಟಿಲ್ಲವೆಂದಂತಾಯಿತಲ್ಲಾ!' ಎಂದು ಗೋಳಿಟ್ಟೆನು.

''ಅದಕ್ಕೆ ನೀನು ಹೀಗೆ ಹೇಳಿದಿ- 'ಅಲ್ಲ- ಹಾಗೇನೂ ಅಲ್ಲ ನೀನು ದೇವನಿಗಾಗಿ ಕಾತರಿಸಿದ್ದು ನಿಜವಾಗಿಯೇ ಎಂದು ನಾನು ಬಲ್ಲೆ. ಈ ವಿಷಯದಲ್ಲಿ ತನ್ನದು ತನಗೇ ಒಮ್ಮೊಮ್ಮೆ ಅವಿಶ್ವಾಸ ಹುಟ್ಟುತ್ತಿರುತ್ತದೆ. ಆದರೆ ಸಾಧಕ ಜೀವನದ ಬಗೆಗೆ ಬಹಳವಾಗಿ ಪರಿಶೀಲನೆ ಮಾಡಿದ ನನಗೆ ಅದರ ನೆಲೆ ಕಲೆಗಳ ಪರಿಚಯವಿದೆ. ನಿನ್ನಲ್ಲಿ ಸತ್ಯಸತ್ಯವಾಗಿ ನಿಜಭಕ್ತಿಯಿದೆ. ಆದರೆ ಮೊದಲೇ ನಿನ್ನ ಬಗೆಗೆ ನೀನು ಅಧೈರ್ಯಪಟ್ಟು ಕೊಂಡು ಆ ಗಿಡದ ಎದುರಿಗೆ ಹುದುಗಿಕೊಂಡು ನಿಂತು ಹಾಗೆ ಅಂದಿ.

ಆದರೆ ಈಗ ಆತ್ಮವಿಶ್ವಾಸದಿಂದ ಮೈಚಳಿ ಬಿಟ್ಟು ಮತ್ತೊಮ್ಮೆ ಅನ್ನು; ಹೀಗೆ ಹೇಳಲು ನಿನ್ನ ಈ ಮಾತಿನ ಮೇಲೆ ನನಗೆ ವಿಶ್ವಾಸವುಂಟಾಯಿತು.

"ಈಗ ಮತ್ತೆ ಆ ಗಿಡದ ಮುಂದೆ ನಿಂತು ಮೊದಲಿನಂತೆ ನಾಸ್ತಿಕ ವನ್ನಾಡಿದೆನು. ಕೂಡಲೇ ಹಾವು ಜಿಗಿದು ಬಂದು ನನಗೆ ಕಚ್ಚಿತು. ಒಡನೆಯೇ ನನಗೆ ಒಂದು ಬಗೆಯ ಆನಂದೋನ್ಮಾದವು ಏರಹತ್ತಿತು. ನನ್ನ ತಲೆಯ ಸುತ್ತುಮುತ್ತಲೆಲ್ಲಾ ಒಂದು ಬೆಳಕು ಹಬ್ಬಿತ್ತು. ರೋಮ ರೋಮವೆಲ್ಲಾ ಈಶ್ವರನ ಸತ್ಯತೆಯ ಬಗೆಗೆ ಶ್ರದ್ಧೆ ತುಂಬಿದಂತಾಯಿತು! ಈಗ ಎಚ್ಚತ್ತ ಮೇಲೆಯೂ ಕೂಡ ಇನ್ನೂ ಆ ಸ್ವಪ್ನವು ಗಟ್ಟಿಗೊಂಡು ನಿಂತಿದೆಯೆಂದೇ ಅನಿಸುತ್ತಿದೆ."

ಇದೆಲ್ಲವನ್ನು ಕೇಳಿ ನಮ್ಮ ನಾಯಕನಿಗೆ ಬಹಳ ಆಶ್ಚರ್ಯವಾಯಿತು. 'ಒಬ್ಬರಲ್ಲೊಂದು ವಿಧದಿಂದ ಆತ್ಮವರಳಿದರೆ ಇನ್ನೊಬ್ಬರಲ್ಲಿ ಇನ್ನೊಂದು ಬಗೆಯಿಂದ ವಿಕಾಸ ಹೊಂದುತ್ತಿದೆಯಲ್ಲಾ! ಮಡದಿಗೊಂದು ಬಗೆಯಿಂದ ಹೊಸನಾಡು ತೆರೆದರೆ, ಮಿತ್ರನಿಗಿನ್ನೊಂದು ಬಗೆಯಿಂದ ತೆರೆಯಿತಲ್ಲಾ! ದೇವದೇವನು ತಾನು ತನ್ನ ಭಕ್ತನಿಗೆ ಪ್ರಕಟವಾಗುವ ಅಸಂಖ್ಯ ಮಾರ್ಗಗಳನ್ನು ತನ್ನ ಕಡೆಗೆ ಕಾದಿಟ್ಟುಕೊಂಡಿರುತ್ತಾನೆಂದು ಅರವಿಂದರು ಹೇಳುವ ಮಾತು ಇಂದು ಈತನಿಗೆ ಬಹಳ ಸರಿಯೆನಿಸಿತು. ಹಿಂದೆ ತನ್ನ ಸತಿಯಳಿಗೆ ಹೇಳಿದಂತೆ ಇಂದು ಈ ಗೆಳೆಯನಿಗೂ ಅಂದಿನ ಅದೇ ಮಾತನ್ನು ಹೇಳಿದನು. "ನಿನ್ನ ಅಂತರ್ಮಾನಸವು ಇಂದು ಅರಳಿದ್ದು ಸತ್ಯ. ಅದು ಇನ್ನೆಷ್ಟು ಮುದುಡಿದರೂ ಚಿಂತೆ ಬೇಡ. ಯಾಕೆಂದರೆ ಹಾಗೆ ಆಗುತ್ತಿರುವುದು ಅಧ್ಯಾತ್ಮರಾಜ್ಯದೊಳಗಿನದೊಂದು ನಿಸರ್ಗನಿಯಮವೆಂದು ಅರವಿಂದರು ಹೇಳಿದ್ದಾರೆ. ಹೊಸ ಅನುಕೂಲತೆಗಳು ಸಿಕ್ಕಹಾಗೆಲ್ಲಾ ಅದು ಪುನಃ ಪುನಃ ಅರಳುತ್ತ ಹೋಗುವುದರಲ್ಲಿ ಸಂದೇಹವಿಲ್ಲ."

(೪)

"ಪೂರ್ವರಂಗ" ದಲ್ಲಿ 'ಪ್ರಥಮ ಪರಿಚಯ' ವೆಂಬ ಪ್ರಕರಣದೊಳಗೆ ಜ್ಞಾನಭಿಕ್ಷುವು ಅವಮೆಟ್ಟಲಿಗೆ ಬಂದಿದ್ದನೆಂದು ಬಣ್ಣಿಸಿದೆಯೋ ಅದೇ ಮೆಟ್ಟಲಿಗಿಂದಿಗೆ ಈತನ ಸತಿಯೂ ಮಿತ್ರನೂ ಬಂದು

ಸೇರಿದ್ದು. ಸತ್ಯದ ಪ್ರಥಮ ಪ್ರತ್ಯಕ್ಷತೆಯು ಅವರಿಬ್ಬರನ್ನೂ ಹೀಗೆ ಹೊಸನಾಡಿಗೆ ತಂದು ಸೇರಿಸಿದ್ದು ನಮ್ಮ ನಾಯಕನ ಮುಂದಿನ ಜೀವನದ ಸುಸೂತ್ರತೆಗೆ ಬಹಳ ಸಹಕಾರಿಯಾಯಿತು.

ಅಷ್ಟರಲ್ಲಿ ಸುಗ್ಗಿಯ ಕಾಲವು ಮುಗಿದದ್ದರಿಂದ ಹೊಲಗಳ ಸಿರಿಯೆಲ್ಲಾ ಸರಿದು ಹೋಯಿತು. ಆದ್ದರಿಂದ ಅಲ್ಲಿಂದ ಬಿಡಾರವನ್ನು ಕಿತ್ತಿ ಒಂದು ಹಳ್ಳದ ಬದಿಗಿರುವ ಮಾವಿನ ತೋಪಿನಲ್ಲಿ ಗುಡಿಸಲನ್ನು ಹಾಕಿದರು. ಹೊಸ ಸ್ಥಳದಲ್ಲಿ ವ್ಯವಸ್ಥೆಯೆಲ್ಲ ಸರಿಪಡುವ ವರೆಗೆಂದು ಮನೆಯ ಮಕ್ಕಳು ತುಸು ದಿನಗಳ ಮಟ್ಟಿಗೆ ಊರಲ್ಲೇ ನಿಂತರು. ತೋಪಿನಲ್ಲಿ ನಮ್ಮ ನಾಯಕ ಮತ್ತು ಆತನ ಮಿತ್ರ; ಮತ್ತು ಅಲ್ಲಿಯ ತೋಟಗಾರರು.

ಅಲ್ಲಿಗೆ ಹೋದ ಮೇಲೆ,ಬೇರೆ ಭಾಷೆಗಳನ್ನರಿಯದ ಗೆಳೆಯರ ವೈಯುಕ್ತಿಕ ಉಪಯೋಗಕ್ಕೆಂದು ಅರವಿಂದರ ಪಾಂಡೀಚೇರಿಯ ಸಂಭಾಷಣದ ಪುಸ್ತಕವನ್ನು ಕನ್ನಡಿಸಬೇಕೆಂದು ಮೊದಲೇ ಗೊತ್ತು ಮಾಡಿತ್ತು. ಈತ ಅನುವಾದ ಮಾಡಿ ಹೇಳುವವ; ಈತನ ಗೆಳೆಯ ಬರೆಯುವವ. ನಮ್ಮ ನಾಯಕನ ದೈಹಿಕ ಅನಾರೋಗ್ಯದ ಅಶಕ್ತತೆಯು ಇನ್ನೂ ಹಾಗೇ ಇದ್ದದರಿಂದ ಸ್ವತಃ ಬರೆಯುಲಿಕ್ಕೆ ಬಹಳ ಶ್ರಮವಾಗುವಂತೆ ಇತ್ತು. ಅಂತಲೇ ಹೀಗೆಲ್ಲಾ ಗೊತ್ತು ಪಡಿಸಿಕೊಂಡಿದ್ದರು. ತೋಪಿಗೆ ಹೋದ ಮೂರು ದಿನಗಳ ಮೇಲೆ ಬರವಣಿಗೆಗೆ ಆರಂಭವಾಯಿತು. ಆದರೆ ಇಷ್ಟರೊಳಗಾಗಿ ನಡೆದ ಕೆಲ ವಿಷಯಗಳನ್ನಿಲ್ಲಿ ಹೇಳುವುದು ಅಗತ್ಯವೆಂದು ನನಗೆನಿಸುತ್ತದೆ.

ಮೊದಲಿನ ಆ ಮೂರು ದಿನಗಳಲ್ಲಿ ಜ್ಞಾನಭಿಕ್ಷುವಿನ ದಿನಚರಿಯು ಏನಿದ್ದಿತೆಂದರೆ– ಊಟ ಉಡಿಗೆ, ನಿದ್ದೆ ನೀರಡಿಕೆ ಇವೇನೋ ಅನಿವಾರ್ಯ ವಿಷಯಗಳು. ಇವುಗಳಂತೂ ಹೇಗಾದರೂ ನಡೆದೇ ಇದ್ದವು. ಆದರೆ ಆಗ ಆತನು ಓಮರ ಖಯ್ಯಾಮ್, ಗೀತಗೋವಿಂದ, ಕಾಶ್ಮೀರ ವರ್ಣನೆ ಮುಂತಾದ ಸುಂದರ ಸಾಹಿತ್ಯದಲ್ಲಿ ತಲ್ಲೀನನಾಗಿದ್ದನು. ಆದರೆ ಕಾಶ್ಮೀರದ ಚಿತ್ರಗಳನ್ನು ನೋಡ ನೋಡುತ್ತಿದ್ದ ಹಾಗೆ ಆತನ ಅಂತರಂಗದಲ್ಲಿ ಅಕಾಂಡ ದುಃಖತರಂಗಗಳೆದ್ದು ಅವನನ್ನು ನೆಲಕ್ಕೆ ಉರುಳಿಸಿ ಬಿಡುತ್ತಿದ್ದವು. ಆಗ ಆತನ ಸ್ಥೂಲದೇಹದ ಕ್ರೂರ ಎದೆಯು ಕಳೆಹಿಡಿದಂತಾಗಿ

ಚರ್ಮವೆಲ್ಲಾ ಚುಮ್ಮ್ ಏರುತ್ತಿತ್ತು. ಭೂಮಿಯನ್ನು ಅಪ್ಪಿಕೊಂಡು ಕೆಲಹೊತ್ತು ಸುಮ್ಮನೆ ಬಿದ್ದುಕೊಂಡರೆ ಆಗ ಎಲ್ಲಾ ಸರಿಯಾಗುತ್ತಿತ್ತು. ನಮ್ಮ ನಾಯಕನ ಬುದ್ಧಿಗೆ ಅದೊಂದು ಒಡೆಯದ ಒಗಟೇ ಆಗಿಬಿಟ್ಟಿತು. ಹೀಗೇಕೆ ಆಗುತ್ತಿದೆಯೆಂಬುದೇ ಆತನಿಗೆ ತಿಳಿಯದಾಯಿತು. ಆಗ ತನ್ನ ಅಂತರಂಗದಲ್ಲಿ ಎದ್ದದ್ದು ಆನಂದವೋ ಅಥವಾ ದುಃಖವೋ, ಇದನ್ನೂ ಕೂಡ ನಿರ್ಣಯಿಸುವುದು ಅವನಿಗೆ ಬಿಗಿಯಾಯಿತು. ಆಗ ಆತನು ತನ್ನೊಳಗೆ ತಾನು ಹೀಗೆ ಅಂದುಕೊಂಡನು:– “ ಇದೇನು ವಿಚಿತ್ರ? ಸ್ವತಃ ತನ್ನೊಳಗೇ ನಡೆದ ವಿದ್ಯಮಾನವನ್ನು ಗುರುತಿಸುವುದು ತನಗೇ ಅರಿದಾಗುವುದೆಂದರೇನು? ಈಗ ಏನೋ ನನ್ನೊಳಗೇ ನಡೆದಿದೆ; ಆದರೆ ಅದು ನನಗೇ ಗೊತ್ತಾಗಲೊಲ್ಲದು! ಒಳಗೆ ಏನೋ ಅನಿಸುತ್ತಿದೆ; ಆದರೆ ಹೊರಗೆ ಗುರುತಿಸಲಿಕ್ಕೆ ಬಾರದಾಗಿದೆ! ಒಳಗೆ ಹಾಗೆ ಏನೋ ಅನಿಸಬೇಕಾದರೆ ಎಲ್ಲೋ ಏನೋ ನಡೆದಿರಬೇಕಲ್ಲಾ? ಹಾಗಾದರೆ ಎಲ್ಲಿ ಏನು ಆಟ ಹೂಡಿದೆ? ಯಾವದಕ್ಕೆ ಏನು ಗೋಚರವಾಗಹತ್ತಿರಬಹುದು? ಒಳಗೆ ಯಾವದೋ ಒಂದು ಏನೋ ಒಂದನ್ನು ಕಂಡು ಹೀಗೆ ನಡಿಸಿರಬೇಕು. ಒಮ್ಮೊಮ್ಮೆ ನಾವು ಯಾರ ಮನೆಗಾದರೂ ಹೋದಾಗ ಅಲ್ಲಿಂದ ಮರಳಿ ಹೊರಡುವ ಮುಂದೆ, ಮುಂಚೆ ನಮ್ಮ ಕೈಯ್ಯಲ್ಲೊಯ್ದ ಆವ ವಸ್ತುವನ್ನಾದರೂ ಅಲ್ಲೇ ಮರೆತು ಹೊರಟಿದ್ದೆವೆಂದರೆ ನಮಗೆ ಏನೋ ಒಂದು ಬಗೆಯ ‘ ಹಿಡಿದೂ ಬಿಟ್ಟೂ ’ ಆದಂತಾಗಹತ್ತುತ್ತಿರುತ್ತದೆ. ಆಗ ಬುದ್ಧಿಗಂತೂ ಏನೂ ಹೊಳೆಯುವುದಿಲ್ಲ; ಆದರೆ ಒಳಗೆ ಜೀವದಲ್ಲೇನೋ ಒಂದು ತರಹ ನಡೆದೇ ಇರುತ್ತದೆ. ಕೊನೆಗೊಮ್ಮೆ “ ಹಾ——ಽ——! ನಾನೇನೋ ಇಂಥಾದ್ದೊಂದು ವಸ್ತುವನ್ನು ಮರೆತು ಹೊರಟಿದ್ದೇನೆ ”! ಎಂದು ಯಾವಾಗ ನೆನಪಾಗುವದೋ ಆಗ ಆ ವಿಚಿತ್ರವೆಲ್ಲಾ ಹೋಗಿಬಿಡುತ್ತದೆ. ಇಂಥ ಪ್ರಸಂಗಗಳು ನಮ್ಮ ಜೀವನದಲ್ಲಿ ಎಷ್ಟೋ ಸಾರೆ ಬಂದು ಹೋಗುತ್ತಿರುವದಿಲ್ಲವೆ? ಆಗ ನಿಜವಾಗಿ ಒಳಗೆ ಏನು ನಡೆಯುತ್ತಿರಬಹುದು? ಮರೆತ ವಸ್ತುವಿನ ವಿಷಯವು ಒಳಗೆ ಯಾವುದಕ್ಕೆ ಹೇಗೆ ವಿದಿತವಾಗುತ್ತಿರಬಹುದು? ಬೇಗನೆ ಹೊರಬುದ್ಧಿಗೆ ಯಾಕೆ ಹೊಳೆಯದಿರಬಹುದು? ಬುದ್ಧಿಯು ಹಣಿಕೆ ಹಾಕಲಾರದಂಥ

ಸ್ಥಳದಲ್ಲಿ ಆ ವಿಚಿತ್ರ ಸಂಗತಿಯು ನಡೆಯುತ್ತಿರಬಹುದೇನು ? ಹಾಗಾದರೆ ಆ ರಂಗಸ್ಥಲವು ಬುದ್ಧಿಗಿಂತ ಆಚೆಗೆ ಬಹಳ ದೂರದಲ್ಲಿರಬೇಕೆಂದಂತಾಯಿತು. ಬುದ್ಧಿಗೆ ಗೋಚರವಾಗದಿದ್ದರೂ ನಮಗೆ ಏನೋ ಒಂದು ತರಹ ಆದಂತಾಗುವದಲ್ಲ! ನಮ್ಮ ಬುದ್ಧಿ ಅಲ್ಲಿ 'ಹಾಜರು' ಇದ್ದಿರದಿದ್ದರೂ ನಮ್ಮಲ್ಲಿ ಆ ವೈಚಿತ್ರ್ಯದ ಅಸ್ಪಷ್ಟ ಪರಿಣಾಮವಾಗುತ್ತಿರುವದರಿಂದ ಅದೂ ನಮ್ಮ ಗೋಚರಣೆಯುದೇ ಒಂದು ಇಂದ್ರಿಯವಿದ್ದಂತಾಯಿತಲ್ಲ ! '**ತಿಳಿಯುವುದು**' ಬುದ್ಧಿಯ ಕೆಲಸವಾದರೆ '**ಅನಿಸುವುದು**' ಆ ಅವ್ಯಕ್ತ ಇಂದ್ರಿಯದ ಕೆಲಸವಾದಂತಾಯಿತು. ಬುದ್ಧಿಯಿಂದ ತಿಳಿಯುವುದು ಕಣ್ಣಿನಿಂದ ಕಾಣುವುದರ ಕಾರ್ಯಕ್ಕೆ ಸಮಾನವಾಗಿದೆ. ಯಾಕೆಂದರೆ ಸ್ಪಷ್ಟತೆಯೇ ಇವೆರಡರ ಸಮಾನ ಲಕ್ಷಣವಾಗಿದೆ. ಇದರಂತೆ ಅಸ್ಪಷ್ಟ ಅಂಧಸ್ಪರ್ಶವೇ ಸಮಾನಲಕ್ಷಣವಾಗಿರುವ ಸ್ಪರ್ಶೇಂದ್ರಿಯಕ್ಕೂ ಆ ಆಂತರಿಕ ಗೂಢ ಇಂದ್ರಿಯಕ್ಕೂ ಸಮಾನತೆಯನ್ನು ಕಲ್ಪಿಸಬಹುದಲ್ಲವೆ? ಬುದ್ಧಿಯು ಆಂತರಿಕ ದರ್ಶನೇಂದ್ರಿಯವಾದರೆ ಈ ಹೊಸದು ಆಂತರಿಕ ಸ್ಪರ್ಶೇಂದ್ರಿಯವಾಗಿದೆಯೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಬುದ್ಧಿಯ ಕಾರ್ಯವು ತರ್ಕವಾದರೆ ಇದರದು ಗೂಢಸ್ಪರ್ಶವೆಂದು ಯಾಕೆ ಹೇಳಬಾರದು ? ಅಂತೂ ಒಳಗೆ ಒಂದು ಬೇರೆ ಇಂದ್ರಿಯವಿದೆಯೆಂದಂತಾಯಿತು ! ಮತ್ತು ಬುದ್ಧಿಗೆ ಗೋಚರವಾಗುವುದಕ್ಕಿಂತ ಮುಂಚೆ ವಿಷಯಗಳು ಈ ಹೊಸ ಇಂದ್ರಿಯಕ್ಕೆ ಸ್ಪರ್ಶ ಮಾಡುವವೆಂಬುದೂ ಸ್ಪಷ್ಟವೇ. ಇದೇನೇನೋ ಸರಿ. ಆದರೆ ಈಗ ಆ ಅವ್ಯಕ್ತಸಂಕಟದ ಅರ್ಥವನ್ನು ಹಚ್ಚಬೇಕಲ್ಲ. ನನಗೆ ಹೀಗೆ ಅನಿಸುತ್ತಿದೆ, ಅದೇನೆಂದರೆ-ಕಾಶ್ಮೀರದ ಚಿತ್ರಗಳನ್ನು ನೋಡಿದಾಗ ಒಂದು ಅನಿರ್ವಚನೀಯ ಸೌಂದರ್ಯದ ಸ್ಪರ್ಶವು ಆ ಒಳ ಇಂದ್ರಿಯಕ್ಕೆ ಆಗಲು, ಜೀವವು ಅಂಥ ಪರಮ ರಮಣೀಯತೆಯ ಅವಿಚ್ಛಿನ್ನ ಆನಂದಕ್ಕೆ ಆಶೆ ಪಟ್ಟು, ಅದನ್ನೀ ಮರುಭೂಮಿಯಲ್ಲಿ ಪಡೆಯಲಿಕ್ಕೆ ಹೇಗೆ ಶಕ್ಯವಿದೆ ? ಎಂದು ಅದು ತಳಮಳಿಸುತ್ತಿರಬೇಕು. ಅಂತಲೇ ನನಗೆ ಈ ಪರಿ ಏನೋ ಒಂದು ತರಹದ ಸಂಕಟವಾಗುತ್ತಾ ಇದೆ.''

## (೫)

“ ಓಂ ಅನಂತ ಪರಬ್ರಹ್ಮಣೇನಮಃ ” ಎಂದು ತನ್ನೊಡೆಯನ ಸ್ವರೂಪವನ್ನು ಸ್ಮರಿಸಿ, (ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್) ಇಂದು (ಮಾರ್ಚ, ೨೭) ನಮ್ಮ ನಾಯಕನು ಹಿಂದೆ ಗೊತ್ತು ಪಡಿಸಿದಂತೆ ಪುಸ್ತಕವನ್ನು ಅನುವಾದಿಸಲಿಕ್ಕೆ ಮೊದಲು ಮಾಡಿದನು. ಆ ಗ್ರಂಥದಲ್ಲಿ ಅರವಿಂದರಿಗೆ ಕೇಳಿದ ಮೊಟ್ಟಮೊದಲನೆಯ ಪ್ರಶ್ನೆಯೆಂದರೆ– “ ಅಧ್ಯಾತ್ಮಭಾವನೆ ನೆಲೆಗೊಂಡರೆ ಸಾಕು; ಅಷ್ಟರಿಂದ ಮನುಷ್ಯನು ಲೋಕ ಕಾರ್ಯದಲ್ಲಿ ತೊಡಗಿದರೆ ತಪ್ಪೇನು ? ನೀವು ಹೇಳುವ ಹೆಚ್ಚಿನ ಜ್ಞಾನದ ಅಗತ್ಯವೇನಿದೆ ! ” ಎಂಬುದೇ. ಇದು ನಿಜವಾಗಿ ಈ ಕಾಲದ ಪ್ರತಿಯೊಬ್ಬರ ಅಂತಃಕರಣದ ಪ್ರಶ್ನೆ. “ ಹಿಂದುಸ್ಥಾನದ ಮೇಲೆ ಇನ್ನು ಮುಂದೆ ಬೀಳತಕ್ಕ ಕಾರ್ಯಭಾರವನ್ನು ನಿರ್ವಹಿಸುವುದಕ್ಕೆ ಅದಷ್ಟೇ ಭಾವನೆ ಸಾಲದು. ಮಾನವನ ಅಂತಃಪ್ರಕೃತಿಯು ತುಂಬಾ ಬದಲಾಗಿ ಆತನಲ್ಲಿ ದೇವಪ್ರಕೃತಿಯು ಒಡಮೂಡಿದಲ್ಲದೆ ಗತ್ಯಂತರವಿಲ್ಲ’ ಎಂಬುದು ಅರವಿಂದರ ಉತ್ತರ. ಇಂದು ಇಡೀ ದಿನವೆಲ್ಲಾ ತಲೆಯಲ್ಲಿ ಇದೇ ವಿಷಯ. ಭವಿಷ್ಯತ್ಕಾಲವು ಆಹ್ವಾನಿಸಲಿರುವ ಭವ್ಯಮಾನವರ ರೂಪರೇಖೆಯನ್ನು ಪರಿಕಲ್ಪಿಸುವುದರಲ್ಲಿಯೇ ಅಂದಿನ ಇಡೀ ಹಗಲು ಕಳೆಯಿತು. “೧ ಅಜ್ಞಾನದ ಮನ, ೨ ಅಂತರ್ನಿರ್ದೇಶದ ಮನ, ೩ ಜ್ಞಾನದ ಮನ, ೪ ದಿವ್ಯ ಮನ ” ಎಂದು ಮಾನವಮನದ ಪ್ರಗತಿವಿಶೇಷದ ನಾಲ್ಕು ಮೆಟ್ಟಲುಗಳು ಆ ಪುಸ್ತಕದಲ್ಲಿ ವಿವರಿಸಲ್ಪಟ್ಟಿದ್ದು ಅವುಗಳೊಳಗೆ ಮೊದಲನೆಯದನ್ನು ಸರ್ವಸಾಮಾನ್ಯರಲ್ಲಿ, ಎರಡನೆಯದನ್ನು ವಿವೇಕಾನಂದರಲ್ಲಿ, ಮೂರನೆಯದನ್ನು ಪರಮಹಂಸರಲ್ಲಿ ಕಾಣಬಹುದೆಂದೂ ಕೊನೆಯದನ್ನು ನಾಳಿನ ಕಾಲದ ಯೋಗಿಗಳಲ್ಲಿ ಕಾಣಲಿರುವೆವೆಂದೂ ಅದರಲ್ಲಿ ಹೇಳಿದೆ. ಈ ವರ್ಗೀಕರಣವನ್ನು ಕುರಿತು ಆಲೋಚಿಸಿದ ಹಾಗೆಲ್ಲಾ ನಮಗೆ ಇಂದು ಬೇಕಾಗಿರುವ ಭವ್ಯರೆಂಥವರೆಂಬುದನ್ನು ಕಲ್ಪಿಸುವುದು ಸುಲಭವಾಗುತ್ತದೆ.

ರಾಮಕೃಷ್ಣ ವಿವೇಕಾನಂದರಂಥ ಅವಸ್ಥೆಯೇ ನಮಗೆ ಬೆರಗು

ಗೊಳಿಸುತ್ತಿರುವಾಗ ಅವರಿಗಿಂತ ಮುಂದಿನ ಅವಸ್ಥೆಯೆಂದರೇನೆಂಬು ದನ್ನು ಕಲ್ಪಿಸುವುದೂ ಕೂಡ ನಮಗೆ ಬಿಗಿಯಾದ ಮಾತು. ವಸ್ತು ಸ್ಥಿತಿಯು ಹೀಗಿರುವಾಗ ಇನ್ನು–ಅಲ್ಲಿಗೇರುವುದೆಂದರೇನು ? ' ವಿಚಾರಿಗೆ ಮತಿಭ್ರಮವಾಗುವದರಲ್ಲಿ ಸಂದೇಹವೇ ಇಲ್ಲ. 'ದೇವರಿದ್ದಾನೋ ಇಲ್ಲವೋ ? ಆತ್ಮವು ಅಮರವಿದೆಯೋ ಇಲ್ಲವೋ ? ದ್ವೈತಾದ್ವೈತಗಳಲ್ಲಿ ಆವುದು ಸತ್ಯ ? ' ಮುಂತಾದ ಪ್ರಶ್ನಗಳಲ್ಲಿ ತೇಲಿ ಮುಳುಗುತ್ತಿರು ವವರು ಅರವಿಂದರ ದೃಷ್ಟಿಯಲ್ಲಿ ಏನೂ ಅಲ್ಲ. ಮೇಲ್ಕಾಣಿಸಿದ ಪ್ರಶ್ನಗಳ ನಿಶ್ಚಿತಉತ್ತರಕ್ಕೆ ಬಂದು ಮುಟ್ಟಿರುವವರ ಬಗೆಗೂ ಹಾಗೇ. ಯಾಕೆಂದರೆ ಇದೆಲ್ಲಾ ಮುಗಿದು 'ಇದರ ಮುಂದೇನು ?' ಎಂಬ ಮಾತಿಗೆ ಈಗ ಬಂದು ಹತ್ತಿದೆ. ರಾಮಕೃಷ್ಣ ವಿವೇಕಾನಂದರ ಕಾಲವು ಅದನ್ನೆಲ್ಲಾ ಮಥಿಸಿ ನಿಶ್ಚಿತ ಪಡಿಸಿದೆ; ಈಗ ಬೇಕು ಅದರ ಮುಂದೆ ಹೆಜ್ಜೆ ಹಾಕುವವರು. ಆಸ್ತಿಕತೆ, ಅಮರತ್ವಗಳ ಆಚೆಗಿದೆ ಅರವಿಂದರ ಎಕ್ಕಂ ! ಆದರೆ ಅಯ್ಯೋ ! ಎಕ್ಕಮ್ಮಿಗಿಂತ ಕೆಳಗಿನ ಮಾತೇ ನಮಗೆ ನಿಲುಕದ ವಸ್ತುವಾಗಿರುವಾಗ, ಅದಕ್ಕಿಂತ ಮುಂದೆ ಸಾಗುವವರ ಹೊರತು ಗತ್ಯಂತರವಿಲ್ಲವೆಂದೆನ್ನುವ ಅರವಿಂದರ ನವಪಥವು ನಮ್ಮ ಪಾಲಿಗೆ "ಶಸ್ತ್ರಧಾರಾ ಇವ"ದಕಿಂತ ಬಿಗಿಯಾಗುವುದು ಸ್ವಾಭಾವಿಕ. ಹೀಗೆಂತಲೆ ಅವರು– "ಲಕ್ಷಾನುಲಕ್ಷ ಶಿಷ್ಯರು ನನಗೆ ಬೇಕಾಗಿಲ್ಲ, ದೇವದೇವನಿಗೆ ಸಂಪೂರ್ಣವಾಗಿ ಆತ್ಮವನ್ನರ್ಪಿಸಿದ ಪೂರ್ಣಯೋಗಿಗಳು ಒಂದು ನೂರೇ ಜನರಾದರೆ ಸಾಕು. ಅಷ್ಟರಿಂದಲೇ ಜಗತ್ತಿನಲ್ಲಿ ಅಗಾಧ ಬದಲಾವಣೆ ಯಾಗುವದು " ಎಂದೆನ್ನುತ್ತಿದ್ದಾರೆ. ನಿಜವಾಗಿಯೂ ಪೃಥ್ವಿಯ ಮೇಲೆ ಅಷ್ಟಕ್ಕಿಂತ ಹೆಚ್ಚು ಜನರಿಗೆ ಆ ಹಾದಿಯನ್ನು ಹಿಡಿಯುವುದು ಆಗಲಿ ಕ್ಕಿಲ್ಲವೆಂದು ತೋರುತ್ತದೆ !

ಇಂದಿನಿರುಳು ನಮ್ಮ ನಾಯಕನ ತಲೆಯು ತುಂಬೆಲ್ಲಾ ಇದೇ ವಿಚಾರ: 'ಅರವಿಂದರ ಎಕ್ಕಮ್ಮಿಗೆ ಬಂದು ಮುಟ್ಟುವುದರಲ್ಲಿಯೇ ನನ್ನ ರಾಮಾಯಣ ಮಹಾಭಾರತವೆಲ್ಲಾ ಮುಗಿದು ಹೋಗಿರುವಾಗ ಅವರ ಕೊನೆಯ ಪರೀಕ್ಷೆಯ ವರೆಗೆ ಏರುವುದಕ್ಕೆ ನಾನೆಷ್ಟರವನು ?'. ಆಗ ತಲೆಯಲ್ಲಿ ಮೆಲ್ಲಗೆ ಒಂದು ವಿಚಾರಧಾರೆಯು ಹೊರಡಹತ್ತಿತು. ಅದೇ

ನೆಂದರೆ— " ಎಷ್ಟವಿಮ್ಮನ ಮಟ್ಟಿಗಾದರೂ ನೀನು ಬಾದೆಯಲ್ಲ ? ಅಲ್ಲಿಗೆ ಒರುವುದಕ್ಕಾದರೂ ನಿನ್ನ ಸ್ವತಂತ್ರತೆಯೇನು? ನೀನು ತುಂಬಾ ನಿರಾಶನಾಗಿ ಕೈ ಬಿಟ್ಟು ನಿಂತಾಗ ಅದು ತಾನೇ ಬರಲಿಲ್ಲವೇ ? ಅಂದ ಮೇಲೆ ನಿನ್ನ ಅಳವು ಅಷ್ಟು ಸಣ್ಣದು ಇಷ್ಟು ಸಣ್ಣದು ಮುಂತಾದ ಯೋಚನೆ ನಿನಗೇಕೆ? ಆತನ ಸಂಕಲ್ಪವಿದ್ದರೆ ಯಾವುದೂ ಈಡಿಲ್ಲ; ಅವನ ಇಚ್ಛೆಗೆ ಬಾರದಿದ್ದರೆ ಯಾವುದೂ ಸಾಧ್ಯವಿಲ್ಲ. ಈಗ ಹೀಗೆ ತಿಳಿ: ನೀನೇನೋ ನಾಳಿನ ವರುಷದೊಳಗಾಗಿ ಒಂದು ಕಾರ್ಯವನ್ನು ಮಾಡಿಯೇ ಮುಗಿಸುವೆನೆಂದು ಪಂಥವನ್ನು ಹಾಕಿರುವಿಯೆನ್ನೋಣ. ನೀನು ಹರಪ್ರಯತ್ನವನ್ನು ಮಾಡಿ ನಿನ್ನ ಭಾಷೆಯನ್ನು ಇಡೇರಿಸಿಯೇ ಬಿಡುವಂಥವನೇ ಇದ್ದೀಯೆಂದೂ ಭಾವಿಸೋಣ. ಆದರೆ ಅಷ್ಟು ದಿನಗಳ ವರೆಗೆ ನೀನು ಬದುಕಿದರೆ ಮಾತ್ರ ಅದೆಲ್ಲಾ ನಿಜ ಅಲ್ಲವೆ? ಅದೇನು ನಿನ್ನ ಕೈಯಲ್ಲಿದೆ ? ಇಂದು ಹಗಲು ಹೊತ್ತಿನಲ್ಲೆಲ್ಲಾ ನೀನು ಅರವಿಂದರ ತತ್ತ್ವದ ಬಗೆಗೆ ಆಲೋಚನೆ ಮಾಡಿದೆಯಲ್ಲವೆ? ಆದರೆ ಬೆಳಗಿಗೆ ಮುಂಚೆಯೇ ನೀನು ಕಾಲಾಧೀನನಾಗಿದ್ದರೆ ಇಂದು ಇದನ್ನೆಲ್ಲಾ ಹೇಗೆ ಮಾಡುತ್ತಿದ್ದಿ ? ಆತ ನಮ್ಮನ್ನು ಒಂದು ದಿನ ಬದುಕಿಸಿದ್ದಾನೆಂದರೆ ಆ ದಿನದ ನಮ್ಮ ಕಾರ್ಯಗಳು ಅಂದು ಲೋಕದಲ್ಲಿ ನಡೆಯಲೇಬೇಕಾಗಿದ್ದವೆಂದು ನಿನಗೆ ಅರ್ಥವಾಗುವದಿಲ್ಲವೇನು ? ಇಲ್ಲದಿದ್ದರೆ ಅಂದು ಆತ ನಮ್ಮನ್ನು ಇಲ್ಲಿ ಉಳಿಸಿದ್ದರ ಅರ್ಥವೇನು ? ಎಷ್ಟು ಕಾಲ ಆತ ನಮ್ಮನ್ನಿಲ್ಲಿ ಇಟ್ಟರೆ ಅಷ್ಟುಕಾಲ ನಮ್ಮಿಂದ ಏನಾದರೂ ನಡೆಯಲೇ ಬೇಕಾಗಿರುತ್ತದೆ. ಇದರ ಮೇಲಿಂದ ಇನ್ನು ಮುಂದೆ ನಮ್ಮಿಂದ ಏನೇನು ನಡೆಯಬೇಕಾಗಿದೆಯೋ ಅದೆಲ್ಲಾ ಆಗಿ ಮುಗಿಯುವ ವರೆಗೆ ನಮ್ಮನ್ನಿಲ್ಲಿ ಇಟ್ಟೇ ಇರುತ್ತಾನೆಂದಂತಾಗಲಿಲ್ಲವೊ ? ಅಥವಾ ಇಡುವ ಬಿಡುವ ಯೋಚನೆಯಾದರೂ ನಮಗೇಕೆ? ಆತನಿಗೆ ಅಗತ್ಯವಿದ್ದರೆ ಇಟ್ಟಾನು; ಇಲ್ಲದಿದ್ದರೆ ಬಿಟ್ಟಾನು ! ಕಾಲವು ಆತನ ಸಂಕಲ್ಪವಾಗಿದೆ. ಅಥವಾ ಕಾಲವೂ ಆತನೂ ಒಂದೇ. ಅಂತೇ ಅವನಿಗೆ **ಮಹಾಕಾಲ**ನೆಂದು ಕೆಲವು ಮಹಾನುಭಾವರು ಕರೆದಿದ್ದಾರೆ"

ಹೀಗೆ ನಮ್ಮ ನಾಯಕನಿಂದು ಮತ್ತೊಮ್ಮೆ ಹೊಸ ರಾಜ್ಯಕ್ಕೆ ಬಂದನು. ಹೀಗೆ ಮಹಾ ಆಕಾಶವು ದೇವನ ಬಾಹ್ಯರೂಪವಾಗಿ ಹೊಳೆ

ದದ್ದರಿಂದ ಬಂದ ಶಾಂತಿಯು ಮುಂದೆ ಐದಾರು ಸಾರೆ ಅಡಗುತ್ತ ತೋರುತ್ತ ನಡೆದು ಕೊನೆಗೊಮ್ಮೆ ಇಂದು ಮಹಾಕಾಲವು ಆತನ ಚಿತ್ತವಾಗಿದೆಯೆಂದು ಗೊತ್ತಾದ ಮೇಲೆ ಬಲವಾಗಿ– ದೃಢಪಟ್ಟಿತು. ಅಂದು ವಿಶ್ವಪ್ರಜ್ಞೆ ಮೈದಾಳಿದ ದಿವಸ ಅನಿಸಿದಷ್ಟೇ ಧನ್ಯತೆಯು ಇಂದೂ ನಮ್ಮ ನಾಯಕನಿಗೆ ಅನಿಸಿತು! ಅಥವಾ ಅಂದಿನದರದೇ 'ಇನ್ನೊಂದು ಮಗ್ಗಲು ಇಂದು ಪ್ರಕಟವಾಯಿತು. ಆದರಷ್ಟೇ ಇದೂ ಪರಿಣಾಮ ವನ್ನು ಮಾಡಿತು. ಜ್ಞಾನಭಿಕ್ಷುವಿಗೆ ಇಂದಿಗೆ ಜೀವನಸಮುದ್ರವು ತುದಿಗಾಲು ಕೂಡ ತೊಯ್ಯದಷ್ಟು ತೇಲಾಗಿದೆಯೆಂದೆನಿಸಹತ್ತಿತು. **'ಟಾಯಿಮ್ ಇಜ್ ಗಾಡ್, ಟಾಯಿಮ್ ಇಜ್ ಗಾಡ್'** ಎಂದು ಆತನ ನಾಲಿಗೆಯ ಗಂಟೆಯು ಒಂದೇ ಸವನೆ ಬಾರಿಸುತ್ತಿದೆ. ಕಣ್ತೆತ್ತಿ ನೋಡುತ್ತಾನೆ. ವೇಳೆ ಸಮರಾತ್ರಿ! 'ಕಾಲೋಽಯಂ ಭಗವಾನ್ ವಿಷ್ಣುರನಂತಃ ಪರಮೇಶ್ವರಃ!'

## (೬)

ಸಮಸ್ತ ವಿಶ್ವವನ್ನು ವ್ಯಾಪಿಸಿದ ಮಹಾಸ್ಥಲವು ದೇವದೇವನ ದಿವ್ಯದೇಹವಾಗಿರುವಂತೆ ಮಹಾಕಾಲವು ಆತನ ದಿವ್ಯಚಿತ್ತವಾಗಿದೆ ಯೆಂದು ಇಂದು ನಮ್ಮ ನಾಯಕನ ಅಂತರಂಗದಲ್ಲಿ ಮುದ್ರೆಯೊತ್ತಿ ದಂತಾಯಿತಷ್ಟೇ? ಇದರಿಂದ ಅವನ ಒಳಗೊಳಗೇ ಒಂದು ಮಾತು ಘನೀಭೂತವಾಗಹತ್ತಿತು. ಅದೇನೆಂದರೆ— "ಲೋಕಕ್ಕೆ ಸತ್ಯದ ಸಾಕ್ಷಿಯನ್ನು ಕೊಡುವದೇ ನನ್ನ ಜೀವನದ ಕಾರ್ಯವು!"

'ಯೋಗದ ಗೊತ್ತುಗುರಿ' ಯೆಂಬ ಗ್ರಂಥದಲ್ಲಿ ಅರವಿಂದರು ತಮ್ಮ ಪೂರ್ಣಯೋಗದ ಮೂಲಸೂತ್ರವನ್ನು ಹೀಗೆ ರೇಖಿಸಿದ್ದಾರೆ:-

"ಸರ್ವ ವಸ್ತುಗಳ ದೇವತ್ವವನ್ನು ಅನುಭವಿಸುವುದು ಮತ್ತು ದೇವದೇವನಿಗೆ ಸಂಪೂರ್ಣ ಆತ್ಮಸಮರ್ಪಣವನ್ನು ಮಾಡುವುದು ಯೋಗದ ಮೂಲತತ್ತ್ವವಿದು. ಬರೀ ಸಜೀವವಸ್ತುಗಳಲ್ಲಿ ಮಾತ್ರ ವಿಷ್ಟೇ ಅಲ್ಲ, ಜಡವಸ್ತುಗಳಲ್ಲಿಯೂ ನಾವು ದೇವನನ್ನು ಕಾಣಬೇಕು.

ಚರಾಚರ ವಸ್ತುಗಳಲ್ಲಿ ಆತನನ್ನು ಕಂಡಷ್ಟಕ್ಕೇ ಆಗಲಿಲ್ಲ, ಆದರೆ ನೀವು ನಿಮ್ಮ ಹಾಗೂ ಜಗತ್ತಿನಲ್ಲಿರುವ ಅನ್ಯರೆಲ್ಲರ ಆಚಾರ ವಿಚಾರ ಅನಿಸಿಕೆ ಹಾಗೂ ನೆನಿಸಿಕೆ ಮುಂತಾದ ಸರ್ವ ಘಟನೆಗಳಲ್ಲೆಲ್ಲ ಆತನನ್ನು ಕಾಣಬೇಕು."

ಜ್ಞಾನಭಿಕ್ಷುವು ಅಂದಿಗೆ ಅರವಿಂದರ ಪೂರ್ಣಯೋಗದ ಪೂರ್ವ ದೀಕ್ಷೆಯನ್ನು ಹೊಂದಿದನೆಂದು ಹೇಳಬಹುದು.

ಆತನು ಕನ್ನಡಿಸಹತ್ತಿದ ಪುಸ್ತಕವೂ ಹತ್ತೆಂಟು ದಿನಗಳಲ್ಲಿ ಮುಗಿಯಿತು. ಅಷ್ಟು ಹೊತ್ತಿಗೆ ಕಾರಣಾಂತರದಿಂದ ಮಾವಿನ ತೋಪಿನಿಂದ ತಿರುಗಿ ಮನೆಯಲ್ಲಿರುವುದಕ್ಕೆ ಹೋಗಬೇಕಾಗಿ,ಏನೋ ಒಂದು ತಿಂಗಳು ಹಾಗೂ ಹೀಗೂ ಕಳೆಯಿತು. ಸಂಸಾರದ ಗದ್ದಲದಲ್ಲಿ ಮೆಲ್ಲಗೆ ಮತ್ತೆ ಮತ್ತೆ ಅಲ್ಪಸ್ವಲ್ಪ ಸ್ತಂಭಿತ ಸ್ಥಿತಿಯು ಬರುತ್ತಿತ್ತು. ಆದಲ್ಲಾ ನಮ್ಮ ನಾಯಕನು ಅರವಿಂದರ ಈ ಜ್ವಲನ್ಮಂತ್ರಗಳನ್ನು ಘಟ್ಟಿಸಿ ಘಟ್ಟಿಸಿ ಅನ್ನುತ್ತಿದ್ದನು:—

"ಸರ್ವ ಆಗು ಹೋಗುಗಳ ಹ್ರಾಸ ವೃದ್ಧಿಗಳ ಸ್ಥಲಕಾಲ ನಿಮಿತ್ತಗಳು (ಸ್ವತಃ ನಿನ್ನಿಂದ) ಹಾಗೂ ಪರಮೇಶ್ವರನಿಂದ ಕಲ್ಪಾರಂಭದಲ್ಲಿಯೇ ನಿಶ್ಚಿತಪಡಿಸಲ್ಪಟ್ಟಿವೆ. ಈ ಜಗತ್ತನ್ನೆಲ್ಲ ಆಳುವ ಶಕ್ತಿಗೆ ಕೊನೆಯಪಕ್ಷಕ್ಕೆ ನಿನ್ನಷ್ಟಾದರೂ ಬುದ್ಧಿವಂತಿಕೆಯಿದೆ. ದೇವದೇವನ ಅನುಮತಿಯೂ ಆತನ ಸಂಕಲ್ಪಶಕ್ತಿಯ ನಿರ್ಣಯವೂ ಇಲ್ಲದೆ ಎಲ್ಲೆಲ್ಲಿಯೂ ಏನೂ ನಡೆಯದು. ನಿನಗಿಂತ ಹೆಚ್ಚಿನ ಸಮರ್ಥನು (ನಿನ್ನೆಲ್ಲ) ವಿಷಯಗಳ ಹಿಂದೆ ಕಾರ್ಯತತ್ಪರನಾಗಿ ಇದ್ದಾನೆ."

ಹೀಗೆಂದು ಆವರ್ತನೆ ಮಾಡುವುದೇ ತಡ; ಮನದ ಘರ್ವಸಂಕಟವು ಹಿಮ್ಮೆಟ್ಟಿ "ಟಾಯಿಮ್ ಇಜ್ ಗಾಡ್" ಎಂಬ ತನ್ನ ಹಿಂದಿನ ಜ್ವಲಂತಸ್ಮೃತಿಯು ಮೂರ್ತಿಮಂತವಾಗಿ ಕಣ್ಣಮುಂದೆ ಕಟ್ಟುತ್ತಿತ್ತು. ಆದರೆ ಒಟ್ಟಿಗೆ ಆ ಕಾಲದಲ್ಲಿ ಮನಸ್ಸಿನ ಮುರುಕಳಿಗಿಂತ ಉಲ್ಲಾಸವೇ ಹೆಚ್ಚಿಗಿರುತ್ತಿತ್ತು. ನಡುನಡುವೆ ಎಂದೋ ಯಾವಾಗಲೋ ಒಮ್ಮೊಮ್ಮೆ ತುಸುಮಟ್ಟಿಗೆ ಮಾತ್ರ ಉದ್ವಿಗ್ನತೆಯು ಬರುತ್ತಿತ್ತು. ಅದೂ ಕೂಡ ಮೇಲಿನ ಮಂತ್ರಗಳ ಗರ್ಜನೆಗೆ ಮಾಯವಾಗುತ್ತಿತ್ತು.

ಇಷ್ಟುಹೊತ್ತಿಗೆ ನಾಡಿನ ತುಂಬೆಲ್ಲ ಜನಜಾಗೃತಿಯ ಕಾರ್ಯವು ಭರದಿಂದ ಏರಹತ್ತಿದ್ದಿತು. ಆಗ ಈತನಿಗೆ ಅದರ ಗಾಳಿಸೋಂಕದೆ ಬಿಡ ಲಿಲ್ಲ. ಈತನೆಂದುಕೊಂಡನು. "ಈಗೇನು ಮಾಡುವುದು? ನನ್ನ ವೈಯಕ್ತಿಕ ಆಶೆ ಆಕಾಂಕ್ಷೆಗಳಂತೂ ಆವವೂ ಉಳಿದಿಲ್ಲ. ಇನ್ನು ಮುಂದೆ ಬದುಕಿ ಇರುವುದು ಲೋಕಕ್ಕಾಗಿ. ಹಾಗಾದರೆ ಈಗ ಎರಡು ಕರ್ತವ್ಯಗಳು ಕಣ್ಣೆದಿರಿಗೆ ಕಟ್ಟುತ್ತವೆ. ಒಂದು ಅರವಿಂದರ ಸಾನ್ನಿಧ್ಯ ವನ್ನು ಸಂಪಾದಿಸಿ ಹೆಚ್ಚಿನ ಅವಸ್ಥೆಗೆ ಏರುವುದು, ಇನ್ನೊಂದು-ಸದ್ಯದ ಜನಜಾಗೃತಿಯ ಕಾರ್ಯದಲ್ಲಿ ಭಾಗವನ್ನು ತೆಗೆದುಕೊಳ್ಳುವುದು."

"ಇವೆರಡರಲ್ಲಿ ಮೊದಲನೆಯದು ಬಹು ದುಸ್ಸಾಧ್ಯ. ಆದುದರಿಂದ ಎರಡನೆಯದೇ ಇರಲಿ." ಎಂದು ಅದನ್ನೇ ಆರಿಸಿಕೊಂಡನು. ಆದರೆ ಆಗ ಅದೂ ಬಹಳ ಕಷ್ಟನಷ್ಟದ ಕಾರ್ಯವೇ ಆಗಿದ್ದಿತು. ಆದರೆ ನಮ್ಮ ನಾಯಕನಿಗೀಗ ಕಷ್ಟನಷ್ಟಗಳು ಅಕಾರಣವಾಗಿ ಬರುತ್ತಿರುವದಿಲ್ಲವೆಂಬ ಶ್ರದ್ಧೆ ಬಲಪಟ್ಟಿತ್ತು. ಸಕಾರಣವಾಗಿ ಬರುವುದಾದರೆ ಅವುಗಳಿಂದ ನಮ್ಮ ಕಲ್ಯಾಣ ಸಾಧನೆಯಾಗುವುದೇ ಹೊರತು ಎಂದೂ ಕೇಡಾಗದು. ಹೀಗೆಂದುಕೊಂಡು ಜನಸಾಮಾನ್ಯರ ಪರಂಪರಾಗತ ರೂಢಬುದ್ಧಿಯನ್ನು ಮಾರ್ಪಡಿಸುವ ಕಾರ್ಯಕ್ಕೆ ಟೊಂಕಕಟ್ಟಿದನು. ಜನರ ಬಹು ಪೂರ್ವದ ಅಂಧಶ್ರದ್ಧೆಯ ಮೂಲಕ ಅವರಿಗೆ ಈತನ ಹೊಸಮಾತುಗಳು ಬರಷಣ ವಾಗಿ, ಅವರಿಂದ ಇವನ ಮೇಲೆ ಬಹಳ ಅತ್ಯಾಚಾರಗಳು ನಡೆಯಬಹು ದೆಂದು ತೋರುತ್ತಿತ್ತು. ಆದರೆ ತಲೆಯಲ್ಲಿ ಅಂತಹ ವಿಚಾರವು ಬಂದಾ ಗಳೆಲ್ಲಾ ಈತನಿಗೆ ಏನೂ ಅದರ ಮಹತ್ವವೇ ಅನಿಸುತ್ತಿದ್ದಿಲ್ಲ. 'ಬೇಕಾ ದವರು ಈ ಕ್ಷಣದಲ್ಲಿ ನನ್ನಮೇಲೆ ಕತ್ತಿಯನ್ನೆತ್ತಿಬರಲಿ.ಬಂದು ನೋಡಲಿ, ಆಗ ನಾನು ಎಳ್ಳಷ್ಟಾದರೂ ಎದೆಗೆಡುವೆನೇನೆಂದು ಪರೀಕ್ಷೆಮಾಡಲಿ" ಎಂದುಕೊಳ್ಳುತ್ತಿದ್ದನು. "ಟಾಯಿಮ್ ಇಜ್ ಗಾಡ್" ಎಂಬುದು ಇವನನ್ನು ಈ ಪರಿ ಕುಣಿಸುತ್ತಿತ್ತು.

ಆದರೆ ನಮ್ಮ ನಾಯಕನ ದೈಹಿಕ ಅಸಾರೋಗ್ಯವು ಇನ್ನೂ ಹಿಮ್ಮೆಟ್ಟಿರಲಿಲ್ಲವಾದುದರಿಂದ ಈ ಯಾತಾಯಾತದಲ್ಲಿ ಅವನ ದೇಹ ದೌರ್ಬಲ್ಯವು ದಿನದಿನಕ್ಕೂ ಹೆಚ್ಚಾಗಹತ್ತಿತು. ದೇಹವು ದುರ್ಬಲವಾದ

ಹಾಗೆಲ್ಲಾ ಚಿತ್ತವು ಸಡಿಲಾಗಹತ್ತಿತು. ಹಗುರಾಗಿ ಇಲ್ಲದ ಅಧೈರ್ಯವೂ ಉದ್ವಿಗ್ನತೆಯೂ ಅರಿಯದಂತೆ ಒಳಗೆ ಸೇರಹತ್ತಿದವು. ಮತ್ತೆ ಸ್ತಂಭಿತ ಸ್ಥಿತಿಯು ವ್ಯಕ್ತಿದೋರಹತ್ತಿತು. ಆಗ ಎದೆಯನ್ನು ಸೆಟಿಸಿ ದೀರ್ಘಶ್ವಾಸವನ್ನು ತುಸುಹೊತ್ತು ತೆಗೆದುಕೊಳ್ಳುತ್ತಲೂ ಬಿಡುತ್ತಲೂ ಹೋದಹಾಗೆ ಮತ್ತೆ ಎಲ್ಲಾ ಸರಿಪಡುತ್ತಿತ್ತು. ಆದರೆ ಚಿತ್ತವು ಎಡವ ಲಿಕ್ಕೆ ಆರಂಭಿಸಿತೆಂದರೆ ದೈಹಿಕ ದೌರ್ಬಲ್ಯದ ಮೂಲಕ ಹಾಗೇ-ಏನು ಮಾಡಿದರೂ ತಡೆಯದೆ- ಮುರುಕಳಿಯ ಕಡೆಗೇ ಹರಿಯಹತ್ತುತ್ತದೆ.

ಆಗ ಜ್ಞಾನಭಿಕ್ಷುವಿನ ಅಂತರಾತ್ಮವು "ಯಸ್ಮಿನ್‌ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ" ಎಂಬ ಶಾಶ್ವತಸ್ಥಿತಿಯನ್ನು ಆಶಿಸಿ ತಳಮಳಿಸಹತ್ತಿತು.ಹೀಗಾಗಿ ಮತ್ತೆ ಜೀವನವೆಲ್ಲಾಉದ್ವಿಗ್ನತೆಯ ಛಾಯೆಯಿಂದ ಮಾಸಿತು. ಹೀಗಿರುವಾಗಲೇ ಅರವಿಂದರ 'ಯೌಗಿಕ ಸಾಧನ' ವೆಂಬ ಪುಸ್ತಕದಲ್ಲಿ ಈ ಕೆಳಗಿನ ವಾಕ್ಯವು ಕಾಣಿಸಿತು:—

"ಬಹು ಜನರಿಗೆ ಹೆಚ್ಚೆಂದರೆ ಎರಡನೇ ಮೆಟ್ಟಲಿಗೆ ಮಾತ್ರ ಮುಟ್ಟಿದರೆ ಮುಟ್ಟುವುದಕ್ಕೆ ಶಕ್ಯವಿರುತ್ತದೆ. ಇಲ್ಲಿ ಅರವಿಂದರ ಈ ಮೂರು ಮೆಟ್ಟಲುಗಳಾವವೆಂಬುದನ್ನು ಒಂದಿಷ್ಟು ಸ್ಪಷ್ಟವಾಗಿ ತೋರಿಸಿ ಕೊಡುವುದು ಅವಶ್ಯ-

(೧) ಮಾನವನ ಮೂಲಸ್ವಭಾವ ಮತ್ತು ಅತ್ಮಿಕ ಸಂಕಲ್ಪಶಕ್ತಿ ಇವೆರಡರ ಕಲಹದಲ್ಲಿ ಜೀವಭಾವದ 'ತಳಹಿಡಿಯುವ ಧರ್ಮ'ವು (Law of resistence) ಕದಲುವದರಿಂದ ಆತ್ಮಶಕ್ತಿಯ ಮಂದಗತಿಯು ಪಲ್ಲಟವಾಗಿ ತೀವ್ರಗತಿಯು ಪ್ರಕಟವಾಗುವದು.

(೨) ಬಳಿಕ ಮೂಲ ಸ್ವಭಾವದ ಪ್ರತಿಭಟನ ಧರ್ಮವು (Law of resistence) ತೂರಿ ಬರುವದರಿಂದ ಸಂಕಲ್ಪಶಕ್ತಿಯು ಆಗ ಈಶನ ಪ್ರತ್ಯಕ್ಷ ಶಕ್ತಿಯ ಸಹಾಯವನ್ನು ಪಡೆದು ಅದನ್ನು ಇದುರಿಸುವದು. ಆಗ ಮಾನವನಿಗೆ ಅದು ತನ್ನ ಸ್ವಶಕ್ತಿಯೆಂದೆನಿಸದೆ ತನ್ನೊಳಗಿನ ದೇವನ ಶಕ್ತಿಯೆಂದೆನಿಸುವದು.

(೩) ಆದರೂ ಮೂಲಸ್ವಭಾವವು ಸಂಧಿಯನ್ನು ಸಾಧಿಸಿ ಪುನಃ ಪುನಃ ಜಾಗ್ರತವಾಗಿ ಒಳಸೇರಲಿಕ್ಕೆ ಹವಣಿಸುತ್ತಿರುತ್ತದೆ. ಆದರ ಈ

ಧರ್ಮವನ್ನು (Law recurence) ಸಂಪೂರ್ಣವಾಗಿ ನಿರ್ನಾಮಗೊಳಿಸಲು ಸಮರ್ಥವಾದ ಸಂಕಲ್ಪಶಕ್ತಿಯು ಆಗ ಪವಾಡಶಕ್ತಿಯಾಗಿ ಬಿಡುತ್ತದೆ. ಆಗ ಮಾನವನಿಗೆ ದೇವತ್ವದ ಅನಿಸಿಕೆಯು ಬರುತ್ತದೆ. ಆಗ ಆತನ ಸಂಕಲ್ಪಕ್ಕೂ ದೇವನ ಸಂಕಲ್ಪಕ್ಕೂ ಅಂತರವು ಉಳಿಯುವದೇ ಇಲ್ಲ.

ಈ ಮೂರು ಮೆಟ್ಟಲುಗಳ ವಿವರಣೆಯನ್ನು "Yogic Sadhana" ಎಂಬ ಚಿಕ್ಕ ಗ್ರಂಥದ ಮೂರನೇ ಪ್ರಕರಣದಲ್ಲಿ ನೋಡಬಹುದು. 'Mother'ದೊಳಗೆ ಐದನೇ ಪ್ರಕರಣದಲ್ಲಿ ಇವೇ ಮೆಟ್ಟಲುಗಳ ಬೇರೊಂದು ವಿಧದ ವರ್ಣನೆಯನ್ನು ನೋಡಬಹುದು. " Superman " ದಲ್ಲಿಯೂ ಇವುಗಳ ಸ್ಪಷ್ಟವರ್ಣನೆ ಬಂದಿದೆ. " yoga and its objects" ದಲ್ಲಿ 'ಕರ್ಮಾರ್ಪಣ'ದ ಮೂರು ಮೆಟ್ಟಲುಗಳೆಂದು ಹೇಳಿರುವವುಗಳೂ ಪರ್ಯಾಯದಿಂದ ಇವೇ ಆಗಿವೆ.

ಮೂರನೆಯದಕ್ಕೆ(Lastly, when the man himself becomes God....... ಕೊನೆಗೆ ಸ್ವತಃ ಮಾನವನೇ ಯಾವಾಗ ದೇವನಾಗುವನೋ ............ ಎಂಬ ಸ್ಥಿತಿಗೆ) ಅವತಾರಿಯು ಅಥವಾ ಮಹಾವಿಭೂತಿಯು ಮಾತ್ರ ಮುಟ್ಟುತ್ತಾನೆ. ಆದುದರಿಂದ ಪತನ ವಿಲಂಬಗಳಿಗೆ ಎದೆಗೆಡಬೇಡ. ಅದು ಕೇವಲ (ನಿನ್ನ ಆತ್ಮಿಕ) ಕೃತುಶಕ್ತಿಯ ಬಲ ಶುದ್ಧಿಗಳಿಗೆ ಸಂಬಂಧಿಸಿದ ಮಾತಾಗಿದೆ. ಕೃತುಶಕ್ತಿಯ ಪೂರ್ಣತೆಯು ಹೆಚ್ಚಿದಂತೆ ಆಧಾರ ಶುದ್ಧಿಯು (ಪಂಚಕೋಶ ಶುದ್ಧಿಯು) ಉಂಟಾಗುವದರಿಂದ,ಪ್ರಗತಿಯು ವೇಗವಾಗುವದು. ಜಗತ್ತಿನೊಳಗಿರುವ ಪ್ರತಿಯೊಂದು ವಸ್ತುವೂ ಕ್ರಮಗತಿಯಿಂದಲೇ ಉಂಟಾಗಿದೆ. "

ಈ ಮಾತು ನಮ್ಮ ನಾಯಕನಿಗೆ ಮುಂದಿನ ಜೀವನಕ್ಕೆ ಕಟ್ಟಿದ ಬುತ್ತಿಯಾದಂತಾಗಿ ಬಿಟ್ಟಿತು. ಆತನ ಜೀವವು ಶಾಶ್ವತಶಾಂತಿಯ ಮತ್ತೊಂದು ಸೂತ್ರವನ್ನು ಇಂದು ಪಡೆದುಕೊಂಡಿತು. ಅಂದಿನಿಂದ ಆತನ ಜೀವನಕ್ಕೆ ಧೀರಗತಿಯು ಬಂದಿತು. " ಬಂದಿರುವ ಎಲ್ಲಾ ಶಕ್ತಿಗಳು ಬೆಳೆದು ಮಾಗಲಿ. (ಪಕ್ವದಶೆಗೆ ಬರಲಿ.) ಅವು ಇನ್ನೂ ಈಗೀಗ ಮೊಳೆತ ಎಳೆ ಸಸಿಗಳಾಗಿರುವದರಿಂದ ಮೇಲಿಂದ ಮೇಲೆ ಬಾಡಿ ಬಾಗಿ

ಬಳುಕುತ್ತಲಿವೆ. ಬೆಳೆದು ದೃಢಪಡಲಿ. ಆ ಮೇಲೆ ಎಲ್ಲಾ ತಾನೇ ಸರಿಪಡುವದು. ಅದುವರೆಗೆ ಅವ್ಯದಕ್ಕೂ ಆತುರಪಡದೆ ಕಾಲವನ್ನು ಕಾದುಕೊಂಡು ಕುಳಿತು ಬಿಡುವೆನು." ಹೀಗೆಂದು ನಿರ್ಧರಿಸಿಕೊಂಡು ಹೊರಳಿ ತನ್ನೂರಿಗೆ ಬಂದನು.

(೭

ಇಲ್ಲಿ ನಮ್ಮ ನಾಯಕನ ಮನೆಯ ವಾತಾವರಣವನ್ನು ಒಂದಿಷ್ಟು ವರ್ಣಿಸುವುದು ಅಪ್ರಾಸಂಗಿಕವಾಗಲಾರದೆಂದು ನನಗೆ ತೋರುತ್ತದೆ. ಯಾಕೆಂದರೆ ಆತನು ಯಾವಾಗಲೂ ಅಡವಿಯನ್ನು ಸೇರುವುದಕ್ಕೆ ಇದ್ದ ಎಷ್ಟೋ ಕಾರಣಗಳಲ್ಲಿ ಅದೂ ಒಂದಾಗಿದೆ.

ಅವನ ಅಜ್ಜಮುತ್ತಂದಿರು ಆಗರ್ಭಶ್ರೀಮಂತರು. ಆದರೆ ತಂದೆಯ ಕಾಲಕ್ಕೆ ಬಡತನ ಬಂತು. ಆ ತಂದೆಯು ಬಹಳ ಉತ್ಸಾಹಿಯೂ ಚತುರನೂ ಇದ್ದದ್ದರಿಂದ ತನ್ನ ಸಂಸಾರವನ್ನು ಸುಸೂತ್ರ ಸಾಗಿಸಿ, ಹಿರಿಯರ ಕಾಲದ ಒಂದೆರಡು ಹೊಲಗಳನ್ನು ಕಾದುಕೊಂಡಿದ್ದನು.ಆದರೂ ಕಳವು ಮುಂತಾದ ಆಗಂತುಕ ಕಾರಣಗಳಿಂದ ಕೈಯಲ್ಲಿಯ ಇದ್ದಷ್ಟು ದುಡ್ಡೆಲ್ಲ ಅಪಹರಣವಾಗಿ ಬಿಟ್ಟದ್ದರಿಂದ ಮನೆತನವು ಸಾಲದಲ್ಲಿ ಬಿತ್ತು. ಅಲ್ಲದೆ ಅವನಿಗೆ ೨೭-೨೮ ವಯಸ್ಸಿಗೇ ಕ್ಷಯರೋಗವಾಯಿತು. ನಮ್ಮ ಜ್ಞಾನಭಿಕ್ಷುವು ಇನ್ನೂ ತೀರ ಚಿಕ್ಕವನಿರುವಾಗಲೇ ಆ ತಂದೆ ಅವನನ್ನು ಕೈಬಿಟ್ಟನು. ಆಗಂತೂ ಸಾಲದ ಹೊರೆಯು ಇದ್ದೇ ಇತ್ತು. ಅವನ ತಾಯಿಯು ಪುರುಷಪ್ರಕೃತಿಯವಳಾದುದರಿಂದ ಹಾಗೂ ಹೀಗೂ ಮುಂದಿನ ಹಾದಿಯನ್ನು ಸರಿಪಡಿಸಿಕೊಂಡು ಸಾಗಿದಳು. ಅವಳ ಕಾಲಕ್ಕೆ ಹಳೆಯ ಸಾಲವೆಲ್ಲ ತೀರಿತಾದರೂ ಮುಂದೆ ಹೊಸದಾಗಿ ಮತ್ತೆ ಸಾಲವಾಗದೆ ಇರಲಿಲ್ಲ. ಯಾಕೆಂದರೆ ಆ ಹೆಣ್ಣುಮಗಳು ಸದಾ ಕಾರ್ಯಪ್ರಿಯಳಾದ್ದರಿಂದ ಸಾಲ ಮಾಡಿ ಹೊಸ ಹೊಸ ಹೊಲ ಮನೆಗಳನ್ನು ಕೊಂಡುಕೊಂಡಳು, ಮತ್ತು ಕಮತದ ಎತ್ತುಆಳುಗಳನ್ನು ಹೆಚ್ಚಿಸಿದಳು. ಹೀಗಾಗಿ ಅವಳ ಕಾರ್ಯಬಾಹುಳ್ಯದ ಅತಿಶಯದ

ಮೂಲಕ ವರುವರುಷವೂ ಬಂದ ಬೆಳೆಯಿಂದ ಹಿಂದಿನ ಸಾಲವು ತೀರು ತ್ತಲೂ, ಮತ್ತೆ ಮುಂದಿನ ವರುಷದ ಸಾಗುವಳಿಯು ಸಲುವಾಗಿ ಹೊಸ ಸಾಲವಾಗುತ್ತಲೂ ನಡೆಯಿತು. ಅಲ್ಲದೆ ನಡುವೆ ಮದುವೆಯು ರಾಕ್ಷಸ ವಂಶೂ ಕುಳಿತೇ ಇರುವುದಲ್ಲ! ಅಂತೂ ಇದೆಲ್ಲದರಿಂದ ಸಾಲದ ಹೊರೆ ಯೇನೂ ತಪ್ಪಲಿಲ್ಲ. ಹೊಲಮನೆಗಳೇನೋ ಹೆಚ್ಚಾದವು, ಆಳುಹೋಳು ಗಳೂ, ಎತ್ತು ಮುಟ್ಟುಗಳೂ, ಎಮ್ಮೆ ಆಕಳುಗಳೂ ಎಲ್ಲಾ ಹೆಚ್ಚಾದು ದೇನೋ ನಿಜವೇ– ಆದರೂ ಅಜ್ಜಿ ನೂತದ್ದೆಲ್ಲಾ ಮೊಮ್ಮಗನ ಉಡುದಾ ರಕ್ಕೇ ಎಂಬಂತೆ ಬಂದ ಉತ್ಪನ್ನವೆಲ್ಲಾ ಅವಾಢವ್ಯವಾದ ಆಡಳಿತಕ್ಕೇ ಸಾಲದೆ ಹೋಗಹತ್ತಿತು. ಇದರಿಂದ ಮನೆಯಲ್ಲಿದ್ದವರಿಗೆ ಕೂಲಿಕಾರರ ಕಿಂತ ಹೆಚ್ಚಿಗೆ ಕಷ್ಟವೇ ಲಭಿಸುತ್ತಿತ್ತು. "ಸುಮ್ಮನೆ ಕೂತರೆ ಎಲ್ಲಿಂದ ಬರುತ್ತದೆ? ಕೂತು ತಿಂದರೆ ಯಾವದು ಈಡಾಗುತ್ತದೆ?" ಎಂಬುದು ಆತನ ತಾಯಿಯ ಮಂತ್ರ. ಆದರೆ "ಅತಿ ಸರ್ವತ್ರ ವರ್ಜಯೇತ್" ಎಂಬುದು ಮಾತ್ರ ಅವಳಿಗೆ ಸಹಸಾ ಸ್ಮರಣವಾಗುತ್ತಿರಲಿಲ್ಲ. "ಇಸ್ಸ್ಯಾ– ಇಸ್ಸ್ಯಾಽ–ಇಸ್ಸ್ಯಾಽಽ" ಎಂಬ ಬಪ್ಪರಾಕ್ಷಸವು ಅವಳ ಬೆನ್ನು ಬಿಡಲಿಲ್ಲ.

ಒಕ್ಕಲಿಗರ ಮನೆಗಳಿರುವುದು ಹೇಗೆಂಬುದನ್ನು ಬೇರೆ ಬಣ್ಣಿಸ ಬೇಕಾಗಿಲ್ಲ. ಒಟ್ಟಾರೆ ಅವರಿಗೆ ಹೇಗಾದರೂ ತಮ್ಮ ಜಿಂದಿಗಿಯನ್ನೆಲ್ಲ ಸುರಕ್ಷಿತವಾಗಿ ಇಟ್ಟುಕೊಳ್ಳುವುದಕ್ಕೆ ಎಂಥದೇ ಆದರೂ ಸರಿ, ಒಂದು ಬಾಗಿಲುಳ್ಳ ಮನೆಯಾದರೆ ಸಾಕು. ಅಂಗಳ ತುಂಬೆಲ್ಲ ದನಗಳು. ಅಂಗ ಳದಲ್ಲಿ ಅಲ್ಲಲ್ಲಿ ಸ್ವಲ್ಪ ಸ್ಥಳವಿದ್ದರೆ ಅಲ್ಲಿ ಕಟ್ಟಿಗೆ ಮುಂತಾದ್ದು. ಅಲ್ಲದೆ ಅಲ್ಲೇ ಒಚ್ಚಲ ಮೋರಿ. ಇನ್ನು ಪಡಸಾಲೆಯಲ್ಲಿ ಒಂದು ಕಡೆಗೆ ಹತ್ತೆಂಟು ಕಣಿಕೇ ಹೊರೆಗಳು. ಉಳಿದ ಭಾಗದಲ್ಲಿ ಕಾಳುಕಡಿ, ದವಸ ಧಾನ್ಯದ ಚೀಲಗಳು. ಅಲ್ಲದೆ ಹೈನದ ಎಮ್ಮೆ ಆಕಳುಗಳ ಎಳೆಗರುಗ ಳೊಂದೆರಡು. ಅವೂ ಪಡಸಾಲೆಯಲ್ಲಿಯೇ. ಇನ್ನು ಒಂದರ್ಧ ಕೋಣೆ ಗಳಿದ್ದರೆ ಒಂದರಲ್ಲಿ ಹಗ್ಗ–ಕಣ್ಣಿ, ಕುಡ–ಬಳೆ, ನಾರು–ಗೀರು ಮುಂತಾದ ಸಾಮಾನುಗಳು. ಇನ್ನಿರುವುದೊಂದು ದೇವರ ಕೋಣೆ. ಅದರಲ್ಲಿ ಗಿರ್ಧ ಭಾಗ ಜಗುಲಿ. ಇನ್ನೊಂದು ಗಿರ್ಧಭಾಗ ಗಡಿಗೆಗಳ ಅಡಕಿಲು.

ಉಳಿದರ್ಧದಲ್ಲಿ ಅಡಿಗೆಯು ದಿನಸಾಧನೆಯು ಜೀನಸುಗಳು. ಪಡಸಾಲೆಯಲ್ಲೇ ಒಂದು ಮಗ್ಗುಲಿಗೆ ಅಡಿಗೆ ಮತ್ತು ಊಟ-ಉಡಿಗೆ.

ಇಂಥ ಉಗ್ರಾಣದಲ್ಲಿ ಮನೆಯೊಳಗಿನ ಜನರು ಆ ಸಾಮಾನು ಸಡಿಗಳ ಸಂತೆಯಲ್ಲಿ, ಅವರೂ ಒಂದು ವಿಧದ ಸಾಮಾನು ಸಡಿಗಳೇ ಆಗಿ ಯಾವ ಸಂದಿಗೊಂದಿಯಲ್ಲಾದರೂ ಬಿದ್ದುಕೊಂಡಿರಬೇಕು. ಹೊಲಸು ಹೇಸಿಕೆಗಳಿಗಂತೂ ಉಗಮಸ್ಥಾನ. ಇರುಳಲ್ಲಿ ತಗಣಿ ಸೊಳ್ಳೆಗಳದಂತೂ ನಿರಂಕುಶ ರಾಜ್ಯ. ಹಾಸು ಹೊದೆಯುವ ಕೌದಿ ಕೋರಿಗಳ ವೈಭವವು ವರ್ಣನಾತೀತ. ಬಡವರ ಕಷ್ಟಕ್ಕಿಂತ ಇಂಥ ಜೊಳ್ಳು ಮನೆಮಾರಿನವರ ಕಂಗಾಲಸ್ಥಿತಿಯೇ ನನಗೆ ಬಹಳ ಶೋಚನೀಯವಾಗಿ ಕಾಣಿಸುತ್ತದೆ.

ಇನ್ನು ಹಗಲುಹೊತ್ತು ನೋಡಬೇಕು. ಮನೆಯ ಯಜಮಾನರು ಹೇಗಾದರೂ ಮೋರೆ ತಪ್ಪಿಸಿ ಅಡವಿಯ ಕಡೆಗೆ ಹೋಗಿ ಕೊಡಕೊಳ್ಳುವವರ ಕಾಟವನ್ನು ತಪ್ಪಿಸಿಕೊಳ್ಳುತ್ತಾರೆ. ಇತ್ತ ಕೂಲಿಕುಂಬಳಿಯವರು ಮನೆಯಲ್ಲಿ ಹಿಂದಿದ್ದವರ ಸುತ್ತು ಉಲಿಯುತ್ತಿರುತ್ತಾರೆ. ಅದರಲ್ಲಿ ಸಾಲ ಕೊಟ್ಟವರ ಹಾವಳಿಯಂತೂ ಹಣೇ ಬರಹಕ್ಕೇ ಹತ್ತಿರುತ್ತದೆ. ಇದರೊಳಗಿಂದೆಲ್ಲಾ ಪಾರಾಗಿ ಹಿಂದಿದ್ದವರು ಹೊತ್ತಿಗೆ ಸರಿಯಾಗಿ ಹೊಟ್ಟೆಗೆ ಮಾಡಿಕೊಂಡು ಅಡವಿಯಲ್ಲಿದ್ದವರಿಗೆ ಒದಗಿಸಬೇಕು. ನಾಲ್ಕು ಹೊಲಗಳಿದ್ದರೆ ನಾಲ್ಕು ನಿಟ್ಟಿಗೆ. ಒಂದೊಂದು ಹೊಲದಲ್ಲಿ ಒಂದೊಂದು ಆಳು. ಅದರಲ್ಲಿಯೂ ಒಂದೇ ಹೊಲದಲ್ಲಿ ಒಂದಕ್ಕಿಂತ ಹೆಚ್ಚು ಆಳು ಹೋಳುಗಳಿದ್ದರೆ ಅವರೆಲ್ಲಾ ಒಂದೇ ಜಾತಿಯವರೆಲ್ಲಿರುತ್ತಾರೆ? ಅವರೆಲ್ಲರ ಬುತ್ತಿಗಳು ಅವರವರಿಗೆ ಮುಟ್ಟಬೇಕಲ್ಲ! ಹೈನದ ದನಕರುಗಳ ಕೊರಳಲ್ಲಿ ಆ ಬುತ್ತಿಗಳನ್ನು ಬೇರೆ ಬೇರೆ ಕಟ್ಟಿ ತಮ್ಮದನ್ನು ತಲೆಯ ಮೇಲೆ ಹೊತ್ತುಕೊಂಡು ಹೊರಡಬೇಕು ಯಾತ್ರೆಗೆ! ದನಗಳು ಹಾದಿಯಲ್ಲಿ ಬಲ್ಲಂತೆ ಅತ್ತಿತ್ತ ಹತ್ತು ಕಡೆಗೆ ಹೊರಬಿದ್ದರೆ ತೀರಿತು, ಅವುಗಳನ್ನೆಲ್ಲ ಹೊಡೆತಂದು ಒಂದೇ ಕಡೆಗೆ ಕೂಡಿಸುವಷ್ಟರಲ್ಲಿ ತಲೆ ಹೋಗುವ ಹೊತ್ತು ಬರುತ್ತದೆ.

ಇಷ್ಟೆಲ್ಲಾ ಇದ್ದರೂ ಮೇಲೆ ಮನೆಯೊಳಗಿನವರೆಲ್ಲರಲ್ಲಿ ಮುನ್ನೂರು ಜುಂಗು. ಒಬ್ಬರದೊಬ್ಬರಿಗೆ ಸೇರದು. ಅಲ್ಲದೆ ಅಂತಃಕಲಹಗಳು ಅವರಲ್ಲಿ

ಹೆಚ್ಚು. ದರ್ಪವುಳ್ಳ ಒಂದು ವ್ಯಕ್ತಿಯ ಆಳ್ವಿಕೆಗೆ ಉಳಿದವರೆಲ್ಲ ಉಪಾಯ ವಿಲ್ಲದೆ ಅಧೀನರಾಗಿ ಇರುವುದು. ಹಾಗೆ ಹೀಗೆಂದರೆ "ನನಗೇನು ಅಂಥಾದ್ದು ಇದರಲ್ಲಿ ಏಸಿರಿಯಿದೆ? ಎಲ್ಲಾ ನಿಮ್ಮ ಸಲುವಾಗಿಯೇ ಸಾಯುವುದು!" ಎಂದು ಗದರಿಸಿಕೊಂಡರೆ ಮುಗಿಯಿತು. ಅದಕ್ಕೆ ಅಪೀಲು ಇಲ್ಲವೇ ಇಲ್ಲ.

ಕಮತಿಗರ ಮನೆಯಲ್ಲಿ ಸ್ವತಃ ಯಜಮಾನನೇ ದುಡಿಯುತ್ತಿದ್ದರೆ ಅದರಲ್ಲೇ ಎಷ್ಟೋ ಒಳ್ಳೆಯದಿರುತ್ತದೆ. ಆದರೆ ಹೆಣ್ಣುಮಕ್ಕಳು ಆಳು ಹೋಳುಗಳನ್ನಿಟ್ಟು ಕಮತವನ್ನು ಸಾಗಿಸುತ್ತಿದ್ದರೆ ಅಪರಂಪಾರ ವೆಚ್ಚ ಮತ್ತು ಕಷ್ಟನಷ್ಟಗಳು ಕಟ್ಟಿ ಇಟ್ಟಂತೆಯೆ.

ಜ್ಞಾನಭಿಕ್ಷುವಿನ ವಾಸಸ್ಥಾನವು ಇಂಥ ಕೋಲಾಹಲದ ಸಂತೆ. ಈತನ ತಾಯಿಯೋ ಅಳತೆಗೆಟ್ಟು ಹೊಸ ಕಾರ್ಯಗಳನ್ನು ಹೂಡುವವಳು. ಅದರಲ್ಲಿ ಸಾಲವು ತೀರದಂಥ ಸ್ಥಿತಿಗೆ ಬರುತ್ತಿರುವುದನ್ನು ನೋಡಿ, ಮನೆ ಮಾರುಗಳಿಗೆಲ್ಲ ಪಿಡುಗು ಬರುವದೋ ಎಂಬ ಚಿಂತೆ ಹೆಚ್ಚಿದ ಹಾಗೆಲ್ಲಾ ಏನಾದರೂ ಹೊಸ ಆಟ ಹೂಡಿ, ಹೆಚ್ಚು ಗಳಿಸಿ ಹೇಗಾದರೂ ಸಾಲ ವನ್ನು ಹತ್ತಿಕ್ಕಬೇಕೆಂಬ ಆಲೋಚನೆಯೇ ಅವಳ ತಲೆಯಲ್ಲಿ. ಕೊನೆಗೆ "ಸ್ವತಃ ತನಗೆ ತಿಳಿಯದು; ಇನ್ನೊಬ್ಬರು ಹೇಳಿದ್ದು ಸರಿದೋರದು" ಈ ಸ್ಥಿತಿಯು ಅವಳಿಗೆ ಬಂತು.

"ಕಮತವನ್ನು ತೆಗೆದು ಬಿಟ್ಟರೆ ಹೊಸದಾಗಿ ಸಾಲವಾಗುವುದು ತಪ್ಪುವದು; ಮತ್ತು ಎತ್ತು ಬಂಡಿಗಳನ್ನೂ ಇದ್ದಬಿದ್ದ ಕಾಳುಕಡಿ ಗಳನ್ನೂ ದನಕರುಗಳನ್ನೂ ಮಾರಿಬಿಟ್ಟರೆ ಹಳೆಯಸಾಲವು ತಕ್ಕಷ್ಟು ಹತ್ತಿಗೆ ಬೀಳುವದು. ಮುಂದೆ ಲಾವಣಿಯಿಂದ ಬಂದ ಉತ್ಪನ್ನದಲ್ಲಿ ಹೇಗಾದರೂ ಹೊಟ್ಟೆಯನ್ನು ಸಾಗಿಸಿ ಉಳಿದಷ್ಟು ಸಾಲವನ್ನು ತೀರಿಸ ಲಿಕ್ಕೆ ಶಕ್ಯವಿದೆ. ೧೦–೧೫ ವರುಷ ಎಲ್ಲರೂ ಒಂದೇ ಸವನೆ ಕಷ್ಟಸಷ್ಟ ಗಳಲ್ಲಿ ಜಜ್ಜಿ ಹೈರಣಿಸಿ ಬಿಟ್ಟಿದ್ದೇವೆ. ಹೊಟ್ಟೆಯಲ್ಲಿ ಉತ್ಸಾಹವೆಂಬುದರ ವಾಸನೆ ಕೂಡ ಉಳಿದಿಲ್ಲ. ಕೆಲವು ವರುಷಗಳವರೆಗೆ ಎಲ್ಲರೂ ಸಂಪೂರ್ಣ ವಿಶ್ರಾಂತಿಯನ್ನು ಪಡೆದರೆ ಮುಂದೆ ಮತ್ತೆ ಹೊಸದಾಗಿ ಏನೂ ಹೂಡಿ ದರೂ ಸಾಗುವದು." ಮುಂತಾದುದಾಗಿ ಮಗನು ತನ್ನ ತಾಯಿಗೆ

ಬೇಕಾದಷ್ಟು ತಿಳಿಸಿಹೇಳಿದರೂ ಅವಳಿಗೆ ಅದೆಲ್ಲಾ ಈ ಕಿವಿಯೊಳಗಿಂದ ಹಾಯಿದು ಆ ಕಿವಿಯೊಳಗೆ ಪಾರಾಗಿ ಗಾಳಿಗೂಡುತ್ತಿತ್ತು. "ಕವುತವನ್ನು ತೆಗೆದು ಹಾಕಬೇಕು" ಎಂದುಚ್ಚರಿಸಿದೊಡನೆಯೇ ಆಕೆಗೆ– 'ಹರಿಜನರನ್ನು ಮುಟ್ಟಿಸಿಕೊಳ್ಳಬೇಕೆಂ'ದು ನುಡಿದಾಗ ಶೀಲವಂತ ಮುದುಕರಿಗಾಗುವಂತೆ– ಏನೋ ಒಂದು ತರಹದ ಸಂಕಟನೇ ಬಂದಂತಾಗುತ್ತಿತ್ತು. ಆದುದರಿಂದ ಹೇಗಾದರೂ ತನ್ನ ಆಟವನ್ನುಳಿಸಿಕೊಳ್ಳುವುದಕ್ಕೆಂದು ಇಲ್ಲದ ಪುರಾಣವನ್ನು ಬಿಚ್ಚುವುದು!

ಮಗನು ಒಳ್ಳೆಯವನಿದ್ದ ಬಗೆಗೆ ಆಕೆಗೇನೂ ಸಂದೇಹವಿರಲಿಲ್ಲವಾದರೂ ಆತನ ವಿಚಾರಗಳು ಅವ್ಯವಹಾರ್ಯವಾಗಿವೆಯೆಂದು ಅವಳ ಒಳ ಅನಿಸಿಕೆ. ಅಲ್ಲದೆ ಇವನು ಸಂಸಾರವನ್ನೆಲಾ ಹಾಳು ಮಾಡಿಕೊಳ್ಳುವನೆಂಬುದೊಂದು ಹೆದರಿಕೆ. ಮೇಲಾಗಿ ಮಾಡಿ ಮಟ್ಟಿದ ಜೀವವಾದ್ದರಿಂದ ಏನಾದರೊಂದು ಕೋಲಾಹಲವಿಲ್ಲದಿದ್ದರೆ ಅವಳ ಮನಸ್ಸಿಗೆ ಸೊಗಸೇ ಇರುವ ಸಂಭವವಿರಲಿಲ್ಲ. ಮತ್ತು ಕೈಯೊಳಗಿನ ಕಾರಭಾರ ಕಳೆದುಕೊಳ್ಳಬಾರದೆಂಬುದಿನ್ನೊಂದು. ಹೀಗಾಗಿ ಆಕೆಯು ಈತನ ಸಲಹೆಯನ್ನು ಯಾವಾಗಲೂ ವಿರೋಧಿಸುತ್ತಿದ್ದಳು. ಈ ರೀತಿ ಹಗ್ಗ ಹರಿಯುದು ಕೋಲು ಮುರಿಯುದು, ಎನ್ನುವಂಥ ಬಿಕ್ಕಟ್ಟಿನ ಪರಿಸ್ಥಿತಿಗೇ ಬಂದು ಬಿಟ್ಟಿತ್ತು. "ಬಡತನ ಬೇರೆ ಬ್ರಹ್ಮೇತಿ ಬೇರೆ" ಹೀಗೆ ದ್ವಿಗುಣಿತ ಕಷ್ಟದಲ್ಲಿ ನಮ್ಮ ನಾಯಕನ ಜೀವನವು ಸಾಗಿದ್ದು.

ಜ್ಞಾನಭಿಕ್ಷುವಾದರೋ– "ಯಾರಿಗೂ ಒತ್ತಾಯ ಪಡಿಸುವುದು ಬೇಡ. ತಿಳಿಹೇಳಿ ಹಾದಿಗೆ ತರುವುದೇ ನನ್ನ ಕರ್ತವ್ಯ. ನಮ್ಮ ಕಷ್ಟದ ಅರಿಕೆ ದೇವನಿಗಿರಲಿ. ಆತ ತಿದ್ದಲಿಕ್ಕೆ ನಿಂತರೆ ಕ್ಷಣಹೊತ್ತು ಸಹ ಹಿಡಿಯುವದಿಲ್ಲ." ಎಂದು ಎಂದಿನಿಂದಲೂ ಇದೊಂದೇ ಮಂತ್ರವನ್ನು ಪಠಿಸುತ್ತ ಬಂದನು;

ಈತನ ಸತಿಯೇ ಹುಲಿಯ ಕೈಗೆ ಸಿಕ್ಕ ಹರಿಣಿ. ಅತ್ತೆಯ ಅವಾಢವ್ಯ ಕಾರ್ಯರಂಗದಲ್ಲಿ ಇವಳು–ಇಚ್ಛೆಯಿಲ್ಲದಿದ್ದರೂ ನಿರುಪಾಯದಿಂದ ಕುಣಿದು ಕುಣಿದು ಕಂಗೆಟ್ಟಿದ್ದಳು. ಅಲ್ಲದೆ ಇವಳ ಕೂಡ ಅತ್ತೆಯು ಮಲಸಂಬಂಧದ ಮೂಲಕ ಯಾವಾಗಲೂ ಒಳಗಿನದೊಳಗೇ ಕಾಯಿದು

ಕುದಿಯುತ್ತಿದ್ದಳು. ಈಕೆಯು ಕಣ್ಣೀರಿಗೆ ಕರಗಿ ಕರಗಿಯೇ ನಮ್ಮ ನಾಯಕನು ಏನಾದರೊಂದು ನೆವ ಮಾಡಿ ಅವಳನ್ನು ಜೊತೆಗೆ ಕರೆದುಕೊಂಡು ಅಡವಿಯನ್ನು ಸೇರಲಾರಂಭಿಸಿದ್ದು.

ಈಗಂತೂ ಜ್ಞಾನಭಿಕ್ಷುವಿಗೆ ದೈಹಿಕ ಅಸ್ವಸ್ಥತೆ. ಮನೆಯೊಳಗಿನ ಸ್ಥಿತಿಯೋ ಇಂತಹದು. ಅಂದ ಮೇಲೆ ಸ್ವತಃ ಆತನಿಗೂ ಅಡವಿಯ ಹೊರತು ಬೇರೆ ಗತ್ಯಂತರವೇ ಇಲ್ಲ. ಹೀಗಾಗಿ ಆತನು ತನ್ನ ಮಡದಿ ಮಕ್ಕಳೊಂದಿಗೆ ಊರ ಸನಿಹದಲ್ಲೇ ಇರುವ ಯಾರದೋ ಒಂದು ತೋಟದಲ್ಲಿ ಗುಡಿಸಲು ಕಟ್ಟಿಕೊಂಡು ನಿಂತನು. ಆತನ ಜೀವದ ಗೆಳೆಯನಾದ ಮಂಜುಳನಂತೂ ಮೇಲು ವ್ಯವಸ್ಥೆಗೆ ಇರತಕ್ಕವನೇ.

## (೮)

‘ಅವರವರ ಮಾತನ್ನು ಅವರವರ ಕೈಯಿಂದಲೇ ಮೊಳೆ ಹಾಕಿಸಬೇಕು’ ಎಂಬುದು ನಮ್ಮ ನಾಯಕನ ತತ್ತ್ವ. ಯಾಕೆಂದರೆ ಐಕ್ಯಜೀವನವೇ ತನ್ನ ಧರ್ಮವೆಂದು ಭಾವಿಸಿದ್ದನು. ಜುಲುಮೆಯು ಅನೈಕ್ಯದ ಹೆಬ್ಬಾಗಿಲೆಂದು ಆತನಿಗೆ ತೋರುತ್ತಿತ್ತು. ಲೋಕದಲ್ಲಿ ಎಲ್ಲಿ ನೋಡಿದರಲ್ಲಿ ಜುಲುಮೆಯ ಅಕಾಂಡತಾಂಡವವು ನಡೆದಿರುವದರಿಂದಲೇ ಜಗತ್ತು ನರಕ ಸ್ವರೂಪವನ್ನು ತಾಳಿದೆ. ಅದು ಪುನಃ ಸ್ವರ್ಗವಾಗಬೇಕಾದರೆ ಒಂದು ಮಾತು ಸಾರ್ವತ್ರಿಕವಾಗಿ ನೆಲೆಗೊಳ್ಳಬೇಕು; ಅದೇನೆಂದರೆ– ಯಾರಿಗೆ ಯಾರೂ ಯಾವ ವಿಧದಿಂದಲೂ ತೊಂದರೆ ಪಡಿಸಬಾರದೆಂಬ ಬುದ್ಧಿಯು ಪ್ರತಿಯೊಬ್ಬ ಮಾನವನ ಸಹಜಸಂಪತ್ತಾಗಬೇಕು. ಅದುವರೆಗೆ ಜಗತ್ಕಲ್ಯಾಣವೆಂಬುದು ಕನಸಿನ ಮಾತು.

“ನನಗೆ ಯಾರಾದರೂ ಅಹಿತ ಮಾಡದೆ ಬಿಡುವುದಾದರೆ ಅವರು ನನ್ನ ಗುಣಕ್ಕಾಗಿಯೇ ಹಾಗೆ ಮಾಡುವಂತಾಗಲಿ; ಆದರೆ ನನಗೆ ಇನ್ನಾರದೋ ದರ್ಪವಂತರ ಆಶ್ರಯವಿದೆಯೆಂಬ ಕಾರಣದಿಂದಾಗಲಿ, ಒರೇ ಕಾನೂನಿನ ಭಯದಿಂದಾಗಲಿ, ಅವರು ನನ್ನೊಡನೆ ಹಾಗೆ ನಡೆದುಕೊಳ್ಳಬೇಕೆಂದು ನಾನು ಸರ್ವಥಾ ಬಯಸಲಾರೆ. ನನ್ನನ್ನು ಅನ್ಯರು

ಪ್ರೀತಿಸುವುದಾದರೆ ನನ್ನ ಸ್ವತಃದ ಗುಣಕ್ಕಾಗಿಯೇ ಹಾಗೆ ಆಗಬೇಕಲ್ಲದೆ ಅನ್ಯವಿಧದ ತಾಂತ್ರಿಕ ಹಿತಸಾಧನೆಯು ನನಗೆ ಬೇಕಾಗಿಲ್ಲ'' ಎಂಬುದು ಜ್ಞಾನಬಿಕ್ಷುವಿನ ಒಳಆಶೆ.

ತಾಯಿಗೆ ಮುಂದಿನ ಹಾದಿ ಮಂಕಾಗಿ ಬಿಟ್ಟದ್ದರಿಂದ ಅವಳಿಗೆ ಹೊಸ ವಿಚಾರವೇನೂ ಹೊಳೆಯಲೇ ಒಲ್ಲದು; ಹೇಳಿದರೂ ಕೇಳಲೊಲ್ಲಳು. ಆರ್ಥಿಕ ಅನವಸ್ಥೆಯೇ ಭೀಷಣ ಸ್ವರೂಪಕ್ಕೆ ಬಂತು. ಆಗ ಏನಾದರೂ ಒಂದು ಹಂಚಿಕೆಯನ್ನು ಮಾಡದೆ ನಿರ್ವಾಹವೇ ಉಳಿಯಲಿಲ್ಲ. ಆಗ ಸಾಲಕೊಟ್ಟವರನ್ನೆಲ್ಲ ಕರೆಯಿಸಿ ಏಕಾಂತದಲ್ಲಿ ಹೀಗೆಹೇಳಿದನು:— '' ಇಷ್ಟು ದಿನ ನೀವು ನನ್ನ ತಾಯಿಯೊಡನೆ ಕಾಗದ ಪತ್ರಗಳೂ ಕೂಡ ಇಲ್ಲದೆ ವ್ಯವಹಾರವನ್ನು ನಡೆಸಿರುವಿರಿ. ಏಸೋಕಾಲ ಅದು ಸರಿಯಾಗಿಯೂ ಸಾಗಿತು. ಆದರೆ ಇತ್ತೀಚೆಗೆ ನಿಮ್ಮ ಗಂಟು ಮುಟ್ಟುವುದಂತೂ ಒತ್ತಟ್ಟಿಗೇ ಉಳಿಯಲಿ; ಅದರ ಬಡ್ಡಿಯನ್ನು ಕೂಡ ಮುಟ್ಟಿಸುವದಕ್ಕೆ ಶಕ್ಯವಾಗಲಿಲ್ಲ. ನಮ್ಮ ಸ್ಥಿತಿಯಂತೂ ದಿನದಿನಕ್ಕೂ ಹೀನತರವಾಗುತ್ತ ನಡೆದಿದೆ. ಈಗ ನಿಮಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ— ನಿಮ್ಮ ಗಂಟು ಮುಳುಗುವದೆಂದು ಮಾತ್ರ ಉಮ್ಮಳಿಸಬೇಡಿರಿ. ಅವಳು ಏನೇನು ಮಾಡುವಳೋ ನೋಡಿರಿ. ಕೊನೆಗೂ ಅವಳಿಂದ ಸಾಲತೀರಿಸುವುದು ಶಕ್ಯವಾಗದಿದ್ದರೆ ನಾನು ನಿಮ್ಮ ಹಣವನ್ನು ಮುಳುಗಗೊಡುವದಿಲ್ಲ. ಆದರೆ ಇನ್ನು ಮುಂದೆ ನೀವು ಇಷ್ಟು ಮಾತ್ರ ಮಾಡಬೇಕು. ಅವಳಿಗೆ ಒಂದು ಕಾಸು ಕೂಡ ಹೊಸ ಸಾಲವನ್ನು ಕೊಡಬಾರದು. ಅಷ್ಟಾದರೆ ಅವಳು ತನ್ನ ಅವಾಢವ್ಯ ವ್ಯವಸಾಯವನ್ನು ತಾನಾಗಿಯೇ ಕಡಿಮೆ ಮಾಡದಿರಲಾರಳು. ಆಗ ನಿಮ್ಮ ಸಾಲವು ಮುಟ್ಟುವುದಕ್ಕೆ ದಾರಿಯಾಗುವುದು.'' ಈ ಮಾತಿಗೆ ಅವರೆಲ್ಲರೂ ಸಂತೋಷದಿಂದ ಸಮ್ಮತಿಸಿದರು. ಏನು ಮಾಡಲಿಕ್ಕಾಗದಿದ್ದರೂ ಇಷ್ಟಾದರೆ ವ್ಯವಸ್ಥೆಮಾಡಲೇಬೇಕಾಗಿ ಬಂತು. ಅಂತೂ ಇಂತೂ ಏನೋ ತಾತ್ಪೂರ್ತಿಕವಾಗಿ ಮುಂಡಾಸ ಮುಸೆದು ಬಿಟ್ಟನು. ಇತ್ತ ಮಡದಿಮಕ್ಕಳೊಡನೆ ಊರ ನೆರೆಯ ತೋಟದಲ್ಲಿ ವಸತಿ.

ಇಲ್ಲಿ ಒಂದು ಮಾತನ್ನು ಹೇಳದಿರಲಿಕ್ಕಾಗದು. ಅದೇನೆಂದರೆ—'ಕೋಗಿಲೆಯ ಸ್ವರ ಸೊಂಪು' ಮುಂತಾದ ಮಾತುಗಳನ್ನು ನಾವು ಪುಸ್ತಕಗಳಲ್ಲಿ ಏಸೋ ಸಾರೆ ಓದಿರುತ್ತಿರುತ್ತೇವೆ. ಆದರೆ ಪ್ರತ್ಯಕ್ಷದಲ್ಲಿ ನಮಗೆ ಹಾಗೆ ಎಂದೂ ಅನಿಸುತ್ತಿರುವುದಿಲ್ಲ. ಅದರಿಂದ ನಾವು ಒಮ್ಮೊಮ್ಮೆ ಕವಿಕುಲವನ್ನು ಹೀಯಾಳಿಸುವುದೂ ಉಂಟು. ನಮ್ಮ ನಾಯಕನೂ ಈ ನಾಡಿನೊಳಗೆ ಹಾದವನೇ. ಆದರೆ ಕೆಲವು ವರುಷಗಳ ಹಿಂದೆ ಒಂದು ದಿನ ಕೋಗಿಲೆಯ ದನಿಯು ನಿಜವಾಗಿಯೂ ಇಂಪೆಂದು ಅನಿಸಿತು. ಅದಕ್ಕಿಂತ ಮುಂಚೆ ಎಂದೂ ಹಾಗೆ ಅನಿಸಿರಲಿಲ್ಲ. ಆಗ ಆತನಿಗೆ ತನ್ನೂರ ಹಸುರು ಸಿರಿಯು ತೀರ ಹೊಸವಾಗಿ ಕಂಡಿತು. "ಅಹಾ! ನಮ್ಮ ಊರೂ ಕೂಡ ಎಷ್ಟು ಸೊಬಗುಳ್ಳದ್ದಾಗಿದೆಯಲ್ಲಾ! ನನಗೆ ಇಂದಿನವರೆಗೂ ಹೀಗೆ ಗೋಚರಿಸಿದ್ದೇ ಇಲ್ಲವಲ್ಲಾ!! ಎಲಾ! ಇದೇನು ವಿಚಿತ್ರ!!" ಎಂದು ಆಗ ಉದ್ಗಾರವನ್ನು ತೆಗೆದಿದ್ದನು. ಆವಾಗಲೇ ದೂರದ ನಾಡಿನಿಂದ ಬಂದಿದ್ದ ಗೆಳೆಯನೊಬ್ಬನು ಇವನ ಈ ಉದ್ಗಾರವನ್ನು ಕೇಳಿ ಆಶ್ಚರ್ಯಭರಿತನಾಗಿ, 'ಎಲಾ ನೀನು ಹೀಗೆ ಹೇಳುವುದೇನಿದು!? ನಿನ್ನೂರು ನಿನಗೆ ಹೇಗೆ ಈಸು ದಿನ ಹಾಗೆ ಕಾಣಿಸಿರಲಿಲ್ಲವದು?' ಎಂದು ಅಂದಿದ್ದನು.

ನಮ್ಮ ನಾಯಕನ ನಾಡು ತೀರ ಬೈಲುಶೀಮೆ. ಹತ್ತು ಹರದಾರಿ ಹೋದರೂ ಬರೇ ಕರೀನೆಲ. ಇಂಥ ಬಟ್ಟಾಬಯಲು! ಇಂಥದರಲ್ಲಿ ಇದ್ದದ್ದರೊಳಗೆ ಆತನಿದ್ದೂರಿಗೇ ಗಿಡಮರಗಳೊಂದಿಷ್ಟು ಹೆಚ್ಚು.

ಈಗ ವಸತಿ ಮಾಡಿಕೊಂಡು ಇರುವ ಆ ಊರ ನೆರೆಯ ಯಾರದೋ ತೋಟವೂ ತಕ್ಕ ಮಟ್ಟಿಗೆ ಗಿಡಗಳ ಬೀಡಾಗಿತ್ತು. ಅಲ್ಲಿ ಹತ್ತಿಪ್ಪತ್ತು ಕಿರಿಯಳತೆಯ ಮಾವಿನ ಗಿಡಗಳು; ಮತ್ತೆ ಕೆಲವು ಬೇರೆ ಜಾತಿಯ ಗಿಡಗಳು. ಅಲ್ಲದೆ ಹಸಿರು ಬೆಳೆ. ಅಂಥಲ್ಲಿ ಜ್ಞಾನಭಿಕ್ಷುವು ದಿನಾಲು ಬೆಳಗಿಗೆದ್ದು ಉಷೆಯ ಬಣ್ಣ ಬಣ್ಣದ ಚೆಲುವು ಮೊಗವನ್ನು ಮನದಣಿ ನೋಡುತ್ತ ತಿರುಗಾಡುವನು. ಬನಸಿರಿಯನ್ನು ಕಣ್ಣದಣಿ ಕಂಡು ನಲಿಯುವನು. ಉಳಿದ ವೇಳೆಯಲ್ಲಿ ಓದುವುದು. ಮತ್ತು ಬರೆಯುವುದು; ಅಥವಾ ತನ್ನವರೆಂಬವರೊಡನೆ ಮಾತುಕತೆಯಲ್ಲಿ ಹೊತ್ತು

ಗಳೆಯುವುದು. ಇದು ಆತನ ಆಗಿನ ದಿನಚರಿ. ದೈಹಿಕ ಅಶಕ್ತತೆಯಂತೂ ಜಹಾಗೀರಿಯನ್ನೇ ಪಡೆದುಕೊಂಡಿತ್ತು. ಆದುದರಿಂದ ಆ ವಿಷಯದಲ್ಲಿ ಬೇರೆ ಹೇಳಬೇಕಾಗಿಲ್ಲ.

ಇಂಥ ಕಾಲದಲ್ಲಿ ಅದೇ ಹೊಸದಾಗಿ ಹೊರಟ ಒಂದು ಮಾಸಿಕದ ಸಂಪಾದಕರು ಈತನ ಲೇಖನಗಳು ಬೇಕೆಂದು ಬಹಳ ಜೆಲ್ಲವರಿದರು. ಆದುದರಿಂದ ಜ್ಞಾನಭಿಕ್ಷುವು ಆಗಿನ ತನ್ನ ಸೌಂದರ್ಯಾನುಭವಗಳಿಗೇ ಮೂರ್ತಸ್ವರೂಪವನ್ನು ಕೊಟ್ಟು ಮೂರುನಾಲ್ಕು ಚಿಕ್ಕ ಚಿಕ್ಕ ಸೂತ್ರಾತ್ಮಕ ಲೇಖನಗಳನ್ನು ಬರೆದನು. ಅವುಗಳ ಸಾರಾಂಶವಿದು:— “ ಸೃಷ್ಟಿಯೇನೋ ಸದಾ ತಾನು ಇರುವಂತೆಯೇ ಇದೆ. ಆದರೆ ನಮ್ಮ ದೃಷ್ಟಿ ಹೊಸದಾಗಲು ಆಗ ಅದೂ ನಮಗೆ ಹೊಸದಾಗಿ ತೋರುತ್ತದೆ. ಆದುದರಿಂದ ಎಲ್ಲಕ್ಕೂ ಮೊದಲಿಗೆ ನಮ್ಮ ದೃಷ್ಟಿ ತೆರಳಬೇಕಾದುದು ಅವಶ್ಯ........ ....... ಸಮಸ್ತ ಸೃಷ್ಟಿಯು ದಿವ್ಯ ಸತ್ಯಸ್ವರೂಪನಾದ ಪರಮಾತ್ಮನ ಬಾಹ್ಯರೂಪವಾಗಿದೆ. ಅಂತೆಯೇ ಅದು ಅಷ್ಟು ಚೆಲುವಾಗಿದೆ. ಅದಕ್ಕೆಂತಲೇ ‘ ಸತ್ಯವೇ ಸೌಂದರ್ಯ ’ ವೆಂದು ಕವಿಶೇಖರರು ಒಪ್ಪಿಸಿದ್ದಾರೆ............ಸರ್ವ ಆಕರ್ಷಕ ವಸ್ತುಗಳಿಗಿಂತ ಸೌಂದರ್ಯವೆಂಬ ವಸ್ತುವಿನ ಕಡೆಗೆ ಮಕ್ಕಳಿಂದ ಮೊದಲಾಗಿ ಮುದುಕರ ವರೆಗೆ ಎಲ್ಲರೂ ಬಲವಾಗಿ ಆಕರ್ಷಿತರಾಗಿ ಓಡುತ್ತಾರೆ. ಆಕರ್ಷಕತೆಯೂ ತಲ್ಲೀನತೆಯೂ ಅಕ್ಕತಂಗಿಯರಿದ್ದಂತೆ. ಶುದ್ಧ ತನ್ಮಯತೆಯು ಯೋಗದ ಒಂದು ಮುಖ್ಯಲಕ್ಷಣ. ಆದುದರಿಂದ ಸತ್ಯದ ಪ್ರತೀಕವಾದ ಸೌಂದರ್ಯದ ಆಕರ್ಷಣಕ್ಕೆ ಚಿತ್ತಗೊಡುವುದೂ ಒಂದು ಯೋಗವೇ ಸರಿ... ಕಲೆಯು ಸೌಂದರ್ಯಾನುಭೂತಿಯ ಹಾಗೂ ಸತ್ಯಾನುಭೂತಿಯ ಪ್ರತಿಬಿಂಬ. ಆದುದರಿಂದ ಕಲೋಪಾಸಕರು ಸೌಂದರ್ಯತತ್ತ್ವವನ್ನು ಹರಡುವ ಋಷಿಗಳು. ”

ನಮ್ಮ ನಾಯಕನ ಅಂತರಂಗದಲ್ಲೀಗ ಹೊಸದೊಂದು ಆಶ್ಚರ್ಯವು ಸುಳಿಯಹತ್ತಿತು. ಅದೇನೆಂದರೆ— ಆತನಿಗೆ ಸತ್ಯಾನುಭವವು ಬರುವುದಕ್ಕಿಂತ ಮುಂಚೆ ಒಂದೆರಡುವಾರಗಳ ಹಿಂದೆ ಆತನು ಒಂದು

ಸಖ್ಯಗೀತೆಯನ್ನು ಬರೆದಾಗ ಅವನ ಗೆಳೆಯನೊಬ್ಬನು ಒಂದು ದಿನ ಅದರೊಳಗಿನ–'ಸತ್ಯವಿದ್ದೆಡೆ ಪ್ರೀತಿ, ಪ್ರೀತಿಯಿದ್ದೆಡೆ ಸತ್ಯ, ಸತಿಪತಿಗಳಂತೆ ಇವು ತಳಕು ಮಳಕೋ। ಸತ್ತ್ವಲ್ಲದುಳಿಯುವೈ ಒಂದನೊಂದಗಲಿದರೆ, ಆತ್ಮಲೋಕಕ್ಕೆ ಇವು ಬೆಂಕಿಬೆಳಕೋ ॥' ಎಂಬ ನುಡಿಯನ್ನು ಕುರಿತು ಜ್ಞಾನಭಿಕ್ಷುವಿನೊಡನೆ ಬಹಳವಾಗಿ ಚರ್ಚಿಸಿದನು. ಇಷ್ಟೊಂದು ಚರ್ಚೆಯೇಕೆಂದು ಕೇಳಿದಾಗ ಆ ಗೆಳೆಯನು, "ಇಂಗ್ಲೀಷಿನಲ್ಲಿ ನಾನೋದಿದ ಒಂದು ವಾಕ್ಯದ ವ್ಯಾಖ್ಯೆಯೇನಾದರೂ ನನಗೀ ಚರ್ಚೆಯಲ್ಲಿ ಸಿಕ್ಕೀತೇನೋ ಎಂಬ ಆಶೆ. 'ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ' ವೆಂಬುದೇ ಆ ಮಾತು" ಎಂದನು. ಅದಕ್ಕೆ ನಮ್ಮ ನಾಯಕನು "ಅಯ್ಯೋ ನಾನೂ ಆ ವಾಕ್ಯವನ್ನು ಅಲ್ಲಲ್ಲಿ ಓದಿರುವೆನಾದರೂ ಸುತರಾಂ ನನಗದರ ಮರ್ಮ ಹೊಳೆದಿಲ್ಲ! ನನ್ನ ಪದ್ಯದಲ್ಲೋ 'ಸತ್ಯ' ಶಬ್ದವನ್ನು ಸತ್ಯವಂತಿಕೆಯೆಂಬ ಅರ್ಥದಲ್ಲಿ ಮಾತ್ರ ಉಪಯೋಗಿಸಿದ್ದೇನೆ" ಎಂದು ನುಡಿದನು.

ಈ ಮಾತು ನಡೆದು ಹೋಗಿ ಇಷ್ಟು ಹೊತ್ತಿಗೆ ಇನ್ನೂ ಆರು ತಿಂಗಳು ಕೂಡ ಆಗಿರಲಿಲ್ಲ. ಆದರೆ ಇಷ್ಟರಲ್ಲಿಯೇ ಜ್ಞಾನಭಿಕ್ಷುವು ಕವಿಶೇಖರನಾದ ಕೀಟ್ಸ್‌ನ ಆ ಮುಂಡಿಗೆಯ ಭಾಷ್ಯವೇ ಅಹುದೇನೋ ಎಂದೆನಿಸುವಂಥ ಸೂತ್ರಾತ್ಮಕಲೇಖಗಳನ್ನು ಬರೆಯಲು ಸಮರ್ಥನೆಂತಾದನು? !!! ಸ್ವತಃ ನಮ್ಮ ನಾಯಕನಿಗೇ ಇದು ಬಹಳವೆಂದರೆ ಬಹಳ ಸೋಜಿಗದ ಮಾತಾಯಿತು.

ಇದೂ ಅಲ್ಲದೆ ಇನ್ನೊಂದು ಮಾತೇನೆಂದರೆ— ಈ ಸಂಗತಿಯು ನಡೆದ ಕಾಲಕ್ಕಿಂತ ಮುಂಚೆ ಆರು ವರುಷಗಳ ಹಿಂದೆ ಆತನು ಸೌಂದರ್ಯ ಶಾಸ್ತ್ರದ ಮೇಲಿನ, ಪೌರಸ್ತ್ಯ ಪಾಶ್ಚಾತ್ಯ ವಿವೇಚನೆಗಳಿಂದ ಕೂಡಿದ ಒಂದು ಪುಸ್ತಕವನ್ನು ತರಿಸಿದ್ದನು. ಆದರೆ ಆಗ ಆ ಪುಸ್ತಕವು ಒಂದು ರವೆಯಷ್ಟು ಕೂಡ ತಿಳಿದಿರಲಿಲ್ಲವಿಷ್ಟೇ ಅಲ್ಲ; 'ಇಂಥ ಪುಸ್ತಕಗಳನ್ನೋದುವ ಭಾಗ್ಯವು ನನಗೀ ಜನ್ಮದಲ್ಲಿಲ್ಲ' ವೆಂದೆನಿಸಿಬಿಟ್ಟಿತು. ಆದುದರಿಂದ ಅದನ್ನು ಅವನು ಆವಾಗಲೇ ತನ್ನ ಗೆಳೆಯನೊಬ್ಬನಿಗೆ ಕೊಟ್ಟು ಬಿಟ್ಟಿದ್ದನು. ಆದರೆ ಈಗ ಅದನ್ನು ಪುನಃ ನೋಡಬೇಕೆಂಬ ಕುತೂಹಲವು

ಹುಟ್ಟಿತು. ಮತ್ತೆ ಈಸು ವರುಷಗಳ ಮೇಲೆ ಅದನ್ನು ತಿರುಗಿ ತರಿಸಿದನು. ಓದುತ್ತಾನೆ, ಎಲ್ಲಿಯೂ ತಟ್ಟಿಸಲೊಲ್ಲದು; ಎಲ್ಲವೂ ಚೆನ್ನಾಗಿ ಮನವರಿಕೆಯಾಗುತ್ತಿದೆ! ಅಲ್ಲದೆ ತನ್ನ ಲೇಖನಗಳಲ್ಲಿ ತಾನಾಗಿ ಇಳಿದ ಮಾತುಗಳಿಗಿಂತ ಹೆಚ್ಚಿನ ಪ್ರಸ್ತಾಪವಿನ್ನೇನೂ ಅದರಲ್ಲಿ ಬಹಳ ಹೆಚ್ಚಿಗಿರಲಿಲ್ಲ. ಮೂಲಸೂತ್ರಗಳೆಲ್ಲಾ ಎರಡರಲ್ಲಿಯೂ ಬಹುಶಃ ಅವೇ.

ಸತ್ಯದ ಸಂಸ್ಪರ್ಶವು ನಮ್ಮ ನಾಯಕನ ಬುದ್ಧಿಯನ್ನು ಈ ಪರಿ ಚೂಪು ಮಾಡಿದ್ದಿತು.

ಭರತಖಂಡದ ಪೂರ್ವಕಾಲದ ಋಷಿಗಳು ಒಂದು ಸೋಜಿಗದ ಚಿಂತಾಮಣಿಯನ್ನು ದೊರಕಿಸಲು ಯತ್ನಿಸಿರುವರು. ಮುಗಿಲಿಗೆಲ್ಲ ಬಣ್ಣ ಬಳಿಯುವುದಕ್ಕಿಂತ ಕಣ್ಣಿಗೇ ಒಂದು ಬಣ್ಣದ ಕನ್ನಡಕ ಹುಡುಕಿದಂತಿದು.–"ಕಸ್ಮಿನ್ ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ?" **ಯಾವುದು ಒಂದನ್ನು ಅರಿತರೆ ಎಲ್ಲವೂ ತಿಳಿಯುತ್ತಿರುವದು?** ಎಂಬುದು ಉಪನಿಷತ್ಕಾಲದ ಋಷಿಗಳ ಮುಂಡಿಗೆ. "ಜ್ಞಾನಂ ತೇಹಂ ವಕ್ಷ್ಯಾಮಿ....ಯತ್ ಜ್ಞಾತ್ವಾ ನೇಹ ಭೂಯೋಽನ್ಯ ಜ್ಞಾತವ್ಯಮವಶಿಷ್ಯತೇ ॥" **ಯಾವುದನ್ನರಿತ ಮೇಲೆ ಈ ಜಗತ್ತಿನಲ್ಲಿ ಇನ್ನೇನೂ ತಿಳಿದುಕೊಳ್ಳುವದೇ ಉಳಿಯಲಾರದೋ ಅಂಥ ಜ್ಞಾನವನ್ನು ಕುರಿತು ಹೇಳುವೆನು.** ಎಂದು ಗೀತೆಯು ಗುಡುಗಿತು. ಥಾಮಸ್ ಆ ಕೆಂಪಿಸ್ ಎಂಬ ಮಹಾ ಅನುಭಾವಿಯು ಇದೇ ವಿಷಯದಲ್ಲಿ ಹೀಗೆ ಹೇಳಿರುವನು:—

"ನಾನು (ದೇವದೇವನು) ಒಂದು ಕ್ಷಣದಲ್ಲಿಯೇ ವಿನೀತ ಬುದ್ಧಿಯನ್ನು ಮೇಲಕ್ಕೆ ಎತ್ತರಿಸುವೆನು; ಮತ್ತು ಹತ್ತು ವರುಷಗಳ ತನಕ ವಿದ್ಯಾಪೀಠಗಳಲ್ಲಿ ಕಲಿತುಕೊಳ್ಳುವದಕ್ಕಿಂತ ಹೆಚ್ಚಿಗೆ ಆಳವಾಗಿ ಅದನ್ನು ಶಾಶ್ವತ ಸತ್ಯದ ಮೂಲತತ್ತ್ವಗಳೊಳಗೆ ಪ್ರವೇಶಗೊಳಿಸುವೆನು." ಹೀಗೆಂತಲೇ ಗೀತೆಯು "ವಿದ್ಯಾನಾಂ ಅಧ್ಯಾತ್ಮವಿದ್ಯಾ" ಎಂದು ಅದರ ಮಹಿಮೆಯನ್ನು ಸಾರುತ್ತಿದೆ. ಅದನ್ನರಿಯಲು ಸಮರ್ಥವಾದರೆ ಆ ಬುದ್ಧಿಗೆ ಇನ್ನಾವುದರಿದು?!

(೯)

" ಮಹಾ ಕಾಲಾಯನಮಃ " " ಟಾಯಿಮ್ ಇಜ್ ಗಾಡ್ " ಎಂಬುದು ನಮ್ಮ ನಾಯಕನ ಆಗಿನ ಮಹಾಮಂತ್ರ. ಅದು ಆಗ ಅವನ ಬಾಯಲ್ಲಿ, ಮನದಲ್ಲಿ, ಒಳಗೆ ಹೊರಗೆ, ಹಗಲು ಹನ್ನೆರಡು ತಾಸೆಲ್ಲ ನರ್ತಿಸುತ್ತಿತ್ತು. ಒಂದು ಹೆಜ್ಜೆ ಹೀಗೆ ಹೋಗುವದರ ಬದಲು ಹಾಗೆ ಹೋದರೆ 'ಅಲ್ಲೇನು ವಿಶೇಷವಿದ್ದಿದ್ದೀತು ?' ಎಂದು ಜೀವವು ತಟ್ಟನೆ ಅಲ್ಲಿ ಎಣಿಕೆ ಹಾಕುವದು. ಹೀಗೆ ಹಂಚಿಕೆ ಹಾಕುವುದಕ್ಕೂ ಅಲ್ಲೇನಾದರೂ ವಿಶೇಷವಿರುವದಕ್ಕೂ ಗಂಟೇ ಬೀಳುತ್ತಿತ್ತು. ಒಂದು ಹಾದಿಯಿಂದ ಒಂದೆಡೆಗೆ ಹೊರಡುವ ಬದಲು ಇನ್ನೊಂದು ಮಾರ್ಗದಿಂದ ಹೋಗಬೇಕಾಗಿ ಪ್ರಸಂಗ ಬಂದರೆ ಕೂಡಲೆ ಆತನ ಮನದಲ್ಲಿ ಒಂದು ಪ್ರಶ್ನೆಯು ಬಂದೇ ತೀರಬೇಕಲ್ಲ! 'ಇತ್ತ ಕಡೆಯಿಂದ ಹಾಯ್ದುದ್ದರಲ್ಲಿ ಏನಾದರೂ ವಿಶೇಷವಿರಬಹುದೇನು ?' ಆಯಿತು ಹಾಗೆ ಇದ್ದೇ ಬಿಟ್ಟಿರಬೇಕು! ಹೀಗಾಗಿ ನಮ್ಮ ನಾಯಕನ ಅಂತರಾಳದಲ್ಲಿ– " ಉದ್ದೇಶವಿಲ್ಲದೆ ಒಂದು ಹೆಜ್ಜೆಕೂಡ ಹಿಂದುಮುಂದಾಗುವದಿಲ್ಲ! " ಎಂಬ ಅನಿಸಿಕೆಯು ಪ್ರಬಲವಾಗಹತ್ತಿತು.

ಆ ತೋಟದಲ್ಲಿ ತೋಟಗಾರರ ಹರಯದ ಹುಡುಗನೊಬ್ಬನು ಕಾವಲದ ಸಲುವಾಗಿ ಅಲ್ಲಿರುತ್ತಿದ್ದನು. ಜ್ಞಾನಭಿಕ್ಷುವಿನ ಗುಡಿಸಲ ಮುಂದೆ ನಡೆಯುವ ಮಾತುಕತೆಗಳೆಲ್ಲಾ ಸದಾ ಅವನ ಕಿವಿಗೆ ಬೀಳುತ್ತಿದ್ದವು. ಅವುಗಳಲ್ಲಿ " ಉದ್ದೇಶವಿಲ್ಲದೆ ಏನೂ ಆಗದು " ಎಂಬುದು ಅವನ ಮನವನ್ನು ಬಹಳವಾಗಿ ಎಳೆದುಕೊಂಡಿತು. ಅವನೂ ತನ್ನ ದಿನದ ಕೆಲಸ ಬೊಗಸೆಗಳಲ್ಲೆಲ್ಲ ಅದನ್ನೇ ಲಕ್ಷಿಸ ಹತ್ತಿದನು. ಕೊನೆಗೊಂದು ದಿನ ಅವನು ನಮ್ಮ ನಾಯಕನ ಬಳಿಗೆ ಬಂದು ತನ್ನ ಕತೆಯನ್ನೆಲ್ಲ ಬಿಚ್ಚಿದನು. ಅದು ಹೇಗೆಂದರೆ–

" ಇಲ್ಲಿ ನೀವು ಯಾವಾಗಲೂ ಹೇಳುತ್ತಿರುವ ಮಾತನ್ನು ಪರೀಕ್ಷಿಸಿ ನೋಡಬೇಕೆಂದು ನನಗೆ ಕುತೂಹಲ ಹುಟ್ಟಿ, ನಾನದರಂತೆ ಲಕ್ಷ್ಯವಿಟ್ಟು ಪರೀಕ್ಷಿಸಹತ್ತಿದೆನು. ಒಂದು ದಿನ ನಾನು ಬೇರೊಂದು ಹೊ

ಹೊಲದಲ್ಲಿ ಕೆಲಸಕ್ಕೆ ಹೋದಾಗ ದಿನದ ನಿಯಮದಂತೆ ಊಟದ ಹೊತ್ತಿಗೆ ಹಳ್ಳಕ್ಕೆ ನೀರು ತರಲಿಕ್ಕೆ ಹೊರಟೆನು. ಆದರೆ ಯಾಕೋ ಮರೆತು ನಾನು ಅಂದು ದಿನದಹಾದಿಯಿಂದ ಹೋಗದೆ ಬೇರೊಂದು ಹಾದಿಯನ್ನು ಹಿಡಿದು ಹೊರಟಿದ್ದೆನು. ಆಗ ನನಗೆ ಒಮ್ಮೆಲೆ ನಿಮ್ಮ ಮಾತು ನೆನಪಿಗೆ ಬಂತು. ಹಾಗಾದರೆ ಇದರ ಚಮತ್ಕಾರವನ್ನು ನೋಡೋಣವೆಂದು ಹಾಗೇ ದಾರಿಯಿಂದ ಮುಂದಕ್ಕೆ ಸಾಗಿದೆನು. ಅಲ್ಲಿ ಒಂದು ಹಾಳು ಒರತೆಯಲ್ಲಿ ಎರಡು ಇಲೀ ಮರಿಗಳು ಹೇಗೋ ಬಿದ್ದು ಮುಳುಗುತ್ತ ತೇಲುತ್ತ ಗುಟಕರಿಸುತ್ತಿರುವುದು ನನ್ನ ಕಣ್ಣಿಗೆ ಬಿತ್ತು! 'ಆಹಾ! ಇವುಗಳ ಪ್ರಾಣವುಳಿಯುವುದರ ಸಲುವಾಗಿಯೇ ಕಾಲವು ನನ್ನನ್ನಿತ್ತ ತಂದಿತಲ್ಲಾ!!' ಎಂದೆನಿಸಿತು.

"ಇನ್ನೊಂದು ದಿನ– ಬುತ್ತಿಯನ್ನು ತರುವುದಕ್ಕೆ ನನ್ನ ಜೊತೆಯ ಮತ್ತೊಬ್ಬ ಹುಡುಗನೇ ದಿನಾಲು ಮನೆಗೆ ಹೋಗಿ ಬರುತ್ತಿರುವದರಿಂದ ಆರಿದ ಊಟವನ್ನುಂಡುಂಡು ಬೇಸತ್ತ ನಾನು "ಇಂದು ಸಂಜೆಗೆ ನಾನೇ ಹೋಗಬೇಕೆಂ"ದು ಆಲೋಚಿಸಿದೆನು. ಆದರೆ ಅದೆಷ್ಟು ಪ್ರಯತ್ನಿಸಿದರೂ ಕೆಲಸ ಬೊಗಸೆಯಲ್ಲಿ ನನಗೆ ಶಕ್ಯವೇ ಆಗಲಿಲ್ಲ. ಮರುದಿನ ನನಗೆ ಮನೆಗೆ ಹೋಗುವ ಸುದೈವ ಬಂತು. ಆದರೆ ಅಲ್ಲಿ ಹೋಗಿ ನೋಡುತ್ತೇನೆ. 'ನಿನ್ನಿನ ದಿನ ತಪ್ಪಿದ್ದೇ ಹಿತವಾಯಿತಲ್ಲಾ' ಎಂದೆನಿಸಿತು. ಯಾಕೆಂದರೆ ನಿನ್ನಿನ ಸಂಜೆಗೆ ಮನೆಯೊಳಗೆ ಮಾಡದಲ್ಲಿಟ್ಟ ರೊಕ್ಕ ಇಂದು ಮುಂಜಾನೆಯೆಂಬುದರೊಳಗಾಗಿ ಇಟ್ಟದ್ದು ಇಟ್ಟಲ್ಲೇ ಸ್ವಾಹಾ ಆಗಿಬಿಟ್ಟಿತ್ತು! ಯಾರು ಕದ್ದಿದ್ದರೋ ದೇವರೇ ಬಲ್ಲ! ಆದರೆ ಅದು ನನ್ನ ಆ ಜೊತೆಯ ಹುಡುಗನ ತಲೆಯ ಮೇಲೆಯೇ ಬಂದುಬಿಟ್ಟಿತು. ಮನೆಯವರೊಳಗೆಲ್ಲಾ ಅದೇ ಮಾತು: "ಅವನ ಹೊರತು ಯಾರೂ ಇಲ್ಲಿ ಬಂದೇ ಇಲ್ಲವಲ್ಲ! ನಿಶ್ಚಯವಾಗಿಯೂ ಅವನೇ ನೆಗವಿ ಹಾಕಿದ್ದಾನೆ!" ನಿಜವಾಗಿಯೆಂದರೆ ಮನೆಯೊಳಗಿನ ಹೆಣ್ಣುಮಕ್ಕಳೊಳಗೇ ಯಾರಾದರೂ ಆ ಕೆಲಸ ಮಾಡಿದ್ದರೋ, ಅಥವಾ ಚಿಕ್ಕ ಮಕ್ಕಳು ನೆಗವಿ ಹಾಕಿದ್ದವೋ, ಯಾರು ಬಲ್ಲರು? ಆದರೆ ಈ ಹುಡುಗನ ಮೇಲೆ ಮಾತ್ರ ಅದು ತುಂಬಾ ಬಂದೇಬಿಟ್ಟಿತು. ನಿನ್ನಿನ ದಿನ ನಾನೇ ಹೋಗಿದ್ದರೆ ಆ ರಿಪಿಯು ನನ್ನ

ಬೆನ್ನಿಗೇ ಬೀಳುತ್ತಿದ್ದಿತಲ್ಲಾ! ಎಂದು ನಡುಗಿದೆನು. ಆಗ ನಿಮ್ಮ ಮಾತು ನನಗೆ ಮತ್ತಿಷ್ಟು ಸ್ಫುಟವಾಯಿತು.

"ಈಗ ನನಗೆ ಹಿಂದಿನದೊಂದು ಸಂಗತಿಯು ನೆನಪಿಗೆ ಬರುತ್ತಿದೆ. ಅದೂ ಇಂಥದೇ. ಕೆಲವು ವರುಷಗಳಿಗೆ ಮುಂಚೆ ನಾನು ಒಂದು ಪಟ್ಟಣ ದಲ್ಲಿ ನನ್ನ ಅಣ್ಣನೊಂದಿಗೆ ಗಿರಣಿಯ ಕೂಲಿಗೆ ಹೋಗುತ್ತಿದ್ದೆನು. ಒಂದು ದಿನ ಒಂದು ಹಬ್ಬ ಬಂತು. ಅಂದು ಆ ನೆವದಿಂದ ಊರಲ್ಲಿ ಎರಡು ಬಣಗಳ ನಡುವೆ ದೊಡ್ಡ ಜಗಳವಾಗುವ ಸಂಭವವಿದ್ದಿತು. ಆದ್ದರಿಂದ ನಾನೂ ನನ್ನ ಗೆಳೆಯರೂ ಕೂಡಿ ಬಾಡಿಗೆಯ ಸಾಯ್ಕಲ್ಲು ಗಳನ್ನು ತೆಗೆದುಕೊಂಡು ಊರ ಹೊರಗೆ ಅಡ್ಡಾಡಿ ಬರಲಿಕ್ಕೆ ಹೋಗಿ ಬಿಟ್ಟೆವು. ಬರುವಾಗ ದಾರಿಯೊಳಗೆ ಇಳುಕಲಿನಲ್ಲಿ ಒಂದು ಎತ್ತು ಇದು ರಿಗೆ ಬಂತು. ಏನು ಪ್ರಯತ್ನ ಮಾಡಿಯೂ ಫಲವಾಗಲಿಲ್ಲ, ಸಿಡಿದು ಬಿದ್ದುಬಿಟ್ಟೆನು. ಕಾಲಹರಡು ಮುರಿಯಿತು! ಆಗ ಅಯ್ಯೋ, ಊರಲ್ಲಿ ಅಪಾಯವೆಂದು ಹೊರಗೆ ಬಂದರೆ ಇಲ್ಲಿಯೂ ನನ್ನ ಪಾಲಿಗೆ ಅದೇ ಇರ ಬೇಕೆ?!' ಎಂದು ಗೋಳಾಡಿದೆನು.

"ನನ್ನ ಗೆಳೆಯರು ನನ್ನನ್ನು ಹೊತ್ತು ಒಯ್ದು ಮನೆಗೆ ಹಾಕಿ ದರು. ಏನೇನೋ ಉಪಚಾರವನ್ನೆಲ್ಲ ಮಾಡಿ ಆಯಿತು. ಎಲುವು ಹೊರಗೆ ಹಾದದ್ದರಿಂದ ಕಾಲು ಕೊಳೆಯುತ್ತಿತ್ತು. ಬಾತು ಬೆಟ್ಟವಾ ಯಿತು. ಕೊನೆಗೆ ದವಾಖಾನೆಯ ಪ್ರಸಂಗ ಬಂತು. ಡಾಕ್ಟರರು-- ಛೇ ಛೇ! ಇದು ನೆಟ್ಟಗಾಗಲಾರದು! ಹುಡುಗನ ಜೀವವುಳಿಸುವುದಕ್ಕೆ ಕಾಲನ್ನೇ ಕತ್ತರಿಸಬೇಕು! ಎಂದರು. ಅದಕ್ಕೆ ನಮ್ಮಣ್ಣನು– 'ಅದೇನೂ ಬೇಕಾಗಿಲ್ಲ. ಕಾಲು ಹೋದ ಮೇಲೆ ಜೀವದಿಂದುಳಿದು ನಮ್ಮಂಥ ಕೂಲಿಕಾರರು ಮುಂದೆ ಹೊಟ್ಟೆಯನ್ನು ಹೊರೆಯುವುದು ಹೇಗೆ? ಬದು ಕಿದರೆ ಬದುಕಲಿ, ಸತ್ತರೆ ಸಾಯಲಿ? ತಾನೇ ಏನಾಗುವದೋ ಆಗಲಿ. ನಮಗೆ ಬೇರೆ ಗತಿಯಿಲ್ಲ!' ಎಂದು ನುಡಿದು ನನ್ನನ್ನು ಮರಳಿ ಮನೆಗೆ ಕರತಂದನು.

"ನಮ್ಮಣ್ಣನ ಮಾತು ನಿಜವೇ ಇದ್ದಿತು. ಬಡವರ ಗೋಳು ಹಾಗಿ ದ್ದದ್ದು ಸತ್ಯವೇ ಆಯಿತು. ಮುಂದೇನು? ನಾನೂ ನನ್ನ ಚಿಕ್ಕ

ಅತ್ತಿಗೆಯೂ ಮನೆಯಲ್ಲಿ; ಅಣ್ಣನು ಕೂಲಿಗೆ. ಹೀಗಿರುವಾಗ ದಿನಾಲು ಮೂತ್ರಕ್ಕೆ ಹೋಗಬೇಕಾದರೆ ಅತ್ತಿಗೆಯೇ ಕೈ ಹಿಡಿದು ಕರೆದೊಯ್ಯ ಬೇಕಾಗುತ್ತಿದ್ದುದನ್ನು ನೋಡಿ ನನ್ನ ಜೀವಕ್ಕೆ ಬಹಳ ಕೆಡಕೆನಿಸುತ್ತಿ ದ್ದಿತು. ಸಾಧಿಸಿ ಒಂದು ದಿನ ಅವಳೂ ಮನೆಯಲ್ಲಿರಲಿಲ್ಲ. ಆ ಹೊತ್ತು ಕೋಲು ಊರುತ್ತ ನಾನೇ ಮೆಲ್ಲಗೆ ಮೂತ್ರಕ್ಕೆ ಹೊರಟೆನು. ಕೈಯೊಳ ಗಿನ ಕೋಲು ಹೇಗೋ ಜಾರಿತು. ದೊಪ್ಪನೆ ಕಡಕೊಂಡು ನೆಲಕ್ಕೆ ಬಿದ್ದೆನು! ನನಗೆ ಸ್ಮೃತಿಯೇ ಉಳಿಯಲಿಲ್ಲ. ನೆರೆಯವರು ಯಾರೋ ಬಂದು ಎತ್ತಿ ಕುಳ್ಳಿರಿಸಿದರು. ಆದರೆ ಕಾಲಿನ ಹಾದ ಎಲುವು ಹೇಗೋ ತನ್ನ ಮೆಟ್ಟಿಗೆ ತಾನೇ ಸರಿದು ಕುಳಿತು ಬಿಟ್ಟಿತು! ಅಲ್ಲಿಂದೇನು? ನಾಲ್ಕೆಂಟು ದಿನಗಳೊಳಗಾಗಿ ತನ್ನಿಂದ ತಾನೇ ಎಲ್ಲಾ ಗುಣವಾಗಿ ಬಿಟ್ಟಿತು!

"ಹೇಗಿದೆ? ನೋಡಿರಿ. ಮೊದಲು ಕಾಲು ಮುರಿಯುವುದಕ್ಕೆ ಹಾಗೆ ನೆವನವಾಯಿತು; ಹಿಂದಿನಿಂದ ಎಲುವು ಹೊಂದಿಕೆಯಾಗುವುದಕ್ಕೆ ಹೀಗೆ ನಿಮಿತ್ತವಾಯಿತು! 'ಕಾಲಕ್ಕೆ ಸರಿಯಾಗಿ ಎಲ್ಲಾ ತನ್ನಿಂದ ತಾನೇ ಆಗುತ್ತ ಹೋಗುತ್ತಿರುತ್ತದೆ' ಎಂಬ ಮಾತು ಎಳ್ಳಷ್ಟೂ ಸುಳ್ಳಲ್ಲ ನೋಡಿರಿ."

ಮುಂದೆ ತುಸುದಿನಗಳಲ್ಲಿಯೇ ಆ ತೋಟದಲ್ಲಿರುವಾಗ ಇನ್ನೊಂದು ಸಂಗತಿಯು ನಡೆಯಿತು. ಅದೇನೆಂದರೆ- ನೆರೆಹಳ್ಳಿಯಲ್ಲಿ ಒಬ್ಬ ಕೃಷ್ಣನ್ನನಿರುತ್ತಿದ್ದನು. ಅವನಿಗೆ ಹೊತ್ತುಗಳೆಯುವುದಕ್ಕೆಂದು ಒಂದಿಷ್ಟು ಓದುವ ಚಟವು ಹೆಚ್ಚಿಗಿದ್ದಿತು. ನಮ್ಮ ನಾಯಕನಲ್ಲಿ ಪುಸ್ತಕ ಸಂಗ್ರಹವು ದೊಡ್ಡದಿದ್ದುದನ್ನರಿತು ಅವನು ಎರಡು ಮೂರು ವರುಷ ಗಳಿಂದಲೂ ಇವನ ಕಡೆಗೆ ಬಂದು ಹೋಗಿ ಮಾಡುತ್ತಿದ್ದನು. ಆದರೆ ಈಚೆಗೆ ಜ್ಞಾನಭಿಕ್ಷುವು ಸಾಧಕನಾಗಿದ್ದಾನೆಂದು ಗೊತ್ತಾಗಲು ಅವ ನಿಗೆ ಹೆಚ್ಚಿಗೆ ತಿಳಿದುಕೊಳ್ಳುವ ಆಶೆಹುಟ್ಟಿ "ನಾನು ಕೆಲದಿನಗಳ ಮಟ್ಟಿಗೆ ಬಾಯ್ಬಲ್ಲನ್ನೋದಿ ತಿಳಿದುಕೊಳ್ಳುವುದಕ್ಕೆಂದು ನಿಮ್ಮ ಜೊತೆಯಲ್ಲಿ ಇರ ಬಯಸುತ್ತೇನೆ" ಎಂದು ಆತನು ನಮ್ಮ ನಾಯಕನಿಗೆ ಕೇಳಿಕೊಂಡನು. ಅದಕ್ಕವನು 'ಆಗಲಿ' ಎಂದನು. ಈಗ ಆತನದೂ ಈ ತೋಟದಲ್ಲಿಯೇ

ವಸತಿ. ಪರಸ್ಪರ ಸೌಹಾರ್ದವು ದಿನದಿನಕ್ಕೆ ಹೆಚ್ಚುತ್ತಲಿದೆ. ದಿನಾಲು ಹಗಲಿರುಳು ಬಾಯ್ಬಲ್ಲಿನ ಮೇಲೆ ವಿವೇಚನೆ. ಆಗ ಒಂದು ದಿನ ಆತನೆಂದನು– "ಎಷ್ಟೋ ಪಗಾರವನ್ನು ತಿಂದು ನಮ್ಮ ಪಾದ್ರೀ ಸಾಹೇಬರು ಯುರೋಪದಿಂದ ಇಲ್ಲಿಗೆ ಬಂದವರಾಗಿರುತ್ತಾರೆ. ಆದರೆ ಅವರು ಬಾಯ್ಬಲ್ಲಿನ ವಿಷಯದಲ್ಲಿ ಎಷ್ಟು ತಿಳಿಸಿ ಹೇಳಿದರೂ ಅದು ನೀರಸವಾಗಿಯೇ ಇರುತ್ತಿರುತ್ತದೆ. ಇದ್ದ ವಾಕ್ಯಗಳನ್ನೇ ಇನ್ನೊಂದು ವಿಧದ ಶಬ್ದಗಳಲ್ಲಿ ಓದುತ್ತಾರೆಂದೆನಿಸಿ ಬಿಡುತ್ತದೆ. ಆದರೆ ನನಗೆ ಇಲ್ಲಿ ಒಂದು ಬೇರೆ ಬಗೆಯ ಭಾವನೆಯೇ ಬರುತ್ತದೆ!" ಹೀಗೆಂದುದಕ್ಕೆ ಜ್ಞಾನಭಿಕ್ಷುವು– 'ಪಾಪ! ಅವರದೇನು ತಪ್ಪು? ಅಧ್ಯಾತ್ಮ ಪಿಪಾಸುಗಳಲ್ಲದವರ ಮಾತುಕತೆ ಹಾಗಿರುವುದು ಸ್ವಾಭಾವಿಕ.' ಎಂದು ಸುಮ್ಮನಾದನು.

ಮುಂದೆ ನಾಲ್ಕಾರು ದಿನಗಳಲ್ಲಿ ಮತ್ತೊಂದು ದಿನ ಆ ಸ್ನೇಹಿತನು ಹೀಗೆಂದನು— "ನನಗೆ ಬಾಯ್ಬಲ್ಲು ಸರಿಯಾಗಿ ತಿಳಿಯಿತಷ್ಟೇ ಅಲ್ಲ– ನಿಜವಾದ ಅಧ್ಯಾತ್ಮ ಸತ್ಯದ ಬಗ್ಗೆ ನನಗೆ ಅಚಲಶ್ರದ್ಧೆ ಹುಟ್ಟಿತು! ನಿನ್ನಂಥ ಪ್ರಾಮಾಣಿಕಸ್ನೇಹಿತನು ಸತ್ಯವೆಂದು ವಿವರಿಸಿದ ಮಾತು ನನಗೆ ಪರಿಣಾಮ ಮಾಡದೆ ಹೇಗೆ ಬಿಡಬಹುದು?!" ಆಧ್ಯಾತ್ಮಿಕ ಪ್ರಥಮ ಪರಿಚಯವೆಂಬ ಅವಸ್ಥೆಯು ಈತನಿಗೆ ಈ ವಿಧದಿಂದ ಬಂತು.

ಆ ಮೇಲೆ ಅವನು ತನ್ನೂರಿಗೆ ಹೋಗಿ ಕೆಲದಿನಗಳಲ್ಲಿಯೇ ಯಾವುದೋ ಒಂದು ಹಿಂದಿನ ಮಹದಪರಾಧದ ಮೂಲಕ ಕರಿನೀರಿನ ಶಿಕ್ಷೆಗೆ ಗುರಿಯಾದನು! ಕಾಲಾಯ ತಸ್ಮೈ ನಮಃ; ಆತನು ಕಡಲಾಚೆಯಿಂದ ತನ್ನವರಿಗೆ ಬರೆದ ಪತ್ರಗಳನ್ನೋದಿದವರು– "ಅಬ್ಬಾ! ಇವನೊಬ್ಬ ಒಳ್ಳೇ 'ಭೋಂದೂ' ಆಗಿ ಬಿಟ್ಟಿದ್ದಾನೀಗ!!" ಎಂದು ಹೀಯಾಳಿಸುವಂತಾಗಿದೆ. ಯಾಕೆಂದರೆ ಅವರಿಗೆ ಅವನ ಮೊದಲಿನ ಚರಿತ್ರೆಯೊಂದೇ ಗೊತ್ತು. ಇರಲಿ, ಮುಂದೆ ಅವನಿಗಿಂತಹ ವಿಪತ್ತು ಬರುವದಿದ್ದಿತೆಂತಲೇ ಏನೋ, ದೇವನು ಕೆಲದಿನ ಈ ತೋಟಕ್ಕೆ ಬುತ್ತಿಯ ಸಲುವಾಗಿ ಅವನನ್ನು ಕಳಿಸಿದ್ದನೆಂದು ತೋರುತ್ತದೆ! ನಮ್ಮ ನಾಯಕನಿಗೀ ಮಾತು ಬಹಳ ಮನದಲ್ಲಿ ನಟ್ಟಿತು.

ಇಷ್ಟು ಹೊತ್ತಿಗೆ ಜ್ಞಾನಭಿಕ್ಷುವಿನ ಜೀವದೊಡನಾಡಿಯಾದ ಮಂಜುಳನ ಮೇಲೆ ದೊಡ್ಡದೊಂದು ಗುಡ್ಡವು ಕಡಕೊಂಡು ಬಿದ್ದಿತು! ಆತನ ತಂದೆ ದೇಹವಿಟ್ಟನು! ಪಿತೃವಿಯೋಗ, ಸಂಸಾರಭಾರ, ಗೆಳೆಯನ ಆರೈಕೆ ಇಷ್ಟೆಲ್ಲ ಸಂಕಟಗಳ ಕುಲುಮೆಯಲ್ಲಿ ನಡುವೆ ನಿಂತನು! ಆದರೂ ಚಿಕ್ಕಂದಿನಿಂದಲೂ ರೂಢಿಯಾಗಿದ್ದ ಈಶಚಿಂತನವು ಈಗಲೂ ಆತನನ್ನು ಕಾದಿತು! ಏನಾದರೂ ಜೀವವು ಸ್ಥೈರ್ಯವನ್ನು ತಾಳಿತು "ಬಂದದ್ದೆಲ್ಲಾ ಬರಲಿ। ಪುರಂದರ ವಿಠಲನ ದಯವೊಂದಿರಲಿ॥" ಎಂದು ದಾಸರು ಹಾಡಿದ್ದರ ಹುರುಳು ಇದೇ.

ಅದಿರಲಿ, ಆ ತೋಟವನ್ನು ಆ ವರುಷ ಲಾವಣಿಗೆ ತೆಗೆದುಕೊಂಡವರೊಬ್ಬರು ಆ ಊರೊಳಗಿನ ಪ್ರಮುಖರು.ಅವರ ವಯಸ್ಸು ಸುಮಾರು ನಾಲ್ವತ್ತು. ಅವರು ತಮ್ಮ ಹರೆಯದ ಕಾಲದಲ್ಲಿ ಮನಬಲ್ಲಂತೆ ನಡೆದವರಾದರೂ ಮುಂದೆ ಮುಂದೆ ವೇದಾಂತ ಗ್ರಂಥಗಳ ಅಭಿರುಚಿಗೆ ಬಿದ್ದವರು. ಆ ಗ್ರಂಥಗಳನ್ನು ಅವರು ಬಹಳ ಚೆನ್ನಾಗಿ ಪರಿಶೀಲಿಸಿದವರು. ನಡೆವಳಿಯಲ್ಲಿ ನಮ್ಮ ನಾಯಕನು ಅವರಿಗೆ "ಅಣ್ಣಾ ಅವರೆಂ" ದು ಸಂಬೋಧಿಸುತ್ತಿದ್ದನು. ಈಗ ತೋಟದಲ್ಲಿ ಹಗಲು ದಿನಾಲು ಬೆಳಿಗ್ಗೆ ನೀರು ಹಾಯಿಸುವವರು ಅವರೇ. ಸಂಜೆಯತನಕ ಕೆಲಸ ಮುಗಿಸಿ, ಆ ಮೇಲೆ ಎರಡು ಮೂರು ತಾಸು ರಾತ್ರಿಯಾಗುವ ವರೆಗೆ ಜ್ಞಾನಭಿಕ್ಷುವಿನ ಜೊತೆಯಲ್ಲಿ ಮಾತನಾಡಿ ಮನೆಗೆ ಹೊರಡುವವರು. ಉಳಿದ ವೇದಾಂತಿಗಳಂತೆ ಅವರು ಆತನೊಡನೆ ಗೊಡ್ಡು ವಿವಾದ ಮಾಡುತ್ತಿದ್ದಿಲ್ಲ. ತಮಗೆ ಸಂದೇಹವಿದ್ದ ಪ್ರಶ್ನೆಗಳ ನಿವಾರಣೆಯಾಗಬೇಕೆಂಬುದೇ ಅವರ ಒಳಬಯಕೆ. ಅಲ್ಲಿ ನಮ್ಮ ನಾಯಕನು ಸುಮಾರು ಮೂರು ತಿಂಗಳವರೆಗೆ ಇದ್ದ ಕಾಲದಲ್ಲೆಲ್ಲ ದಿನವೂ ಇವರಿಬ್ಬರ ಚರ್ಚೆ ಇದ್ದದ್ದೇ. ಕೊನೆಗೆ ಆ ಸ್ನೇಹಿತರಿಗೆ ಹೊಸಕಾಲದ ಅಧ್ಯಾತ್ಮವಿದ್ಯೆಯ ಪರಿಚಯವು ತುಂಬಾ ಉಂಟಾಯಿತು. ಆಗ ಅವರು ಒಂದು ದಿನ ಹೀಗೆ ಮನಬಿಚ್ಚಿ ಮಾತನಾಡಿದರು. "ಇನ್ನು ಹೇಳಕೇಳುವದೇನು ಉಳಿಯಿತು? ಎಲ್ಲಾ ಮುಗಿದಂತಾಯಿತು!" ಆಯಿತು, ಅದೂ ಮುಗಿಯಿತು. ಇತ್ತ ನಮ್ಮ ನಾಯಕನ ಅಲ್ಲಿಯ ವಾಸ್ತವ್ಯವೂ ಮುಗಿಯಿತು.

ಯಾಕೆಂದರೆ ತಿಂಗಳುಗಟ್ಟಲೆ ಮಳೆಹತ್ತಿದ್ದರಿಂದ ಅವನ ಪ್ರಕೃತಿಯು ಪುನಃ ಮುಂಚಿನಂತೆ ಮರಣೋನ್ಮುಖಸ್ಥಿತಿಗೇ ಬಂದಿತು! ಆದುದರಿಂದ ಅಡವಿಯನ್ನು ಬಿಟ್ಟು ಊರಸೇರಬೇಕಾಯಿತು.

ಇಲ್ಲಿ ಒಂದು ಮಾತೇನೆಂದರೆ— ಮುಂದೆ ಎಂದೂ ತಿರುಗಿ ಜ್ಞಾನ ಭಿಕ್ಷುವಿಗೆ ಆ ತೋಟದಲ್ಲಿರುವ ಪ್ರಸಂಗವೇ ಒದಗಲಿಲ್ಲ. ಆ ಸ್ನೇಹಿತರಿಗೆ ಆತನ ಸಹಜವಾದ ಆವಶ್ಯಕತೆಯಿದ್ದಷ್ಟು ದಿನವೇ ಮಾತ್ರ ಅವನನ್ನು ಅಲ್ಲಿಡುವುದು ಕಾಲಪುರುಷನ ಸಂಕಲ್ಪವಾಗಿರಬಹುದು!

## (೧೦)

ಜ್ಞಾನಭಿಕ್ಷುವಿನ ಹಳ್ಳಿಗೆ ನೆರೆಯಲ್ಲಿರುವ ಒಂದು ಪಟ್ಟಣದಲ್ಲಿದ್ದ ಆತನ ಗೆಳೆಯರಿಗೆ ಅವನ ಮರಣೋನ್ಮುಖ ಸ್ಥಿತಿಯ ಸಮಾಚಾರವು ಗೊತ್ತಾದೊಡನೆ ಅವರು ಬಂದು, ಅವನನ್ನು ಮೋಟರಿನಲ್ಲಿ ಹಾಕಿ ಕೊಂಡು ಒಯ್ದು ಡಾಕ್ಟರರ ಕಡೆಯಿಂದ ಚಿಕಿತ್ಸೆ ಮಾಡಿಸಿದರು. ಬೇನೆಯು ಉಬ್ಬರವು ಕಡಿಮೆಯಾದ ಮೇಲೆ ಇನ್ನೂ ಅಶಕ್ತತೆ ಅತಿಶಯವಾಗಿ ಇದ್ದುದರಿಂದ ವಿಶ್ರಾಂತಿಯ ಸಲುವಾಗಿ ತಮ್ಮದೊಂದು ಅಡವಿಯ ತೋಟದ ಬಂಗಲೆಯಲ್ಲಿ ಒಯ್ದಿಟ್ಟರು. ಆ ಬಂಗಲೆಯ ಮಗ್ಗಲಲ್ಲೇ ಒಂದು ಚಿಕ್ಕ ಹಳ್ಳ, ಸುತ್ತು ಮುತ್ತಲೆಲ್ಲ ತರತರದ ದಟ್ಟಗಿಡಗಳು. ಮುಂದೆ ಲಿಂಬಿಯ ಬನ. ಅಲ್ಲಲ್ಲಿ ಹೂವಿನ ಗಿಡಗಳು. ಬಂಗಲೆಯ ಮೇಲಟ್ಟಕ್ಕೆ ಒಂದೇ ಕೋಣೆ. ಅದಕ್ಕೆ ಎಲ್ಲ ಕಡೆಗೆ ದೊಡ್ಡ ದೊಡ್ಡ ಕಿಡಿಕೆ ಬಾಗಿಲಗಳು. ಒಳಗೆ ಕುಳಿತರೂ ಹೊರಗೆ ಬೈಲಿಗೆ ಇದ್ದಂತೆಯೇ ಅನಿಸುವದು. ಅಂತೂ ನಮ್ಮ ನಾಯಕನಿಗೆ ಯಾವ ಕಾರಣದಿಂದ ಲಾದರೂ ಮತ್ತೆ ಮುಕ್ತಸೃಷ್ಟಿಯ ನಿರ್ಜನವಾಸವು ಲಭಿಸಿತು. ಶಾಂತಿ ನಿಕೇತನದಿಂದ ಬಂದ ಗೆಳೆಯನೊಬ್ಬನು ಯಾವಾಗಲೂ ಹತ್ತರದಲ್ಲಿರು ತ್ತಾನೆ. ಅಲ್ಲದೆ ಚೆಂದ ಚೆಂದದ ಚಿತ್ರಗಳುಳ್ಳ ದೊಡ್ಡ ದೊಡ್ಡ ಪುಸ್ತಕ ಗಳನ್ನು ಅಲ್ಲಿ ಗೆಳೆಯರು ಬೇಕೆಂತಲೇ ನೆರವಿದ್ದಾರೆ. ಯಾವಾಗಲಾದರೂ ಒಮ್ಮೊಮ್ಮೆ ಚಿತ್ರಗಳನ್ನು ನೋಡಿ ನಮ್ಮ ನಾಯಕನು ಹೊತ್ತು

ಗಳೆಯುವನು. ಜೊತೆಗಿರುವ ಗೆಳೆಯನು ಯಾವಾಗಲಾದರೊಮ್ಮೊಮ್ಮೆ ಕಾವ್ಯಗಳನ್ನು ಓದಿ ಕೇಳಿಸುವನು. ಉಳಿದೆಲ್ಲ ಗೆಳೆಯರು ತಮಗೆ ಬಿಡುವಾದಾಗಲೆಲ್ಲ ಒಂದು ಮನಸ್ಸಿಗೆ ರಂಜನವನ್ನುಂಟುಮಾಡುವರು.

ಹೀಗಿರಲು ಒಂದು ದಿನ "ಬುಕ್ ಆಫ್ ನಾಲೇಜ್" ಅಥವಾ "ಚಿಲ್ಡ್ರನ್ಸ್ ಎನ್‌ಸಾಯ್ಕ್ಲೋಪೀಡಿಯಾ" ('ಮಕ್ಕಳ ಜ್ಞಾನ ಕೋಶ') ಎಂಬ ಪುಸ್ತಕದ ಮೂರನೇ ಸಂಪುಟದ ೧೬೬೩ ನೆಯ ಪುಟದಲ್ಲಿರುವ "ಅಡೋರೇಶನ್ ಆಫ್ ದಿ ಹೋಲೀ ಚಾಯ್‌ಲ್ಡ್" (ಶಿಶುಕ್ರಿಸ್ತವಂದನೆ) ಎಂಬ ಸುಂದರವಾದ ಚಿತ್ರವೊಂದು ಕಣ್ಣಿಗೆ ಬಿತ್ತು. ಅದನ್ನು ನೋಡಿದಾಗಲೇ ನಮ್ಮ ನಾಯಕನ ಅಂತರಂಗದ ಸ್ಥಿತಿಯು, ಹಿಂದಕ್ಕೆ ಕಾಶ್ಮೀರದ ಬನಸಿರಿಯ ಚಿತ್ರಗಳನ್ನು ನೋಡಿದಾಗಿನಂತೆ ಆಗಹತ್ತಿತು! ಹೃದಯದಲ್ಲಿ ಅದೊಂದು ಬಗೆಯ ಅನಿರ್ವಚನೀಯವಾದ ಆನಂದ ಮತ್ತು ವೇದನೆ ಇವೆರಡರ ತಳಕುಮಳಕಿನ ತಾಕಲಾಟ!

ಆ ಚಿತ್ರವು ಫ್ಲಾರೆನ್ಸಿನ ಪಿಟಿ ಗ್ಯಾಲರಿಯ ಪ್ರಾಚೀನ ಕೃತಿಯು. ಅದರಲ್ಲಿ ತಳದಿಂದ ತುದಿಯವರೆಗೆ ವ್ಯಾಪಿಸಿದ್ದು ಕ್ರಿಸ್ತನ ತಾಯಿಯ ಭವ್ಯ ಮೂರ್ತಿ. ನತ ಮುಖದಲ್ಲಿ ಗಾಢತಲ್ಲೀನಭಾವ. ನೆಲದವರೆಗೆ ಜೋಲಬಿದ್ದ, ಮೈಮೇಲಿನ **ಮಂದನೀಲಿಯ ಹಸುರು ಕಾಂತಿಯ** ಗೌನು ಇಡೀ ಚಿತ್ರದ ವೈಭವವು. ಅವಳ ತಲೆಯ ಮೇಲೆಲ್ಲಾ ಅದೇ ಬಣ್ಣದ, ಬೆಳಗು ಮುಂಜಾವಿನ ತಿಳಿಮುಗಿಲು. ಹಿಂದೆ ತುಸು ದೂರದಲ್ಲಿ ಎಡಬಲದ ಕಿರಿಗುಡ್ಡಗಳ ನಡುವಿನ ಕೊಳ್ಳವೊಂದು. ಚಿತ್ರದ ಸಿರಿಸೊಬಗುಗಳೆಲ್ಲಾ ಇಷ್ಟರಲ್ಲಿ ಚಿತ್ರದ ಆಚೆ ಈಚೆಯ ಮೂಲೆಯಲ್ಲೆಲ್ಲೋ ಎರಡು ಚಿಕ್ಕ ಶಿಶುಗಳು.

ತನ್ನುದರದಲ್ಲಿ ಲೋಕೋತ್ತರ ಶಿಶುವೊಂದು ಅವತರಿಸಿದುದಕ್ಕೆ ಆ ಕುಮಾರಿಕೆಯ ಅಂತರಂಗದಲ್ಲಿ ಅನಿರ್ವಚನೀಯ ಧನ್ಯತೆಯೊಂದು ಕಡೆಗೆ! ಎಷ್ಟಾದರೂ 'ತನ್ನ ಮಗು' ವೆಂಬ ವಾತ್ಸಲ್ಯವೊಂದು ಕಡೆಗೆ!! ಹೀಗೆ ಉಭಯ ಭಾವಾವೇಗಗಳ ಹಿಲ್ಲೋಲದಲ್ಲಿ ತುಗಾಡುತ್ತ ನಿಂತಿದ್ದಾಳೆ! ಒಂದು ಕಡೆಗೆ ಆತ್ಮಭಾವದ ಹರ್ಷವಿಸ್ಮಯ! ಮತ್ತೊಂದು

ಕಡೆಗೆ ಜೀವಭಾವದ ಅಕ್ಕರತೆ!! ಈ ಮರ್ತ್ಯ-ಅಮರ್ತ್ಯಗಳ ಮಧುರ ಮಿಲಸವು ಆ ಚಿತ್ರದ ಜೀವ ಕಳೆಯು.

ಚಿತ್ರದ ಮುಕ್ಕಾಲು ಮೂರು ಭಾಗದ ಪ್ರದೇಶವನ್ನೆಲ್ಲ ವ್ಯಾಪಿಸಿರುವ ಅದೊಂದು ಬಗೆಯ ಉದ್ದೀಪನಕರವಾದ ಬಣ್ಣವು ನಮ್ಮ ನಾಯಕನ ಅರಿಯಬಾರದ ಒಳ ಅನಿಸಿಕೆಯನ್ನು ಬುದ್ಧಿಯ ಬಾಗಿಲಿಗೆ ಕರೆತರುವ ದೂತಿಯಾಯಿತೆಂದು ! ' ಅಂತರಂಗದ ಆತ್ಮಿಕ ಧನ್ಯತೆಯನ್ನು ಚಿತ್ರಿಸುವ ಬಣ್ಣವಿದು ! ' ಎಂದನು. ಜೀವನದಲ್ಲಿ ಅಂಥ ಆತ್ಮತೃಪ್ತಿ ಉದಿಸಿದಾಗಿನಿಂದಲೇ ತನ್ನ ಅಂತರಂಗದಲ್ಲಿ ಆ ಬಣ್ಣವು ಇಷ್ಟೊಂದು ಮೋಡಿಯನ್ನು ಹೂಡಿದೆಯೆಂಬುದನ್ನು ನೆನಿಸಿಕೊಂಡನು. ಕೆಲದಿನಗಳಿಂದ ಆಗಾಗ ಗರಿಜೋಲುವ ಗಂಡು ನವಿಲುಗಳನ್ನು ಕಂಡಾಗಲೆಲ್ಲಾ ಹೀಗೇ ಆಗುತ್ತಿರುವುದರ ಕಾರಣವೂ ಅದೇ ಎಂದುಕೊಂಡನು. ಬೆಳಗಿನ ಜಾವದಲ್ಲಿ ದಟ್ಟೆಲೆಯ ಜುಂಪಲು ಮಾಮರಗಳನ್ನು ಕಂಡಾಗಲೂ ಹೀಗೆಯೇ ಯಾಕಾಗುತ್ತಿದ್ದಿತೆಂಬುದರ ಕಾರಣವೂ ಇಂದಿಗೆ ಹೊಳೆಯಿತೆಂದನು. " ಇದೆಲ್ಲವೂ ಆ ಅಮರಕಾಂತಿಯ ಇಂದ್ರಜಾಲವು ! " ಎಂಬುದಿಂದು ಆತನ ಬುದ್ಧಿಗೆ ಗೋಚರಿಸಿತು.

ಅದೇ ಪುಸ್ತಕದಲ್ಲಿ ಆ ಚಿತ್ರದ ಎಡಬಲದ ಪುಟಗಳಲ್ಲಿ ಅದೇ ಸನ್ನಿವೇಶದ ಇನ್ನೂ ಹತ್ತೆಂಟು ಚಿತ್ರಗಳಿವೆ. ಅವೆಲ್ಲವುಗಳಲ್ಲಿಯೂ ಕ್ರಿಸ್ತಮಾತೆಯ ಮೈಮೇಲೆ ನೀಲಿ ಇಲ್ಲವೆ ಹಸುರು ಬಣ್ಣದ ಗೌನು; ಅದರ ಒಳಗಡೆಗೆ ಕೆಂಪು ಇಲ್ಲವೆ ಗುಲಾಬಿಯ ನಿಲುವಂಗಿ. ಇದೊಂದು ಕುಮಾರಿಕೆಯ ಚಿತ್ರದ ' ಕಲಾಪರಿಪಾಠ ' ವೇ ಆಗಿರಬೇಕೆಂಬುದು ಅವರ ಮೇಲಿಂದ ಸ್ಪಷ್ಟವಾಗುವದು. ನಮ್ಮಲ್ಲಿ ಶ್ರೀಕೃಷ್ಣನ ಚಿತ್ರದಲ್ಲಿ ಮೈಗೆ ಶ್ಯಾಮಲವರ್ಣವೂ ವಸ್ತ್ರಕ್ಕೆ ಪೀತವರ್ಣವೂ ಸಾಂಪ್ರದಾಯಿಕವಾಗಿ ಬಿಟ್ಟಂತೆ ಅವರ ನಾಡಿನಲ್ಲಿ ಅದು ಆಗಿರಬಹುದು. ಈಗ ನಮ್ಮವರು ಕೃಷ್ಣನ ಚಿತ್ರದಲ್ಲಿ ಮೈಗೆ ಎಂಥಾದ್ದೇ ಆಗಲೊಲ್ಲದೇಕೆ-ಒಂದು ನೀಲಿಯನ್ನು ಬಳಿಯುತ್ತಾರೆ. ಅದರಂತೆಯೇ ಅವರಲ್ಲಿಯೂ ಕ್ರಿಸ್ತಮಾತೆಯ ಮೇಲು ಹೊದಿಕೆಗೆ ಯಾವದಾದರೊಂದು ಜಾತಿಯ ನೀಲೀಬಣ್ಣವನ್ನು ಸವರುತ್ತಾರೆ. ಆದರೆ ಹೀಗೆ ಸಿಕ್ಕಂತೆ ಬೇಕುಬೇಕಾದ

ನೀಲಿಯನ್ನು ಬಳಿಯುವುದು ಅಂಥ ಪರಂಪರೆಯ ಫಲವೆಂದು ನನಗೆ ತೋರುತ್ತದೆ; ಹುರುಳರಿಯದವರ ಹಾಡೆಂದು ನನಗೆನಿಸುತ್ತದೆ. ಕೃಷ್ಣನು ದೇವಾವತಾರ; ಕ್ರಿಸ್ತಮಾತೆ ಭಕ್ತಳು. ಅವರಿಬ್ಬರ ಅಂತರಂಗವನ್ನು ಒಂದೇ ಬಣ್ಣವು ದ್ಯೋತಿಸಲಾರದು. ಕೃಷ್ಣನಿಗೆ ಅಪರಂಪಾರದ ಮುಗಿಲಿನ ನೀಲಿಯು ತಕ್ಕ ದ್ಯೋತಕ. ಆದರೆ ಕುಮಾರಿಕೆಯ ಧನ್ಯತೆಗೆ ಅದು ದ್ಯೋತಕವಾಗಲಾರದು. ಎಳೆಗರುಕೆಯ ದಳಗಳ ಬಣ್ಣವು ಅದಕ್ಕೆ ತಕ್ಕ ಸಂಕೇತ. ಆದರೆ ಅದು ಹಸುರೂ ಅಲ್ಲ; ನೀಲಿಯೂ ಅಲ್ಲ. ಎರಡೂ ಕೂಡಿದ್ದು ಅದು. ಅದಕ್ಕೆ ನಾನು 'ಮಂದನೀಲಿಯ ಹಸುರು ಕಾಂತಿ' ಯೆಂದು ಹೆಸರು ಕೊಡುತ್ತೇನೆ. ಇಂಗ್ಲಿಷಿನಲ್ಲಿ 'Viridian green' (ವ್ಹಿರಿಡಿಯನ್ ಗ್ರೀನ್) ಎಂದು ಯಾವುದಕ್ಕೆ ಅನ್ನುವರೋ ಅದು ನಮ್ಮ ಬಣ್ಣಕ್ಕೆ ಬಹಳ ಮಟ್ಟಿಗೆ ಸಮೀಪವಾಗಿದೆ. ನೀಲಿಯಲ್ಲಿ ಅರ್ಧ ಪ್ರಮಾಣದ ತಿಳಿ ಹಳದಿಯು ಕೂಡಿದರೆ ಈ ಬಣ್ಣವು ಹುಟ್ಟುತ್ತದೆಯೆಂದು ತೋರುತ್ತದೆ. ನವಿಲುಗರಿಗಳಲ್ಲಿ ಕಣ್ಣಿಲ್ಲದ ಕೆಲವು ಗರಿಗಳಿರುತ್ತವೆ. ಅವುಗಳ ಬಣ್ಣವೇ ನಮ್ಮ ಹೊಸ ಕಾಂತಿಯು.

ಮಹಾರಾಷ್ಟ್ರದ ಪ್ರಾಚೀನ ಸಾಧುಸಂತರ ಮನೋಲಯ ಸಾಧನದಲ್ಲಿ ನಾಲ್ಕು ಮೆಟ್ಟಲುಗಳಿಗೆ ನಾಲ್ಕುವಿಧದ ಬೇರೆ ಬೇರೆ ಪ್ರಕಾಶಗಳ ದರ್ಶನವು ಒಳಗಂಣಿಗಾಗುವುದಾಗಿ ಹೇಳಿದೆ. ಮನವು ತೂರ್ಯದಶೆಗೆ ಹೋದಾಗ—

**"ಮಯೂರ ಪಿಚ್ಛೀ ನೀಲಮಣೀ।**
**ಐಸೇ ದಿಸೇ ನಿಜನಯನೀ।**
**ಸ್ವರೂಪ ಏಕ॥"**

'ನವಿಲುಗರಿಗಳ ನೀಲಮಣಿಯಂಥ ಸ್ವರೂಪವೊಂದು ಒಳಗಣ್ಣಿಗೆ ಕಾಣಿಸುವದೆಂ' ದು ಏಕನಾಥಸ್ವಾಮಿಗಳು ಹೇಳಿದ್ದಾರೆ. ಅಲ್ಲದೆ—

**"ಪ್ರಥಮ ಶೂನ್ಯ ರಕ್ತವರ್ಣ··· । ಊರ್ಧ್ವ ಶೂನ್ಯ ಶ್ವೇತವರ್ಣ॥**
**ಮಧ್ಯೇಶೂನ್ಯ ಶ್ಯಾಮವರ್ಣ। ಮಹಾಶೂನ್ಯ ನೀಲವರ್ಣ॥**

ಎಂದು ಸಂತ ಜನಾಬಾಯಿಯು ಬಣ್ಣಿಸಿದ "ಮಹಾಶೂನ್ಯ

ನೀಲವರ್ಣ " ವೆಂಬುದೇ ನಮ್ಮ " ಮಯೂರ ಪಿಚ್ಛೇ ನೀಲಮಣಿ " ಎಂಬುದಾಗಿದೆ.

ಇಂಥ ದೂರ್ವಾದಲ ವರ್ಣದ ಪ್ರಭಾವವು ಪಾಶ್ಚಾತ್ಯ ಪ್ರಾಚೀನ ಚಿತ್ರಕಾರನಿಗೆ ಘನವಾಗಿ ಅನುಭವಕ್ಕೆ ಒಂದಿರಬೇಕೆಂತಲೇ ಆತನ ಚಿತ್ರವು ಆ ಬಣ್ಣದ ವೈಭವ ರಾಶಿಯಾಗಿದೆ. ಆದರ ಬದಿಯಲ್ಲೇ ಇರುವ ಉಳಿದ ಹತ್ತಾರು ಚಿತ್ರಗಳಾವವುಗಳಲ್ಲಿಯೂ ಆದರ ವೈಖರಿಯಿಲ್ಲ. ಈಗ ನಾವು ಅವನೀಂದ್ರರ " ಹ್ಯುವೆನ್‌ತ್ಸಾಂಗ್ " ಎಂಬ ಚಿತ್ರದಲ್ಲಿ ಇದೇ ( ಸಿಂಬಾಲಿಜಮ್ ) ಕಲಾಸಂಕೇತವಿದ್ದುದನ್ನು ತುಂಬಾ ಮನಗಾಣ ಬಹುದು. ಒಟ್ಟಿಗೇನು ? ಆಧ್ಯಾತ್ಮಿಕ ಧನ್ಯತೆಯು ಹರ್ಷ ವಿಸ್ಮಯ ಗಳಿಗೂ ನಮ್ಮ ನವನೀಲವರ್ಣಕ್ಕೂ ನಿಕಟ ಸಂಬಂಧವಿದೆಯೆಂದಂತಾ ಯಿತಲ್ಲವೆ ?

ಆದಕ್ಕೆಂತಲೇ ನಮ್ಮ ನಾಯಕನ ಅಂತರಾಳದಲ್ಲಿ ಆ ಬಣ್ಣದ ಅನುಪಮ ಲೀಲಾಲಾಸ್ಯಕ್ಕೆ ಅಷ್ಟೊಂದು ಅಗಾಧಸ್ಥಾನವು ಸಿಕ್ಕದ್ದು !!! ಇಂದು ಅವನು ತನ್ನ ಅಂತರಂಗದ ಆಳದಲ್ಲಿ ಬಹು ದಿನಗಳಿಂದ ನಡೆದ ಒಂದು ಅತರ್ಕಿತ ವಿಷಯವನ್ನು ಕಂಡು ಹಿರಿ ಹಿರಿ ಹಿಗ್ಗಿದನು

## (೧೧)

ಜ್ಞಾನಭಿಕ್ಷುವಿನ ಪ್ರಕೃತಿಯೊಂದಿಷ್ಟು ಸ್ವಾಭಾವಿಕ ಸ್ಥಿತಿಗೆ ಬಂತು. ಆದರೆ ನಡುವೆ ಬಂದ ಅಡ್ಡಬೇನೆ ಕೆಲವುಟ್ಟಿಗೆ ಸರಿದುಹೋಯಿ ತಾದರೂ ರೋಮರೋಮದಲ್ಲೆಲ್ಲ ವ್ಯಾಪಿಸಿದ ಕ್ಷಯ ಸದೃಶ ವ್ಯಾಧಿಯ ಅಶಕ್ತತೆಯು ಇನ್ನೂ ಇದ್ದುದು ಇದ್ದೇ ಇದೆ. ಆದುದರಿಂದ ಆತನ ಗೆಳೆಯರೆಲ್ಲ ಕೂಡಿ ಆಲೋಚಿಸಿದ್ದೇನೆಂದರೆ– " ಸೇವಾಸದನ ಆಶ್ರಮ ದಲ್ಲಿ ವೈದ್ಯಕೀಯ ವಿಭಾಗವೂ ಬಂದಿದೆಯಷ್ಟೆ ? ಆ ಆಶ್ರಮದೊಡೆಯರು ಸರ್ವ ವಿದ್ಯಾಪಾರಂಗತರು. ಅವರ ಚಿಕಿತ್ಸಾಲಯದಲ್ಲಿ ಈತನನ್ನು ಒಯ್ದು ಇಟ್ಟರೆ ಒಳ್ಳೆಯದು. " ಹೀಗೆಂದು ನಿರ್ಧರಿಸಿಯೇ ಬಿಟ್ಟರು. ನಮ್ಮ ನಾಯಕನ ಆ ಗೆಳೆಯರಿಗೂ ಆ ಆಶ್ರಮದ ಒಡೆಯರಿಗೂ ಬಹಳ

ಹಿತಸಂಬಂಧವೂ ಇತ್ತು. ಆಯಿತು. ಅಲ್ಲಿಗೆ ಪ್ರಯಾಣವು ಬೆಳೆದೇ ಬಿಟ್ಟಿತು. ಅಲ್ಲಿ ಈತನನ್ನು ತಮ್ಮ ಆಶ್ರಮ ಹಿತೈಷಿಗಳ ಗೆಳೆಯನೆಂಬ ಕಾರಣದಿಂದ ಸಹಾನುಭೂತಿಯಿಂದ ಸ್ವೀಕರಿಸಿದರು. ಅಲ್ಲದೆ ಈತನು ಸಾಹಿತಿಯೆಂಬಂಶವೂ ಅಲ್ಲಿಯವರಿಗೆ ಮೊದಲೇ ಗೊತ್ತಿದ್ದಿತು. ನಮ್ಮ ನಾಯಕನ ಗೆಳೆಯರಿಗೆ ಅವರು ಹೀಗೆ ಹೇಳಿದರು– "ನಿಮ್ಮ ಗೆಳೆಯ ನನ್ನು ಇಲ್ಲಿಟ್ಟು ನಿಶ್ಚಿಂತೆಯಿಂದ ಹೋಗಿರಿ. ನಾವು ಆತನನ್ನು ನಮ್ಮವ ನೆಂದು ತಿಳಿದು ಉಪಚರಿಸುವೆವು. ಆತನ ಜೊತೆಗಾಗಲಿ ನೀವು ಯಾರೂ ಇರಬೇಕಾದ ಅಗತ್ಯವಿಲ್ಲ. ನಾವು ಎಲ್ಲಾ ನೋಡಿಕೊಳ್ಳುತ್ತೇವೆ."

ಅಲ್ಲಿಯ ಆಶ್ರಮದೊಡೆಯರು ನಿಜವಾಗಿಯೂ ಬಹಳ ದೊಡ್ಡ ಮನಸ್ಸಿನವರು. ಬಹು ವಿದ್ಯೆಗಳ ಪರಿಚಿತಿಯುಳ್ಳವರೆಂಬುದಂತೂ ನಿಜವೇ. ಅಧ್ಯಾತ್ಮ ಸಾಧನೆಯಲ್ಲಿಯೂ ಅಷ್ಟೇ ದುಡಿದವರು. ನಿಜವಾಗಿಯೂ ಅವರ ಒಳ ಆತ್ಮವು ಸತ್ಯ ಸನ್ಯಾಸದ ಸವಿಯನ್ನು ಉಂಡದ್ದು ಮತ್ತು ಪ್ರಾಣಿಮಾತ್ರಗಳ ಮೇಲೆಲ್ಲಾ ಒಳಗೊಳಗೆ ಒಂದು ಅಯಾಚಿತ ಕಾರು ಣ್ಯವು ಘನೀಭೂತವಾಗಿ ಬಿಟ್ಟುದೂ ಅಷ್ಟೇ ಸತ್ಯ. ಒಳಗೆ ಆ ಜೀವ ಇಂಥದು ! ಹೊರಗೆ ದಂಡಧಾರಿಯ ದರ್ಪವನ್ನು ಸೂಸುವ ಆಜಾನು ಬಾಹು ವ್ಯಕ್ತಿತ್ವ ! ಇಷ್ಟೆಲ್ಲಾ ತುಂಬಾ ಸತ್ಯವೇ ಸರಿ. ಆದರೆ–! ಸರ್ವತ್ರ ಸಮ್ರಾಟವಾಗಿರುವ ಕೆಲವೊಂದು ಮಹತ್ತರವಾದ ನ್ಯೂನತೆಗಳೂ ಅವ ರಲ್ಲಿ ಇಲ್ಲದೆಯಿಲ್ಲ. ಅವುಗಳಲ್ಲಿ ಕೆಲವು:– ಹಿಂದೊಮ್ಮೆ ಹೇಳಿದ್ದರ ಮರ ವಾಗಿ ಮುಂದೆಂದೋ ಅದೇ ವಿಷಯದಲ್ಲಿ ವಿಪರೀತವಾಗಿ ಪ್ರತಿಪಾದಿ ಸುವ ದೋಷವು ಬಹಳ ಮಾತಾಡುವವರಲ್ಲೆಲ್ಲಾ ದೃಢಮೂಲವಾಗಿ ಬಿಟ್ಟಿರುವಂತಹದೇ ಸರಿಯಷ್ಟೇ; ಅದಿರಲಿ. ತಮ್ಮ ಬುದ್ಧಿ ಬಹಳ ಅಗಾಧ ವಾಗಿ ಬೆಳೆದದ್ದೆಂದೂ, ಬೇಕಾದಷ್ಟು ದಿನ ಉಪನ್ಯಾಸ ಮಾಡಹಚ್ಚಿದರೆ ಒಮ್ಮೆ ಬಂದ ವಿಷಯ ಮತ್ತೊಮ್ಮೆ ಬಾರದೆಂದೂ ಸಭೆಗಳಲ್ಲಿ ಘಂಟಾ ಘೋಷವಾಗಿ ಇವರು ಸಾರುತ್ತಿದ್ದರೂ, ಇವರ ಬಳಿಯಲ್ಲಿ ಕೆಲವೇ ದಿನ ಇದ್ದರೆ ಇದರ ವಿಪರೀತ ಅನುಭವವು ಬರಹತ್ತುವದು. ಹಿಂದಿನ ವಾರದಲ್ಲಿ ಬಂದ ಮಾತುಗಳೇ ಮುಂದಿನ ವಾರದಲ್ಲಿ ಚಕ್ರನೇಮಿಕ್ರಮದಿಂದ ಮತ್ತೆ ಮತ್ತೆ ರಾಶಿರಾಶಿಯಾಗಿ ಬರುವವು. ದೇಶದಲ್ಲಿ ತಮ್ಮೊಬ್ಬರ ಹೊರತು

ಇನ್ನಾರೂ ಸ್ವತಂತ್ರ ವಿಚಾರದ ದಾರಿಗೇ ಬಿದ್ದಿಲ್ಲವೆಂಬ ಬಲವಾದ ಗ್ರಹಿಕೆಯೊಂದು ಇವರ ಮಹತ್ತರವಾದ ಪ್ರಮಾದವು. ಹೀಗಾಗಿ ಯಾರು ಬೇಕಾದವರಾದರೂ ಸರಿ, 'ಅವರೆಲ್ಲರೂ ಗತಾನುಗತಿಕ ಬುದ್ಧಿಯ ತಿಪ್ಪೆಯಲ್ಲಿ ಹೊರಳಾಡುವ ಕತ್ತೆಗಳೇ' ಎಂಬುದಿವರ ಗಟ್ಟಿ ಅಭಿಪ್ರಾಯ-ತಮಗೆ ಪ್ರತಿಯಾಗಿ ಪ್ರಶ್ನೆ ಮಾಡಿದವರ ವಿಷಯದಲ್ಲಿ ಥಟ್ಟನೆ ದುರಭಿಪ್ರಾಯವನ್ನು ಮಾಡಿಕೊಳ್ಳುವ ಮುಟ್ಟಲುಮುರಕಿಯಂಥ ನಾಜೂಕುತನವು ಇವರಲ್ಲಿ ಅಪರಿಮಿತ. 'ಇವರು ತೋರಿಸಿದ್ದೇ ಪೂರ್ವದಿಕ್ಕೆ'ಂದು ದೀನತನದ ನಟನೆ ಮಾಡುವವರ ವಿಷಯದಲ್ಲಿ ಇವರ ಸದಭಿಪ್ರಾಯದ ಸುರಿಮಳೆ. ಬಾಯಿಯಿಂದ ಲೋಕ ಸುಧಾರಣೆಯ ತತ್ತ್ವ ಹೇಳುವುದು ಬಹಳ, ಆದರೆ ಕೈಯಿಂದ ಕಾರ್ಯ ಕೇಳಬಾರದು. ವೈಯಕ್ತಿಕವಾಗಿ ತಮ್ಮ ಮಟ್ಟಿಗೆ ತಾವು ಅವುಗಳನ್ನೆಲ್ಲ ಚಾಚೂ ಬಿಡದೆ ಬಳಿಕೆಯಲ್ಲಿ ತರುತ್ತಿರುವುದು ಮಾತ್ರ ಬಹಳ ಮಟ್ಟಿಗೆ ನಿಜ. ಅಲ್ಲದೆ ತಾವು ಒಬ್ಬ ದೊಡ್ಡ ಗುರುವೆಂಬ ವಿಶ್ವಾಸ. 'ಅಂಥವನು ನನ್ನ ಪಾದಪೂಜೆ ಮಾಡಿದನು—, ಇಂಥವನು ನನ್ನ ಪಾದಪೂಜೆ ಮಾಡಿದನು ಎಂದು ಮುಂತಾದ ಸಮಾಚಾರಗಳನ್ನು ದಿನವೂ ಅಲ್ಲಿ ಅವರ ಬಾಯಿಯಿಂದ ಕೇಳಬಹುದು. ಇದಲ್ಲದೆ ತಮಗೆ ಅಲ್ಪಸ್ವಲ್ಪ ಅವಗತವಿದ್ದ ವಿಷಯಗಳ ಸಂಬಂಧದಲ್ಲಿಯೂ ತಮ್ಮ ಅಭಿಪ್ರಾಯೇ ಸರ್ವವಾದಿ ಸಮ್ಮತವೆಂಬ ಆಗ್ರಹ. ಇಂಥವಿನ್ನೂ ಎಷ್ಟೆಷ್ಟೋ ಚಿಲ್ಲರೆ ದೋಷಗಳು.

ಇವುಗಳನ್ನೆಲ್ಲ ಒಂದಿಷ್ಟು ನಿರ್ವಿಕಾರಬುದ್ಧಿಯಿಂದ ವಿಮರ್ಶಿಸುವಾ. 'ತನ್ನ ಬುದ್ಧಿವಿಕಾಸದ ಬಗ್ಗೆ ತನಗೆ ಅತಿಶಯ ವಿಶ್ವಾಸ.' ಇದು 'ಪೂರ್ವರಂಗ'ದ ಕೊನೆಯ ಮೆಟ್ಟಲಿಗೆ ಮುಟ್ಟಿದವರ ಸಹಜಸಂಪತ್ತು! ಅಲ್ಲಿಗೆ ಆತ್ಮವು ಸರ್ವವ್ಯಾಪಿಯಾದ ದಿವ್ಯಸತ್ಯದ ಅಗಾಧ ಸ್ಪರ್ಶದಿಂದ ದೀಪಿತವಾಗುವದು. ಆಗ ಬುದ್ಧಿಯಲ್ಲಿ ಅಪರಿಮಿತ ಶಕ್ತಿಯು ಸಂಚರಿಸುವದು. ರತ್ನಾಕರಸಿದ್ಧನ ಭರತೇಶ ವೈಭವದಲ್ಲಿಯೂ ಕುಮಾರವ್ಯಾಸನ ಕನ್ನಡ ಭಾರತದಲ್ಲಿಯೂ ಆಯಾ ಕವಿಗಳ ಸ್ವೋಕ್ತಿಯಿಂದ ಈ ಮಾತನ್ನು ಸಮರ್ಥಿಸಬಹುದು:-

ರತ್ನಾಕರನು ಮಹಾ ಅನುಭಾವಿಯೆಂಬುದನ್ನಂತೂ ಅವನ

ಕಾವ್ಯದಲ್ಲಿ ಒಂದೊಂದು ಒಳಿವೊಳಿಗೂ ನಾವು ಕಾಣಬಲ್ಲೆವು.ಅದರಲ್ಲಂತೂ ಸಂದೇಹವೇ ಇಲ್ಲ. "ಧ್ಯಾನಕ್ಕೆ ಬೇಸರಾದಾಗ ನನ್ನಾತ್ಮಲೀಲಾನುವೃದ್ಧಿಗೆ.... (ಹಂಸನಾಥನ ಶಕ್ತಿಯೊಳು).... ಪೇಳ್ದೆ"ನೆಂದು ತನ್ನ ಕಾವ್ಯದ ವಿಷಯದಲ್ಲಿ ಹೇಳುವಾಗ ತನ್ನದು ಧ್ಯಾನಾಭಿಮುಖ ಜೀವನವೆಂದು ತಾನೇ ಸ್ಪಷ್ಟಗೊಳಿಸಿದ್ದಾನೆ. ಇದೂ ಅಲ್ಲದೆ ಕವಿವಾಕ್ಯಸಂಧಿಯಲ್ಲಿ ತನಗೆ ಪರ್ಯಾಯವಾಗುವಂತೆಯೇ ಅಲ್ಲೊಬ್ಬ ಕಥೆಯೊಳಗಿನ ಕವಿಯನ್ನು ನಿರ್ಮಿಸಿ ಆತನ ಬಾಯಿಯಿಂದ 'ಯೋಗಿಭೋಗಿಗಳೆದೆ ಜುಮ್ಮು ಜುಮ್ಮೆನುವಂತೆ' ಕೃತಿ ಹೇಳಿಸಿ ರಸಿಕಶ್ರೋತೃವಿನ ಕಡೆಯಿಂದ ಅವನನ್ನು ಹೀಗೆ ಹೊಗಳಿಸಿದ್ದಾನೆ:-

"ಈತಗಾತ್ಮಧ್ಯಾನವುಂಟಲ್ಲದಿದ್ದರೀ
ಚಾತುರ್ಯವಚನವೆಂತಹುದು ?
.... .... ... ....
ಅತ್ಯಾಸನ್ನಭವ್ಯರಿಗಲ್ಲದಾತ್ಮ ಸಂ-
ಗತ್ಯವೆಲ್ಲರಿಗೇಕೆ ಬಹುದು ?"

ಎಂಬುದಿಷ್ಟಕ್ಕೇ ಸಾಲದೆ "ಈ ಕವಿಯಾಸನ್ನ ಭವ್ಯನಹುದು ಸಿದ್ಧ। ಲೋಕ ಪಥಿಕನಹುದೆಂದು" ತೀರ ಬಚ್ಚಿಯೂ ಹೇಳಿಸಿಬಿಟ್ಟಿದ್ದಾನೆ. ಇಂಥ ಆಸನ್ನಭವ್ಯನೂ ಸಿದ್ಧಲೋಕಪಥಿಕನೂ ಆದ ರತ್ನಾಕರನು ತನ್ನ ಕಾವ್ಯವನ್ನು ಹಳಿಯುವ ಕೆಲ ಜನ ವಿರೋಧಿಪಂಡಿತರ ವಿಷಯದಲ್ಲಿ ಹೇಳುವಾಗ ತನ್ನ ಬುದ್ಧಿಯ ಅಮೋಘ ವೈಭವವನ್ನು ತನ್ನದು ತಾನೇ ಹೀಗೆ ಹೊಗಳಿಕೊಂಡಿರುವನು:-

**'ಅವರೊಂದು ತಿಂಗಳೋದಿದ ಶಾಸ್ತ್ರ ನನಗೊಂದು**
**ದಿವಸದೊಳವಗತಿಹುದು !!!'**

ಇದು ಅಹಂಕಾರವಲ್ಲ. ತನ್ನದು ತನಗೇ ಇಷ್ಟು ಒತ್ತರಿಸಿ ಹೊಳೆಯುವ ಬುದ್ಧಿ ವೈಭವದ ಅಗಮ್ಯ ವಿಕಸನದ ಫಲವಿದು. ಹಾಗಾದರೆ ಕುಮಾರವ್ಯಾಸನು ತನ್ನ ಕಾವ್ಯಾರಂಭದಲ್ಲಿ ಮಾಡಿದ ಹೂಣಿಕೆಯ ಸರಿಯಾದ ಕಾರಣವು ನಮಗೀಗ ಅದೇ ಎಂದು ಹೊಳೆಯದಿರದು. ಆ ಬೆರಗು ಬಡಿಸುವ ಮಹಾ ಪ್ರತಿಜ್ಞೆಯನ್ನಿಷ್ಟು ಕೇಳಿರಿಲ್ಲಿ-

"ಹಲಗೆ ಬಳಪವ ಪಿಡಿಯದೊಂದ।
ಗ್ಗಳಿಕೆ; ಪದವಿಟ್ಟಳಿಪದೊಂದ-।
ಗ್ಗಳಿಕೆ, ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೇ॥
ಬಳಸಿ ಬರೆಯಲು ಕಂಠ ಪತ್ರದ।
ಉಲುಹು ಕೆಡದಗ್ಗಳಿಕೆಯೆಂಬೀ।
ಒಲುಹು ಗದುಗಿನ ವೀರನಾರಾಯಣನ ಕಿಂಕರಗೇ"॥

ನಮ್ಮ ನಾಯಕನ ಅನುಭವಕ್ಕೂ ಈ ಮಾತು ಹೊಸದೇನೂ ಅಲ್ಲ. ಅಂದಿನ ಸೌಂದರ್ಯಶಾಸ್ತ್ರದ ಮೂಲತತ್ತ್ವಗಳ ಸಹಜ ಸ್ಫುರಣವನ್ನು ಕುರಿತು ಆತನಿಗಾದ ಅಗಾಧವನ್ನು ನಾವು ಹಿಂದೆಯೇ ಕಂಡಿರುವೆವಲ್ಲವೆ. ಆ ಆಶ್ರಮದೊಡೆಯರ ಆತ್ಮವೂ ಇಂಥ ಬೆಳಕನ್ನು ಒಮ್ಮೆ ಕಂಡುಂಡದ್ದೆಂತಲೇ ಅವರಲ್ಲಿ ಅಂಥದೊಂದು ಉದ್ದಾಮ ಬಿಂಕ.

ಇನ್ನು– 'ಜನದ ವಿಷಯದಲ್ಲಿ ತಟ್ಟನೆ ತಪ್ಪು ತಿಳಿದುಕೊಳ್ಳುವುದು' ಇದಕ್ಕೊಂದು ಮಹತ್ತರವಾದ ಕಾರಣವಿಲ್ಲದೆಯಿಲ್ಲ. ಮನುಷ್ಯನಿಗೆ ಯಾವದೊಂದು ದೃಷ್ಟಿ ಬರುವುದಕ್ಕೆ ಅವನ ಜನ್ಮದಲ್ಲಿ ವಿಪುಲವಾಗಿ ಬರುವ ಪ್ರಸಂಗಗಳೇ ಕಾರಣವಾಗುತ್ತವೆ. ಆ ಆಶ್ರಮದೊಡೆಯರ ಜೀವನದಲ್ಲಿ ಅವರನ್ನು ಠಕ್ಕಿಸಲಾರದ ಪಾಪಿಗಳೇ ಕಡಿಮೆ! ಪ್ರಾಣದ ಮೆಯುಳ್ಳವರನ್ನು ಮೋಸಗೊಳಿಸುವುದಕ್ಕೆ ಸರ್ವರಿಗೂ ಸುಲಭ. ಬಲಿ ಬೀಳುವದೆಂದರೆ ಬಿಡುವ ಅಣ್ಣಗಳಾರು! ಎಲ್ಲರೂ ತಮ್ಮದಿಷ್ಟು ಕೈ ತೋರಿಸುವವರೇ. ಇಂಥವರ ಕೈಯಲ್ಲಿ ಪೇಚಾಡಿ ಹೋಗಿರುವ ಆ ಶ್ರೀಮಾನರು ಈಗ ಹಸಿಹಾಲಿಗೂ ಕೂಡ ಬಿಸಿ ಹಾಲೆಂದು ಬುದ್ಧಿಗವ ಕಾಶವಿಲ್ಲದೆ ಬೆಚ್ಚಿ ಬೀಳುವರು. ಇನ್ನೊಂದು ಮಾತೇನೆಂದರೆ ಸಮಾಜ ದಲ್ಲಿ ಗೊಡ್ಡು ಹಳೆ ನಿಯಮಗಳ ಸಲುವಾಗಿ ಉಂಟಾಗುವ ಗರ್ಭ ಪಾತಾದಿ ಅಸಂಖ್ಯ ಅನಾಹುತಗಳ ಆತ್ಮ ಚರಿತ್ರಗಳನ್ನು ಸ್ವಕರ್ಣದಿಂದ ಕೇಳಿ ಕೇಳಿ, ಆ ಸಮಾಜರಾಕ್ಷಸನ ಪ್ರೋತರಾಜ ಪೂಜಾರಿಗಳ ಮೇಲೆ ಉರಿದುರಿದು ಖತಿಗೊಂಡ ಈ ಆಶ್ರಮಪತಿಗಳ ಮಸ್ತಿಷ್ಕವು ಮಾಯ ಲಾರದ ಗಾಯದಂತಾಗಿ ಬಿಟ್ಟಿದೆ. ಆದುದರಿಂದ ಆ ಗಾಯಕ್ಕೆ ಎಲ್ಲಿ ಏನು ಧಕ್ಕೆ ಹತ್ತಿದರೂ ಒಮ್ಮೆಲೆ ಉರುಪುಬಿಡುವುದೊಂದು ಅವರ

ದಿನದ ವಾಡಿಕೆಯಾಗಿ ಬಿಟ್ಟಿದೆ. ಅದಕ್ಕೆಂತಲೇ ಅಲ್ಲಿ ಎಲ್ಲರಿಗೆ ಭೇದವಿಲ್ಲದೆ ಇಂಥ ಒಂದೇ ಬಡಿವಾಣ !

ಇದಲ್ಲದೆ 'ಸುಧಾರಣೆಯು ಜಾಗಟೆ ಬಾರಿಸಿದಷ್ಟು ಕೃತಿಯಲ್ಲಿ ಸುಸಂಘಟಿತ ಕಾರ್ಯ ಪ್ರಚಾರವಿಲ್ಲ' ವೆಂಬ ಮಾತೊಂದು ಇನ್ನೂ ಇದೆಯಲ್ಲ ! ಇದಕ್ಕೆ ಉತ್ತರವಿಷ್ಟೇ: ಅವರ ಅಂತರಂಗದಲ್ಲಿ ಒಳಗೊಳಗೆ ಎಲ್ಲೋ ಒಂದು ಬಗೆಯ ಆತ್ಮವಿಶ್ವಾಸದ ಅಭಾವವು ದಟ್ಟವಾಗಿ ಪಸರಿಸಿರಲಿಕ್ಕೆಬೇಕು. ಎಲ್ಲಿಯ ವರೆಗೆ ಹೀಗಿದೆಯೋ ಅಲ್ಲಿಯವರೆಗೂ ನಿಶ್ಚಿತ ಕಾರ್ಯದ ಭಾವವೆಂಬುದು ನೈಸರ್ಗಿಕವೇ ಸರಿ.

ಮತ್ತೇನು ? 'ಗುರುಭಾವ; ಶಿಷ್ಯರಿಂದ ಸಾಷ್ಟಾಂಗ ನಮಸ್ಕಾರ' ಮುಂತಾದುದಲ್ಲವೆ ? ಇಲ್ಲಿ ಒಂದು ಮಾತು: ತನ್ನ ಆತ್ಮವು ಪ್ರಕೃತದಲ್ಲೆಷ್ಟೇ ಜಂಗುಗಟ್ಟಿದ್ದರೂ ಹಿಂದೊಮ್ಮೆ ಅದು ಥಳಥಳಿಸಿದ್ದರ ಸೂಕ್ಷ್ಮ ಸಂಸ್ಕಾರವು ಗಟ್ಟಿಗೊಂಡು ಹಾಗೇ ತಳಹಿಡಿದು ಕುಳಿತುಕೊಂಡು ಇರುವದರಿಂದ ತಾನು 'ಸ್ವರ್ಗಸಂತಾನ' (Sons of Heven) ವಲ್ಲದಿದ್ದರೂ 'ಮುನಿವಿನ ಮಗ' (Sons of Saints) ನಾದರೂ ಹೌದೆಂಬ ದೃಢ ವಿಶ್ವಾಸವೊಂದು ಆಳವಾಗಿ ವ್ಯಾಪಿಸಿಕೊಂಡು ಬಿಟ್ಟಿರುತ್ತದೆ. ಆದರಿಂದ 'ಮನುಷ್ಯರೆಂಬವರನ್ನು ಅರ್ಚಿಸಿ ಫಲ ಪಡೆಯುವುದು ಸತ್ಯವೇ ಆದರೆ ಅದು ನಮ್ಮಂಥವರನ್ನೇ ಯಾಕೆ ಅಲ್ಲ ? ' ಎಂಬ ಹುಚ್ಚುಭಾವನೆಯೊಮ್ಮೊಮ್ಮೆ ಬರುತ್ತಿರುತ್ತದೆ. ಇಂಥ ಹುಚ್ಚು ಹೊಳೆಯ ಮೂಲಕವೇ ಅಂಥವರ ಆಚರಣೆಯಲ್ಲಿ ಅಂಥ ವ್ಯಂಗಗಳು ಕಂಡು ಬರುತ್ತಿರುತ್ತವೆ.

ಇಂಥ ವುನರ್ವೈಷಮ್ಯವು ಆ ಆತ್ಮಗಳ 'ಕಾಳರಾತ್ರಿ'ಯ ಕುರುಹೆಂದು ನಮ್ಮ ನಾಯಕನ ಅನಿಸಿಕೆ.

( ೧೨ )

ಇಂದು ಜ್ಞಾನಭಿಕ್ಷುವಿನ ರೋಗಪರೀಕ್ಷೆಗೆ ಆರಂಭ. ಆಗ ಆತನು ತನ್ನ ರೋಗದ ಬಾಹ್ಯಕಾರಣಗಳೆಂದು ತನಗೆ ಅನಿಸಿದ ಮಾತು

ಗಳನ್ನು ಆಶ್ರಮದೊಡೆಯರಿಗೆ ಮನಬಿಚ್ಚಿ ಹೇಳುವುದು ಒಳ್ಳೆಯದೆಂದೆಣಿಸಿ ತನ್ನ ಎಳೆವಯಸ್ಸಿನ ಅನಿಗ್ರಹವೃತ್ತಿ, ಸಾಂಸಾರಿಕ ಜೀವನದ ಅತಿವೈಪರೀತ್ಯ, ಆಧ್ಯಾತ್ಮಿಕ ಭಾವನೆಯ ದುರ್ದಮನೀಯ ಆವೇಗ, ಅದರಿಂದ ದೇಹಾರೋಗ್ಯದ ವಿಷಯದಲ್ಲಿ ಆದ ಅಪರಿಮಿತ ದುರ್ಲಕ್ಷ್ಯ ಮುಂತಾದವುಗಳೆಷ್ಟು ಬೇಕೋ ಅಷ್ಟೆಲ್ಲಾ ಒದಗಿ ಬಂದುದರಿಂದಲೇ ತನ್ನ ಬೇನೆ ಬೇಸರಿಕೆ ಪರಮೋಚ್ಚ ಬಿಂದುವಿಗೆ ಬಂದು ಮುಟ್ಟಿದುದಾಗಿ ತಿಳಿಸಿದನು. ಇದಕ್ಕೆಲ್ಲಾ ಅವರು "ಹುಚ್ಚು" ಎಂದು ಸ್ವಲ್ಪ ಮಟ್ಟಿಗೆ ಭಾವಿಸಿಕೊಂಡಿರುವುದು ಅನೈಸರ್ಗಿಕವೇನೂ ಅಲ್ಲ. ಅಂತೂ ಔಷಧೋಪಚಾರಕ್ಕೆ ಆರಂಭವಾಯಿತು. ಅಲ್ಲಿಯ ಮುಖ್ಯ ವ್ಯಕ್ತಿಯೇನೋ ಬಹಳ ದಕ್ಷ. ಆದರೆ ವ್ಯವಸ್ಥಾಪಕರ ಮೇಲೆ ಕಾರ್ಯಭಾರವು ಬಹಳವಾಗುವದರಿಂದಲೋ ಏನೋ ಅಲ್ಲಿ ರೋಗಿಗಳಿಗೆ ಬಹಳ ಪೇಚಾಟ ಬರುತ್ತಿರುತ್ತದೆ. ನಮ್ಮ ನಾಯಕನಿಗೆ ಅಲ್ಲಿ ಉಳಿದೆಲ್ಲ ರೋಗಿಗಳಿಗಿಂತ ಹೆಚ್ಚಿಗೆ ವ್ಯವಸ್ಥೆಯಿದ್ದಿತಾದರೂ ತೀರ ಅಶಕ್ತ ಸ್ಥಿತಿಯಲ್ಲಿ ಅಷ್ಟಿದ್ದರೂ ಇನ್ನೂ ಸಾಲದೆಂದೇ ಅನಿಸುತ್ತಿದ್ದಿತು. ಅಲ್ಲಿ ಚಿಲ್ಲರೆ ಮೇಲ್ವಿವಸ್ಥೆಯೆಲ್ಲಾ ಆಶ್ರಮ ವಿದ್ಯಾರ್ಥಿಗಳ ಕಡೆಗಿದ್ದಿತು. ಆದರೆ ಅವರು ಆಶ್ರಮದೊಡೆಯರ ಮೇಲೆ ಅತಿಶಯವಾಗಿ ಪೂಜ್ಯಭಾವನೆಯುಳ್ಳವರಾಗಿದ್ದರೂ ವ್ಯವಸ್ಥಾಪಕರಿಗೂ ಅವರಿಗೂ ತಾಳುಮೇಳು ಅಷ್ಟೊಂದಿರಲಿಲ್ಲ. ಹೀಗಾಗಿ ಅಲ್ಲಿಯ ರೋಗಿಗಳಿಗೆ ತೊಂದರೆ ಹೆಚ್ಚಾಗಲಿಕ್ಕೆ ಅವಕಾಶವುಂಟಾಗಿತ್ತು. ಅಲ್ಲಿಗೆ ನಮ್ಮ ನಾಯಕನು ಹೋದ ಬಳಿಕ ಆರೇಳು ದಿನಗಳ ವರೆಗೆ ಮಲಪ್ರವೃತ್ತಿಯೇ ಕೇಳಬಾರದು! ವ್ಯವಸ್ಥೆಯವರಾದ ವಿದ್ಯಾರ್ಥಿಗಳಿಗೆ ಈ ಮಾತನ್ನು ತಿಳಿಸಿದರೆ ಅವರು ಹೇಳುವುದು ಏನದು ಗೊತ್ತೇ? "ನಮ್ಮ ಮಾಷ್ಟ್ರಗೆ ಎಲ್ಲಾ ಗೊತ್ತಾಗುತ್ತೆ. ನೀವೇನೂ ಆಲೋಚಿಸಬೇಡಿ."!!! ಎಷ್ಟು ಮೊರೆಯಿಟ್ಟರೂ ಕಿವಿಯ ಮೇಲೆ ಹಾಕಿಕೊಳ್ಳುವ ಪುಣ್ಯಾತ್ಮರು ಒಬ್ಬರೂ ಸಿಗಲಿಲ್ಲ. ಆಗ ಅಶಕ್ತತೆ ಹೆಚ್ಚಿಗಿದ್ದದ್ದರಿಂದ ತಾನೇ ಸ್ವತಃ ಮುಖ್ಯರ ಕಡೆಗೆ ಹೋಗಿ ತನ್ನ ವಿದ್ಯಮಾನವನ್ನು ವಿದಿತಪಡಿಸಲು ಅನುವಿರಲಿಲ್ಲ. ಕೊನೆಗೆ ಆರನೇ ದಿನವೋ ಏಳನೆಯ ದಿನವೋ ಹುಟ್ಟಿದ್ದೆಲ್ಲಾ ನೆನಪಾಗುವಷ್ಟು ಕಷ್ಟದಿಂದ ತಾನೇ ಕಾರ್ಯ ತೀರಿತು! ಆ ಮೇಲೆ

ಜಳಕದ ವಿಷಯು ಬಂತು. ಅದರ ಕಥೆ ಇದಕ್ಕಿಂತ ಹೆಚ್ಚಿಸದು. 'ಅಯ್ಯೋ ಜಳಕವಿಲ್ಲದೆ ನನ್ನ ಮೈ ಕೈಯೆಲ್ಲಾ ಬಹಳ ಬಿಗಿದುಕೊಂಡಂತಾಗಿದೆ. ಏನಾದರೂ ವ್ಯವಸ್ಥೆ ಮಾಡಬೇಕಿರಿ.' ಎಂದು ಏಸೋ ಸಾರೆ ಹೇಳಿದಾಗ ಎರಡು ಮೂರು ದಿನಗಳ ಮೇಲೆ ಒಬ್ಬ ವಿದ್ಯಾರ್ಥಿಯು– "ಮಾಸ್ತರ್ ನಿಮ್ಗೆ–ಸ್ಪ್ರೇಬಾಥ್ (ತುಷಾರ ಸ್ನಾನ) ಕೊಡ್ತೋದಾಗಿ ಹೇಳ್ಯಾರೆ. ಪರ್ವಾ ಇಲ್ಲ. ನೀವೇನೂ ಆಲೋಚನೆ ಮಾಡ್ಬೇಡಿ." ಎಂದು ಆಶ್ವಾಸನ ಕೊಟ್ಟು ಹೋದನು. ಆದರೆ ಆರೇಳು ದಿನಗಳಾದರೂ ಯಾವ ಬಾಥೂ ಇಲ್ಲ; ಗೀಥೂ ಇಲ್ಲ! ಮುಂದಿನ್ನು ಹೇಗೆ? ಏನಾದರೂ ಆಗ ಲೆಂದು ತೊಂದರೆ ತಾಳಲಾರದ್ದಕ್ಕೆ ತಾನೇ ಬಾಥರೂಮಿನಲ್ಲಿ ಹೋಗಿ, ಅಲ್ಲಿ ತಟ್ಟೆಯಲ್ಲಿ ತುಂಬಿಟ್ಟಿದ್ದ ತಣ್ಣೀರನ್ನೆ ಮೈಮೇಲೆ ಬರುಕಿಕೊಂಡನು! ಆ ಮೇಲೆ ಮುಂದೆ ಹೇಗಾದರೂ ಸಾಗಿತೆನ್ನೋಣ; ಆದರೆ ಮೊದಲಿಗೆ ಇಷ್ಟೊಂದು ಕತೆಯಾಯಿತು! ಆ ಮೇಲೆ ಹಜಾಮತಿಯ ಪ್ರಶ್ನೆ. ಅಶಕ್ತರಿಗೆ ತಲೆಯ ಕೂದಲು ಬೆಳೆದ ಹಾಗೆಲ್ಲಾ ತಲೆಭಾರವಾಗುವುದು ಸ್ವಾಭಾವಿಕ. ಹಿಂದಿನ ಹದಿನೈದು ದಿನಗಳ ಕತೆ ಮುಗಿಯುವಷ್ಟರಲ್ಲಿ ತಲೆ ಬೆಳೆದು ಮೆದುಳಿಗೆ ತೊಂದರೆಯಾಗಹತ್ತಿತು. ಆದರೆ 'ಅನಕಾಕ್ಷೌರ ಬೇಡ. ತಲೆಗೆ ಹಚ್ಚಲಿಕ್ಕೆ ಯಾವದಾದರೊಂದು ತೈಲವನ್ನು ಕೊಡುತ್ತದೆ.' ಎಂದು ವ್ಯವಸ್ಥಾಪಕರು ಹೇಳಿದರು. ಇಷ್ಟು ಹೊತ್ತಿಗೆ ಸಾಧಿಸಿ ಅವರಲ್ಲಿದ್ದ ತೈಲದ ಸಂಗ್ರಹವೆಲ್ಲಾ ತೀರಿಹೋಗಿದ್ದಿತು! ಅದು ಹೊಸದಾಗಿ ಸಿದ್ಧವಾಗುವುದಕ್ಕೆ ಮತ್ತೆ ಹತ್ತೆಂಟು ದಿನ ಬೇಕಾಯಿತು! ಇಷ್ಟರಲ್ಲಿ ಈತನ ತಲೆಬೇನೆ ಕಷ್ಟಕ್ಕಿಟ್ಟು ಬಿಟ್ಟಿತು. ಹಿಂದಿನವೆರಡು ಕಂಟಕಗಳಿಗೆ ಹೇಗಾದರೂ ತಪ್ಪಿಸಿಕೊಳ್ಳಲಿಕ್ಕೆ ಹಾದಿಯಿತ್ತು. ಆದರೆ ಇದನ್ನು ಉಪಾಯವಿಲ್ಲದೆ ಹಾಗೇ ಸಹಿಸಿಕೊಳ್ಳಬೇಕಾಯಿತು. ಇಷ್ಟೆಲ್ಲಾ ತೊಂದರೆಗಳ ಮೂಲಕ ಊಟದಲ್ಲಿ ಅತೃಪ್ತಿ ಹೆಚ್ಚಾಗಿ ಬಿಟ್ಟಿತು. ಮೊದಲೇ ರೋಗಿಗಳಿಗೆ ಅರುಚಿ. ಅದರಲ್ಲಿ ವಿವಿಧ ಕಷ್ಟಗಳು ಹೆಚ್ಚಿದರೆ ಹೀಗಾಗುವುದು ತೀರ ಸಹಜ. ಅಲ್ಲದೆ ಒಂದೇ ಸವನೆ ಒಬ್ಬನೇ ಬಿದ್ದುಕೊಂಡು ಇರುವುದು ಬೇರೆ.

ಇಷ್ಟು ಹೊತ್ತಿಗೆ ನಮ್ಮ ನಾಯಕನು ತುಸು ಅಲೆದಾಡಲು

ಸಮರ್ಥನಾಗಿದ್ದನು. ಅಲ್ಲಿ ಪ್ರತಿದಿನವೂ ಸಂಜೆಯ ಸುಮಾರಿಗೆ ಆಶ್ರಮದೊಡೆಯರು ತಮ್ಮ ಆಶ್ರಮವಿದ್ಯಾರ್ಥಿಗಳ ಇದಿರಿಗೆ ಮತ್ತು ಅತಿಥಿ ಅಭ್ಯಾಗತರ ಇದಿರಿಗೆ ಯಾವದೊಂದು ವಿಷಯದ ಮೇಲೆ ಹೆಚ್ಚು ಹೊತ್ತು ಮಾತನಾಡುತ್ತ ಕುಳಿತುಕೊಳ್ಳುತ್ತಿದ್ದರು. ಅದರಲ್ಲಿ ರಂಜನೆಯ ವಿಷಯ ವೆಷ್ಟೋ ಇರುತ್ತಿತ್ತು. 'ಜ್ಞಾನಭಿಕ್ಷು'ವು ಈಗ ಮನರಂಜನೆಗೆಂದು ದಿನಾಲು ಅಲ್ಲಿ ತಾನೂ ಹೋಗಿ ಕೂಡಹತ್ತಿದನು. ಆತನಿಗೆ ಹೊಸದಾಗಿ ಏನೂ ತಿಳಿದುಕೊಳ್ಳಬೇಕಾಗಿರಲಿಲ್ಲ. ಆದರೆ ಹುರುಳುಳ್ಳ ಹರಟೆಯಲ್ಲಿ ಹೊತ್ತುಗಳೆಯಬೇಕಾಗಿದ್ದಿತು. ಆದುದರಿಂದ ಅವನು ಅಲ್ಲಿ ತಸಗೆ ಸೊಗಸೆನಿಸುವಷ್ಟು ಹೊತ್ತು ಬರೇ ಸುಮ್ಮಗೆ ಕೂತು ಮಾತು ಕೇಳಿ, ಸಾಕಾಗಲು ತನ್ನ ಕೋಣೆಗೆ ಬರುತ್ತಿದ್ದನು. ನಡುವೆ ಬಾಯಿಹಾಕಿ ಒಂದೂ ಮಾತನಾಡುತ್ತಿದ್ದಿಲ್ಲ. ಆ ಉಪನ್ಯಾಸಗಳ ವಿಷಯಗಳು ಒಮ್ಮೊಮ್ಮೆ ಸಾಮಾನ್ಯ ಬುದ್ಧಿಗೆ ಅರ್ಥವಾಗದಷ್ಟು ಜಟಿಲವಾಗಿರುವದರಿಂದ ಕೇಳುವವರು "ಅದು ಹೇಗೆ ಸರಿ? ಹಾಗೆಂದರೇನೆಂಬುದೇ ನಮಗೆ ತಿಳಿಯದು" ಮುಂತಾದುದಾಗಿ ಪುನಃ ಪುನಃ ಪ್ರಶ್ನಿಸುವುದನ್ನೂ, ಅದಕ್ಕೆ ವ್ಯಾಖ್ಯಾತರು ಇನ್ನೂ ಹೆಚ್ಚು ಸ್ಪಷ್ಟಮಾಡುವುದಕ್ಕೆ ಹೋದಂತೆಲ್ಲಾ ವಿಷಯವು ಮತ್ತಷ್ಟು ಜಟಿಲವಾಗುತ್ತ ಬಂದು, ಕೇಳುವವರಲ್ಲಿ ಇನ್ನಷ್ಟು ಹೆಚ್ಚಿಗೇ ಸಂಶಯಗಳೇಳುವುದನ್ನೂ ನೋಡಿ ನಮ್ಮ ಜ್ಞಾನಭಿಕ್ಷುವು ಅಂತಹ ಪ್ರಸಂಗಗಳಲ್ಲೆಲ್ಲಾ ಯಾರಿಗೂ ಗೊತ್ತಾಗದಂತೆ ತನ್ನೊಳಗೇ ತಾನು ಮುಗುಳುನಗೆ ನಗುತ್ತಿದ್ದನು. ಅವನ ಈ ನಗೆಯನ್ನು ಲಕ್ಷಿಸುವುದಕ್ಕೆ ಆಗ ಯಾರ ಚಿತ್ತಕ್ಕೂ ಬಿಡುವಿರುತ್ತಿದ್ದಿಲ್ಲ. ಹೀಗಾಗಿ ಅಲ್ಲಿಯ ವಿದ್ಯಾರ್ಥಿಗಳಿಗೂ ಆಶ್ರಮಪತಿಗಳೂ ಕೂಡಿಯೇ ಈತನ ವಿಷಯದಲ್ಲಿ ಒಂದು ಚಮತ್ಕಾರವೆನಿಸುವುದಕ್ಕೆ ಕಾರಣವಾಯಿತು. "ಈತನ ಅಭಿರುಚಿಯಾದರೂ ಯಾತರ ಮೇಲಿದ್ದಿರಬೇಕು? ಇವನು ಯಾವುದಕ್ಕೂ ಗುಮ್ಮನಗುಸುಗನಂತೆ ಸುಮ್ಮನೆಯೇ ಕೂತುಕೊಂಡು ಇರುವವನಲ್ಲ!" ಎಂದು ಅವರು ಆಲೋಚಿಸಹತ್ತಿದ್ದರು.

ಇದೊಂದಲ್ಲದೆ ಅಲ್ಲಿ ಇಂತಹದೇ ಇನ್ನೊಂದು ವಿಷಯವು ನಡೆಯಿತು. ಅದೇನೆಂದರೆ– ಅಲ್ಲಿಯ ಆಶ್ರಮದೊಡೆಯರು ಶ್ರೀರಾಮಕೃಷ್ಣ

ಪರಮಹಂಸರನ್ನೂ ವಿವೇಕಾನಂದರನ್ನೂ ಬಹಳವಾಗಿ ಪ್ರೀತಿಸುತ್ತಿದ್ದವರು. ಅವರು ಪ್ರತಿ ಗುರುವಾರಕ್ಕೊಮ್ಮೆ ರಾತ್ರಿಯಲ್ಲಿ ಭಜನೆಯನ್ನು ಮಾಡುತ್ತಿದ್ದರು. ಅವರು ಸಂಗೀತದಲ್ಲಿಯೂ ವ್ಯುತ್ಪನ್ನರೆಂದು ಖ್ಯಾತಿ. ಆದ್ದರಿಂದ ಅವರ ಆ ಸಂಗೀತವನ್ನು ಕೇಳುವ ಕುತೂಹಲವಶನಾಗಿ ನಮ್ಮ ನಾಯಕನು ಭಜನೆಗೆ ಹೋಗುತ್ತಿದ್ದನು. ಆದರೆ ಅಲ್ಲಿ ಆತನು ಯಾವ ಹಾಡಿಗೂ ಕೈಯಿಂದ ತಾಳು ಹಾಕುವುದಾಗಲಿ ಗೋಣು ಹಾಕುವುದಾಗಲೀ ಏನೂ ಮಾಡದೆ ಗೊಂಬೆಯಂತೆ ಸುಮ್ಮನೆ ಕೂತುಕೊಂಡು ಇರುತ್ತಿದ್ದನು. ಭಜನೆ ಶಿವಪರವಾಗಿದ್ದರೂ ಇದೇ ರೀತಿ, ಶಕ್ತಿಪರವಾಗಿದ್ದರೂ ಅದೇ, ರಾಮಭಜನವಾದರೂ ಹಾಗೇ, ಶ್ಯಾಮಭಜನವಾದರೂ ಅದೇ. ಕೊನೆಗೆ ಆರತಿಯಾದ ಮೇಲೆ ಎಲ್ಲರೂ ಆಶ್ರಮಪತಿಗಳ ಮುಂದೆ ಸಾಷ್ಟಾಂಗವಾಗಿ ಬಿದ್ದು ಬಿಡುತ್ತಿದ್ದರು! ಆಗಲೂ ನಮ್ಮ ನಾಯಕನು ಮೊದಲಿನಂತೆಯೇ ಇದಾವುದರಲ್ಲಿಯೂ ಭಾಗವನ್ನು ತೆಗೆದುಕೊಳ್ಳದೆ ಇದ್ದಕ್ಕಿದ್ದಂತೆ ಎಲ್ಲಿಯೋ ಇದ್ದುಕೊಂಡು ಬಿಟ್ಟಿರುತ್ತಿದ್ದನು. ಈತನ 'ಅರತಿರ್ಜನ ಸಂಸದಿ' ಎನ್ನುವಂಥ ಈ ನಡತೆಯಿಂದ ಅಲ್ಲಿಯವರಿಗೆಲ್ಲ ಇನ್ನಿಷ್ಟು ಕೌತುಕವು ಹೆಚ್ಚುವುದಕ್ಕೆ ಕಾರಣವಾಯಿತೆಂದೆನ್ನಬಹುದು.

ಇಷ್ಟೆಲ್ಲಾ ಆತನ ಅಲ್ಲಿಯ ಹೊರ ರೀತಿಯಾಯಿತು. ಇನ್ನು ಒಳಗಿನ ಪ್ರಕಾರವೇ ಒಂದು ಬೇರೆ ವಿಧ. ನಮ್ಮ ನಾಯಕನ ಜೀವನದಲ್ಲಿ ಈಗ ಆರೇಳು ವರುಷಗಳಿಂದಲೂ ಒಂದು ವಿಚಿತ್ರ ಕ್ರಮವು ನಡೆದು ಬರುತ್ತಾ ಇದ್ದಿತು. ಅದೇನೆಂದರೆ ಪ್ರತಿವರುಷವೂ ಡಿಸೆಂಬರದ ಸುಮಾರಿಗೆ ಆತನ ಜೀವನಕ್ಕೆ ಏನಾದರೂ ಒಂದು ವಿಶೇಷ ಮಾರ್ಗವು ಸಿಗುತ್ತಲಿದ್ದಿತು; ಆ ಹೊಸ ಹೊಳವಿನ ಆಧಾರದ ಮೇಲೆ ಮುಂದಿನ ವರುಷವನ್ನು ಯಾವ ರೀತಿಯಿಂದ ದಾಟಬೇಕೆಂಬ ವಿಷಯವು ಆತನಿಗೆ ಸುಲಭವಾಗಿ ಬಿಡುತ್ತಿತ್ತು. ಡಿಸೆಂಬರದ ನಂತರ ಆರೇಳು ತಿಂಗಳುಗಳು ಆ ಹೊಸ ಹೊಳವಿನ ಬಲದ ಮೇಲೆ ನಿರಾಯಾಸವಾಗಿ ದಾಟುತ್ತಿದ್ದವು. ಆ ಮೇಲೆ ಏನಾದರೊಂದು ತೀರ ಕಲ್ಪನಾತೀತವಾದ ಕಂಟಕವೊಂದು

ವೈದಾಳುತ್ತಿತ್ತು. ಅದರ ಗೂಡ ನಾಲ್ಕೈದು ತಿಂಗಳು ಗುದ್ದಾಡುವುದರಲ್ಲಿ ಜೀವವು ಹಣ್ಣುಹಣ್ಣಾಗಿ ಹೋಗುತ್ತಿತ್ತು. ಡಿಸೆಂಬರ ಬಂದ ಹಾಗೆಲ್ಲಾ ಆತನ ಅಂತರಂಗವು- ಹೊಸ ಹೊಳವಿಲ್ಲದೆ ಇನ್ನು ನಾನು ತಾಳಲಾರೆನೆಂದು ಗೋಳಿಡುವಂತಾಗುತ್ತಿತ್ತು.ಡಿಸೆಂಬರದಲ್ಲಿಯ ಕಷ್ಟವು ಬಣ್ಣಿಸಲಳವಲ್ಲ. ತೀರಿ ಒದ್ದಾಡಿಸಿ ಬಿಡುತ್ತಿತ್ತು. ಇಷ್ಟೆಲ್ಲಾ ಆದರೂ ಕೊನೆಗೆ ಯಾವದಾದರೊಂದು ಹೊಸ ಹೊರ ಕಾರಣವು ಉತ್ಪನ್ನವಾಗಿ ಒಳಗಿನ ರಾಜ್ಯದಲ್ಲಿ ಸ್ಥಿತ್ಯಂತರವನ್ನುಂಟುಮಾಡಿಬಿಡುತ್ತಿದ್ದಿತು. ಆಯಿತು, ಇಲ್ಲಿಯಿಂದ ಮತ್ತೆ ಹೊಸ ಚಕ್ರದ ಆರಂಭ. ಹೀಗೇ ಏಸೋ ವರುಷ ಆತನಿಗೆ ಅನುಭವಕ್ಕೆ ಬಂದಿದ್ದಿತು. ಅಂತೇ ಈಗ ಆತನು ತನ ಗೊದಗಿದ ಪರಿಪರಿಯ ಕಷ್ಟಗಳಲ್ಲೆಲ್ಲಾ ಮುಂದಿನ ಹೊಳವಿಗಾಗಿಯೇ ಹಾತೊರೆಯುತ್ತಿದ್ದನು.

"ನಿನ್ನ ಸಂಪೂರ್ಣ ಶಕ್ತಿಯಿಂದಲೂ ಹೃದಯದಿಂದಲೂ ದೇವದೇವನ ಹಸ್ತದಲ್ಲಿ ನಿನ್ನನ್ನು ನೀನು ಅರ್ಪಿಸು. ಯೋಗದ ಪ್ರಥಮ ಕ್ರಮವು ಇದೇ ಆಗಿದೆ" ಯೆಂಬ ಅರವಿಂದರ ವಾಣಿಗೆ ಸರಿಹೋಗುವಂಥವುಗಳೆಂದು ಆರಿಸಿಕೊಂಡ ಗೀತಾಶ್ಲೋಕಗಳನ್ನು ಈ ಕಾಲದಲ್ಲಿ ಜ್ಞಾನಭಿಕ್ಷುವು ಎಡೆಬಿಡದೆ ಪಠಿಸಹತ್ತಿದನು-

ತಮೇವ ಶರಣಂ ಗಚ್ಛ **ಸರ್ವಭಾವೇನ** ಭಾರತ।<br>
**ತತ್ಪ್ರಸಾದಾತ್** ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ।<br>
ಮಯ್ಯೇವ **ಮನ ಆಧತ್ಸ್ವ** ಮಯಿ **ಬುದ್ಧಿಂ** ನಿವೇಶಯ।<br>
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನಸಂಶಯಃ॥

**"ಅರ್ಜುನನೇ ದೇವನಿಗೆ ಸರ್ವವಿಧದಿಂದಲೂ ಶರಣಾಗತನಾಗು. ಆತನ ಅನುಗ್ರಹದಿಂದ ದಿವ್ಯಶಾಂತಿಯನ್ನೂ ಶಾಶ್ವತಸ್ಥಿತಿಯನ್ನೂ ಪಡೆದುಕೊಳ್ಳುವಿ........ ನನ್ನಲ್ಲಿಯೇ ನಿನ್ನ ಮನವನ್ನಿಡು, ನನ್ನಲ್ಲಿಯೇ ನಿನ್ನ ಬುದ್ಧಿಯನ್ನು ನೆಲೆಗೊಳಿಸು. ಆ ಮೇಲೆ ನಿನಗೆ ನನ್ನಲ್ಲಿಯೇ ನಿವಾಸವುಂಟಾಗುವದರಲ್ಲಿ ಸಂದೇಹವಿಲ್ಲ."**

ಈ ಶ್ಲೋಕಗಳ ಆವರ್ತನೆ ನಡೆದ ಹಾಗೆಲ್ಲಾ ಕ್ರಿಸ್ತದೇವನ ಈ ಕೆಳಗಿನ ಅಮರವಾಣಿಯು ಅವನ ಕಣ್ಣ ಮುಂದೆ ಕಟ್ಟಿದಂತಾಗುತ್ತಿತ್ತು—

" ನಿನ್ನ ಪ್ರಭುವಾದ ದೇವದೇವನನ್ನು ನಿನ್ನ ಸಂಪೂರ್ಣ ಹೃದಯದಿಂದ ನೆಚ್ಚು, ನಿನ್ನ ಸಂಪೂರ್ಣ ಆತ್ಮದಿಂದ ನಂಬು ಮತ್ತು ನಿನ್ನ ಸಂಪೂರ್ಣಬುದ್ಧಿಯಿಂದಲೂ ಸರ್ವಬಲದಿಂದಲೂ ಆತನನ್ನು ನಂಬು ಇದೇ ಪ್ರಥಮಸಂದೇಶವು. "

ಹೀಗೆ ಭಾವಿಸುತ್ತಿದ್ದ ಹಾಗೆಲ್ಲಾ ನಮ್ಮ ನಾಯಕನ ಅಂತರಂಗದಲ್ಲಿ ಆಳವಾದ ವ್ಯಾಕುಲತೆಯು ಘನೀಭೂತವಾಗಹತ್ತಿತು. " ತಂದೇ ನನ್ನನ್ನು ಇಷ್ಟೊಂದು ಪರೀಕ್ಷಿಸದಿರು! ನಿನ್ನ ಹೊಡೆತಕ್ಕೆ ನಾನು ತಾಳಬಲ್ಲೆನೆ?! ನನಗೆ ನೀನಲ್ಲದೆ ಬೇರೆ ಆಸರಾವುದು? ಸರ್ವಭಾವೇನ ಶರಣಾಗತನಾಗೆಂಬುದು ನಿನ್ನ ವಚನ. ತಂದೇ, ತಾಳಲಾರೆ, ತಾಳಲಾರೆ! ಕೈಗೊಟ್ಟು ನೀನು ಕಾಡಲ್ಲದೆ ಇನ್ನು ನನಗೆ ಗತ್ಯಂತರವಿಲ್ಲ! ನಿನ್ನ ಕುಲುಮೆಯೊಳಗಿಂದ ಇನ್ನು ನನ್ನನ್ನು ಕಡೆಗೆ ತೆಗೆ! ನನ್ನ ಅಳವು ಮೀರಿ ಹರಣ ಹಾರುತ್ತಿದೆ! ನೋಡು! " ಹೀಗೆಂದು ಒಂದೇ ಸವನೆ ಕಣ್ಣೀರು ಸುರಿಸುತ್ತ, ತಾಸುಗಟ್ಟಲೆ ಒಂದೊಂದೆಡೆಯಲ್ಲಿ ಯಾರಿಗೂ ಗೊತ್ತಾಗದ ಹಾಗೆ ಬಿದ್ದುಕೊಂಡು ಬಿಟ್ಟಿರುವನು. ದಿನವೆಲ್ಲಾ ಇದೇ ಕ್ರಮ. ಹೀಗಿರುವಾಗ ಒಳಗೆ ಬುದ್ಧಿಯಲ್ಲೇ ಒಂದು ವಾದವಿವಾದವು ಆರಂಭವಾಯಿತು. ಅದೇನೆಂದರೆ—

ದೇವನು ಹೀಗೆ ಅನ್ನುತ್ತಾನೆಂಬಂತೆ: " ಮಗೂ ನನ್ನ ಕರುಣೆಯೆಂದರೆ ನನ್ನ ನಿರ್ಧಾರವನ್ನು ಮುರಿದು ನಾನೇನಾದರೂ ಮಾಡುವವನೆಂದು ನೀನು ತಿಳಿದುಕೊಂಡಂತೆ ಇಲ್ಲ. ಅದರ ಬಗೆಯೇ ಬೇರೆ. ನಿನ್ನ ಸಲುವಾಗಿ ನಾನು ಗೊತ್ತುಪಡಿಸಿಟ್ಟಿರುವ ಘಳಿಗೆಯು ಬರುವ ವರೆಗೆ ನೀನು ಬಂದ ಕಷ್ಟನಷ್ಟಗಳನ್ನೆಲ್ಲ ತಾಳಿಕೊಳ್ಳಲಿಕ್ಕೇ ಬೇಕು. ನಾನೇನೋ ಇಷ್ಟು ಹೇಳುತ್ತೇನೆ. ಇದಕ್ಕೂ ಮೀರಿ ನಿನ್ನ ಮನಬಲ್ಲಂತೆ ನೀನು ಮಾಡು. ಇದರ ಮೇಲೆ ನಿನ್ನಿಷ್ಟ, ನಾನು ಮಾತ್ರ ನನ್ನ ಹೊತ್ತು ಬರುವ ವರೆಗೆ ನಿನಗೆ ಇದೇ ಹೇಳುವವನು ನೋಡು!"

ಕೂಡಲೇ ನಮ್ಮ ನಾಯಕನ ಜೀವಕ್ಕೆ ಈ ಮಾತು ಎಷ್ಟೋ ಮಟ್ಟಿಗೆ ಹೌದೆನಿಸಿತು. "ಆಗ್ರಹಕ್ಕಾಗಿ ಸಿಕ್ಕಸಿಕ್ಕಂತೆ ಆತನು ಆರಿಗೂ ಪ್ರಸನ್ನನಾಗಲಾರನು." ಎಂದು ಅರವಿಂದರು ಹೇಳುವ ಮಾತು. ಇಂದು ನಮ್ಮ ನಾಯಕನಿಗೆ ಒಳಗಿನಿಂದಲೇ ಓ ಗೊಟ್ಟಿತು. ಆಗ ಆತನು ತನ್ನೊಳಗೇ ತಾನು ಹೀಗೆಂದುಕೊಂಡನು:— "ನಿಜವಾಗಿಯೇ ಆತನದೇನೂ ತಪ್ಪು ಇಲ್ಲ. ಆತನಿಂದು ಬುದ್ಧಿಮುಖದಿಂದ ಹೀಗೇ ಅನ್ನುತ್ತಿದ್ದೇನೆ. ಇರಲಿ. ಅವನಿಗೆ ಉಳಿಯುವುದಾದರೂ ಏಕೆ? ತಾಳಿಕೊಳ್ಳಲಿಕ್ಕಾಗುವಷ್ಟು ವರೆಗೆ ತಾಳಿಕೊಂಡನೇನೋ, ಮೀರಿದರೆ ಆಗ ಏನು ಮಾಡಬೇಕೆಂದೆನಿಸುವದೋ ಹಾಗೆ ಮಾಡಿದನೇನೊ. ತೀರಿತು. ಮತ್ತೆ ಮತ್ತೆ ಆತನನ್ನು ಹಿಚುಕುವುದರಲ್ಲಿ ಅರ್ಥವಿಲ್ಲ. ಅವನೇನೋ ಬಹಳ ನ್ಯಾಯವಾದದ್ದನ್ನೇ ಹೇಳುತ್ತಾನೆ. ಆತನ ದಿವ್ಯ ರಾಜ್ಯದ ಕಾನೂನೇ ಹಾಗಿದೆಯೆಂದಂತಾಯಿತು. ಅಂದಮೇಲೆ ಅವನದೇನು ತಪ್ಪು! ಕಾಲಬರುವ ವರೆಗೆ ಕಷ್ಟ ನಷ್ಟ ತಾಳಿ ಕಾದುಕೊಂಡಿರುವುದು ನನ್ನ ಕೆಲಸ. ತಾಳಲಿಕ್ಕಾಗದಿದ್ದರೆ ಆಗೇನು ಮಾಡುವುದು? ಏನು ಮಾಡುವುದೇನು! ಆಗತಕ್ಕ ಶಿಷ್ಟಾಚಾರವೆಲ್ಲಾ ತಿಳಿದೇ ಇದೆ! ರಾಮಕೃಷ್ಣರೂ ಸುಂದರಸಿಂಗರೂ ಹಿಡಿದ ಹಾದಿಯನ್ನೇ ಹಿಡಿಯುವುದು! ಅದಕ್ಕೆ ಜೀವವೊಲ್ಲೆಂದರೆ ತಾಳಿಕೊಳ್ಳುವುದಕ್ಕೆ ಸಿದ್ಧನಾಗಬೇಕು; ಅದೂ ಆಗದೆಂದರೆ ಇದನ್ನು ಮಾಡಬೇಕು. ಎರಡಕ್ಕೂ ಒಲ್ಲೆನೆಂದರೆ ಹೇಗೆ ಬಗೆಹರಿದೀತು?" ಹೀಗೆಂದುಕೊಂಡು ಜ್ಞಾನಭಿಕ್ಷುವು ತುಸು ತಣ್ಣಗಾದನು. ಒಳಗೊಳಗೆ ಇನ್ನೂ ಏನೋ ತಾಕಲಾಟವು ನಡೆದೇ ಇದ್ದಿತಾದರೂ ಹೊರಗೆ ಅಳುವುದೂ ಕರೆಯುವದೂ ಇಷ್ಟಾರೆ ಶಾಂತವಾಯಿತು.

ತಿರುಗಿ ಕಸ್ತೂರಿಕೆ ಬಂದಾಗಿನಿಂದ ಮೆದುಳಿಗೆ ಸೆಳೆತ ಬೀಳಬಾರದೆಂದು ಓದುವುದನ್ನೆಲ್ಲ ನಿಲ್ಲಿಸಿ ಬಿಟ್ಟಿದ್ದನು. ಮತ್ತು ಓದಿದ ಹಾಗೆಲ್ಲ ತನ್ನ ಹೊರ ಪ್ರಕೃತಿಗೆ ಹೆಚ್ಚು ಹೆಚ್ಚು ಕಷ್ಟವೇ ಆಗುವದೆಂದು ಬಹು ದಿನಗಳಿಂದ ಅನುಭವಕ್ಕೆ ಬಂದಿದ್ದಿತಾದ್ದರಿಂದ ಆ ಕೆಲಸವನ್ನು 'ಸಂಪೂರ್ಣವಾಗಿಯೇ ಬಿಟ್ಟುಬಿಡಬೇಕೆಂದು ಏನೋ ಸಾರೆ ಪ್ರಯತ್ನಿಸಿದ್ದ

ನಾದರೂ ಆತನಿಗೆ ಅದು ಸಾಧ್ಯವಾಗಿರಲಿಲ್ಲ. ಈಗ ಕೊನೆಗೆ ಸದ್ಯದ ಮಟ್ಟಿಗಿನ ಅಡ್ಡ ಜಡ್ಡು ಸಂಪೂರ್ಣ ಮಾಯವಾಗುವವರೆಗಾದರೂ ನಿಲ್ಲಿಸೋಣವೆಂದು ಹಾಗೆ ಮಾಡಿದ್ದನು. ಆದರೆ ಇಂದಿನ ಪ್ರಸಂಗದಿಂದ ಆತನಿಗೆ ಭಗವದ್ಗೀತೆಯನ್ನು ಮತ್ತೊಮ್ಮೆ ಓದಬೇಕೆಂಬ ಆಶೆಹುಟ್ಟಿತು. ಆಗ ಅವನು ತನ್ನ ಮನದಲ್ಲೇ ದೇವನಿಗೆ ಹೀಗೆಂದನು— "ತಂದೇ ನನಗೆ ಒಲ್ಲದ ಕೆಲಸಕ್ಕೆ ಮತ್ತೆ ಹಚ್ಚುವಿಯಾ? ಓದಿ ಓದಿ ಗಳಿಸುವುದೇನೋ ಅದನ್ನು ನೀನು ಒಂದೇ ಒಂದು ಗಳಿಗೆಯಲ್ಲಿ ಕೊಡಬಲ್ಲೆಯಲ್ಲ! ನಿನಗೆ ಅಲ್‍ಪರಿದು ಬೇಡಿಕೊಳ್ಳುತ್ತೇನೆ. ನನಗೆ ಓದುವ ರಾಕ್ಷಸನಿಂದ ತಪ್ಪಿಸು" ಆಯಿತು. ಏನೇನೋ ಅಂದುಕೊಂಡ; ಆದರೆ ಭಗವದ್ಗೀತೆಯ ವಿಷಯವಾಗಿ ಹಾಗೆ ಇದುರಿಗೇ ನಿಂತಿತು.

ಆಗ ಆಶ್ರಮಪತಿಗಳು ಕೆಲದಿನಗಳ ಮಟ್ಟಿಗೆಂದು ಸ್ಥಾನಾಂತರ ಮಾಡಿದ್ದರು. ವ್ಯವಸ್ಥಾಪಕರ ಕಡೆಗೆ ಹೋಗಿ ಕೇಳಿ ಗೀತೆಯ ಪುಸ್ತಕವೊಂದನ್ನು ಇಸಗೊಂಡು ಬಂದನು. ಓದಓದಿದ ಹಾಗೆಲ್ಲಾ ಅದೊಂದು ಹೊಸ ತರಹವೇ ಆದಂತಾಯಿತು. ಹಿಂದೆ ಎಂದೂ ಅಷ್ಟು ಅರ್ಥವಾಗಿದ್ದಿಲ್ಲ. ಕೆಲವು ಅಧ್ಯಾಯಗಳಿಗೆ ಹಿಂದಕ್ಕೆ 'ಏನೋ ಗೊಳ್ಳು' ಎಂದೆನ್ನುತ್ತಿದ್ದನು. ಕೆಲವು ಶ್ಲೋಕಗಳಿಗೆ ಪ್ರಕ್ಷಿಪ್ತವಾಗಿ ಎಲ್ಲಿಂದಲೋ ಸೇರಿಕೊಂಡಿವೆಯೆಂದೆನ್ನುತ್ತಿದ್ದನು. ಆದರೆ ಈಗ ಇಡೀ ಗೀತೆಯ ಬಗೆಗೇ ಒಂದು ಹೊಸ ದೃಷ್ಟಿ ಬಂದು ಬಿಟ್ಟಿತು. ಆಗ ಆತನೆಂದನು:- ಗ್ರಂಥಗಳೂ ಕೂಡ ಒಮ್ಮೊಮ್ಮೆ ಪ್ರಸನ್ನವಾಗುತ್ತಿರುವವೋ ಏನೋ! ಇದೊಂದು ಚಮತ್ಕಾರವೇ ಇದೆ. ಎಂದೂ ಇಲ್ಲದೆ ಇಂದು ಇದೇನಿದು ಹೊಸ ಪರಿ? ಹೀಗೆಂದು ಬಹಳ ಆಶ್ಚರ್ಯ ಪಟ್ಟನು.

ಅಂದಿನಿಂದ ಸುಮಾರು ಇಪ್ಪತ್ತು ದಿನಗಳ ವರೆಗೆ ಗೀತೆಯೇ ಗೀತೆ! ಹಗಲು ಗೀತೆ, ಇರುಳು ಗೀತೆ! ಯಾವಾಗ ನೋಡಿದಾಗಲೆಲ್ಲ ಕೈಯ್ಯಲ್ಲಿ ಭಗವದ್ಗೀತೆ! ಹೀಗಿರಲು ಡಿಸೆಂಬರ ತಿಂಗಳ ಹದಿಮೂರನೆಯ ತಾರೀಖಿಗೆ ಮತ್ತೊಂದು ತರಹವಾಯಿತು. ಅದೇನೆಂದರೆ— ಈ ಹೊತ್ತು ನಮ್ಮ ನಾಯಕನಿಗೆ ರಾಮಕೃಷ್ಣರ ಮಾತೊಂದು ನೆನಪಾಯಿತು:- "ಮೂರು ಘಳಿಗೆ ತದೇಕಚಿತ್ತನಾಗಿ ದೇವನನ್ನು ಪ್ರಾರ್ಥಿಸಿದರೆ

ಸಾಕು, ಸಾಕ್ಷಾತ್ಕಾರವು ಕೈಯ್ಯಲ್ಲಿಯೇ ಇದೆ." ಅದು ನೆಪಪಾದೊಡನೆ ಹೀಗೆಂದುಕೊಂಡನು– "ಆತನು ಸರ್ವಾಂತರ್ಯಾಮಿಯೆಂಬುದನ್ನು ತುಂಬಾ ಬಲ್ಲೆನಾದರೂ ಆತನ ಇನ್ನೂ ಹೆಚ್ಚು ಸಮೀಪದ ಸಾಕ್ಷಾತ್ಕಾರಕ್ಕಾಗಿ ಜೀವದ ಒಳಗೊಳಗಿನ ಪ್ರದೇಶದಲ್ಲಿ ಆತುರತೆಯು ಇದ್ದೇ ಇದೆ. ಯಾಕೆಂದರೆ ಅಷ್ಟಾದ ಹೊರತು ಶಾಂತಿಯೆಂಬುದು ಶ್ವಾಶ್ವತ ಸ್ಥಿತಿಗೆ ಬರಲೇ ಆರದು. ಆದ್ದರಿಂದ ಇಂದು ಏನಾಗುವದೋ ಆಗಲಿ ಮೂರು ಘಳಿಗೆಯೇಕೆ? ಮೂರು ತಾಸುಗಳ ವರೆಗೆ ಆತನ ಅನುಸ್ಮರಣವನ್ನು ಮಾಡುವೆ!" ಎಂದು ನಿಶ್ಚಯಿಸಿದನು.

ಮಧ್ಯಾಹ್ನದಲ್ಲಿ ಸುಮಾರು ಎರಡು ಮೂರು ಗಂಟೆಗೆ ಆರಂಭವಾಯಿತು ಮತ್ತೊಂದು ಆಟ. ಮುಸುಕು ಹಾಕಿಕೊಂಡು ತನ್ನ ಕೋಣೆಯಲ್ಲಿ ಮಲಗಿಕೊಂಡನು. ಒಳಗೆ "ಓಂ ಭಗವಾನ್ ಓಂ ಭಗವಾನ್" ಎಂದು ಅವ್ಯಕ್ತವಾಗಿ ಜಪಿಸುತ್ತಲೂ ಅಂತರಂಗದಲ್ಲಿ ಪರಮಾತ್ಮನ ಅಂತರಹಿತ ಸ್ವರೂಪವನ್ನೂ, ಅಘಟಿತ ಘಟನ ಪಟುವಾದ ಆತನ ದಿವ್ಯ ಸಾಮರ್ಥ್ಯವನ್ನೂ ಕುರಿತು ಭಾವಿಸುವನು. ನಡೆಯಿತು. ಮೂರನೇ ತಾಸು ಮುಗಿಯುತ್ತ ಬಂತು. ಆದರೂ ಏನೂ ಇಲ್ಲ. ಆಗ ಒಳಗೊಳಗೆ ನಗೆಯು ಹುಟ್ಟಹತ್ತಿತು "ದೇವಾ, ಏನಾದರೂ ನೀನು ಪ್ರಭು, ನಾನು ನಿನ್ನ ಮಗು. ನಿನ್ನದೇ ಗೆದಿಯಬೇಕಲ್ಲದೆ ನನ್ನದು ಹೇಗೆ ಗೆದ್ದೀತು? ನೀನು ನಿನ್ನ ಭಕ್ತರ ಕೂಡ ಮಾಡುವ ಲೀಲೆ ತಿಳಿಯಬಾರದು!" ಹೀಗೆನ್ನುವ ಹೊತ್ತಿಗೆ ಹೊರಗೆ ಗಡಿಯಾರದ ಗಂಟೆಯಾಯಿತು; ಇವನೂ ಎದ್ದು ಬಿಟ್ಟನು. ಈ ಗಳಿಗೆಯಲ್ಲೇನೋ ಇವನು ಒಂದು ಬಗೆಯ ಸೋಜಿಗದಲ್ಲಿಯೇ ಇದ್ದನಾದರೂ ಮುಂದೆ ಒಂದು ಗಳಿಗೆಯಲ್ಲಿಯೇ ತಲೆಯಲ್ಲಿ ಹೀಗೆ ವಿಚಾರಗಳು ಬರಹತ್ತಿದವು:–

"ಆತನು ಮಾಡಿಸತಕ್ಕದ್ದನ್ನೆಲ್ಲ ಮಾಡಿಸದೆ ಬಿಡಲಾರನೆಂದು ತೋರುತ್ತದೆ. ನನ್ನನ್ನು ರಾಮಕೃಷ್ಣ, ಸುಂದರ ಸಿಂಗರ ಹಾದಿಯ ಮೇಲೆ ಹಾಯಿಸಿದೆ ಬಿಡಲೇಬಾರದೆಂದು ಆತನ ಹಟವಿರುವುದಾಗಿ ತೋರುತ್ತದೆ. ಆಗಲಿ– ಹಾಗಾದರೆ ಅದೇ ಆಗಲಿ! 'ಜಯ ಭಗವಾನ್! ಓಂ ಭಗವಾನ್!' ಎಂದು ಗರ್ಜನೆ ಮಾಡಿ ಎದ್ದು ನಡೆದನು–

ಅದೇ ಹೊತ್ತು ಮುಳುಗಿದೆ. ಹಳ್ಳದ ದಡದಲ್ಲಿರುವ ಸ್ಮಶಾನದ ಒಳಿಯ ಒಂದು ಗಿಡದ ಕೆಳಗೆ ನಿಂತು ನಮ್ಮ ನಾಯಕನು ಅನುಕೂಲವಾದ ಟೊಂಗೆಯಾವುದೆಂದು ದಿಟ್ಟಿಸಿ ಮೇಲೆ ನೋಡುತ್ತಿದ್ದಾನೆ. ಆಗ ತಲೆಯಲ್ಲಿ ಹೀಗೆ ಒಂದು ವಿಚಾರವು ಬಂತು. ಅದೇನೆಂದರೆ- " ನನ್ನ ನಂಬಿದ ಸತಿಯನ್ನು ನಡುನೀರಿನಲ್ಲಿ ಬಿಟ್ಟು ನಾನು ಹೇಗೆ ಹೊರಡಲಿ? ಪಾಪ! ಅವಳು ಹರಿಣಿಯಂತೆ ಅಲ್ಲಿ ಹುಲಿಯ ಬಾಯಿಯಲ್ಲಿ ಸಿಕ್ಕು ಬಿದ್ದಿದ್ದಾಳೆ! ಅವಳನ್ನು ನಾನು ಆ ಸ್ಥಿತಿಯಿಂದ ತಪ್ಪಿಸುವುದನ್ನು ಕೂಡ ಮಾಡಲಿಲ್ಲ! ಅವಳು ತನ್ನ ಕಾಲಮೇಲೆ ತಾನು ನಿಲ್ಲುವಂತೆ ನಾನು ಮಾಡಿದ್ದರೆ ಅಡ್ಡಿಯಿರಲಿಲ್ಲ. ಆದರೆ ಇದ್ದಕ್ಕಿದ್ದಂತೆ ಆ ಅಸಹಾಯ ಜೀವವನ್ನು ಅಗ್ಗಿಷ್ಟಿಗೆಯಲ್ಲಿಯೇ ನಿಲ್ಲಿಸಿ ಇಲ್ಲಿ ನಾನಿದೇನು ನಡಿಸಿರುವೆನು?!!!' ಹೀಗೆ ಆಲೋಚಿಸುತ್ತಿದ್ದುದೇ ತಡ,

" ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ।
ಅನಾರ್ಯಜುಷ್ಟ ಮಸ್ವರ್ಗ್ಯಮಕೀರ್ತಿ ಕರಮರ್ಜುನ ॥
ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ವಯ್ಯುಪಪದ್ಯತೇ।
**ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ** ॥

ಎಂಬ ಶ್ಲೋಕಗಳು ನಮ್ಮ ನಾಯಕನ ಅಂತರಂಗದೊಳಗಿಂದ ಎಲ್ಲಿಂದಲೊ ದುಮ್ಮಿಕ್ಕಿಸಿ ಅಬ್ಬರಣೆಯಿಂದ ಜಿಗಿಯುತ್ತ ಬಂದವು. ಹೀಗೆಂದೊಡನೆ- ನೆನಪಾದವೆಂದು ನೀವು ತಿಳಿದುಕೊಳ್ಳುವಿರಲ್ಲವೇ? ಛೇ ಛೇ ಹಾಗಲ್ಲ! ನೆನಪಾಗಲಿಕ್ಕೆ ಅವನೆಂದೂ ಆ ಶ್ಲೋಕಗಳನ್ನು ಮುಖೋದ್ಗತವೇ ಮಾಡಿರಲಿಲ್ಲ. ಅಲ್ಲದೆ ಇಂಥವೆರಡು ಶ್ಲೋಕಗಳು ಗೀತೆಯಲ್ಲಿವೆಯೆಂಬುದೂ ಕೂಡ ಆಗ ಆತನ ಸ್ಮೃತಿಪಥದಲ್ಲಿರಲಿಲ್ಲ! ಒಳಗಿಂದ ಅವು ತೂರಿ ತಿಟ್ಟರಿಸಿ ನುಗ್ಗಿ ಜಿಗಿದು ಬರುವಾಗ ಅವುಗಳ ಅಬ್ಬರಣೆಯು ಎಂತಹದಿದ್ದಿತೆಂದರೆ ಮಾತು ಕೇಳದ ಮಗನ ಮೇಲೆ ತಂದೆಯು ಕಂಗೆಟ್ಟು ಕೋಪಿಸಿಕೊಳ್ಳುವಾಗಿನ ಆತನ ಉಗ್ರ ರೌದ್ರವೆಂಥಾದ್ದಿರುವದೋ ಅಂಥಾ ಭೀಕರವಾಗಿತ್ತು ಈ ಅರ್ಭಟ!

ನಮ್ಮ ನಾಯಕನ ಮೈಯ್ಯೆಲ್ಲಾ ಗಡ ಗಡ ನಡುಗುತ್ತಿದೆ!

ಬಾಯಿಯಲ್ಲಿ ಎಸರಿಲ್ಲ! ದಂಗುವರಿದು ನಿಂತಿದ್ದಾನೆ! "ತಂದೇ ಇಂದಿನಿಂದ ನಾನು ಹೀಗೆ ಹುಚ್ಚುತನವನ್ನು ಮಾಡುವುದಿಲ್ಲ! ನಿನ್ನ ರೌದ್ರಕ್ಕೆ ನಾನು ಈಡಲ್ಲ! ನಾನು ಬರೇ ಬೊಗಳುಭಟ್ಟ! ರಣದಲ್ಲಿ ನಿಂತರೆ ಪಾತಾಳಕ್ಕಿಳಿಯುವವ ನಾನು! ತಂದೇ ಕ್ಷಮಿಸು! ಇನ್ನು ಮುಂದೆ ಎಷ್ಟು ಕಾಲ ಹೋದರೂ ಸರಿ, ನಾನು ನಿನ್ನ ನಿರ್ಣಯದ ಗಳಿಗೆ ಬರುವ ವರೆಗೆ ಸುಮ್ಮಗೆ ಕಾದುಕೊಂಡು ಇರುತ್ತೇನೆ!!!" ಎಂದು ಅಂದುಕೊಳ್ಳುತ್ತ ಮೆಲ್ಲನೆ ಅಲ್ಲಿಂದ ಹೆಜ್ಜೆಯನ್ನು ಕಿತ್ತಿದನು.

ದಾರಿಯಲ್ಲಿ ನಮ್ಮ ನಾಯಕನು ಅತ್ಯಾಶ್ಚರ್ಯದಿಂದ ಹೀಗೆ ಅಂದುಕೊಂಡನು– "ಆಹಾ! ಇಂದಿನ ಶ್ಲೋಕಗಳು ಭಗವದ್ಗೀತೆಯ ಮೂಲಸೂತ್ರಗಳಾಗಿರಬೇಕೇನು? ಅದನ್ನು ಅರ್ಜುನನಿಂದ ಆಚರಣೆಯಲ್ಲಿ ತರಿಸುವುದಕ್ಕಾಗಿಯೇ ಉಳಿದೆಲ್ಲ ಗೀತೆಯು ಹುಟ್ಟಿರಬೇಕೇನು? ಈ ಶ್ಲೋಕಗಳೇ ಗೀತೆಯಲ್ಲಿ ಭಗವಂತನ ಬಾಯಿಯಿಂದ ಬರುವ ಮೊಟ್ಟ ಮೊದಲಿನ ವಚನಗಳಾಗಿರಬಹುದೇನು?" ಹೀಗೆಂದು ಆಲೋಚಿಸುತ್ತ ತನ್ನ ಕೋಣೆಗೆ ಬಂದು ಪುಸ್ತಕವನ್ನು ತೆರೆದು ನೋಡುತ್ತಾನೆ. ನಿಜವಾಗಿಯೂ ಅವೇ ಆ ದೇವದೇವನ ಮೊಟ್ಟಮೊದಲ ವಚನಗಳಾಗಿದ್ದವು! ಈ ಮಾತು ನಮ್ಮ ನಾಯಕನಿಗೆ ಇದಕ್ಕಿಂತ ಮೊದಲಿಗೆ ಎಂದೂ ಲಕ್ಷ್ಯಕ್ಕೆ ಬಂದಿದ್ದಿಲ್ಲ. ಇಂದೇ ಹೊಸದಾಗಿ ಕಂಡು ಬಂತು!!!

ಪಾಶ್ಚಾತ್ಯರ ಆಧುನಿಕ ಅನುಭಾವಶಾಸ್ತ್ರದಲ್ಲಿ–

"Dialogues between the surface consciousness and another inteligence which perparts to be divine"

ಎಂದು ಹೇಳುತ್ತಿರುವ ಪ್ರಕಾರವೂ ನಮ್ಮ ನಾಯಕನ ಇಂದಿನ ಪ್ರಕಾರವೂ ಒಂದೇ ಎಂದು ನನ್ನ ಅನಿಸಿಕೆ. ಅದಿರಲಿ ಮರುದಿನವೇ ಜ್ಞಾನಭಿಕ್ಷುವು ಅಲ್ಲಿಂದ ತನ್ನೂರಿಗೆ ಕುಂಟೆಯನ್ನು ಕಿತ್ತಿದನು.

---

೨

# ಅಂಧಕಾರ

" ಪರಿಪೂರ್ಣ ಚಂದ್ರಮಂಡಲದೊಳಡಗಿದಂತೆ-
ಯಿರುತಿಹನಾತ್ಮಕಾಂತಿಯೊಳು ॥
ಪರಿದು ಕಾರ್ಮುಗಿಲು ಚಂದ್ರಗೆ ಕವಿದಂತೆ ಮೋ-
ಹರಿಸುವುದೊಡ **ನಂಧಕಾರ** ॥
ಪ್ರಭೆ ತೋರಿದಾಗ ಬ್ರಹ್ಮಾನಂದವಪ್ಪುದಾ
ಪ್ರಭೆ ಮಾಸಲೊಡನೆ ನೋವಹುದು ॥
ಅಭಯ ಮುಕ್ತಿಯು ಸುಖ ಸಂಸಾರ ದುಃಖವೆಂ-
ಬುಭಯವ ಪರಕಿಸುತಿಹನು ॥"

**—ರತ್ನಾಕರಸಿದ್ಧ**

## ಎರಡನೆಯ ಭಾಗ

### (೧೩)

" **ಕಾಲೋಽಯಂ** ಭಗವಾನ್ ವಿಷ್ಣುರನಂತಃ ಪರಮೇಶ್ವರಃ ॥" ಎಂಬ ಮಂತ್ರವನ್ನು ಇನ್ನು ಮುಂದೆ " **ಕಾಳೋಽ**ಯಂ ಭಗವಾನ್ ವಿಷ್ಣುರನಂತಃ ಪರಮೇಶ್ವರಃ " ಎಂದು ತಿದ್ದುಪಡಿ ಮಾಡಿಕೊಳ್ಳಬೇಕಾಗುವ ಪ್ರಸಂಗವು ಬರುತ್ತದೆ. ಮಹಾ**ಕಾ**ಲನು ಮಹಾ**ಕಾಳ**ನಾಗಿ

ಬಿಟ್ಟಾಗ ಮೂರುಲೋಕದ ಗಂಡನಾದ ಕಡುಗಲಿ ಪಾರ್ಥನದೂ ಕೂಡ ಕಂತೆ ಕಿತ್ತಿ ಹೋಯಿತು !!!

" ದಂಷ್ಟ್ರಾ ಕರಾಲಾನಿ ಚ ತೇ ಮುಖಾನಿ
ದೃಷ್ಟ್ವೈವ ಕಾಲಾನಲ ಸನ್ನಿಭಾನಿ ||
ದಿಶೋ ನ ಜಾನೇ ನ ಲಭೇ ಚ ಶರ್ಮ
ಪ್ರಸೀದ ದೇವೇಶ ಜಗನ್ನಿವಾಸ ||
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾಂತರಾತ್ಮಾ
ಧೃತಿಂ ನ ವಿಂದಾಮಿ ಶಮಂಚ ವಿಷ್ಣೋ ॥ "

" ಕರಾಳ ದಾಡೆಗಳ ನಿನ್ನ ಕಾಲಾಗ್ನಿಸದೃಶ ರುದ್ರರೂಪವನ್ನು ನೋಡಿ ನಾನು ದಿಕ್ಕುಗೆಟ್ಟು ಹೋಗಿದ್ದೇನೆ, ಅಂತಃಸ್ವಾಸ್ಥ್ಯವು ಅಳಿದು ಬಿಟ್ಟಿದೆ. ನಿನ್ನನ್ನು ಕಂಡು ಖತಿಗೆಟ್ಟು ಧೈರ್ಯಹೀನನಾಗಿದ್ದೇನೆ. ತಾಳ್ಮೆಗೆಟ್ಟು ತೆಪ್ಪಗಾಗಿದ್ದೇನೆ. ದೇವೇಶಾ ! ಜಗದೊಡೆಯಾ ! ಕರುಣಿಸು ಕರುಣಿಸು !!! "

" ಅದ್ಭುತಂ ರೂಪಮುಗ್ರಂ " " ರೂಪಂ ಘೋರಂ " ಎಂದು ಗೀತೆ ಬಣ್ಣಿಸುವ ಈಶರೂಪಕ್ಕೆ ಗಂಡರಗಂಡನೂ ಕೂಡ " ಸಗದ್ಗದಂ ಭೀತ ಭೀತಃ ಪ್ರಣಮ್ಯ " ನಾಗಿ " ಭಯೇನ ಚ ಪ್ರವ್ಯಥಿತಂ ಮನೋಮೇ " ಎಂದು ಗೋಳಿಡುವಾಗ ಅನ್ನಿಗರ ಪಾಡೇನು ! " ಮಾ ಭೈಃ ! ಮಾ ಶುಚಃ ! ಮಾ ತೇ ವ್ಯಥಾ ! ಮಾ ಚ ವಿಮೂಢ ಭಾವೋ ! " ಎಂದು ಆ ದೇವದೇವನೇ ಅಭಯುವನ್ನಿತ್ತರೆ ಆಗ ತಾನೆ ಇಂಥ 'ಭಯಭೀತ' ಜೀವಗಳಿಗೆ ಸ್ಥೈರ್ಯಬಂದೀತು. ಅಲ್ಲದೆ ಅನ್ಯ ಮಾರ್ಗವಿಲ್ಲ.

" ಮಾನವನು ಜಗತ್ತಿನಲ್ಲಿ ಪ್ರೇಮ, ಜೀವನ, ಸೌಂದರ್ಯ ಮತ್ತು ಶುಭ ಇವುಗಳನ್ನೇ ಕಾಣಲೆಳಸಿ ಆ ಪ್ರಕೃತಿದೇವಿಯ ಭೀಕರ ಮೃತ್ಯುವೇಷದ ಕಡೆಗೆ ಕಣ್ತೆರೆದು ನೋಡುವದಿಲ್ಲ; ದೇವನನ್ನು ಶುಭಂಕರನಾದ ಶಿವನನ್ನಾಗಿ ಭಜಿಸಲೆಳಿಸುವನೇ ಹೊರತು ಭಯಂಕರನಾದ ರುದ್ರನನ್ನಾಗಿ ಅರ್ಚಿಸಲೊಪ್ಪನು. ಆದರೆ ಜಗತ್ಕಾರ್ಯಕ್ಕೆ ಎರಡೂ ಸ್ವರೂಪಗಳ ಅಗತ್ಯವು ಸಮಾನವಾಗಿದೆ. ತ್ರಾಣ ಬಲ ಪರಾಕ್ರಮಗಳ

ಅಪರಿಮಿತ ಪ್ರಕಾಶವು, ಕ್ರಿಯಾ ಸಹಕಾರಿಯಾದ ಹೃದಯ ಮಾಧುರ್ಯ ದೊಡನೆ ಸಾಮರಸ್ಯವನ್ನು ಹೊಂದಬೇಕು. ಇಂದ್ರನ ಕೋಲುಮಿಂಚು ಸೋಮನ ಅಮೃತಕಿರಣಗಳೊಳಗಿಂದ ಸ್ಫುರಿಸಬೇಕು. ಇದೇ ಉಭಯ ಮುಖವಾದ ಪೂರ್ಣತೆಯು" ಎಂದು ಅರವಿಂದರು ನವಯುಗದ ಜಯ ಭೇರಿಯನ್ನು ಮೊಳಗಿಸುತ್ತಿದ್ದಾರಲ್ಲವೆ !

ಪೂರ್ವಸಾಧಕನು ಭಕ್ತಿಯೋಗದವನಾದರೆ ಉತ್ತರಸಾಧಕನು ಶಕ್ತಿಯೋಗದವನಾಗಬೇಕಾಗುತ್ತದೆ. ಅಂತಲೇ ಸತ್ಯಸೌಂದರ್ಯಗಳ ಸರ್ವಾಂತರ್ಯಾಮಿತ್ವವನ್ನು ಅನುಭವಿಸಿ ಮುಗಿಸಿದಾಗಲೇ ಶಕ್ತಿಲಾಭದ ಪೂರ್ವಸಿದ್ಧತೆಗೆಂದು ಸಾಧಕನೆಡೆಗೆ ರುದ್ರನ ಭೂತಗಣದ ಜಂಗು ಳಿಯೊ ಎನ್ನುವಂತೆ ಅಪರಿಹಾರ್ಯ ಸಂಕಟಗಳ ಸಮೂಹವು ಒಡ್ಡಿ ಬರುತ್ತದೆ. ಓದಿದಲ್ಲದೆ ಪಂಡಿತನಾಗಲಾರನೆಂಬಂತೆ– ಕಾದಿದಲ್ಲದೆ ಕಲಿ ಯಾಗಲಾರನಲ್ಲವೆ ? 'ನಾಯಮಾತ್ಮಾ ಬಲಹೀನೇನ ಲಭ್ಯಃ' ಎಂಬ ಮಾತು ಈ ಅವಸ್ಥೆಗೆ ತುಂಬಾ ಸಮನ್ವಯಿಸುತ್ತದೆ.

ಮೊದಲಿಗೆ ಭಕ್ತಿಯ ಅಪೇಕ್ಷೆ ಹುಟ್ಟಬೇಕಾದರೆ ಜಗತ್ತಿನಲ್ಲಿ ಹರಡಿ ಕೊಂಡಿರುವ ದುಃಖದ ದರ್ಶನವೇ ಕಾರಣವಾಗುವಂತೆ ಈಗ ಶಕ್ತಿಯ ಆಕಾಂಕ್ಷೆ ಹುಟ್ಟುವುದಕ್ಕೆ ಅದಕ್ಕಿಂತ ಹೆಚ್ಚಿನ ಸಂಕಟಪರಂಪರೆಗಳು ಸ್ವತಃದ ಮೇಲೆಯೇ ದಾಳಿ ಮಾಡಬೇಕಾದುದು ಸಂಗತವಲ್ಲವೆ ? ಅದಿಲ್ಲ ದಿದ್ದರೆ ಜೀವನಿಗೆ ಆ ಶಕ್ತಿಗಿಕ್ತಿಯ ಅಗತ್ಯವೇಕೆ ತೋರೀತು ? "ನನ್ನ ಶಕ್ತಿ ನನಗೆ ಸಾಲದು, ಆತನ ಬಲವು ಬೆಂಬಲಕ್ಕೆ ಬಂದಲ್ಲದೆ ಸಾಗದು." ಎಂದೊಂದು ಕಾಲದಲ್ಲಿ ಕಾತರಿಸಿದ್ದರಿಂದಲೇ ಇಂದು ಅರವಿಂದರು ಅಂಥ ಅಘಟಿತ ಅಜೇಯ್ಯ ಶಕ್ತಿಯ ಸಲುವಾಗಿ ಇಂದ್ರಜಿತುವಿನ ನಿಖುಂಬಿಳಾ ಯಾಗವನ್ನು ಪಾಂಡೀಚೇರಿಯಲ್ಲಿ ಹೂಡಿಕೊಂಡು ಕೂಡಲೇಬೇಕಾ ಯಿತು !!!

ದೇವನು ತನ್ನ ಆಳುಗಳೆಂದು ಆರಿಸಿದವರಿಗೇ ಈ ಭಕ್ತಿ ಶಕ್ತಿಗಳ ಮಧ್ಯದಲ್ಲಿರುವ ಅಂಧಕಾಸುರನ ಕೋಟೆಯಲ್ಲಿ ಕಾದಾಡಲು ಕಲಿಸು ತ್ತಾನೆ.

“ ಆತ್ಮಪ್ರಕಾಶನವು ಧ್ಯಾನ ನಿಮಗ್ನಾವಸ್ಥೆಯು. ಅದು ಪೂರ್ವರಂಗವನ್ನು ರೂಪಿಸುತ್ತದೆ. **ಎಷ್ಟೋ ಸಾಧಕರು ಇದರ ಆಚೆಗೆಂದೂ ಹೋಗರು.** ಈ ಪ್ರಕಾಶನವು ಪರಬ್ರಹ್ಮನ ನಿಶ್ಚಿತ ಗೋಚರಣೆಯನ್ನೂ ದೈವೀ ಸಾನ್ನಿಧ್ಯದ ಅನಿಸಿಕೆಯನ್ನೂ ತರುವದು; ಆದರೆ ನಿಜ ಐಕ್ಯವನ್ನಲ್ಲ. ಇದು ನಲಿವೆಯ ಮೆಟ್ಟು........ **ಒಳ್ಳೇ ಹೆಚ್ಚಿನ ಸಾಹಸದ ಸಾಧಕರ ವೃದ್ಧಿಕ್ರಮದಲ್ಲಿ ಮಾತ್ರ ಆತ್ಮಿಕ ಕಾಳರಾತ್ರಿಯು ಬರುವದು.** ಆತ್ಮ ಪ್ರಕಾಶನದ ಮೆಟ್ಟಿನ ಮೇಲೆ ಈಶ ಸಾನ್ನಿಧ್ಯದ ಅನುಭವದಿಂದ ಪ್ರಜ್ವಲಿತವಾದ ಚೇತನವೀಗ ಅದರಷ್ಟೇ ಪ್ರಬಲವಾದ ‘ಈಶಸಾನ್ನಿಧ್ಯನಾಸ್ತಿ’ಯ ಅನಿಸಿಕೆಯಲ್ಲಿ ಒದ್ದಾಡುವದು ” ಎಂಬ ಪಾಶ್ಚಾತ್ಯ ಆಧುನಿಕ ಅನುಭಾವ ಶಾಸ್ತ್ರಜ್ಞರ ಅಭಿಪ್ರಾಯವು ಮೇಲಿನ ನಮ್ಮ ಮಾತನ್ನು ಬಲಪಡಿಸುವದಿಲ್ಲವೆ ?

ನಮ್ಮ ನಾಯಕನ ಆತ್ಮಪ್ರಕಾಶನದ ಅವಸ್ಥೆಯು ಹಿಂದೆ ಒಮ್ಮೆ ಮೈದಾಳಿ, ಮುಂದೆ ಒಂದೂವರೆ ವರುಷದ ವರೆಗೆ ಮಿಂಚುತ್ತ ಮಸುಳುತ್ತ ಬಂದು, ಕೊನೆಗೆ ಅಂಧಂತಮಸ್ಸಿನ ತಗ್ಗಿಗೆ ಹೇಗೆ ಬಿದ್ದಿತೆಂಬುದರ ಕತೆಯನ್ನು ಇನ್ನು ಮೇಲೆ ಹೇಳುವೆನು ಕೇಳಿರಿ.

## (೧೪)

ಆಶ್ರಮ ಚಿಕಿತ್ಸಾಲಯದಿಂದ ಮರಳಿ ಬಂದಾಗಿನಿಂದ ನಮ್ಮ ನಾಯಕನ ಅನುಭಾವಜೀವನದಲ್ಲಿ ಎರಡನೆಯ ವರುಷವು ಆರಂಭವಾಯಿತು. ಮೊದಲಿನ ಆರು ತಿಂಗಳಲ್ಲೆಲ್ಲಾ ನಡೆದ ಕಾರ್ಯವೆಂದರೆ, ಮೊದಲಿನೆರಡು ತಿಂಗಳು ವೇದಾಭ್ಯಾಸ, ಆ ಮೇಲೊಂದು ತಿಂಗಳು ಪುನಃ ಆಶ್ರಮಚಿಕಿತ್ಸಾಲಯಕ್ಕೆ ಹೋದದ್ದು, ಮುಂದೊಂದೆರಡು ತಿಂಗಳು ಬೇರೆ ಬೇರೆ ಗೆಳೆಯರೂರುಗಳಲ್ಲಿ ವಿಶ್ರಾಂತಿ. ಇಷ್ಟೆಲ್ಲ ಮುಗಿಸಿಕೊಂಡು ತನ್ನೂರಿಗೆ ಪುನಃ ತಿರುಗಿ ಬಂದ ಮೇಲೆ ಹಾಗೂ ಹೀಗೂ ಒಂದು ತಿಂಗಳು ಕಳೆಯಿತು. ಇಷ್ಟರೊಳಗಾಗಿ ಒಂದೆರಡು ತಿಂಗಳ ಹಿಂದೆಯೇ ನಮ್ಮ ನಾಯಕನ ತಾಯಿಯು ಇನ್ನು ಮುಂದೆ ಹೊಸ

ಸಾಲ ಸಿಗುವ ಸಂಭವವಿಲ್ಲದ್ದನ್ನರಿತು- ಉಪಾಯವಿಲ್ಲದೆ ಕಷ್ಟತದ ರಾಜ್ಯವನ್ನು ಕಡಿಮೆ ಮಾಡುವ ಆಲೋಚನೆಯಲ್ಲಿದ್ದಳು. ಅಷ್ಟರಲ್ಲಿ ಒಬ್ಬ ಸಾಲಗಾರಳು ಸತ್ತಳು. ಅವಳ ಜೆಂದಗಾನಿಗೆ ಮೂರುನಾಲ್ಕು ಜನರು ಬಾಧ್ಯಸ್ಥರಾಗಿ ಬಂದದ್ದರಿಂದ ತಮಗೆ ಮುಂದಿಯಿಂದ ಬರತಕ್ಕ ಹಣವನ್ನೆಲ್ಲ ಅವರು ಆಗಿನದಾಗ ಹಿಂದಿರುಗಿ ಇಸಿದುಕೊಳ್ಳುವುದನ್ನು ನಿರ್ಧರಿಸಿದರು. ಆದ್ದರಿಂದ ಜ್ಞಾನಭಿಕ್ಷುವಿನ ತಾಯಿಯು ಏನಾದರೂ ಮಾಡಿ ಅವರ ಸಾಲವನ್ನು ತೀರಿಸಲೇಬೇಕಾಯಿತು. ಅತ್ತ ಹೊಸದಾಗಿ ಸಾಲ ಹುಟ್ಟುವುದೂ ಕಟ್ಟಾಯಿತು; ಇತ್ತ ಹಳೆಯ ಸಾಲವನ್ನು ತೀರಿ ಸಲೂ ಬೇಕಾಯಿತು. ಹೀಗಾಗಿ ಅವಳು ಎತ್ತು ಮುಟ್ಟುಗಳನ್ನೆಲ್ಲ ಮಾರಿ ಒಬ್ಬ ಸಾಲಿಗರ ರಿಣವನ್ನು ಹರಿದಳು. ಸುಮಾರು ಐನೂರು ಮುಟ್ಟಿತು. ಇನ್ನು ಅನ್ನಿಗರದೊಂದು ಸಾವಿರದ ಸುಮಾರು ಉಳಿಯಿತು. ಜ್ಞಾನಭಿಕ್ಷುವು ಊರಲ್ಲಿದ್ದಾಗಲೇ ಇಷ್ಟೆಲ್ಲಾ ನಡೆದಿದ್ದಿತು. ಆ ಮೇಲೆಯೇ ಅವನು ಪುನಃ ಆ ಹಿಂದಿನ ಆಶ್ರಮವೈದ್ಯರ ಕಡೆಗೆ ಹೋದದ್ದು.

ಅಂತೂ ಹೀಗೆ ಒಟ್ಟು ಸಾಲದಲ್ಲಿ ಮೂರರೊಳಗೊಂದು ಭಾಗವಾದರೂ ಸುಸೂತ್ರವಾಗಿ ಮುಟ್ಟಿದುದನ್ನು ನೋಡಿ ನಮ್ಮ ನಾಯಕನೂ ಆತನ ಸತಿಯೂ ಒಳಗೊಳಗೇ ದೇವನಿಗೆ ಧನ್ಯವಾದಗಳನ್ನರ್ಪಿಸುತ್ತಿದ್ದರು.

ಆ ಮೇಲೆ ಆತನು ಮುಂದೆ ಆವೂರು ಈವೂರು ಅಲೆದಾಡಿ ಕೆಲ ದಿನಗಳ ಮೇಲೆ ತಿರುಗಿ ಊರಿಗೆ ಬಂದನೆಂಬುದನ್ನು ಮೇಲೆಯೇ ಹೇಳಿರುವೆನಷ್ಟೇ. ಅದಿರಲಿ. ನಮ್ಮ ನಾಯಕನ ಜೀವನದ ಇತ್ತೀಚಿನ ಕೆಲ ವರುಷಗಳ ಜೀವನವೈಚಿತ್ರ್ಯದ ಕೆಲವೊಂದು ಕ್ರಮವನ್ನು ಹಿಂದೊಮ್ಮೆ ನಿಮಗೆ ನಾನು ಹೇಳಿರುವೆನಲ್ಲವೆ? ಅದೇನೆಂದರೆ- ಡಿಸೆಂಬರದಲ್ಲಿ ಹೊಸ ಹಾದಿ ಹೊಳೆಯುವುದು, ಆ ಮೇಲೆ ಸುಮಾರು ಆರೇಳು ತಿಂಗಳು ಆ ಹೊಸಹೊಳವಿನ ಮೇಲೆ ಸೊಗಸಾಗಿ ಹಾರಾಡುವುದು, ಅಷ್ಟರಲ್ಲಿ ಏನಾದರೊಂದು ಅಕಲ್ಪಿತ ಜಂಜಾಟವು ಆಕಸ್ಮಿಕವಾಗಿ ಮೈಮೇಲೆ ಬರುವುದು, ತಿರುಗಿ ಹೊಸ ಡಿಸೆಂಬರ ಸಮೀಪಿಸಿದ ಹಾಗೆಲ್ಲಾ ಹೊಡೆತಗಳ

ಸುರಮಳೆ ಬೆಳೆದು ಬಂದು ಎಲಿ ಎಲಿ ಒದ್ದಾಡಿಸುವುದು, ಕೊಟ್ಟ ಕೊನೆಗೆ ಕತ್ತಲಲ್ಲಿ ಕಂಗೆಟ್ಟ ಜೀವಕ್ಕೆ ಹೊಸ ಬೆಳಕು ಮಾರ್ಗದರ್ಶಕವಾಗುವುದು! ಈ ಚಕ್ರವು ನಮ್ಮ ನಾಯಕನಿಗೆ ಒಮ್ಮೆಯಲ್ಲ–ಎರಡು ಸಲವಲ್ಲ ಏಸೋ ವರುಷಗಳಿಂದ ಅನುಭವಕ್ಕೆ ಬಂದ ಮಾತಾಗಿದೆ. ಇದಿರಲಿ.

"ಭಕ್ತಿ ಮಾಧುರ್ಯಗಳ ಮಾರ್ಗವು ಮೊದಮೊದಲಿಗಿನ ಸಾಧಕರ ಮಟ್ಟಿಗೆ ಅವಶ್ಯಕವೇ ಹೊರತು ಅದು ನಮಗಲ್ಲ. ಕಷ್ಟಕ್ಕೆ ನಮ್ಮನ್ನು ಒಪ್ಪಿಸುವುದೇ ನಮ್ಮ ಭಗವತ್ಪಥವು." ಎಂದು "ಆತ್ಮಿಕಕಾಳರಾತ್ರಿ" ಅಥವಾ ಡಾರ್ಕ್‌ನಾಯಿಟ್ ಆಫ್ ದಿ ಸೋಲ್ ಎಂಬ ಶಬ್ದದ ಆದಿ ಪ್ರವರ್ತಕನಾದ ಸೇಂಟ್ ಜಾನ್ ಆಫ್ ದಿ ಕ್ರಾಸ್ ಎಂಬ ಪೂರ್ವಿಕ ಮಹಾನುಭಾವನು ಹೇಳುವಂತೆ ಇನ್ನು ನಮ್ಮ ನಾಯಕನನ್ನು ದೇವರಾಯನು ಮಾಧುರ್ಯಪಥದಿಂದ ದೂರಮಾಡಿ ಅಗ್ನಿಪಥಕ್ಕೆ ಸೇರಿಸಬಿಚ್ಚಿಸುವುದು ಸುಸಂಗತವೇ ಅಲ್ಲವೇ! ಇಷ್ಟುದಿನದ ಮುಗಿಲೊಳಗಿನ ಹಾರಾಟವನ್ನೆಲ್ಲ ಮುಗಿಸಿ ಇನ್ನು "Life is the field of yoga" "ಜೀವನವೇ ಯೋಗಕ್ಷೇತ್ರವು" ಎಂಬ ಅರವಿಂದರ ಅಮರರಾಜ್ಯಕ್ಕೆ ಒಯ್ಯಲೇಬೇಕಲ್ಲವೆ! ಮಗುವು ತಾನಾಗಿ ಹೆಜ್ಜೆಹಾಕದಿದ್ದರೆ ದೇವನು ಸ್ವತಃ ಕೈಹಿಡಿದೆಳೆದು ನಡೆಯಿಸಿಕೊಂಡು ಹೋಗುವುದು ಸಹಜವಲ್ಲವೇ? "ಅಧರಕ್ಕೆ ಕಹಿ–ಉದರಕ್ಕೆ ಸಿಹಿ" ಯಾಗಿದ್ದರೂ ಅದನ್ನು ಆಶೆಪಟ್ಟು ರುಚಿನೋಡುವ ಮಗುಗಳುಂಟೇ? ಒಲ್ಲೆನೆಂದು ಹಿಂದೆಗೆಯುವುದೇ ಸ್ವಾಭಾವಿಕ; ಅದಕ್ಕೆ ತಂದೆ ಒತ್ತಾಯಪಡಿಸುವುದೂ ಅಷ್ಟೇ ಸಹಜ.

ಇಲ್ಲಿ ಸುಖದುಃಖಗಳ ವಿಷಯದಲ್ಲಿ ಒಂದಿಷ್ಟು ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದೇನೆಂದರೆ–ಮನೆಯಲ್ಲಿರುವ ತಾಯಿ ತಂದೆಗಳು ಜಗತ್ತಿನಲ್ಲಿರುವ ರಮ್ಯರೌದ್ರಗಳ ಪ್ರತಿನಿಧಿಗಳು. ತಾಯಿಯ ಸಲಿಗೆಯಲ್ಲಿ ಮಗುವಿನ ತಾತ್ಪೂರ್ತಿಕ ಹಿತವಿದೆ. ತಂದೆಯ ಒತ್ತಾಯದಲ್ಲಿ ಭಾವೀ ಕಲ್ಯಾಣದ ಮುಂಜಾಗ್ರತೆಯಿದೆ. ಇವೆರಡರಲ್ಲಿ ನಮಗೆ ಯಾವುದು ಬೇಡ? ಹೇಳಿರಿ. ಬರೀ ಸಲಿಗೆಯಲ್ಲಿ ಬೆಳೆದರೆ ಕೆಲಸಕ್ಕೆ ಬಾರದ ಉಡಾಳರಾಗುವೆವಾದರೆ ಬರೀ ಒತ್ತಾಯದಿಂದ ಅಮನಸ್ಕರಾಗುವೆವು.

ಆದುದರಿಂದ ಒಂಟೊಂಟಿಯಾದರೆ ಎರಡೂ ಬೇಡ. ಕೊಳೆತ ಭಾಗವನ್ನು ಕೊಯ್ಯುವುದೂ ಬೇಕು, ಕೊಯ್ದು ಉರುಪನ್ನು ನಿವಾರಿಸುವುದೂ ಬೇಕು. ಹೀಗಿಲ್ಲದೆ ಸ್ವಾಸ್ಥ್ಯವಿಲ್ಲ.

ಹೆಣ್ಣು-ಗಂಡು, ಪ್ರೇಮ-ಪರಾಕ್ರಮ, ಕೋಮಲ-ಕಠಿಣ, ಸವಿ ಕಹಿ, ಸುಖ-ದುಃಖ, ಸಲಿಗೆ-ವಕ್ಷತೆ ಈ ಯುಗ್ಮಗಳೆಲ್ಲಾ ದೇವದೇವನ ಮಾತೃಶಕ್ತಿ ಹಾಗೂ ಪಿತೃಶಕ್ತಿ ಇವೆರಡರ ಉಭಯ ಮುಖಕಿರಣ ಗಳಾಗಿವೆ. ಆದುದರಿಂದ ಇವು ನಮಗೆ " ಒಂದು ಬಿಟ್ಟೊಂದು ದೊರೆ ಯುವು "! ಮತ್ತು ಹಾಗೆ ನಾವು ಆಶಿಸಲೂ ಬಾರದು.

ಕಲಿಗೆ ಕದನವಿಲ್ಲದಿದ್ದರೆ ಕಾಲವೆಂಬುದು ಕುತ್ತಿಗೆ ಹಿಚುಕುವ ಕಾಳನಾಗುತ್ತದೆ. ಆದರೆ ಹೇಡಿಗೆ ಹಿಡಿದ ಸ್ಥಳ ಬಿಡುವದೆಂದರೆ ಹರಣಹಾರುತ್ತದೆ. ಒಂದೇ ವಸ್ತುವಿನಲ್ಲಿ ಒಬ್ಬನಿಗೆ ಹುರುಪೂ ಇನ್ನೊ ಬ್ಬನಿಗೆ ಎದೆಗುದಿಯೂ ಏಕೆ? ಅವನ ಬಳಗಿನ ಒಲುಹಿನ ಉಕ್ಕುತ್ತದೆ. ಅವನನ್ನು ಹಾಗೆ ಹಾರಾಡಿಸುತ್ತದೆ, ಇವನ ಉಕ್ಕು ಇವನನ್ನು ಪಾತಾಳ ಕ್ಕಿಳಿಸುತ್ತದೆ. ಹೀಗೆಂದ ಮೇಲೆ ಬಂದದ್ದಕ್ಕೆಲ್ಲ ಎದೆಗುಡುವ ಬಲ ವೊಂದು ನಮ್ಮಲ್ಲಿ ಬಂದುಬಿಟ್ಟರೆ. ಜಗತ್ತಿನಲ್ಲಿ ತುಂಬಿತುರುತ್ತಿರುವ ಕಷ್ಟದ ಕಾವರಕ್ಕೆ ನಾವಂಜುವುದೆಲ್ಲಿ ಉಳಿಯುವುದು ?

ಹಾಗಾದರೆ ಅಂಥ ಶಕ್ತಿಯು ನಮ್ಮಲ್ಲಿ ಸುಮ್ಮಸುಮ್ಮನೆ ಬರು ವುದು ಹೇಗೆ? ಜಗತ್ತಿನಲ್ಲಿ ಪ್ರತಿಯೊಂದು ಮಾತು ತನ್ನ ತನ್ನ ನಿಯ ಮಕ್ಕೆ ಅನುಸರಿಸಿಯೇ ಉಂಟಾಗುತ್ತಿರುವುದು ನಿಮ್ಮ ನಿರೀಕ್ಷಣ ದಲ್ಲಿಲ್ಲವೆ?— ಎಷ್ಟೋ ನಿಯಮಗಳು ನಮ್ಮ ಪರಿಚಯದವರೆಗೆ ಇನ್ನೂ ಮುಟ್ಟಿರಲಿಕ್ಕಿಲ್ಲವೆಂಬ ಮಾತು ಬೇರೆ. ಗೀತೆಯಲ್ಲಿ ದೇವದೇವನು ತನ್ನ ಭಕ್ತಸಖನಿಗೆ ಹೇಗೆ ಹೇಳುತ್ತಾನೆ? ಗೊತ್ತಿಲ್ಲವೆ?

" ಮಯೈವೈತೇ ನಿಹತಾಃ ಪೂರ್ವಮೇವ। ನಿಮಿತ್ತ ಮಾತ್ರಂ ಭವ ಸವ್ಯಸಾಚಿನ್ ॥ " " ಇವರೆಲ್ಲರೂ ಮೊದಲೇ ನನ್ನಿಂದ ಹತರಾಗಿ ದ್ದಾರೆ, ಧನುರ್ಧರನೇ ನೀನು ನಿಮಿತ್ತಮಾತ್ರನಾಗು " ಎಂದು ತನ್ನ ವಿಶ್ವನಿಯಮವನ್ನು ಅಲ್ಲಿ ಸೂಚಿಸಿದಂತಾಗಿಲ್ಲವೆ?

ಆದುದರಿಂದ ಈಗ 'ಗರಡೀಸಾಧಕ' ಮಾಡದೆ ನಮ್ಮ ನಾಯಕನಿಗೆ

ಅಂಥ ತ್ರಾಣವು ಹೇಗೆ ಬರಬೇಕು? ಅದನ್ನು ಬರಿಸುವುದಕ್ಕಾಗಿಯೇ ದೇವರಾಯನು ಇಂದು ಮತ್ತೊಂದು ಆಟವನ್ನು ಹೂಡಿದನು. "ಜ್ವಲತಿ ಚಲಿತೇಂಧನೋಗ್ನಿ । ರ್ವಿಪ್ರಕೃತಃ ಪನ್ನಗಃ ಫಣಾಂ ಕುರುತೇ ॥ ಪ್ರಾಯಃ ಸ್ವಂ ಮಹಿಮಾನಂ। ಕ್ಷೋಭಾತ್ ಪ್ರತಿಪದ್ಯತೇ ಹಿ ಜನಃ ॥" "ಸರಿಸಾಡುತ್ತಿದ್ದರೆ ಉರುವಲು ಉರಿಯುವದು. ಕೆಣಕಿದರೆ ನಾಗ ಹೆಡೆದೆಗೆಯುವದು. ಅದರಂತೆ ಕ್ಷೋಭೆ ಹೆಚ್ಚಿದರೇನೇ ಮಾನವನ ಕೆಚ್ಚು ಹೊರಬೀಳುವುದು"ಎಂದು ಕಾಳಿದಾಸನು ಹೇಳಿಲ್ಲವೆ? ಒಂದಿಷ್ಟು ಸಾಲಮುಟ್ಟಿದ ಮೇಲೆ ಆತನ ತಾಯಿಗೆ ಒಂದಿಷ್ಟು ಹಗುರಾದಂತಾಗಲು ಈಗ ಅವಳು ಮೆಲ್ಲನೆ ಮತ್ತೆ ಎತ್ತು ಮುಟ್ಟುಗಳನ್ನು ಹೊಸದಾಗಿ ನೆರವಹತ್ತಿದಳು. ಅದರ ಫಲವೆಂದರೆ ಪುನಃ ಮುಂಚಿನ ಗೋಳಾಟ. ಆಗ ನಮ್ಮ ನಾಯಕನೂ ಆತನ ಸತಿಯೂ ತಮ್ಮ ತಮ್ಮೊಳಗೆ ಹೀಗೆ ಮಾತಾಡಹತ್ತಿದರು—

"ದೇವರು ಏನೋ ಆಕೆಗೆ ತಾನಾಗಿಯೇ ಸದ್ಬುದ್ಧಿ ಹುಟ್ಟುವಂತೆ ಮಾಡಿದ್ದನು. ಆದರೆ ಮತ್ತೆ ಈಗ ಅದೇ ಹುದುಲಿನ ದಾರಿಗೇ ನೂಕಹತ್ತಿದನಲ್ಲಾ! ಏನೋ ಒಂದಿಷ್ಟು ಸುಚಿಹ್ನವೆಂದೆನ್ನುವಷ್ಟರಲ್ಲಿಯೇ ಮತ್ತೆ ದುಶ್ಚಿನ್ಹಕ್ಕೆ ಆರಂಭವೇ ಆಯಿತಲ್ಲಾ! ಈಗೇನು ಮಾಡುವುದು? ಆವಳೋ ಹೇಳಿದರೆ ಕೇಳದವಳು. ಒತ್ತಾಯಪಡಿಸಿ ಅವಳ ಕೈಯೊಳಗಿನ ಕಾರಭಾರವನ್ನು ಕಸಿದುಕೊಳ್ಳದಿರುವುದಕ್ಕೆ ನಮಗೆ ಎರಡು ಕಾರಣಗಳಿವೆ. ಒಂದು—ನನ್ನ ಆಧ್ಯಾತ್ಮಿಕಜೀವನವು ನಿಶ್ಚಲಿತ ಸ್ಥಿತಿಗೆ ಬಂದು ಮುಟ್ಟುವ ವರೆಗೆ ನನ್ನ ಮನವೇ ಇನ್ನಾವುದರೊಳಗೂ ಸರಿಯಾಗಿ ಭಾರಹೊತ್ತು ನಿಲ್ಲಲಿಕ್ಕೆ ಒಲ್ಲದು. ಅಲ್ಲದೆ ಎರಡನೆಯ ಕಾರಣವೇನೆಂದರೆ— 'ನಾನೇ ಅವಳಾಗಿದ್ದರೆ, ತಿಳಿದೋ ತಿಳಿಯದೆಯೋ ನಾನೇ ಅವಳಂತೆ ಮಾಡುತ್ತಿದ್ದರೆ, ಆಗ ನನ್ನ ಕಾರಭಾರದಲ್ಲಿ ಹಣ್ಣಾದವರು ನನ್ನ ಮನಸ್ಸು ಮುರಿದು ಮೂಲಿಗೆ ಕೂಡಿಸಲೆಳಸಿದ್ದರೆ ಆಗ ನಾನು ಏನೇನು ಭಾವಿಸುತ್ತಿದ್ದೆನು?' ಎಂಬ ಆಲೋಚನೆಯೊಂದು ನನಗೆ ತುಂಬಾ ಅಡ್ಡಬರುತ್ತಿದೆ.ಅದಕ್ಕೆಂತಲೇ ಎಂದಿನಿಂದಲೂ ನಾನು ಅವಳಕಡೆಯಿಂದಲೇ ಮೊಳಹಾಕಿಸಬೇಕೆನ್ನುತ್ತಿದ್ದೇನೆ. ಈಗೇನು ಮಾಡುವುದು?

ಈಗ ಇಷ್ಟು ಸೂತ್ರ ಮಾಡುವಾ—ದುಡ್ಡು ಹಿಂದಿನಿಂದ ಕೊಡುವ ಕರಾರು ಮಾಡಿ ತಂದ ಆ ಎತ್ತನ್ನು ಅದರೊಡೆಯನಿಗೆ ಏನಾದರೂ ಹೇಳಿಕೊಂಡು, ಈತನಿಗೂ ಹೊಟ್ಟೆ ಹೊಕ್ಕು ಹೇಳಿ, ಅವನದವನಿಗೆ ತಿರುಗಿಕೊಡಿಸುವಾ, ಅಷ್ಟಾದರೆ ಮುಂದೆ ಕೆಲವು ಹೊಲಗಳನ್ನು ಲಾವಣಿಗೆ ಕೊಡುವ ಪ್ರಸಂಗವು ತಾನಾಗಿಯೇ ಬರುತ್ತದೆ. ಒಂದರ್ಧ ಹೊಲಗಳನ್ನು ಮನೆಯಿಂದಲೇ ಮಾಡಿದರೆ ಬಾಡಿಗೆತೋಡಿಗೆಯಿಂದ ಕೆಲಸಮಾಡಿಕೊಳ್ಳಲಿಕ್ಕೆ ಬರುತ್ತದೆ. ಈಗ ಇಷ್ಟಾದರೆ ಸಾಕು. ಹೆಚ್ಚು ಗುಂಬ ನೀರಿಗೆ ಇಳಿಯುವುದಕ್ಕೆ ನನಗೆ ಯಾಕೋ ಪ್ರವೃತ್ತಿಯೇ ಬರಲೊಲ್ಲದು. ''

ಇದೀಗ ರಾತ್ರಿ ಸರಿಹೊತ್ತಾಗಿದೆ. ಆತನ ತಾಯಿಯು ತನ್ನ ಸಲ್ಮೆಯ ದನಕರುಗಳನ್ನು ಕಟ್ಟಿದ ಬೇರೊಂದು ಮನೆಯಲ್ಲಿ ಮಲಗಿಕೊಂಡಿದ್ದಾಳೆ. ನಮ್ಮ ನಾಯಕನು ಅಲ್ಲಿಗೆ ಹೋಗಿ ಅವಳನ್ನೆಬ್ಬಿಸಿ ಹೀಗೆ ಮಾತು ಹೇಳಿದನು—

'' ಈಗ ಏಸೋ ವರುಷಗಳಿಂದ ಸಾಲದಲ್ಲಿ ಸಂಕಟ ಪಡುತ್ತಿದ್ದ ನಮಗೆ ದೇವರು ಈಗೀಗ ಹಗುರು ಮಾಡಹತ್ತಿದ್ದಾನೆ. ಅಂಥಾದ್ದರಲ್ಲಿ ನಾವೂ ಅದಕ್ಕನುಕೂಲವಾಗಿಯೇ ಇದ್ದರೆ ಬೇಗನೆ ನಾವು ಆ ಹುದುಲಿನೊಳಗಿಂದ ಪಾರಾಗುವೆವಲ್ಲವೇ? ಈಗ ಉದ್ದರಿ ತಂದ ಎತ್ತನ್ನು ಏನಾದರೂ ಹೇಳಿಕೊಂಡು ಅದರೊಡೆಯನಿಗೆ ಅವನದವನಿಗೆ ತಿರುಗಿ ಕೊಡೋಣ. ಹಿಂದಿನಿಂದ ನಮ್ಮ ಹೊಲಗಳನ್ನು ಹೇಗಾದರೂ ಬಾಡಿಗೆ ತೋಡಿಗೆಯಿಂದ ಸಾಗಿಸೋಣ. ಮತ್ತೆ ಕಮತವನ್ನಿಟ್ಟರೆ ಅದರ ಹಿಂದೆ ಹನ್ನೆರಡು ಉಪದ್ವ್ಯಾಪಗಳು ಬೆನ್ನುಹತ್ತಿರುತ್ತವೆ. ಆದ್ದರಿಂದ ಈಗಿನ ಮಟ್ಟಿಗೆ ಇಷ್ಟು ಮಟ್ಟಿಗೆ ಏನಾದರೂ ಮಾಡೋಣ. ''

ಅದಕ್ಕೆ ಅವಳು— '' ಬಾಡಿಗೆ ತೋಡಿಗೆಯವರು ನಮ್ಮ ಹೊತ್ತಿಗಾಗಲಾರರು. ಹಲ್ಲಿಗೆ ಅರಿವೆ ಹಚ್ಚಿಕೊಂಡು ಅವರ ಮನೆಗೆ ಎಡತಾಕುವುದು ನನ್ನ ಕಡೆಯಿಂದ ಸರ್ವಥಾ ಆಗಲಾರದು. '' ಎಂದಳು.

ಮತ್ತೆ ಈತನೆಂದನು— '' ನಾವು ಏಸೋ ವರುಷಗಳಿಂದ ಎಷ್ಟೋ ಕಷ್ಟಗಳನ್ನು ಭೋಗಿಸಲಿಕ್ಕೆ ಹೊತ್ತೇ ನಿಂತಿರುವೆವು. ಅಂಥಾದ್ದರಲ್ಲಿ ಇಷ್ಟು ಸಣ್ಣ ಕಷ್ಟವೇನೂ ಬಹಳ ಹೆಚ್ಚಿನದಲ್ಲ. ''

ಆಕೆ— “ ಅದೇನೂ ನನ್ನ ಕಡೆಯಿಂದ ಆಗುವದಿಲ್ಲ. ನಿನ್ನದೆಲ್ಲಾ ನನಗೆ ತಿಳಿದಿದೆ. ಅನ್ನಿಗರ ಹೇಳಿಕೆಯಿಂದ ನೀನು ಹೀಗೆ ಕುಣಿಯುತ್ತೀ. ನಿನ್ನ ಮನಬಲ್ಲಂತೆ ಮಾಡಪ್ಪಾ! ” ಎಂದು ಕ್ರುದ್ಧಸ್ವರದಿಂದ ನುಡಿದು— “ ಕಾಳ ರಂಡೆಯರೆಲ್ಲ ಕೂಡಿ ನನ್ನ ಕಂದಪ್ಪನನ್ನು ನನಗೆ ಎರವು ಮಾಡ ಲಿಕ್ಕೆ ನಿಂತಿದ್ದಾರಯ್ಯೋ ! ” ಎಂದು ಸ್ವರ ತೆಗೆದಳು.

ಅದಕ್ಕೆ ಇವನು ಏನೇನೋ ಸಮಾಧಾನ ಹೇಳಿ ಕೊನೆಗೆ ಹೀಗೆಂದನು— “ ನನ್ನ ಹಂಚಿಕೆಯು ನನ್ನ ವಿಚಾರಕ್ಕೇನೋ ತುಂಬಾ ಸರಿಯುದೆಯಾದರೂ ಅದು ನಿನಗೆ ಸಮ್ಮತವಿಲ್ಲವೆಂದೂ ತಿಳಿಯೋಣ. ಆದರೆ ಇಲ್ಲಿ ನಾನು ನಿನಗೆ ಹೊಟ್ಟೆ ಹೊಕ್ಕು ಒಂದು ಮಾತು ಹೇಳು ವೆನು ಕೇಳು— ‘ ನಿನ್ನ ಇಷ್ಟಕ್ಕೆ ಅಡ್ಡ ಬರಬಾರದೆಂದು ನಾವೆಲ್ಲರೂ ಏನೋ ವರುಷ ಪರಿಪರಿಯ ಸಂಕಟಗಳನ್ನೆಲ್ಲಾ ನುಂಗಿಕೊಳ್ಳಲಿಲ್ಲವೆ? ಆದರಂತೆ ಇನ್ನು ಕೆಲವು ವರುಷಗಳ ಮಟ್ಟಿಗೆ ನಮ್ಮ ಮೇಲಿನ ಅಕ್ಕರ ತೆಯ ಸಲುವಾಗಿಯಾದರೂ ನಿನ್ನ ಆಲೋಚನೆಗಳನ್ನು ಬದಿಗಿರಿಸಿ ನಮ್ಮ ಹಂಚಿಕೆಗೆ ಅಂತರಂಗದಲ್ಲಿಲ್ಲದಿದ್ದರೆ ಬಹಿರಂಗದಲ್ಲಾದರೂ ಸಮ್ಮತಿಸು ವುದು ನಿನ್ನ ಕರ್ತವ್ಯವಲ್ಲವೆ? ನಾನೇನೂ ಮನೆತನದ ಉದ್ಯೋಗವನ್ನೇ ಕಿತ್ತಿ ಹಾಕಬೇಕೆನ್ನುವುದಿಲ್ಲ. ಬಹಳ ಜಜ್ಜಿ ಹೈರಣಿಸಿದ್ದೇವೆ. ಆದ್ದರಿಂದ ಕೆಲಕಾಲ ವಿಶ್ರಾಂತಿಯನ್ನು ಪಡೆಯೋಣ. ಆ ಮೇಲೆ ಹೊಸ ಹುರುಪು ಬಂದ ಬಳಿಕ ಮತ್ತೆ ಏನಾದರೂ ಹೊಸ ಆಟ ಹೂಡೋಣ. ಸದ್ಯದ ಮಟ್ಟಿಗಾದರೂ ಇಷ್ಟು ಸಮ್ಮತಿಸು. ”

ಈ ಮಾತಿಗೆ ಅವಳು ಕಿಡಿಕಿಡಿಯಾಗಿ ಹೀಗೆಂದಳು- “ ನಿಮ್ಮ ಕೈಯಿಂದ ಗಳಿಸಿ ಹೊಟ್ಟೆತುಂಬಿಕೊಳ್ಳುವುದಾಗಲಾರದ್ದರಿಂದ ನಾನು ಮಾಡಿದ್ದಕ್ಕೇ ನುಮ್ಮನಾದಿರಿ. ಅದರ ಉಪಕಾರ ನನಗೇನು ಹೊರಿ ಸುವಿ ? ! ”

ಆಹಾ ! ನಮ್ಮ ನಾಯಕನ ಕೋಮಲಾಂತಃಕರಣಕ್ಕೆ ಈ ಮಾತಿ ನಿಂದ ಮಾಯಲಾರದ ಗಾಯವಾದಂತಾಯಿತು ! “ ಅಯ್ಯೋ ! ‘ ಕುಪುತ್ರೋ ಜಾಯತೇ ಕಚ್ಚಿತ್ ! **ಕುಮಾತಾ ನ ಭವತಿ** ’ ಎಂದು ವಿದ್ಯಾರಣ್ಯರು ಹೇಗೆ ಹೇಳಿದರೋ ಕಾಣೆ ! ಹೊತ್ತು ಹಡೆದ ತಾಯಿ

ಯೆಂಬವಳೂ ಒಮ್ಮೆ ಕಾಡಾಸೆಯಾಗಿ ಹೀಗೆ ತುಳಿಯುವಳಲ್ಲವೆ?! ಶಿವ ಶಿವಾ! 'ಇದೇನು ನಿನ್ನ ಲೀಲೆ!" ಹೀಗೆಂದು ವ್ಯಥೆಪಟ್ಟು ಕೊನೆಗೆ ಹೀಗೆ ಹೇಳಿದನು— "ನನಗೆ ಅಷ್ಟು ಕಾರ್ಯವನ್ನು ಒಂದಿಲ್ಲೊಂದು ರೀತಿಯಿಂದ ಸುಸೂತ್ರವಾಗಿ ಸಾಗಿಸಿಕೊಂಡು ಹೋಗುವ ಸಾಮರ್ಥ್ಯ ವಿಲ್ಲವೆಂದೆನ್ನದಿರು. ನನ್ನ ಜೀವದಂತೆ ನಿನ್ನದೂ ಒಂದು ಜೀವವೆಂದು ನಾನು ತಾಳಿಕೊಂಡೆನೆಂಬುದನ್ನು ಅರಿಯೆಯಾ? ಇರಲಿ. ಎಲ್ಲಾ ಸಾಕು ಈಶ್ವರನು ತಾನೇ ಏನು ಮಾಡುವನೋ ಮಾಡಲಿ. ನೋಡುತ್ತ ಹೋಗೋಣ. ಇಲ್ಲಿ ಮಾನವನ ಆಟವು ಸಾಗುವಂತಿಲ್ಲ!" ಎಂದು ಎದ್ದು ಹೊರಟನು. ಆದರೇ ಆತನ ತಾಯಿಯು—

"ಇದೋ ನೋಡು! ನಿನ್ನ ಹೊಲಮನೆಗಳನ್ನು ನೀನು ಹೇಗೆ ನೋಡಿಕೊಳ್ಳುವಿಯೋ ನೋಡಿಕೋ— ನಾನು ಅವುಗಳ ಕಾರಭಾರ ವನ್ನು ಇಂದಿಗೆ ಬಿಟ್ಟುಬಿಟ್ಟಿರುವೆನು ನೋಡು! ಹಿಂದಿನಿಂದ 'ಹೇಳಲಿಲ್ಲ ವೇಕೆ' ಎಂದು ಅಂದೀ! ನಿನ್ನ ಮನಬಂದಂತೆ ನೀನು ಮಾಡಿಕೋ!" ಎಂದು ಗಟ್ಟಿಯಾಗಿ ಬೇಕೆಂತಲೇ ಹೇಳಿದಳು. ಆದರಲ್ಲೆಲ್ಲಾ ಅವಳ ಆಲೋಚನೆಯೇನೆಂದರೆ— 'ಇವನ ಕಡೆಯಿಂದೆಲ್ಲಾ ಇದನ್ನು ತೀರಿಸು ವುದಾಗಬಲ್ಲದೇ?' ಎಂಬುದು.

ಈಗ ನಮ್ಮ ನಾಯಕನು ಅವಳ ಈ ಮಾತಿಗೆ ಪ್ರತಿ ಹೇಳು ವಂತೆಯೇ ಇರಲಿಲ್ಲ. "ಇಲ್ಲ! ನೀನೇ ಸಾಗಿಸು" ಎಂದು ಅಂದನಾದರೆ ತನ್ನದು "ನಾಮರ್ದತನ" ವೆಂದು ಒಪ್ಪಿಗೆಯನ್ನೇ ಕೊಟ್ಟಂತಾಗು ವುದು. "ಯಾಕಾಗಲೊಲ್ಲದು" ಎಂದರೆ ಅವಳ ಒಪ್ಪಿಗೆಯು ನಿಜವಾದ ಸಮ್ಮತಿಯೇ ಅಲ್ಲ! ಅವಳ ಅಸಮ್ಮತಿಯು ಫಲವಾಗಿ ಸಂಸಾರದಲ್ಲಿ ದಿನದಿನವೂ ಇನ್ನಿಷ್ಟು ಕೋಲಾಹಲ! ಸಂಸಾರದಲ್ಲಿ ಶಾಂತತೆಯನ್ನುಂಟು ಮಾಡಿಕೊಳ್ಳಬೇಕೆನ್ನುವಷ್ಟರಲ್ಲಿ ಹೆಚ್ಚಿನ ಕಡಿದಾಟವೇ ಮೈಮೇಲೆ ಬಂದಂತಾಗುವದು! ಇದೆಲ್ಲಾ ನಿಜವೇ ಆದರೆ ಈಗೇನು ಮಾಡುವುದು? ಯಕ್ಷ ಪ್ರಶ್ನೆಕ್ಕೆ ಏನಾದರೊಂದು ಉತ್ತರವನ್ನು ಹೇಳಿಯೇ ತೀರಬೇ ಕಲ್ಲ! ಆದುದರಿಂದ ಅವಳ ಮಾತಿಗೆ— "ಒಳ್ಳೆಯದು ಅದೇ ಆಗಲಿ!"

ಎಂದು ಹೇಳಿದನು. ಕೂಡಲೆ ಮುಗಿಲಲ್ಲೊಂದು ಉಲ್ಕೆ ಪ್ರಜ್ವಲಿಸಿ ದೇವನ ಸಮ್ಮತಿಯನ್ನು ಸೂಚಿಸಿತು !

(೧೫)

ತಾಯಿಯೆಂಬವಳೂ ಕೂಡ ಇಷ್ಟು ಕಠೋರಳಾಗುವುದೂ, ತನ್ನ ಮಾತು ಸರಿಯಾಗಿದ್ದರೂ ಕೂಡ ಒಬ್ಬ ಕ್ಷುದ್ರ ಮಾನವನು ಇಷ್ಟೊಂದು ಪರಿ ತಾಳ್ಮೆಯಿಂದ ತಿಳಿಹೇಳುವುದೂ ಈ ಲೋಕದ ಸಂಗತಿಗಳಲ್ಲ. ನಮ್ಮ ನಾಯಕನು ನಿಜವಾಗಿಯೂ ಇಂಥವುಗಳಿಗೆ ದೇವರಾಯನ ಅಘಟಿತ ಲೀಲೆಗಳೆಂದು ಭಾವಿಸುವೆನು. ಹೊತ್ತು ಹಡೆದ ಕರುಳಿನ ಕರುಳನ್ನೂ ಕೂಡ ಕಾಲಕೆಳಗೆ ಹಾಕುವಷ್ಟು ಬುದ್ಧಿಭ್ರಮವು ತಾಯಿಯೆಂಬವಳಿಗೆಂದಾದರೂ ಆಗಬಲ್ಲದೆಂದು ನೀವು ಎಣಿಸಿರುವಿರಾ ? ಪರಿಪರಿಯ ಅನುಚಿತ ಸಂಕಟಗಳಿಗೀಡಾಗಿಯೂ ಕೂಡ ಹರೆಯದ ಮಕ್ಕಳೆಂಬವರು ಇಷ್ಟೊಂದು ಪರಿ ಸಹನವನ್ನು ಧ್ಯೇಯಬುದ್ಧಿಯಿಂದ ವಹಿಸುವುದು ಕೂಡ ಅದೇನು ಸಹಜವೇ? ಇವೆರಡೂ ಸಾಹಜಿಕ ವಿಷಯಗಳೇನೂ ಅಲ್ಲ. ಸಹಜದಾಚೆಯದೊಂದು ಶಕ್ತಿಯು ಮರೆಗೆ ನಿಂತು ಈ ಆಟ ಹೂಡಿರದೆ ಎಂದೂ ಶಕ್ಯವಿಲ್ಲ. " A mightier than you is busy with the matter " " ನಿನಗಿಂತ ಹೆಚ್ಚಿನ ಸಾಮರ್ಥ್ಯದವನು ಅದರಲ್ಲಿ ಕಾರ್ಯರತನಾಗಿದ್ದಾನೆ " ಎಂದು ಅರವಿಂದರು ಹೇಳುವ ಮಾತು ಇಂಥ ಸಂಗತಿಗಳಲ್ಲಿ ಬಹಳ ಸ್ಪಷ್ಟವಾಗಿ ಒಡೆದು ಕಾಣಿಸುತ್ತದೆ. ಇಲ್ಲಿ ಒಬ್ಬರ ಅಸಾಮಾನ್ಯ ಉಗ್ರತೆಯು ನಿಂದನೀಯವೂ ಅಲ್ಲ, ಇನ್ನೊಬ್ಬರ ಅಂಥದೇ ಆತ್ಮೌಪಮ್ಯ ಬುದ್ಧಿಯು ಪ್ರಶಂಸನೀಯವೂ ಅಲ್ಲ. ಯಾಕೆಂದರೆ ಅದರಲ್ಲಿ ಅವರಿಬ್ಬರಿಗೂ ಸ್ವಾತಂತ್ರ್ಯವಿಲ್ಲ; ತಮ್ಮದು ತಮಗೇ ಆಶ್ಚರ್ಯವೆನಿಸುವಂತೆ ಅವರ ಆಚರಣೆಯಿರುತ್ತದೆ. ಇದಿರಲಿ.

ಆಗ ಮಳೆಗಾಲದ ಆರಂಭ. ಇಷ್ಟುಹೊತ್ತಿಗೆ ಕಮತಿಗರೆಲ್ಲಾ ತಮತಮಗೆ ಸಾಕಾಗುವಷ್ಟು ಹೊಲಗಳನ್ನು ಲಾವಣಿಗೆ ಹಿಡಿದುಕೊಂಡು ಬಿಟ್ಟಿದ್ದಾರೆ. ಈಗ ತೀರ ಒತ್ತರಿಸಿ ಬಂದ ಪ್ರಸಂಗದಲ್ಲಿ ನಮ್ಮ ನಾಯಕನ ಹೊಲಗಳನ್ನು ಲಾವಣಿಯಿಂದ ಸಾಗುಮಾಡುವುದಕ್ಕೆ

ಯಾರೂ ಸಿದ್ಧರಿಲ್ಲ.ಅಲ್ಲದೆ ಅತ್ತ ಆತನ ತಾಯಿ ಊರಲ್ಲೆಲ್ಲಾ ಆತನ ವಿರೋಧ ವಾಗಿ ಮಾತನಾಡುತ್ತಲೂ, ಯಾರೂ ಅವನ ಆಟಕ್ಕೆ ಅನುಕೂಲರಾಗ ಬೇಡಿರೆಂದು ಬಿನ್ನವಿಸುತ್ತಲೂ ತಿರುಗಾಡುತ್ತಿದ್ದಾಳೆ. ಬಂತಲ್ಲ ಉಭಯ ಸಂಕಟ! ಕಮತಿಗರಲ್ಲಿ ಹಲಕೆಲವರಿಗೇನೋ ಇಂಥ ಬೆಳೆಯುಳ್ಳ ಭೂಮಿಯನ್ನು ಬಿಡಬಾರದೆಂಬ ಆಶೆಯೀಗಲೂ ಇದ್ದಿತಾದರೂ 'ತಾಯಿ ಮಕ್ಕಳ ಕದನದಲ್ಲಿ ನಾವೇಕೆ ನಡುವೆ ಸೇರಿ ಖೊಟ್ಟಿಯಾಗಬೇಕು ?' ಎಂದು ಒಬ್ಬರೂ ಸಮೀಪಕ್ಕೆ ಸಹ ಸುಳಿಯರು.

ಜ್ಞಾನಭಿಕ್ಷುವಿನ ದೈಹಿಕ ಅಶಕ್ತತೆಯು ಎಷ್ಟರ ಮಟ್ಟಿಗಿದೆಯೆಂ ಬುದನ್ನಿಷ್ಟು ಇಲ್ಲಿ ಚೆನ್ನಾಗಿ ಕಲ್ಪನೆಮಾಡಿ ಕೊಡುವುದರ ಅಗತ್ಯವಿಲ್ಲದೆ ಯಿಲ್ಲವೆಂದೆಣಿಸುವೆನು. ಆಧಾರವಿಲ್ಲದೆ ನಡುವೆ ಕೂತು ಕೆಲವು ತಾಸು ಕೂಡ ಮಾತನಾಡಲಿಕ್ಕೆ ಶಕ್ಯವಿಲ್ಲ. ಕೂಡಲೆ ಮೈ ಕೈ ಬಿಗಿದಂತಾಗಿ ಒಂದು ಬಗೆಯ ನೋವು ಒಳಗೆಲ್ಲಾ ಹರಿದಾಡಲಾರಂಭಿಸುವುದು. ಆ ಮೇಲೆ ಹಗುರಾಗಿ ಶಕ್ತಿಯು ಇನ್ನಿಷ್ಟು ಕುಂದುವುದು, ತಲೆ ಚಿಟ್ಟು ಹಿಡಿಯುವುದು, ಮೈ ಅರಿಷಿಣವೊಡೆಯುವುದು. ಕೊನೆಗೆ ಪಚನಾವ ಯಗಳೆಲ್ಲಾ ಸ್ತಬ್ಧವಾಗಿ ನಿಂತುಬಿಡುವುದರಿಂದ ಹಸಿವೆಯು ಹಾರಿ ಹೋಗುವುದು. ಹೀಗಾಗಿ ಅಶಕ್ತತೆ ಮತ್ತೂ ಕೆಳಕ್ಕೆ ಇಳಿಯುವುದು. ಒಟ್ಟಾರೆ ಇಷ್ಟು ಅವನ ಪ್ರಕೃತಿ ಇಷ್ಟು ಸೂಕ್ಷ್ಮಕ್ಕೆ ಬಂದು ಮುಟ್ಟಿ ದ್ದಿತು! ಇಂಥ ದೇಹಸ್ಥಿತಿಯಲ್ಲಿ ಅಂಥ ಪರಿಸ್ಥಿತಿಗೆ ಹಗಲಿರುಳೆನ್ನದೆ ಒಂದೇ ಸವನೆ ಹದಿನೈದು ಇಪ್ಪತ್ತು ದಿನಗಳವರೆಗೆ ಎದೆಗೊಟ್ಟು ನಿಂತಾಗ ಅಂತೂ ಇಂತೂ ಹೊಲಗಳ ಸಾಗುವಳಿಯಾಯಿತು.

ಹೇಗಾದರೂ ಕೊನೆಗೆ ತನ್ನ ಕಡೆಗೇ ಶರಣಾರ್ಥಿ ಬರುವುದೆಂದು ಭಾವಿಸಿದ್ದ ಆ ತಾಯಿಯು ಈಗ ಇದನ್ನೆಲ್ಲಾ ನೋಡಿ ಹತಚೇತನಳಾಗಿ ನೆಲಕ್ಕೆ ಬಿದ್ದಳು. ಹಗಲಿರುಳೂ ಅತ್ತತ್ತು ಅವಳ ಕಣ್ಣುಗಳು ಗುಲಗಂಜಿ ಯಂತಾದವು. ಈ ಕಾರ್ಯದಲ್ಲಿ ಮಗನಿಗೆ ನೆರವಾದ ಸ್ನೇಹಿತರನ್ನೆಲ್ಲ ಶಪಿಸಿ ಶಪಿಸಿ ಅವಳ ಮುಖಮುದ್ರೆಯು ವಿಕಾರವಾಯಿತು. ಪಾಪ! ನಮ್ಮ ನಾಯಕನೀಗ ಯಂತ್ರದ ಬಾಯಿಯಲ್ಲಿ ಕೈಯನ್ನು ಕೊಟ್ಟವ ನಂತೆ ಅಸ್ವತಂತ್ರನಾಗಿದ್ದನು. ಅವನಿಗೆ ಇವಳನ್ನು ಕಂಡಾಗಳೆಲ್ಲಾ

ಕರುಣ ಬರುತ್ತಿತ್ತು. ಆದರೆ ಆಯ್ಯೋ ವಿಧಿಯೇ, ಅವಳ ಬುದ್ಧಿಗೆ ಮಗನ ವಿಚಾರವೇ ಸರಿಯೆನಿಸದಿರುವಾಗ ಯಾರ ಉಪಾಯವೇನಿದೆ ?

ಆಯಿತು, ಹೀಗೆ ಕೆಲವು ದಿನಗಳು ಏನೋ ಒಂದು ವಿಲಕ್ಷಣ ರೀತಿಯಿಂದ ಕಳೆದವೆಂದೆನ್ನುವಷ್ಟರಲ್ಲಿ ಮತ್ತೊಂದು ಬಿರುಗಾಳಿಯೆದ್ದಿತು. ಅದೇನೆಂದರೆ— ಅತಿವೃಷ್ಟಿಯಿಂದ ನಮ್ಮ ನಾಯಕನ ಹೊಲದ ಒಂದು ಮಗ್ಗುಲಿಗಿರುವ ನೆರೆಹೊಲದವನ ಒಡ್ಡೊಂದು ಒಡೆದು, ಇವರ ಮಾವಿನ ಗಿಡಗಳ ಬದಿಯಲ್ಲೊಂದು ದೊಡ್ಡ ಕೊರಕಲು ಬಿದ್ದಿತು. ಇದರಲ್ಲಿಯ ವಿಚಿತ್ರವಿಷಯವೇನೆಂದರೆ ಆ ನೆರೆಯವನಿಗೆ ಇಷ್ಟೇ ಬೇಕಾಗಿದ್ದಿತು. ತನ್ನ ಹೊಲಕ್ಕೆ ನಮ್ಮ ನಾಯಕನ ತಾಯಿಯು ಎಂದೋ ಏನೋ, ಯಾವದೋ ವಿಧದ ಹಾನಿಯನ್ನು ಮಾಡಿದ್ದಳೆಂಬ ಕಾರಣದಿಂದ ಈಗ ಆ ನೆರೆಯವನು ತನ್ನ ಒಡ್ಡಿನ ಆ ಕೊರಕಲನ್ನು ತಿರುಗಿ ಸರಿಪಡಿಸಲಾರ ದಾದನು. ನಮ್ಮ ನಾಯಕನೋ ಎಲ್ಲ ಹಾನಿಗಳಿಗೂ ಕಣ್ಣುಮುಚ್ಚುವ ವನೆಂದೂ ವ್ಯಾಜ್ಯವನ್ನು ಹೂಡಿಕೊಂಡು ನ್ಯಾಯದಕಟ್ಟೆಗೆ ಹೋಗ ಲಾರದ ಪ್ರತಿಜ್ಞೆಯ ಹುಚ್ಚನವನೆಂದೂ ನೆರೆಹೊಲದವರಿಗೆಲ್ಲಾ ತಿಳಿದ ವಿಷಯವಾಗಿದ್ದುದರಿಂದ ಅವರಿಗೆ ಅವನ ಆ ಗುಣದ ದುರುಪಯೋಗ ವನ್ನು ಮಾಡಿಕೊಳ್ಳುವುದಕ್ಕೆ ಬಹಳ ಸುಲಭವಾಗಿ ಆಶೆಹುಟ್ಟುತ್ತಲಿ ದ್ದಿತು. ಮಾಡುವುದೇನು ? ಅಂತೂ ಮತ್ತೊಂದು ಪರೀಕ್ಷೆಯ ಹೊತ್ತು ಬಂತು. ಹಿಂದಕ್ಕೆ ಊರ ನೆರೆಯ ತೋಟದಲ್ಲಿದ್ದಾಗ ಊರ ಪ್ರಮುಖ ನಾದ ಒಬ್ಬ ವೇದಾಂತಿ ಸ್ನೇಹಿತರ ವಿಷಯವನ್ನು ಹೇಳಿರುವೆನಲ್ಲಾ— ಅವರಿಗೆ ಇಂದು ನಮ್ಮ ನಾಯಕನು ಹೀಗೆ ಹೇಳಿದನು:- " ನೆರೆಹೊಲ ದವನ ವಿಚಾರವು ಬಹಳೇ ಹುಂಬಗುತ್ತಿಗೆಯದಿರುವದರಿಂದ ಅವನಿಗೆ ತಿಳಿ ಹೇಳುವಷ್ಟು ಶಕ್ತಿ ನನಗೆ ಎಳ್ಳಷ್ಟೂ ಉಳಿದಿಲ್ಲ. ಆದುದರಿಂದ ನನ್ನ ಸ್ಥಳದಲ್ಲಿ ನೀವೇ ನಿಂತು, ಅವನಿಗೆ ಏನಾದರೂ ಹೇಳಿ ನೋಡಿರಿ. " ಆ ಸ್ನೇಹಿತರು ಆ ಕಮತಿಗನನ್ನು ಕರೆಯಿಸಿ ಕೇಳಿದಾಗ ಅವನು ಸ್ಪಷ್ಟವಾಗಿ— " ನಾವು ಸರ್ವಥಾ ಆ ಒಡ್ಡನ್ನು ತಿರುಗಿ ಸರಿಪಡಿಸು ವುದಿಲ್ಲ. ನಾವು ನಮ್ಮ ಹೊಲದೊಳಗಿನ ನೀರನ್ನೆಲ್ಲ ಅದೇ ಕೊರಕಲಿ ನಿಂದ ಬಿಡುವವರು. ಅವರ ಮಾವಿನ ಗಿಡಗಳು ನಾಶವಾದರೆ ನಾವೇನು

ಮಾಡೋಣ? ಅವರು ಹಿಂದಕ್ಕೆ ನಮ್ಮ ಒಡ್ಡು ಹಾಳಾಗುವಂತೆ ಬಹಳ ಕೇಡುಮಾಡಿದ್ದಾರೆ. ಆಗ ನಮಗೆ ಕೇಡಾದಾಗ ಅವರು ಏನು ಮಾಡಿದರು? ಈಗ ಅವರಿಗೆ ಬಿಸಿತಾಕಿದೆ. ಅದಕ್ಕೆ ನಾವೇನು ಮಾಡೋಣ? ನಾವು ಬೇಕೆಂತಲೇ ಅದನ್ನು 'ದುರಸ್ತಿ?' ಮಾಡಿಸುವುದಿಲ್ಲ. ಯಾರೂ ನಮಗೆ ಏನೂ ಹೇಳುವ ಕಾರಣವಿಲ್ಲ. ನಾವು ಈಗಿನ ಪ್ರಸಂಗದಲ್ಲಿ ಯಾರ ಮಾತನ್ನೂ ಕೇಳುವದಿಲ್ಲ." ಎಂದು ವಿಲಕ್ಷಣವಾಗಿ ಹೇಳಿದನು. ಇದರಲ್ಲೆಲ್ಲಾ ನಮ್ಮ ನಾಯಕನು ನ್ಯಾಯದಕಟ್ಟೆಯನ್ನೇ ಏರಲಾರದವನೆಂಬ ಭರವಸವೊಂದೇ ಆ ಕಮತಿಗನಿಗೆ ಆಧಾರವಾಗಿದ್ದಿತು. ಆಯಿತು. ಆತನ ತಾಯಿಯೊಂದು ಕಡೆ 'ಮನೆಮಾರುಗಳನ್ನೆಲ್ಲಾ ಹಾಳುಮಾಡಿಬಿಡುತ್ತಾನೆ! ಇದೇ ಇವನ ಕಾರಭಾರ!' ಎಂದು ಹೀಯಾಳಿಸುತ್ತ ತಿರುಗಾಡಹತ್ತಿದಳು. ಇತ್ತ ಮನೆಯಲ್ಲಿ ಸತಿಯು ಕೂಡ ಚಿಂತೆಗೊಳಗಾಗಿ– 'ಹೀಗೆ ನೀವು ಯಾರಿಗೂ ಏನೂ ಕೇಳದೆ ಹೋದರೆ ಜನರು ನಮಗೆ ಬಾಳುವೆಯನ್ನೇ ಮಾಡಗೊಡಲಿಕ್ಕಿಲ್ಲ! ಇದೇನಿದು?!' ಎಂದೆನ್ನಹತ್ತಿದಳು. ಆಗ ಜ್ಞಾನಭಿಕ್ಷುವು ಒಂದೇ ಮಾತು ಹೇಳಿದನು, ಅದೇನೆಂದರೆ– "ಯಾರಿಗೇ ಆಗಲೊಲ್ಲದೇಕೆ– ನಾನು ಬುದ್ಧಿವಾದವನ್ನು ಹೇಳಿಯೇ ಹಾದಿಗೆ ತರಬೇಕೆನ್ನುವವನು. ಆದರೆ ಅಂಥ ಮೊಂಡರವಾದವನ್ನು ಹೇಳಿಯೇ ಹಾದಿಗೆ ತರಬೇಕೆನ್ನುವವನು. ಆದರೆ ಅಂಥ ಬುದ್ಧಿಯನ್ನು ಹೊರಳಿಸುವಷ್ಟು ಸಾಮರ್ಥ್ಯವು ನನ್ನ ಬುದ್ಧಿಗೀಗ ಇಲ್ಲದಾಗಿದೆ. ಆದುದರಿಂದ ನಮ್ಮ ಖರ್ಚಿನಿಂದ ಅದನ್ನು ನಾವೇ ದುರಸ್ತ ಮಾಡಿಸುವಾ." ಅದಕ್ಕೆ ಅವಳೆಂದಳು– "ಇಂದು ಇದೊಂದನ್ನು ದುರಸ್ತ ಮಾಡಿಸಿದಷ್ಟಕ್ಕೆ ಮುಗಿಯುವದಿಲ್ಲ; ನಾಳೆ ಮತ್ತೊಂದು ಅಂಥ ಪ್ರಸಂಗ ಬರುತ್ತದೆ, ನಾಡದು ಮಗುದೊಂದು ಬರುತ್ತದೆ. ಆವಾಗಳೆಲ್ಲಾ ಆ ಜನರು 'ತಮ್ಮ ಖರ್ಚಿನಿಂದ ತಾವು ದುರಸ್ತ ಮಾಡಿಸಿಕೊಳ್ಳಲಿ' ಎಂದು ನಮ್ಮ ಮೇಲೆ ಗುಡ್ಡವನ್ನೇ ಹೊರಿಸುವರು. ಆ ಮುಂದಿನ ಚಿಂತೆಗಾಗಿ ಇಂದು ಹೀಗೆ ಮಾಡಿಸಬಾರದಾಗಿದೆ."

ಜ್ಞಾನಭಿಕ್ಷುವಿಗೆ ಇದೆಲ್ಲಾ ಸರಿಯೆನಿಸಲಿಲ್ಲವೆಂತಲ್ಲ. ಒಂದು

ವ್ಯಕ್ತಿ ಒಟ್ಟಿತನಕ್ಕೆ ನಿಂತರೆ ಅವನು ಬಲಪ್ರಯೋಗದ ಹೊರತು ಇನ್ನಾ ವುದಕ್ಕೂ ಹಣಿಯಲಾರನೆಂಬುದೇನೋ ನಿಜವೇ. ಆದರೆ ಅದನ್ನು ಪಯೋ ಗಿಸಲಾರೆವೆನ್ನುವವರು ಕೆಲದಿನಗಳ ಪುಟ್ಟಿಗೆ ಅವರ ಚೆಲ್ಲಾಟಕ್ಕೆ ಸುಮ್ಮನೆ ದಾರಿಕೊಟ್ಟು ನಿಂತು ಏನಾಗುವದೋ ನೋಡುವದೊಳ್ಳೆಯದೆಂದು ಆತನ ಮತ. "ಈಗ ನಾವು ಮುಂದಿನ ಭೂತವನ್ನು ಅಷ್ಟೊಂದು ದೊಡ್ಡದು ಮಾಡಿಕೊಂಡು ಕೊರಗುವುದು ಬೇಡ. ಆಗ ಏನು ಬರು ವದೋ ಅದಕ್ಕೆ ಆಗ ತಿಳಿದಂತೆ ಇದುರಿಸುವಾ. ಈಗ ಸದ್ಯಕ್ಕೆ ನಮ್ಮ ಮಾವಿನ ಗಿಡಗಳು ಹಾಳಾಗಬಾರದೆಂದಿದ್ದರೆ ನಾವು ನಿರಭಿಮಾನದಿಂದ, ಈ ಅಲ್ಪಖರ್ಚಿನ ವಿಷಯವನ್ನು ಸಮ್ಮದು ನಾವೇ ನೋಡಿಕೊಳ್ಳಬೇಕು"

ತಿರುಗಿ ಕೇಳಿದರೆ ಇಲ್ಲಿ ಇನ್ನೊಂದು ಒಳ್ಳೇ ಬಿಕ್ಕಟ್ಟಿನ ವಿಷಯ ವಿದ್ದಿತು. ಅದೇನೆಂದರೆ– ಆ ನೆರೆಹೊಲದವನು 'ನಮ್ಮ ಒಡ್ಡು ದುರಸ್ತು ಮಾಡಲಿಕ್ಕೆ ನೀವ್ಯಾರು ?' ಎಂದು ಕೇಳುವುದಕ್ಕೂ ಕೂಡ ಹಿಂದು ಮುಂದು ನೋಡಲಾರದವನಾಗಿ ಬಿಟ್ಟಿದ್ದನು. ಆಗ ನಮ್ಮ ನಾಯಕನು, 'ಇದರೊಳಗೆ ಸದ್ಯಕ್ಕೆ ಸುಸೂತ್ರವಾದ ದಾರಿಯೇ ಸಿಗುವಂತಿಲ್ಲ.ಆದ್ದರಿಂದ ಆಸಕಾ ಏನಾಗುವದೋ ಆಗಲಿ, ಸುಮ್ಮನಿದ್ದು ಬಿಡುವಾ' ಎಂದು ಆಲೋಚಿಸಿದನು. ಆ ಕೊರಕಲು ಮುಂದೆ ಏಸೋ ತಿಂಗಳು ಹಾಗೇ ಇದ್ದಿತು. ಕೊನೆಗೆ ನೆರೆಹೊಲದವನು ನಾಚಿ ಮುಂದೆ ಎಂದೋ ತಾನೇ ದುರಸ್ತು ಮಾಡಿಸಿರುವನೆಂದು ಈಚೆಗೆ ತಿಳಿದು ಬಂದಿದೆ– ಇತ್ತೀಚೆಗೆ ಎಲ್ಲಾ ಸರಿಪಟ್ಟಿತಾದರೂ ಆಗಿನ ಪುಟ್ಟಿಗೆ ಆ ವಿಷಯವು ಅಷ್ಟೊಂದು ದೊಡ್ಡ ಗುಡ್ಡದಂತಾಗಿ ಬಿಟ್ಟಿದ್ದಿತು.

ಇದೆಲ್ಲಾ ಹೀಗೆ ಎಲ್ಲೆಲ್ಲಿಗೋ ಬಂದಿತೆನ್ನುವಷ್ಟರಲ್ಲಿ ಒಂದು ಗಾಯ ಮುಗಿಯುವದರೊಳಗಾಗಿ ಮತ್ತೊಂದು ಬೆನ್ನ ಮೇಲೆ ಬಂತು. ಹಿಂದಕ್ಕೆ ಒಂದು ಅಡವಿಯ ಆರೋಗ್ಯಮಂದಿರದಲ್ಲಿ ಜ್ಞಾನಭಿಕ್ಷುವಿಗೆ ಎಂದು ಬ್ರಹ್ಮಸಂಸ್ಪರ್ಶದ ಅನುಭವವು ಬಂದಿತೋ ಅಂದೇ ದೇವ- ದೇವನು ಆ ಹೂವಿನ ಬಳ್ಳಿಯ ಬದಿಗೆ ಬಂದು ಮುಳ್ಳಿನ ಗಿಡದ ಬೀಜ ವನ್ನು ಊರಿದ್ದನು. ಅದು ಇಂದಿಗೆ ಮೊಳೆತು ಬೆಳೆದು ಮರವಾಯಿತು. ಆಗ ಅಲ್ಲಿ ಒಬ್ಬ ಗೆಳೆಯನು ಹಣದ ತೊಂದರೆಯ ಮೂಲಕ ತನ್ನ

ಧ್ಯೇಯವು ಸಾಯುತ್ತಿದೆಯೆಂದೆನಿಸಿ ಬಹಳ ಕಾತರಿಸುತ್ತಿದ್ದನು. ಅವನಿಗೆ ನಮ್ಮ ನಾಯಕನು ತನ್ನ ಮತ್ತೊಬ್ಬ ಗೆಳೆಯನಿಂದ ತನ್ನ ಭರವಸದ ಮೇಲೆ ಒಂದು ತಿಂಗಳ ಮಟ್ಟಿಗೆಂದು ನಾಲ್ಕುನೂರು ರೂಪಾಯಿಗಳನ್ನು ಇಸಗೊಟ್ಟಿದ್ದನು. ಆದರೆ ಆ ಧ್ಯೇಯಗಾರನು ಆ ಹಣವನ್ನು ವಿವೇಕದಿಂದ ಉಪಯೋಗಿಸಿಕೊಳ್ಳದ್ದರಿಂದ ಗೊತ್ತುಪಡಿಸಿದ ಒಂದು ತಿಂಗಳಲ್ಲಿ ಬಿಟ್ಟು ಇಪ್ಪತ್ತು ತಿಂಗಳಾದರೂ ತಿರುಗಿ ಮುಟ್ಟಿಸಲಶಕ್ಯವಾಗಿ ಬಿಟ್ಟಿತು. ಸಹಾಯ ಮಾಡಿದ ಗೆಳೆಯನ ಗೋಳಂತೂ ದೇವರೇ ಬಲ್ಲ. ಹೇಗೂ ಒಂದು ತಿಂಗಳಲ್ಲಿ ಮರಳಿ ಇಸಗೊಡುವೆನೆಂದು ನಮ್ಮ ನಾಯಕನು ಭರವಸ ಕೊಟ್ಟಿದ್ದರಿಂದ ಅವನು— ಆಗ ತನ್ನ ಹತ್ತರ ಹಣವೇನೂ ಇಲ್ಲದಿದ್ದರೂ— ಹೊರಗೆ ಬಡ್ಡಿಯಿಂದ ಸಾಲತೆಗೆದುಕೊಟ್ಟಿದ್ದನು. ತಿಂಗಳಾಯಿತು, ಎರಡು ತಿಂಗಳಾಯಿತು, ತಿರುಗಿ ಆರು ತಿಂಗಳಾದರೂ ನೆಲೆಯಿಲ್ಲ! ಅತ್ತ ಹೊರಸಾಲಿಗರು ಅವನಿಗೆ ಪೀಡಿಸಹತ್ತಿದರು; ಇತ್ತ ಹೋದ ಗಂಟಂತೂ ಹೊರಳಲೇವೊಲ್ಲದು. ಆಗ ಅವನು ತನ್ನ ಕಾಳು ಕಡಿಗಳನ್ನು ಮಾರಿ ತೂರಿ ಏನಾದರೂ ಮಾಡಿ ಹೊರಗಿನವರ ಕಿರಿಕಿರಿಯನ್ನಾದರು ಹರಿದುಕೊಳ್ಳಬೇಕೆಂದರೆ— ಈ ಆರು ತಿಂಗಳ ಹಿಂದೆ ಹತ್ತು ರೂಪಾಯಿಗೊಂದು ಚೀಲದಂತೆ ಧಾರಣೆಯಿದ್ದದ್ದು ಈಗ ಇಷ್ಟರೊಳಗಾಗಿ ಮೂರು ರೂಪಾಯಿಗೊಂದು ಚೀಲದವರೆಗೆ ಇಳಿದು ಬಿಟ್ಟಿದ್ದಿತು! ಹೀಗಾದರೆ ಆ ನಾಲ್ಕುನೂರು ಭರತಿಯಾಗುವುದಕ್ಕೆ ಏನು ವರುಷದ ಕಾಳು ಸಾತೀತು? ಅತ್ತ ಅವನೋ ತಪ್ಪು ಮಾಡಿದ, ಇತ್ತ ಇವನೋ ಸಾಯಹತ್ತಿದ! ನಡುವೆ ನಮ್ಮ ನಾಯಕನಿಗೆ ಸಂಕಟಬಂದಿಟ್ಟಿತು! "ನಾನು ಕಾರುಣ್ಯದ ಕೈಯಲ್ಲಿ ಬುದ್ಧಿಯನ್ನು ಕೊಟ್ಟು ಒಂದು ಜೀವವನ್ನು ವ್ಯರ್ಥವಾಗಿ ಮುಳುಗಿಸಿದೆನಲ್ಲಾ!" ಎಂದು ಚಡಪಡಿಸಹತ್ತಿದನು. ಆದರೆ ಆ ಸಾಲ ತೆಗೆದುಕೊಂಡು ಪಶ್ಚಾತ್ತಾಪಕ್ಕೆ ಗುರಿಯಾಗಿದ್ದ ಗೆಳೆಯನೇನೋ ಎಷ್ಟೆಷ್ಟು ಯತ್ನಿಸಿದರೂ ಅವನಿಗೆ ಒಂದೂವರೆ ನೂರಕ್ಕಿಂತ ಹೆಚ್ಚಿಗೆ ಹಣ ಹುಟ್ಟಲಿಲ್ಲ. ಅಷ್ಟೇ ಕಳಿಸಿದನು. ಅದು ಆ ನಾಲ್ಕುನೂರರ ಬಡ್ಡಿಗೇ ಹೋಯಿತೆಂದು ಹೇಳಬಹುದು!

ಇದೆಲ್ಲಾ ಕರ್ಮಕಥೆ ಇನ್ನೂ ಮುಗಿಯಿತೋ ಇಲ್ಲವೋ ಎನ್ನು

ವರ್ಷದಲ್ಲಿ ಮತ್ತೊಂದು ವೈಪರೀತ್ಯ ಜಗಿಯುತ್ತ ಬಂತೇ !!! ಜ್ಞಾನ ಭಿಕ್ಷುವಿಗೆ ಜನರೆಲ್ಲಾ ಈಗ ಹೀಗೆ ಕೇಳಹತ್ತಿದರು— "ನೀನು ಹೊಲ ಗಳನ್ನು ಲಾವಣಿಗೆ ಕೊಟ್ಟಿರುವಿಯಲ್ಲಾ! ಅದೆಲ್ಲಾ ಬಹಳ ಚಮತ್ಕಾರ ವಾಗಿದೆ. ನಿಮ್ಮ ತಾಯಿಯೇ ಆ ರೈತರ ಬಾಯಿಯಿಂದ ಸುಮ್ಮನೆ ಮಾತಿನ ಸಲುವಾಗಿ ಹಣಕ್ಕೆ ಬೇಡಿಸಿ, ಒಳಗೊಳಗೆ ಅದರಲ್ಲಿ ತನ್ನದೇ ಸರಿಪಾಲನ್ನಿಟ್ಟಿದ್ದಾಳೆ" ಆಗ ನಮ್ಮ ನಾಯಕನಿಗೆ ಏನೂ ತೋಚ ದಾಯಿತು. ಅಜ್ಜಿನೂತದ್ದೆಲ್ಲಾ ಮೊಮ್ಮಗನ ಉಡದಾರವಾದಂತೆ ಅಷ್ಟೊಂದು ದಿನ ಅಳತೆಮೀರಿ ಕಷ್ಟಪಟ್ಟದ್ದೆಲ್ಲಾ ವ್ಯರ್ಥವಾದಂತಾ ಯಿತು! ಅದರಲ್ಲಿ ತನ್ನ ಸತಿಯೂ ಸೇರಿಕೊಂಡಿದ್ದಾಳೆಂದು ಗೊತ್ತಾದ ಮೇಲಂತೂ ಅವನ ಮಸ್ತಕವು ಸಿಡಿದುಹೋಯಿತು! "ಎಲಾ ನಾನೆಲ್ಲಾ ಅಷ್ಟೊಂದು ಗೋಳಾಡಿದ್ದು ಇವಳ ಮೇಲಿನ ಅನ್ಯಾಯ ದಿಂದಾಗುವ ಕಷ್ಟಗಳನ್ನು ತಪ್ಪಿಸುವುದಕ್ಕಾಗಿ. ಆದರೆ ಇವಳೇ ನನಗೆ ಅರಿಯದಂತೆ ಅವಳೊಡನೆ ಸೇರಿ ಒಳಗೊಳಗೆ ಹೀಗೆ ಕಪಟನಾಟಕವನ್ನು ಮಾಡಿದಳೆಂದಮೇಲೆ ನಾನೆಲ್ಲಿ ಸಾಯಲಿ!?" ಎಂದು ಸಿಡಿಮಿಡಿ ಗೊಂಡನು. ತನ್ನ ಸತಿಯನ್ನು ಕರೆದು ಕೇಳಿದಾಗ ಅವಳ ಹರಣವೇ ಹಾರಿತು! 'ಇಂಥ ಕಾರಭಾರವನ್ನು ನಾನೇಕೆ ಮಾಡಿದೆ' ನೆಂದು ಆಗ ಗೋಳಾಡಿದಳು ! ಆದರೆ ಅದರೊಳಗಿನ ನಿಜವಾದ ಸಂಗತಿಯು ಬೇರೆ ಬಗೆಯದಾಗಿದ್ದಿತು. ಅದೇನೆಂದರೆ— ನಮ್ಮ ನಾಯಕನ ಸತಿಯು ಎಷ್ಟೂ ವಿಚಾರೇಚರಿಯದವಳು. ಯಾರಾದರೂ ಅತ್ತು ಕರೆದು ಏನಾದರೂ ಹೇಳಿದರೆ ಎಲ್ಲಾ ಮರೆಯುವವಳು. ನಮ್ಮ ನಾಯಕನೂ ಅಂಥವನೇ ಸರಿ. ಅದಿರಲಿ. ಆದರೆ ಈಗ ಆತನ ಸಲ್ಲೆಯ ವಿಷಯದ ಕಡೆಗೆ ಹೊರಳುವಾ, ಅವಳ ಅತ್ತೆಯು ಸವಿಮಾತಿನಿಂದ ಏನೇನೋ ಚಿತ್ರಗಳನ್ನು ಇವಳ ತಲೆಯಲ್ಲಿ ತುಂಬಿದ್ದರಿಂದ ಇವಳಿಗೆ— "ಹೊಲದಲ್ಲಿ ಪಾಲನ್ನಿಡುವುದೇ ಮೇಲು" ಎಂದೆನಿಸಿಬಿಟ್ಟಿತು. ಆಯಿತು. ಅತ್ತೆಯ ಕೆಲಸ ಸಾಧಿಸಿದಂತಾಯಿತು! ಇನ್ನು ಮುಂದೆ ಏನಾದರೂ ಉಪ- ದ್ವ್ಯಾಪ ಹೂಡಿದರೆ- "ನನಗೇನು ಗೊತ್ತಪ್ಪಾ? ನಿನ್ನ ಹೆಂಡತಿಯೇ ಮಾಡಿದ್ದಾಳೆ" ಎಂದು ಮಾತು ಹೇಳಿ ಉಳಿದುಕೊಳ್ಳುವುದಕ್ಕೆ ಅವಳಿಗೆ

ದಾರಿಯಾಯಿತು. ಇದೆಲ್ಲಾ ಒಳಬೇತವು ಗೊತ್ತಾದ ಬಳಿಕ ಜ್ಞಾನ ಭಿಕ್ಷುವಿಗೆ ತನ್ನ ಸತಿಯ ವಿಷಯದ ಮಟ್ಟಿಗಾದರೂ ಸಮಾಧಾನವಾಯಿತು. ಸಾಕು.

(೧೬)

ಮೂರು ವರುಷಗಳಿಗೊಮ್ಮೆ ನಮ್ಮ ನಾಯಕನ ಮನೆತನದವರು ಕುಲದೈವತದ ಜಾತ್ರೆಯನ್ನು ಮಾಡುತ್ತ ಬಂದುದನ್ನೂ ಅದನ್ನೀತನು ನಿಲ್ಲಿಸಿಬಿಡುವುದಕ್ಕೆ ಪ್ರಯತ್ನಿಸುತ್ತಿದ್ದುದನ್ನೂ ನಾನು ಹಿಂದೆ ಪೂರ್ವ ರಂಗದಲ್ಲಿಯೇ ಬಣ್ಣಿಸಿರುವೆನಷ್ಟೇ? ಕಾಲಕ್ರಮದಿಂದ ಅದು ಈ ವರುಷವೂ ಬಂತು. ಜ್ಞಾನಭಿಕ್ಷುವೋ ಈಗ ನಾಲ್ಕೈದು ತಿಂಗಳು ಗಳಿಂದ ವಿಷಮ ಪರಿಸ್ಥಿತಿಯ ಕೂಡ ಕಾದಾಡಿ ತೀರ ಹಣ್ಣಾಗಿ ಹೋಗಿದ್ದಾನೆ. ಈಗ ಈ ರೀತಿ ಮತ್ತೊಂದು ಕೋಲಾಹಲವು ಮೈಮೇಲೆ ಬಂತು. ಇದಕ್ಕೇನು ಮಾಡುವುದು?

ಹಳೆಯ ಸಂಪ್ರದಾಯವನ್ನು ಮುರಿಯಗೊಡಬಾರದೆಂಬುದು ಜನ-ಜಂಗುಳಿಯ ಹಟ. ಆದರೆ ಇಂಥ ಜಾತ್ರೆ ಮುಂತಾದ ಉತ್ಸವಗಳ ಭಾರವು ವೈಯ್ಯಕ್ತಿಕವಾಗಿ ಒಂದು ಕುಟುಂಬದ ಮೇಲೆ ಬೀಳುವುದು ಆರ್ಥಿಕರೀತಿಯಿಂದ ಬಹಳೇ ಕೆಟ್ಟದಾದ್ದರಿಂದ ಅದನ್ನು ನಿಲ್ಲಿಸಿ ಬಿಡಬೇಕೆಂಬುದು ನಮ್ಮ ನಾಯಕನ ವಿಚಾರ. ಯಾವ ಕೆಲಸವೇ ಆಗಲಿ, ಅದನ್ನು ಯಾಕೆ ಮಾಡಬೇಕೆಂಬ ವಿಚಾರವಿಲ್ಲದೆ ನಾವು ಅದಕ್ಕೆ ಕೈಯನ್ನೇ ಹಚ್ಚಬಾರದೆಂದು ಜ್ಞಾನಭಿಕ್ಷುವಿನ ಅಭಿಮತವಾದರೆ, 'ಅದೇನೂ ನಾವು ಅರಿಯೆವು, ಹಿರಿಯರೇನು ದಡ್ಡರೇ?' ಎಂಬುದು ಲೋಕಮತ. 'ನಾವು ಬರೇ ಹಿರಿಯರ ಮೇಲೆಯೇ ಅವಲಂಬಿಸಿ ಕುಳಿತುಕೊಳ್ಳುವುದಾದರೆ, ದೇವರು ನಮಗೆ ಬುದ್ಧಿಯನ್ನು ಕೊಟ್ಟದ್ದರ ಪ್ರಯೋಜನವೇನೆಂದು ಈತನ ಪ್ರಶ್ನೆ. ಅಲ್ಲದೆ ನಾವು ನಮ್ಮ ಹಿಂದಿನ ಹಿರಿಯರೆಂದು ಯಾರಿಗೆ ಅನ್ನುವೆವು? ಬಹಳ ದೂರವೆಂದರೆ ಅಜ್ಜ ಮುತ್ತಂದಿರ ತನಕ ಹೋದರೆ ಮುಗಿಯಿತು-ಅದರ ಶೀಮೆ. ಹಾಗಾದರೆ

ಅವರೇನು ಹೇಳುತ್ತಿದ್ದರೆಂಬುದಂತೂ ನಮಗೇನೂ ಅರಿಯದ ವಿಷಯ ವಿಲ್ಲ— "ಹಿಂದಿನ ಹಿರಿಯರೇನು ಹುಚ್ಚರೇನು?" ಎಂದು ಅವರೂ ನಮ್ಮ ಪಲ್ಲವಿಯನ್ನೇ ಹಾಡುತ್ತಿದ್ದರು. ಹೀಗೆ ಒಬ್ಬರ ಮೇಲೊಬ್ಬರು ಹವಾಲೆಯನ್ನು ಹಾಕುತ್ತ ಒಂದದ್ದರಿಂದಲೇ ನಾವು ಇಷ್ಟೊಂದು ಹಾಳಾಗಿ ಹೋಗಿರುವೆವು. ಇನ್ನು ಮುಂದೆಯೂ ಅದೇ ಕೆಲಸವೇನು?

"ನಮ್ಮ ನಾಡು ಬಡತನದ ಸಲುವಾಗಿ ಹೀನದೆಸೆಗೆ ಬರಲಿಲ್ಲ, ಬಂಧನದ ಸಲುವಾಗಿಯೂ ಅಲ್ಲ; ಧರ್ಮಗೇಡಿತನದಿಂದಲೂ ಅದು ಹಾಳಾಗಲಿಲ್ಲ. ಆದರೆ ವಿಚಾರಶಕ್ತಿಯು ಹಾಳಾದದ್ದರಿಂದ ಅದು ಅವನತಿಗೆ ಇಳಿದಿದೆ. ಬಹು ಜನರಿಗೆ ವಿಚಾರ ಮಾಡುವ ಸಾಮರ್ಥ್ಯವೇ ಇಲ್ಲ, ಅದು ಕೆಲವರಿಗಿದ್ದರೆ ಅವರಿಗೆ ವಿಚಾರ ಮಾಡುವ ಇಚ್ಛೆಯಿಲ್ಲ! Inability to think ಮತ್ತು un willingness to think ಇವೇ ನಮ್ಮ ನಾಡಿನ ಹೀನದಶೆಯ ಹಿರಿಕಾರಣಗಳು." ಎಂದು ಅರವಿಂದರೂ ನಮ್ಮ ನಾಡಿನ ನಾಡಿಯನ್ನು ಮುಟ್ಟಿ 'ನಿದಾನ' ಮಾಡಿರುವರು.

Rationalism (ಕಾರ್ಯಕಾರಣವಾದ) ಮತ್ತು Utilitarianism (ಉಪಯೋಗಿತಾವಾದ) ಇವೆರಡೂ ಬೆಳೆಯದಿದ್ದರೆ ನಮ್ಮ ನಾಡಿನ ಉನ್ನತಿಯೇ ಆಗದು. ಹಿರಿಯರ ಮೇಲೆ ಹವಾಲೆ ಹಾಕುವ ಗತಾನು-ಗತಿಕ ಬುದ್ಧಿಗೆ ದಾಸರಾಗಿರುವ ವರೆಗೂ ನಾವು ಹೆಚ್ಚಿನ ಆಶೆಮಾಡಿ ಫಲವಿಲ್ಲ— "ಯಾಕೆ? ಎನು ಪ್ರಯೋಜನ?" ಎಂಬೆರಡು ಶಬ್ದಗಳು ನಮ್ಮ ನಾಡಿನ ರೋಮರೋಮದಲ್ಲಿ ವ್ಯಾಪಿಸಬೇಕು! ಅಲ್ಲದೆ ನಮ್ಮ ಉನ್ನತಿಯಿಲ್ಲ.

ಪ್ರತಿಯೊಂದು ಮಾತಿಗೂ ತಾಯಿ ತಂದೆಗಳ ಮೊರೆಯನ್ನೇ ಮಿಕಿಮಿಕಿ ನೋಡುವ ಮಗನು ಮುಂದೆ ಯಜಮಾನನಾದಾಗ ತನ್ನ ಮನೆತನವನ್ನು ಸ್ವತಂತ್ರಬುದ್ಧಿಯಿಲ್ಲದ ಮೂಲಕ ಹಾಳು ಮಾಡಿಕೊಳ್ಳದೆ ಬಿಟ್ಟಾನೇ? ಹೀಗಾಗಿದೆ ನಮ್ಮ ಗತಿ! ಇಂಥ 'ನಾಮರ್ದ' ಸಂತಾನದಿಂದ ನಾಡಿಗೆ ಕೇಡು! ಎದೆಯ ಮೇಲೆ ಕೈಯಿಟ್ಟು ಕಡುಗಲಿಗಳು ಉದಿಸದೆ ಅದರ ಉದ್ಧಾರವಾಗಲಾರದು. ನಮ್ಮ ನಾಡು ಏಳಬೇಕಾದರೆ

ನಾವು ಏಳಬೇಕು. ನಾವು ಬಿದ್ದುಕೊಂಡಿರುವ ವರೆಗೂ ಆದರ ಉನ್ನತಿಯು ಆಶೆಯು ಮುಗಿಲ ಮಲ್ಲಿಗೆಯೇ !

ಹಾಗಾದರೆ ಜ್ಞಾನಭಿಕ್ಷುವು ಜಾತ್ರೆಯನ್ನು ನಿಲ್ಲಿಸಲೆಳಸುವುದರ ಅರ್ಥವೇನು? ಇಂಥ ಉತ್ಸವಾದಿಗಳು ಇರಲೇಬಾರದೆಂದು ಆತನ ಅಭಿಪ್ರಾಯವಲ್ಲ. ದಾರಿನಡೆಯುವಾಗ ನಡುವೆ ಬೇರೆ ಬೇರೆ ಊರುಗಳಿಲ್ಲದಿದ್ದರೆ 'ದಾರಿ ಬಲು ದೂರ 'ಎಂದೆನಿಸುವಂತೆ ಹಬ್ಬ ಹುಣ್ಣಿವೆಗಳಿಲ್ಲದಿದ್ದರೆ ಕಾಲವು ಬಹಳ ಭಾರವಾಗಿ ಬಿಡುವುದೆಂಬುದನ್ನು ಆತನು ಅರಿಯದೆ ಇಲ್ಲ. ಉತ್ಸವಪ್ರಿಯತೆಯು ಮಾನವನಿಗೆ ಸ್ವಾಭಾವಿಕವೇ ಸರಿ. ಜನತೆಯ ಮನಸ್ಸಿನ ಉನ್ನತಿಯ ತಾರತಮ್ಯಾನುಸಾರವಾಗಿ ಯಾವ ಕಾಲದಲ್ಲಾದರೂ ಒಂದಿಲ್ಲೊಂದು ಬಗೆಯ ಉತ್ಸವಗಳು ಉತ್ಸಾಹವನ್ನುಂಟು ಮಾಡುವುದಕ್ಕೆ ಬೇಕೇ ಬೇಕು. ಹಾಗಾದರೆ ಈತನು ಜಾತ್ರೆಯನ್ನೇಕೆ ಮಾಡಬಾರದು? ಸಾರ್ವಜನಿಕ ಸುಖವಿನೋದಗಳ ಭಾರವು ಸಾರ್ವಜನಿಕ ಸಂಘಗಳ ಕಡೆಗೆ ಇರಬೇಕೆಂಬುದೊಂದು; ಮತ್ತು ಜಾತ್ರೆ ಮುಂತಾದ ಉತ್ಸವಗಳಲ್ಲಿ ಜನರಂಜನದ ಬಾಬತಿಗಿಂತ 'ಧಾರ್ಮಿಕ ಜಾತಿ' ಜಾತಿಯವರೆಂದು ಹೇಳಿಸಿಕೊಳ್ಳುವವರ ಊಟ ಉಡಿಗೆಯಲ್ಲಿಯೇ ಮುಕ್ಕಾಲು ಮೂರು ಭಾಗ ಹಣವು ಹಾಳಾಗುತ್ತಿರುವುದು ನಿಂತು ಹೋಗಬೇಕೆಂಬುದಿನ್ನೊಂದು; ಹಾಗೂ ಚಾಜು ಬಾಬುಗಳು ಬಡಿದಾಟ ತಪ್ಪಿ ಸರ್ವರೂ ಅದೊಂದು ತಮ್ಮೆಲ್ಲರ ಮನರಂಜನದ ಕಾರ್ಯವೆಂದು ಯಾವ ನೆಡವೂ ಇಲ್ಲದೆ ಸಾಂಗಗೊಳಿಸಬೇಕೆಂಬುದು ಮತ್ತೊಂದು. ಇಷ್ಟಕ್ಕೂ ವಿಾರಿ ಹೆಚ್ಚಿನದಿನ್ನೊಂದು ಮಾತಿದೆ, ಅದೇನೆಂದರೆ- ಸಾರ್ವಜನಿಕರಲ್ಲಿ ಯಾರಿಗೂ ಎಷ್ಟೂ ನೋವಾಗದೆ ಅವರವರ ಹಿಗ್ಗಿನಿಂದಲೇ ಹಣವು ಕೂಡಬೇಕಲ್ಲದೆ ಅದರ ಆಡಳಿತಗಾರರು ಅದರಲ್ಲಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲಾರದವರಿರಬೇಕೆಂಬುದು ಖಂಡಿತ. ಇನ್ನು ಮುಂದಿನ ಕಾಲವು ಬೌದ್ಧಿಕಯುಗವಾಗಿರುವುದರಿಂದ ಜನತೆಯ ಬುದ್ಧಿಗೆ ಚಾಲನೆ ಸಿಗಬೇಕೆಂಬುದರ ಕಡೆಗೇ ಉತ್ಸವಗಳ ಒಲವಿರಬೇಕೆಂಬುದನ್ನಂತೂ ಬೇರೆ ಹೇಳಲೇಬೇಕಾಗಿಲ್ಲ. ಇದು ನಮ್ಮ ನಾಯಕನ ಹಾರೈಕೆ. ಅಂತೂ ಹಳೆಯ ಶಿವರಾಯೀ

ದುಡ್ಡುಗಳನ್ನು ಕರಗಿಸಿ ಕಾಲಕ್ಕೆ ತಕ್ಕಂತೆ ಹೊಸ ಪಡಿಯಚ್ಚಿನಲ್ಲಿ ಹಾಕಬೇಕೆಂದು ಆತನು ಹೇಳುವನೇ ಹೊರತು ಉತ್ಸವಾದಿಗಳೇ ಇರ ಲಾಗದೆಂದು ಅನ್ನುವ ಹುಚ್ಚನೇನೂ ಅವನಲ್ಲ.

ಮೇಲೆ ಹೇಳಿದ ನಾಲ್ಕೈದು ಸುಧಾರಣೆಗಳಲ್ಲಿ ಎಲ್ಲಕ್ಕೂ ಮೊದ ಲಿಗೆ ಮೊದಲನೆಯ ಸುಧಾರಣೆಯೇ ನಮ್ಮ ನಾಯಕನಿಗೆ ಈಗ ಏನೋ ವರುಷಗಳಿಂದ ಕಾಡಿಸಹತ್ತಿದೆ. ಎಂಥ ಆರ್ಥಿಕದುಸ್ಥಿತಿಗೂ ಕೂಡ ತಲೆಯನ್ನು ಕೊಟ್ಟು ಲೋಕಾಭಿಮಾನದಿಂದ ಮನೆತನಗಳೆಷ್ಟೋ 'ಸಾಕೊಂದೆಸೆ ಹನ್ನೊಂದೆಸೆ' ಗೆ ಈಡಾಗುತ್ತಿದ್ದುದನ್ನು ನೋಡಿ ಆತನು ಬಹಳ ಮರಗುವನು. ಗುರುಜಾತಿಯವರೆಂದು ಕೆಲವರು, ಪೂಜಾರಿ ಗಳೆಂದು ಕೆಲವರು, ಭಿಕ್ಷೆಯೇ ನಮ್ಮ ವಂಶಪರಂಪರೆಯ ರೂಢಿಯೆಂದು ಹೇಳುವ ಆಡನಿಬ್ಬಣಿಗರು ಕೆಲವರು ಹೀಗೆ ಒಂದು ಮೊಲಕ್ಕೆ ಒಂಬತ್ತು ನಾಯಿಗಳು ಬೆನ್ನಟ್ಟಿದಂತೆ ನಮ್ಮ ಕುತ್ತಿಗೆ ಹಿಚುಕುತ್ತಿರುವರು. "ಯಾಕೆ? ನೀವು ಯಾಕೆ ಇಷ್ಟೊಂದು ಹೌಹಾರಿ ಬೆನ್ನುಹತ್ತಿರುವಿರಿ." ಎಂದು ಕೇಳಿದರೆ "ಹಿಂದಿನ ಹಿರಿಯರಿಗಿಂತಾ ಹೆಚ್ಚಿನ ಬುದ್ಧಿವಂತ ನೀನಾರಪ್ಪಾ?" ಎಂಬ ಉತ್ತರವು ಕತ್ತಿಯನ್ನು ಮಸೆದುಕೊಂಡೇ ಕುಳಿತಿರುತ್ತದೆ. ಇಂಥವರಿಗೆ ಹಾಕುವುದರಲ್ಲಿಯೇ ಪುಣ್ಯವಿದೆಯೆಂಬ ಹುಚ್ಚು ಲೋಕಕ್ಕಿರುವವರೆಗೆ ಇವರೇಕೆ ಹಿಂದು ಸರಿದಾರು ಬಾಹ ದ್ದರರು?! ನಿಜವಾಗಿ ನೋಡಿದರೆ "ದುಡಿಯದೆ ದುಃಖಪಡದೆ ಅನ್ನಿಗರ ವರ್ಷದ ಗಂಜಿಗೆ ನಾವು ಯಾಕೆ ಕಾಳಾಗಬೇಕು?" ಎಂಬ ಮಾತು ಇನ್ನು ಮೇಲೆ ಬಾಧ್ಯಸ್ಥ ಭಿಕ್ಷುಕರಿಗೆ ಎಂದು ಹೊಳೆಯುವದೊ ದೇವರೇ ಬಲ್ಲ! ವರುಷವೆಲ್ಲಾ ದುಡಿದರೆ ಹೊಟ್ಟೆಗೆ ಗಂಜಿ ಸಾಲದು. ಅಂಥಾ ದ್ದರಲ್ಲಿ ಇಂಥ ಭೂತವೇತಾಳಗಳ ಪಿಡಗು. ಇದಕ್ಕೆಲ್ಲಾ ಪೂರೈಯಿಸಿ ನಿಜವಾದ ಅನಾಥರೆಂಬುವರ ಪಾಲಿಗೇನು ಶುಂಠಿಯುಳಿಯುವುದು?! ನಿಜವಾಗಿ ದಿಕ್ಕುಗೇಡಿಗಳಿಗೆ ಮುಟ್ಟಬೇಕಾದ ಪಾಲನ್ನು ನಡುವೆ ಈ ಹೆಕ್ಕಿನ ಹುಲಿಗಳು ನುಂಗಿ ನೀರುಕುಡಿದು ಮೇಲೆ ಮತ್ತೆ 'ಗುರ್' ಎಂದು ಅಂಜಿಸಿಕೊಳ್ಳುವರು! ಅತ್ತ ಯಾರ ಬಾಯಲ್ಲಿ ಬೀಳಬೇಕೋ ಅಂಥ ದೀನರಿಗೂ ಹತ್ತಲಿಲ್ಲ; ಇತ್ತ ದುಡಿದವನ ಹೊಟ್ಟೆಯಾದರೂ

ತಣ್ಣಗಾಗಬೇಕಾಗಿತ್ತು, ಅದೂ ಆಗಲಿಲ್ಲ. ನಡುವೆ ಇವರು ಅನಾಯಾಸ ವಾಗಿ ಕೈಸಾಧಿಸಿ ಉಳಿದಿಬ್ಬರನ್ನು ಇನ್ನಿಷ್ಟು ಕಂಗಾಲ ಸ್ಥಿತಿಗೆ ದಬ್ಬಿ ದರು! ಇದು ಸಂಪೂರ್ಣವಾಗಿ ಸಿಂತಲ್ಲದೆ ಗತ್ಯಂತರವಿಲ್ಲ.

" **ತನ್ನಿಂದ ಇನ್ನಾರಿಗೂ ಅನ್ಯಾಯವಾಗಬಾರದು, ಹಿತವೇ ಆಗಬೇಕು** " ಎಂಬ ಬುದ್ಧಿಯು ಇನ್ನು ಮುಂದೆ ನಮ್ಮ ಜನಾಂಗದ ಸೊತ್ತಾಗಬೇಕು. ಸರ್ವ ಅನಾಹುತಗಳನ್ನಡಗಿಸಬಲ್ಲ ಏಕಮಾತ್ರಮಂತ್ರವೆಂದರೆ ಇದೇ. ನಮಗೆ ಮನೆಯಲ್ಲಿ, ಶಾಲೆಯಲ್ಲಿ,ಓಣಿ ಯಲ್ಲಿ, ಎಲ್ಲೆಲ್ಲಿಯೆಂದರೆ ಅಲ್ಲಲ್ಲೆಲ್ಲ ಕಿವಿ ಕೇಸರಿಡಬೇಕು. ಪೂಜೆ ಪುರಸ್ಕಾರಗಳ ಕಡೆಗೆ ಈಗ ನಾವು ನಮ್ಮ ಮಕ್ಕಳ ಒಲವನ್ನು ಹೊರ ಳಿಸಲು ಆಶೆಪಡುವಂತೆ ಇನ್ನು ಮುಂದೆ ' ಅನ್ಯಾಯವಾಗಿ ಅನ್ನಿಗರಿಂದ ಉಪಜೀವಿಸಬಾರದು ' ಎಂಬ ಮಾತಿನ ಕಡೆಗೆ ಅವರ ಬುದ್ಧಿಯು ಹೊರ ಳುವಂತೆ ಪ್ರಯತ್ನಿಸಲುಬೇಕು. ಇಷ್ಟಾದಾಗ ಮಾತ್ರ ಇಂದಿನ ಎಷ್ಟೆಷ್ಟೋ ಕಂಟಕಗಳು ಹೇಳಹೆಸರಿಲ್ಲದೆ ಓಡಿಹೋಗುವವು. ಆದರೆ ಅವುಗಳಿಗಿಂತ ಮೊದಲು ಇತ್ತ ನಮ್ಮ ನಾಯಕನೇ ಎಲ್ಲಿಗಾದರೂ ಓಡಿ ಹೋಗಬೇಕಾಯಿತು. ಯಾಕೆಂದರೆ ಈಗ ನಾಲ್ಕೈದು ತಿಂಗಳು ಗಳಿಂದ ಸತತವಾಗಿ ಒಂದರ ಮೇಲೊಂದು ಕಂಟಕಗಳು ಬಂದದ್ದರಿಂದ ಅವುಗಳ ಕೂಡ ಕಾದಿ ಆತನ ತಲೆಯು ತೀರ ಮೊಂಡವಾಗಿಬಿಟ್ಟಿದೆ.ಹಾಗಿ ದ್ದರೂ ಅವನು ಲೋಕದ ಸರ್ವ ಪ್ರತಿಕೂಲತೆಗಳ ಇದುರಿಗೆ ಈಸ ಲೆಳೆಸುತ್ತಿದ್ದನಾದರೂ ಮನೆಯಲ್ಲಿ ತಾಯಿಯೊಬ್ಬಳು ಒಳಗಿನದೊಳಗೆ ಜನರ ಕೂಡ ಸೇರಿ ಉತ್ಸವವನ್ನು ' ಪರಭಾರೆ ' ಎಲ್ಲಿಯಾದರೂ ಮಾಡಿಸಿ ಬಿಟ್ಟರೆ ಎಲ್ಲಾ ಅರ್ಥವು ಅಲ್ಲಿಗೇ ಒಂದು ಬಿಡುವುದಲ್ಲಾ! ಎಂದೆಣಿಸಿ ಇದೊಂದು ಸಾರೆ ಎಲ್ಲಿಗಾದರೂ ಪಲಾಯನ ಹೇಳಿಸಿ ಮುಂದೆ ಮತ್ತೊಂದು ಸಲ ಏನಾದರೂ ಮಾಡಲಿಕ್ಕೆ ಬಂದೀತೆಂದು ನಿರ್ಧರಿ ಸಿದನು.

" ಜಗತ್ತಿನ ಸರ್ವ ವಿಷಯಗಳೂ, ಸರ್ವ ಜನಾಂಗಗಳೂ ಹೊಸ ದಾಗುವುದರಲ್ಲಿವೆಯೆಂಬುದು ನಿಮಗೆ ಕಾಣದೇನು? ತಾವು ಹೊಸದಾ ಗಲು ಸಮ್ಮತಿಸದವರನ್ನು ಕುರಿತು ಕನಿಕರಿಸಿರಿ; ಯಾಕೆಂದರೆ ಅವರು

ಈಗಾಗಲೆ ಮೂಲೆಗುಂಪಾಗುತ್ತಿದ್ದಾರೆ? ಭೂತಕಾಲವು ಅಸ್ತಮಿಸ ಲಿಕ್ಕಿದೆಯೆಂಬುದು ನಿಮಗೆ ಕಾಣಿಸದೇನು? ಅಷ್ಟೇಕೆ ಅದು ಈಗಾಗಲೆ ಸತ್ತೇ ಹೋಗಿದೆ. ಬರೆ ಅದರ ಹೊರರೂಪ ಮಾತ್ರ ಉಳಿದುಕೊಂಡಿದೆ, ಬರೇ ಅದರ ನೆರಳು! ನಾಳೆ ಅದರ ಭಗ್ನಾವಶೇಷಗಳಷ್ಟೇ ಸರಿ!" ಎಂಬುದು ಪಾಲ್ ರಿಚರ್ಡರ ಭವಿತವ್ಯದ ಭವ್ಯವಾಣಿಯು. ಇದು ನಮ್ಮ ನಾಡಿನ ಕರ್ಣಪಟಲಕ್ಕೆ ಇನ್ನು ಮೇಲಾದರೂ ಬಂದಿಷ್ಟು ತಾಕಲಿ!

(೧೭)

ಇಷ್ಟು ಹೊತ್ತಿಗೆ ನಮ್ಮ ನಾಯಕನ ಸಚ್ಚಿಸ ಗೆಳೆಯನೊಬ್ಬನ ಸತಿಗೆ ಕ್ಷಯಭಾವನೆಯಾದದ್ದರಿಂದ ಅವರಿಬ್ಬರೂ ಹಿಂದೆ ಹೇಳಿದ ಆಶ್ರಮ ಚಿಕಿತ್ಸಾಲಯದಲ್ಲಿಯೇ ಕೆಲದಿನಗಳ ಮಟ್ಟಿಗೆ ಹೋಗಿ ಇದ್ದರು. ಅವರು ಜ್ಞಾನಭಿಕ್ಷುವೂ ತಮ್ಮ ಜೊತೆಗಿದ್ದರೆ ಅವನಿಗೂ ತಮಗೂ ಕೂಡಿಯೇ ನಲಿವಿಸಿಂದಿರಲಿಕ್ಕಾಗುವದೆಂದು ಬಗೆದು ಬಾರೆಂದು ಆತನಿಗೊಂದೋಲೆ ಯನ್ನೂ ಬರೆದಿದ್ದರು. ಆಯಿತು - ಅವನಿಗೂ ಅದೇ ಬೇಕಾಗಿದ್ದಿತು. ಆದು ದರಿಂದ ಅಲ್ಲಿಗೆ ಹೋಗಿ ಅವರನ್ನು ಕೂಡಿಕೊಂಡನು. ಅಲ್ಲಿ ಸುಮಾರು ಇಪ್ಪತ್ತು ದಿನಗಳು ಕಳೆದವು. ಅಲ್ಲಿದ್ದಾಗಲೇ ಜ್ಞಾನಭಿಕ್ಷುವು 'ಸತ್ಯ ದೃಷ್ಟಿ'ಯೆಂಬುದೊರಿದು ಆಧ್ಯಾತ್ಮಿಕ ಪ್ರಬಂಧವನ್ನು ಬರೆದನು. ಅದ ರಲ್ಲಿ– 'ಸತ್ಯದೃಷ್ಟಿಯೂ ಸೂಕ್ಷ್ಮದೃಷ್ಟಿಯೂ ಬೇರೆ ಬೇರೆ ವರ್ಗದವು ಗಳು. ಸತ್ಯದೃಷ್ಟಿಗೆ ಆಧ್ಯಾತ್ಮಿಕಶಾಂತಿಯು ಮುಖ್ಯ ಲಕ್ಷಣವು, ಸೂಕ್ಷ್ಮದೃಷ್ಟಿಯು ಅಲೌಕಿಕ ಚಮತ್ಕೃತಿಯು ಬೇಡಾಗಿದ್ದರೂ ಅದರಲ್ಲಿ ಆ ಅನುಪಮ ಶಾಂತಿಯ ಸಂಚಾರವಿದ್ದೇ ತೀರೀತೆಂಬ ನಿಯಮವಿಲ್ಲ. ಸತ್ಯದೃಷ್ಟಿ ಬಂದವನಲ್ಲಿ ಸೂಕ್ಷ್ಮದೃಷ್ಟಿ ಒಡಮೂಡಿದ್ದರೆ ಅಲ್ಲಿ ಅದು ಆ ಶಾಂತಿಯ ಹೆಚ್ಚುಗೆಗೆ ಕಾರಣವಾಗಬಲ್ಲದು. ಆದರೆ ಸ್ವತಂತ್ರವಾಗಿ ಅದಕ್ಕೆ ಆ ಶಕ್ತಿಯಿಲ್ಲ. ಹೀಗೆಂತಲೇ ಕೃಚ್ಛ್ರ ಸಾಧನಗಳಿಗೆ ಕೈಹಾಕಿದ ಸಾಧಕರಲ್ಲಿ ಹಲಕೆಲವರಿಗೆ ನಾದಗಳೂ ಪ್ರಕಾಶಗಳೂ ಗೋಚರಿಸಿದಾ ಗಲೂ ಕೂಡ ಇನ್ನೂ ಅಂತರಂಗಕ್ಕೆ ಸಮಾಧಾನವೆಂಬುದೇ ಸಿಕ್ಕಿರುತ್ತಿರು ವುದಿಲ್ಲ. ಬರೇ ಸೂಕ್ಷ್ಮದೃಷ್ಟಿಯನ್ನು ಅರಳಿಸಿಕೊಳ್ಳುವುದಕ್ಕೆ ಆಧ್ಯಾತ್ಮಿಕ

ಬುದ್ಧಿಯು ಅವಶ್ಯಕತೆಯೂ ಕೂಡ ಇರಲಾರದೆಂದು ತೋರುತ್ತದೆ. ನಮ್ಮ ಬಾಹ್ಯನೇತ್ರವು ತೀಕ್ಷ್ಣವಾಗಿರುವುದಕ್ಕಾಗಲಿ, ಮಂದವಾಗಿರುವುದಕ್ಕಾಗಲಿ ನಮ್ಮ ಆತ್ಮಿಕ ಉನ್ನತಿ ಅವನತಿಗಳ ಸಂಬಂಧವೇನೂ ಇಲ್ಲವೆಂದಂತೆ ಅದೂ ಕೂಡ ಇದೇ ವರ್ಗದೊಳಗಿನದೇ ಇರುತ್ತದೆ. ಹೊರಮನವನ್ನು ಅದೊಂದು ಬಗೆಯ ವ್ಯಾಯಾಮದಿಂದ ಹರಿದಾಡಗೊಡದಿದ್ದರೆ ಸಾಕು, ಸೂಕ್ಷ್ಮದೃಷ್ಟಿಯು ಅರಳಬಲ್ಲದು. ಆದರೆ ಸತ್ಯದೃಷ್ಟಿಯು ಒಡಮೂಡುವುದಕ್ಕೆ ಅಂತರಂಗದಲ್ಲಿ ಬದಲಾವಣೆಯುಂಟಾಗಬೇಕಾಗುತ್ತದೆ. ಅಸಂಖ್ಯವೈಷಮ್ಯಗಳಲ್ಲಿ ಸಮನ್ವಯದ ಏಕ ಸೂತ್ರತೆಯನ್ನು ಕಂಡುಕೊಳ್ಳುವುದೇ ಸತ್ಯದೃಷ್ಟಿಯು ಸಾಂತದಲ್ಲಿ ಅನಂತವನ್ನು, ಕ್ಷಣಿಕದಲ್ಲಿ ಶಾಶ್ವತವನ್ನು ಕಂಡುಕೊಳ್ಳಲಿಕ್ಕೆ ಬಂದರೆ ಅನೇಕತ್ವದಲ್ಲಿ ಏಕತ್ವವನ್ನು ಆವಿಷ್ಕರಿಸಿಕೊಳ್ಳುವುದು ಸುಲಭವಾಗುತ್ತದೆ. ಆಕಾಶದ ಅನಂತತೆಯನ್ನೂ ಕಾಲದ ನಿತ್ಯತೆಯನ್ನೂ ಬುದ್ಧಿಪಟದ ಮೇಲೆ ಚಿತ್ರಿಸುತ್ತ ಹೋದ ಹಾಗೆಲ್ಲಾ ಅನೇಕತ್ವದೊಳಗಿನ ಏಕತಾನತೆಯು ಗೋಚರಿಸುತ್ತ ಬರುವುದರಲ್ಲಿ ಸಂದೇಹವಿಲ್ಲ. "ವೇನಸ್ತತ್ ಪಶ್ಯನ್ **'ನಿಹಿತಂ ಗುಹಾ ಸತ್' 'ಯತ್ರ ವಿಶ್ವಂ ಭವತ್ಯೇಕನೀಡಂ' ||** ತಸ್ಮಿನ್ನಿದಂ ಸಂಚವಿಚೈತಿ **ಸರ್ವಂ ಸ ಓತಃ ಪ್ರೋತಶ್ಚ** ವಿಭೂತಿ ಪ್ರಜಾಸು||" (ಯಜು: ೩೨-೮) "ಸಮಸ್ತದ ಒಂದೇ ಗೂಡೆನಿಸಿರುವ, ಗುಹಾಸ್ಥಿತ ದಿವ್ಯಸತ್ಯವನ್ನು ದಿವ್ಯದರ್ಶಿಯು ಕಾಣುತ್ತಾನೆ. ಸರ್ವದಲ್ಲಿ ಓತಪ್ರೋತನಾಗಿರುವ ಸತ್ಸ್ವರೂಪನಲ್ಲಿಯೇ ಇದೆಲ್ಲವೂ ಉದಿಸುತ್ತಲೂ ವಾಸಿಸುತ್ತಲೂ ಇರುತ್ತದೆ."

ಈ ಲೇಖನವನ್ನು ಬರೆದ ಕೆಲದಿನಗಳಲ್ಲೇ ಅಲ್ಲಿಂದ ಹೊರಟು ಆ ಗೆಳೆಯನೊಡನೆ ನಮ್ಮ 'ನಾಯಕನು ಆತನೂರಿಗೆ ಹೋದನು. ಅಲ್ಲಿ ಇನ್ನೊಬ್ಬ ಹಿರಿಗೆಳೆಯನಿದ್ದನು. ಆತನ ಸಹವಾಸವೆಂದರೆ ಜ್ಞಾನಭಿಕ್ಷುವಿಗೆ ಭೂಲೋಕದ ಅಮೃತವು ಅಲ್ಲಿ ಸಿಕ್ಕನಷ್ಟು ವಿಶ್ರಾಂತಿಯು ಇವನಿಗೆ ಇನ್ನೆಲ್ಲಿಯೂ ಸಿಗಲಾರದು. ಆ ಹಿರಿಗೆಳೆಯನಲ್ಲಿ ಹದಿನೈದು ದಿನಗಳವರೆಗೆ ಉಳಿದುಕೊಂಡನು. ಆ ಕಾಲದಲ್ಲಿ ಎರಡು ಸಂಗತಿಗಳು ನಡೆದವು. ಅವೆರಡೂ ವಿಷಯಗಳು ಪುಸ್ತಕಗಳ ರಾಜ್ಯಕ್ಕೆ ಸಂಬಂಧಿಸಿದವುಗಳು.

ಅರ್ಥಾತ್ ಎರಡು ಮಹತ್ವದ ಪುಸ್ತಕಗಳು ಆಗ ಇವರಿಬ್ಬರ ಕೈಗೆ ಬಿದ್ದವು ಎಂದು ಬಿಡೋಣ. ಅವುಗಳಲ್ಲೊಂದು 'ಭೃಗುಸಂಹಿತೆ'ಯೆಂಬ ಪ್ರಕಾಂಡ ಜ್ಯೋತಿಷ್ಯಗ್ರಂಥ. ಅದರಲ್ಲಿ ಒಂದೂಕಾಲು ಲಕ್ಷ ಕುಂಡಲಿಗಳ ತ್ರಿಜನ್ಮಜಾತಕವನ್ನು ಭೃಗುಋಷಿಗಳು ದಿವ್ಯದೃಷ್ಟಿಯಿಂದ ಕಂಡು ಬರೆದಿದ್ದಾರೆಂಬ ಖ್ಯಾತಿಯು ನಾಡಿನ ತುಂಬಾ ಹಬ್ಬಿದೆ. ಅಷ್ಟೇ ಏಕೆ? ಜಗತ್ತಿನ ತುಂಬಾ ಹಬ್ಬಿದೆಯೆಂದರೂ ಅಡ್ಡಿಯಿಲ್ಲ. ಆ ಹೆಬ್ಬೊತ್ತಿಗೆಯು ವಿಾರತ್ ಪಟ್ಟಣದಲ್ಲಿ ಮುದ್ರಿತವಾಗಿ ಸುಮಾರು ಒಂದು ನೂರಕ್ಕಿಂತ ಹೆಚ್ಚು ರೂಪಾಯಿಗಳ ಬೆಲೆಗೆ ಮಾರಲ್ಪಡುತ್ತಿದೆ. ನಮ್ಮ ಈ ಮಿತ್ರದ್ವಯರಿಗೆ ಆ ಗ್ರಂಥದ ಹುಚ್ಚು ಹಲವು ವರುಷಗಳಿಂದಲೂ ಇದ್ದಿತು. ಆದರೆ ಅದು ಈ ವರೆಗೂ ಉಪಲಬ್ಧವಿರಲಿಲ್ಲ. ಈಗ ಕೈಗೆ ಬಿದ್ದಿತು. ಇಬ್ಬರೂ ಕೂಡಿ ಹಿರಿತವಕದಿಂದ ಓದಿ ನೋಡುತ್ತಾರೆ– 'ಅಯ್ಯೋ! ಇಂಥಾ ಅಬದ್ಧಗ್ರಥವೆಂದರೆ ಜಗತ್ತಿನಲ್ಲಿ ಇದೊಂದೇ ಸರಿ!!' ಎಂದು ಉದ್ಗಾರ ತೆಗೆದು ನಿಟ್ಟುಸಿರು ಬಿಟ್ಟು ಕುಳಿತರು! ಅದರಲ್ಲಿ ಸುಮಾರು ಐದುಸಾವಿರ ಕುಂಡಲಿಗಳಿದ್ದು ಅವೆಲ್ಲವುಗಳ ಸಲುವಾಗಿ ಮುನ್ನೂರೇ ಜಾತಕಗಳನ್ನು ಬರೆದಿದ್ದಾರೆ. ಹದಿನೇಳು ಕುಂಡಲಿಗಳಿಗೆಲ್ಲಾ ಒಂದೇ ಜಾತಕ!!! (೫೦೦೦ ÷ ೩೦೦). ಇದೊಳ್ಳೇ ನ್ಯಾಯ! ಅಲ್ಲದೆ ಇದ್ದಷ್ಟೇ ಕುಂಡಲಿಗಳಲ್ಲಿಯೂ ಕೂಡ, ಜಾತಕಶಾಸ್ತ್ರದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದ ಜನ್ಮಲಗ್ನ ಮತ್ತು ಚಂದ್ರ ಇವೆರಡರ ಸುಳಿವೇ ಇಲ್ಲ. ಭಲಾ! ತ್ರಿಜನ್ಮಜಾತಕದ ಒಳಹೂರಣವಿಂತಹದೇ?! ಇಷ್ಟಕ್ಕೂ ಮಿಾರಿ ಆ ಪುಸ್ತಕದಲ್ಲಿ ಇನ್ನೂ 'ರಾಜ ಜಾತಕ' 'ಸ್ತ್ರೀ ಜಾತಕ' ಭಾಗಗಳನ್ನು ನೋಡಿದರಂತೂ ಚಿಕ್ಕ ಶಿಶುವೂ ಕೂಡ ಹೊಟ್ಟೆ ಹಿಡಿಸದಷ್ಟು ನಗಬೇಕು! ಹೆಸರಿನ ಅಕ್ಷರಗಳ ಸಂಖ್ಯೆಗೇ ಗುಣಾಕಾರ ಭಾಗಾಕಾರ ಮಾಡಿ ಕಳೆದುಳಿದ ಶೇಷಸಂಖ್ಯೆಯೇ ಅವರ ಜಾತಕದ ನಂಬರಾಗುವದು. ಅಷ್ಟನೇ ಜಾತಕದಲ್ಲಿ ಅವರ ಹಣೇಬರಹ ನೋಡಬೇಕು! 'ರಾವಣ' 'ಲಕ್ಷ್ಮಣ' ಇವರಿಬ್ಬರ ಹೆಸರಿನಲ್ಲಿ ಅಷ್ಟೇ ಅಕ್ಷರಗಳಿರುವದರಿಂದ ಇವರಿಬ್ಬರಿಗೂ ಕೂಡಿ ಅದರಲ್ಲಿ ಒಂದೇ ಜಾತಕವು ಹೊರಡುತ್ತದೆ– ನೋಡಿರಿ! ಧಾರವಾಡ ಪ್ರಾಂತದಲ್ಲಿ--ಬಾಯಿಗೆ ಬಂದಂತೆ

ಹದವಿಲ್ಲವೆ ಮಾತಾಡುವವರಿಗೆ '**ಎಲಾ! ಎಂಥಾ ಭೃಗು ಇದ್ದಾನೋ ಈತ?**' ಎಂದು ಅಪಹಾಸ್ಯ ಮಾಡುವ ರೂಢಿಯಿದೆ. ಅದಕ್ಕೆ ಈ ಮಹಾಸಂಹಿತೆಯು ಭೃಗುವೇ ಕಾರಣನೋ ಏನೋ ಎಂದು ನನಗೆನಿಸುತ್ತದೆ. ಇದಿರಲಿ. ಈ ಪುಸ್ತಕವು ಎಂಥಾ ಹುಚ್ಚು ಕೃತಿಯಾಗಿದ್ದರೂ ಸರಿ, ಆದರೆ ನಮ್ಮ ಈ ಗೆಳೆಯರಿಬ್ಬರಿಗೆ ಅದರಿಂದ ಮಹತ್ತರವಾದ ಲಾಭವಾಗದೆ ಉಳಿಯಲಿಲ್ಲ. ಆ ಲಾಭವೆಂದರೆ ಇದೇ: "ಬಹು ದಿನಗಳಿಂದ ತಲೆಯಲ್ಲಿ ಸೇರಿದ ಅದರ ಹುಚ್ಚಾದರೂ ಒಮ್ಮೆ ಬಿಟ್ಟಂತಾಯಿತು!" ಎಂಬುದೇ!

ಇನ್ನೊಂದು ಗ್ರಂಥವೆಂದರೆ ಈಗ ವಿಜ್ಞಾನಶಾಸ್ತ್ರದಲ್ಲಿ ಹೊಸ ಮಹೇಂದ್ರಜಾಲವನ್ನು ಹೂಡಿದ ಮಹರ್ಷಿಸಮಾನರಾದ ಐನ್‌ಸ್ಟೀನರ ವಿಚಾರವನ್ನು ವಿವರಿಸುವಂತಹದು. ಅದನ್ನೋದಿದಾಗ ನಮ್ಮ ನಾಯಕನಿಗೆ ಒಂದು ಹೊಸರಾಜ್ಯದ ನಕಾಶವೇ ಹೊಳೆದಂತಾಯಿತು. ಅದು ಕಾಲ-ತತ್ತ್ವವನ್ನು ಕುರಿತದ್ದು. ಹಿಂದಕ್ಕೆ ಪೂರ್ವರಂಗದ ಪ್ರಥಮಪರಿಚಯದ ಪ್ರಕರಣದಲ್ಲಿ ಸ್ಪೆನ್ಸರರ ಗ್ರಂಥವನ್ನೋದುತ್ತಿರುವಾಗ ಮಹಾ ಆಕಾಶದ ಅನಂತತೆಯ ನಕಾಶೆಯು ಕಣ್ಣಮುಂದೆ ಕಟ್ಟಿದಂತೆ ಇಂದು ಐನ್‌ಸ್ಟೀನರ ವಿಚಾರವನ್ನು ಓದುತ್ತಿದ್ದ ಹಾಗೆ ಮಹಾಕಾಲದ ಅನಾಕಲನೀಯ ಸ್ವರೂಪವೊಂದು ಬುದ್ಧಿಗೋಚರವಾಯಿತು.

ಅದರಲ್ಲಿ ಅವರು ಅನ್ನುವುದರ ಸಾರಾಂಶವೇನೆಂದರೆ:–

"ಕಾಲವು ಇದೆಯೆಂದು ನಮಗೆ ಹೇಗೆ ಗೊತ್ತಾಗುವುದು? ಜಗತ್ತಿನಲ್ಲಿ ನಡೆಯುವ ಘಟನೆಗಳಿಂದಲೇ ಅವುಗಳ ನಡುವಿನ ಅವಕಾಶದ ಮೂಲಕ ನಮಗೆ ಕಾಲದ ಕಲ್ಪನೆಯಾಗುವದು. ಸೂರ್ಯನು ಉದಯಿಸುತ್ತಾನೆ, ಮೇಲಕ್ಕೇರುತ್ತಾನೆ, ತಲೆಯ ಮೇಲೆ ಬರುತ್ತಾನೆ, ಮತ್ತೆ ಇಳಿಯುತ್ತಾನೆ, ಕೊನೆಗೆ ಮುಳುಗುತ್ತಾನೆ; ಆ ಮೇಲೆ ಮೊದಲು ಸ್ವಲ್ಪ ಕತ್ತಲೆ ತೋರುತ್ತದೆ, ಬಳಿಕ ತೀರ ಕಗ್ಗತ್ತಲಾಗುತ್ತದೆ, ಆಮೇಲೆ ಮತ್ತೆ ಬೆಳಕು ಒಡೆಯುತ್ತದೆ, ಕೊನೆಗೆ ಮತ್ತೆ ಸೂರ್ಯೋದಯವಾಗುತ್ತದೆ. ಈ ಒಂದೊಂದು ಘಟನೆಯೂ ನಮಗೆ ಕಾಲಪಥದ ಮೈಲುಗಲ್ಲುಗಳಂತೆ ಇವೆ. ಸೂರ್ಯನ ಉದಯಾಸ್ತಗಳಾಗಲಿ, ಪೃಥ್ವಿಯ ಚಲನದ

ಮೂಲಕ ಉಂಟಾಗುವ ಗ್ರಹತಾರೆಗಳ ಉದಯಾಸ್ತಗಳಾಗಲಿ ಏನೂ ಇಲ್ಲದೆ ಹೋದರೂ ಕೂಡ ನಮಗೆ ಕಾಲದ ಕಲ್ಪನೆಯಾಗುವುದಕ್ಕೆ ಇನ್ನೂ ಎಷ್ಟೋ ಕಾರಣಗಳಿವೆ. ಹುಟ್ಟುವುದು ಸಾಯುವುದು, ಬೆಳೆಯುವುದು ಅಳಿಯುವುದು, ನಿದ್ದೆ ನೀರಡಿಕೆ, ಸುಖದುಃಖ, ಯೋಜನೆ ಕಲ್ಪನೆ, ಒಳ್ಳೆಯದು ಕೆಟ್ಟದು ಇನ್ನೂ ಇಂಥ ಎಷ್ಟೆಷ್ಟೋ ಸಂಗತಿಗಳಿವೆ. ಘಟನೆಗಳ ನಡುವೆ ಒಂದು ಅವಕಾಶವುಂಟಲ್ಲಾ! ಅದೇ ನಮಗೆ ಕಾಲದ ಕಲ್ಪನೆಯಾಗುವುದಕ್ಕೆ ಕಾರಣವಾಗುವದು. ಒಂದರ ಹಿಂದೊಂದು ಘಟನೆಗಳು ನಡೆಯದಿದ್ದರೆ ಕಾಲದ ಅನಿಸಿಕೆಯೇ ನಮಗೆ ಬರಲಿಕ್ಕೆ ಶಕ್ಯವಿಲ್ಲ. ಈಗ ಏನೂ ಘಟನೆ ನಡೆಯದಿರುವುದು ಎಂಬುದರ ಅರ್ಥವೇನೆಂಬುದನ್ನಿಷ್ಟು ನೋಡುವಾ. ಹುಟ್ಟುವುದಿಲ್ಲ ಸಾಯುವುದಿಲ್ಲ, ಬೆಳೆಯುವುದಿಲ್ಲ ಅಳಿಯುವುದಿಲ್ಲ, ಹಸಿವೆಯಿಲ್ಲ ನೀರಡಿಕೆಯಿಲ್ಲ, ತಿರುಗಿ ಕೇಳಿದರೆ ಉಸುರಾಡಿಸುವುದು ಮತ್ತು ಎವೆಬಡಿಯುವುದು ಕೂಡ ಇಲ್ಲ. ಇಷ್ಟೇ ಅಲ್ಲ ತಲೆಯಲ್ಲಿ ಯೋಜನೆ ಕಲ್ಪನೆ ಮುಂತಾದವುಗಳ ಸುದ್ದಿ ಸುಳಿವು ಕೂಡ ಇಲ್ಲ! ಒಳಹೊರಗೆಲ್ಲಾ ಅಗಾಧ ಶೂನ್ಯವೇ ಶೂನ್ಯ. ಲೋಕವಿಲ್ಲ ಜೀವವಿಲ್ಲ. ಚಲನವಿಲ್ಲ ವಲನವಿಲ್ಲ ಎಲ್ಲಾ ಅವಿಕೃತ ನಿಸ್ಪಂದಿತ ಮಹಾಶೂನ್ಯ. ನಮಗೆ ಕಾಲದ ಕಲ್ಪನೆಯಾಗದಿರಬೇಕಾದರೆ ಇಷ್ಟಾಗಬೇಕಾಗುತ್ತದೆ. ಇಷ್ಟಾಗಬೇಕೆಂದರೇನದು? ನಮ್ಮ ಹಾಗೂ ಈ ದೃಶ್ಯ ವಿಶ್ವದ ಸಂಚಲನೆಯೇ ಸಂಪೂರ್ಣವಾಗಿ ನಿಂತು ಹೋಗಬೇಕು. ಇಷ್ಟಾದಾಗ ನಾವು ಇನ್ನೂ ಇದ್ದುಕೊಂಡಿದ್ದೇವೆಂಬುದರ ಅರ್ಥವೇ ಆಗದು. ಅರ್ಥಾತ್ ಎಲ್ಲಾ ಇಲ್ಲವೆಂದರೆ ಅಲ್ಲಿ ಕಾಲವಿಲ್ಲ. ಇದೆಯೆಂದರೆ ಅಲ್ಲಿ ಅದೂ ಇದ್ದದ್ದೇ **ಮಹಾಸ್ಥಲದ ಸ್ಪಂದನವೇ ಮಹಾಕಾಲವು.** ಕಾಲವೂ ಸ್ಥಲವೂ ಎರಡು ಭಿನ್ನವಸ್ತುಗಳಲ್ಲ. ಕಾಲವು ಸ್ಥಲದ್ದೇ ಇನ್ನೊಂದು ಮಗ್ಗಲು. ಈಗ ನಾವು ವಸ್ತುಗಳನ್ನು ಉದ್ದ, ಅಗಲ, ಪಿಂಡಗಳೆಂಬ ಮೂರು ಅಳತೆಗಳಿಂದ ಅಳೆಯುತ್ತೇವೆ. ಮಹಾ ಆಕಾಶದ ಉದ್ದಗಲ ಪಿಂಡಗಳ ಅಂತವಿಲ್ಲದಿದ್ದರೂ ಅವುಗಳ ಅಸ್ತಿತ್ವದ ಅನಿಸಿಕೆಯು ನಮಗಿದೆಯಷ್ಟೇ? ಇದೀಗ ಆ ಮೂರರೊಡನೆ ಇನ್ನೊಂದನ್ನು ಸೇರಿಸೋಣ. ಉದ್ದ, ಅಗಲ, ಪಿಂಡ, ವಿಲಂಬ ಅಂದರೆ ಕಾಲವೂ ಆದರದೊಂದು

ಆಳತೆಯೇ ಎಂದರ್ಥ. ಕಾಲವು ಹಿಂದೆ ಮುಂದೆ ಅನಂತವಾಗಿದ್ದು ಅದರ ವರ್ತಮಾನ ಆಕಾರವೊಂದೇ ನಮ್ಮ ಮುಂದೆ ಹಾಯ್ದು ಓಡುತ್ತಿರುತ್ತದೆ. ಮಹಾಸ್ಥಲವು ಮೇಲ್ಗಡೆಗೆ ಅನಂತ–ಕೆಳಗಡೆಗೆ ಅನಂತ, ಹಿಂಗಡೆಗೆ ಅನಂತ–ಮುಂಗಡೆಗೆ ಅನಂತ, ಬಲಗಡೆಗೆ ಅನಂತ–ಎಡಗಡೆಗೆ ಅನಂತ, ನಾಲ್ಕೂ ಮೂಲೆಗೆ ಅನಂತ, ನಾಲ್ಕೂ ನಿಟ್ಟಿಗೆ ಅನಂತ, ದಶದಿಕ್ಕುಗಳಿಗೆಲ್ಲ ಅನಂತವಾಗಿ ಪಸರಿಸಿದೆ. ಅದರಂತೆ ಅದು ಇನ್ನೂ ಎರಡು ನಿಟ್ಟಿನಲ್ಲಿ ಅನಂತವಾಗಿ ಪಸರಿಸಿದೆ. ಆ ಎರಡು ನಿಟ್ಟುಗಳೆಂದರೆ ಭೂತ ಮತ್ತು ಭವಿಷ್ಯ ಆದರೆ ದಶದಿಕ್ಕುಗಳೆಂಬವುಗಳು ಮಹಾಸ್ಥಲದ ವರ್ತಮಾನ ರೂಪಕ್ಕೆ ಮಾತ್ರ ಸಂಬಂಧಿಸಿವೆ. ಆದಕ್ಕೆ ಭೂತಭವಿಷ್ಯಗಳೆಂಬವಿನ್ನೆರಡು ಸೇರಿದರೆ ಆ ಅನಂತ ಶಾಶ್ವತನಿಧಿಗೆ ಹನ್ನೆರಡು ದಿಕ್ಕುಗಳಾಗುವವು. ಹತ್ತು ದಿಕ್ಕುಗಳೆಲ್ಲಾ ಉದ್ದಗಲ ಪಿಂಡಗಳೆಂಬ ತ್ರಿಮಿತಿಗಳಲ್ಲೇ ಅಡಕವಾಗುವದರಿಂದ ಉಳಿದೆರಡು ದಿಕ್ಕುಗಳ ಸಮಷ್ಟಿಗೆ ಚತುರ್ಥಮಿತಿ ಅಥವಾ 'ಫೋರ್ಥ್ ಡಾಯ್‌ಮೆನ್ಶನ್' ಎಂದೆನ್ನುವರು. ಅರ್ಥಾತ್ "ಮಹಾಕಾಲವು ಮಹಾಸ್ಥಲದ ಚತುರ್ಥಮಿತಿ ಅಥವಾ ಫೋರ್ಥ್ ಡಾಯ್‌ಮೆನ್‌ಶನ್ ಆಗಿದೆ." ಈ ಚತುರ್ಥಮಿತಿ ಅಥವಾ ಫೋರ್ಥ್ ಡಾಯ್‌ಮೆನ್ಶ್ಯನ್ ಎಂಬುದರ ರಾಮಾಯಣವು ಬಹಳೇ ದೊಡ್ಡದಿದೆ. ಅದರ ಸ್ವರೂಪವನ್ನು ಊಹಿಸುವುದಕ್ಕೆ ಮಾನವಬುದ್ಧಿಯು ಬಹಳೇ ಅಸಮರ್ಥವಾಗಿದೆ. ಪರಮಾರ್ಥ ಪೂರ್ಣರಾದ, ಮಹಾವಿಚಾರಿಗಳಾದ (ಗ್ರೇಟ್ ಥಿಂಕರ್) ಮಾರಿಸ್ ಮೆಟರ್ಲಿಂಕರು ಈ ವಿಷಯದ ಮೇಲೆ ಬರೆದಿರುವ ತಮ್ಮ ಗ್ರಂಥದಲ್ಲಿ (ಲ್ಯಾಫ್ ಆಫ್ ಸ್ಪೇಸ್) ಒಬ್ಬ ವಿಖ್ಯಾತ ಚತುರ್ಥಮಿತಿ ಶಾಸ್ತ್ರಜ್ಞರ ಅಭಿಪ್ರಾಯವೊಂದನ್ನು ಉಲ್ಲೇಖಿಸಿರುವರು. ಅದು ಹೇಗೆಂದರೆ–

'ತಮ್ಮ ಜನ್ಮವನ್ನೇ ಅದಕ್ಕೆ ಧಾರೆಯೆರೆದವರಿಗೆ ಏನೋ ಕೊನೆಗೆ ಚತುರ್ಥಮಿತಿಯ ಸ್ವರೂಪದ ಒಂದಿಷ್ಟು ಕಲ್ಪನೆಯಾಗಬಲ್ಲದು.'

ಇದೇ ವಿಷಯವು ನಮ್ಮ ಪ್ರಾಚೀನ ಅನುಭಾವಿಗಳಿಗೆ ಇದೇ ಪ್ರಕಾರವಾಗಿ ಹೊಳೆದಿದ್ದಿತೆಂಬುದನ್ನು ನಮಗೆ ಯಾರಾದರೂ ತೋರಿಸ್ತಿ

ಕೊಟ್ಟರೆ ನಮಗೆ ಇನ್ನೆಷ್ಟು ಸಂತೋಷವಾಗಬೇಡ ? ಹಾಗಾದರೆ ಇಲ್ಲಿ ಕೇಳಿರಿ–

ಪ್ರಾಚೀನ ಕಾಲದಲ್ಲಿ 'ದೃಶ್ಯವಿಶ್ವ' ಮತ್ತು 'ಅದೃಶ್ಯವಿಶ್ವ' ಎಂದು ಎರಡು ಭೇದಗಳನ್ನು ಕಂಡು ಹಿಡಿದಿದ್ದಾರೆ. ನಮ್ಮ ಪಿಂಡದಲ್ಲಿ ಹೇಗೆ 'ವಿಕಾರಯುಕ್ತ ಜೀವ' ಮತ್ತು 'ವಿಕಾರ ರಹಿತ ಆತ್ಮ' ಎಂದು ಎರಡು ಸ್ಥಿತಿಗಳನ್ನು ಕಂಡುಕೊಂಡಿರುವರೋ ಹಾಗೆಯೇ ಬಾಹ್ಯ ವಿಶ್ವದಲ್ಲಿಯೂ ಗೊತ್ತು ಹಿಡಿದಿದ್ದಾರೆ. ಅಲ್ಲಿ ಅಂತರ್ವಿಶ್ವವೆಂದರೆ ಕೇವಲ 'ಮೂಲಸತ್ತಾ' ಎಂದು ಹೇಳಬಹುದು. ಬಹಿರ್ವಿಶ್ವವಂತೂ ಅನಂತಸ್ಪಂದನದಸಿಧಿಯೆಂಬುದು ಸ್ಪಷ್ಟವೇ ಇದೆ. ಅರ್ಥಾತ್ ಒಳಗಿನದು ಸ್ಪಂದನರಹಿತವಾಗಿಯೂ, ಹೊರಗಿನದು ಸ್ಪಂದನ ಸಹಿತವಾಗಿಯೂ ಇರುವುದಾಗಿ ಅವರ ಅನುಭವ.

ಈಗ ನಾವು ಮಹಾರಾಷ್ಟ್ರದ ಸಂತ ಶಿಖಾಮಣಿಗಳಾದ ಶ್ರೀ ರಾಮದಾಸರ ವಿಖ್ಯಾತ ಗ್ರಂಥವಾದ 'ದಾಸಬೋಧ'ದಲ್ಲಿ ಈ ವಿಷಯುವನ್ನು ವಿವರಿಸಿದ ರೀತಿ ಮತ್ತು ಶಬ್ದಯೋಜನೆಗಳ ಕಡೆಗೆ ಒಂದಿಷ್ಟು ಲಕ್ಷ್ಯವನ್ನು ಹೊರಳಿಸಿದರೆ ನಮಗೆ ಅತ್ಯಾಶ್ಚರ್ಯವಾಗದಿರದು.

... ... ... ... ...
... ... ... ... ... ॥
'ನಿರಾಕಾರೀ ಕಾಳ ವೇಳ । ಕಾಂಹೀಚ ನಾಹೀ ॥

ಉಪಾಧೀಚಾ ವಿಸ್ತಾರ ಝಾಲಾ ।
ತೇಥೇ ಕಾಳ ದಿಸೋನ ಆಲಾ ।
ಯೇರವೀ ಪಾಹತಾ ಕಾಳಾಲಾ । ಠಾಂವಚಿ ನಾಹಿ ॥

ಯೇಕ ಚಂಚಳ ಯೇಕ ನಿಶ್ಚಳ ।
ಯಾ ವೇಗಳಾ ಕೋಠೇ ಕಾಳ ।
ಚಂಚಳ ಆಹೇ ತಾವತ್ಕಾಳ । ಕಾಳ ಮ್ಹಣಾವೇ ॥ '

—(೧೨ನೇ ದಶಕ–೮ನೇ ಸಮಾಸ.)

"ಆಕಾರರಹಿತವಾದ ವಿಶ್ವದ ಆಂತಃಸ್ವರೂಪದಲ್ಲಿ ಕಾಲ, ವೇಳೆ ಮುಂತಾದುವೇನೂ ಇಲ್ಲ. ಆಕಾರಕ್ಕೆ ಬಂದ ಮೇಲೆಯೇ ಅಲ್ಲಿ ಕಾಲವು

ಕಂಡಿತು. ಒಟ್ಟಾರೆ ನೋಡಿದರೆ ಬೇರೆ ಕಾಲವೆಂಬುದೇ ಇಲ್ಲ. ಮಹಾ ವಸ್ತುವಿನ ಚಂಚಲ ಹಾಗು ಅಚಂಚಲ ಎಂಬೆರಡು ಸ್ವರೂಪಗಳ ಹೊರತು ಬೇರೆ ಕಾಲವೆಂಬುದಿನ್ನೆಲ್ಲಿ? ಚಾಂಚಲ್ಯವಿದ್ದಷ್ಟರ ವರೆಗೆ ಮಾತ್ರ ಕಾಲವೆಂದೆನ್ನುವುದು."

ಅಹಾ! ಐನ್‌ಸ್ಟೀನರ ವಿಚಾರವು ಅವಗತವಾಗಿರದಿದ್ದರೆ ನಮಗೆ ಈ ಪ್ರಾಚೀನವಾಣಿಯು ಅರ್ಥವು ಆಗಬಹುದಾಗಿದ್ದಿತೇ? ಇವರಿಬ್ಬರ ಮಂಡನವು ನಿಮಗೆ ಒಂದೇ ಎಂದು ಅನಿಸುವುದಿಲ್ಲವೆ?

ಪ್ರಾಚೀನ ಜೈನ ಶಾಸ್ತ್ರಗಳಲ್ಲಿ ಕಾಲದ ವಿಷಯದಲ್ಲಿ ಇನ್ನೂ ಇದಕ್ಕಿಂತ ವಿಚಿತ್ರ ಸಂಗತಿಗಳ ಸಮಾವೇಶವಿದೆ. ನಮ್ಮ ಕವಿಶೇಖರನಾದ ರತ್ನಾಕರನು ತನ್ನ ಭರತೇಶವೈಭವದಲ್ಲಿ ಅದರ ಸಾರವನ್ನು ಹೀಗೆ ಹರಡಿದ್ದಾನೆ:—

"ಕಾಲವೆಂಬುದು ವಸ್ತು ಪರಮಾಣುರೂಪಾಗಿ।
ಮೂಲೋಕ ತುಂಬಿರುತಿಹುದು॥
ಮೇಲೊಂದನೊಂದು ಪತ್ತವು ಪರಮಾಣುಗ—।
ಳಾಲಿಸೆ ರತ್ನರಾಶಿವೊಲು॥
ಪರಿಮಳ ರಸ ವರ್ಣ ಮೊದಲಾದುವಿಲ್ಲ ತ—
ಳ್ತಿರುತದೆ ಬಯಲ ರೂಪಿನೊಳು॥
ಪರಮಾಣು ರೂಪದ ತುಂಡಾಗಿ ನಭವ ಕ—
ತ್ತರಿಸಿ ಲೋಕವ ತುಂಬಿದಂತೆ॥
ವ್ಯವಹಾರಕಾಲ ನಿಶ್ಚಯಕಾಲವೆಂದು।
ದ್ವೈವಿಧವಾಗಿಹುದದರಲ್ಲಿ॥
ಹವಣಾದ ದಿನಮಾಸ ವರುಷ ಘಳಿಗೆ ಜಾವ।
ವಿವು ವ್ಯವಹಾರ ಕಾಲಗಳು॥
ಮಿತಕೆ ಬಾರದೆ ಲೋಕ ತುಂಬಿದ್ದುದೆಲ್ಲ ನಿ—
ಶ್ಚಿತಕಾಲವಿವು ಪರಿಯಾಯ॥
ಅತಿ ಹೊಸತನು ಹಳತೆನಿಪುದಾದಿಯ ಪರಿ.
ಣತಿ ತಾನೆ ಕಾಲದ ಗುಣವು॥

**ಭಿನ್ನವಸ್ತುಗಳ ವರ್ತನೆಗೆ ಕಾರಣ ತಾನೆ।**
**ತನ್ನ ವರ್ತನೆಗೂ ತಾನಹುದು ।।**
ತನ್ನಯ ಮೊಗವ ಡೊಂಕಿಸಿ ನಕ್ಕು ಪರಿಹಾಸ_
ನನ್ನಿಗರನು ನಗಿಪಂತೆ”

—(ಭ. ದಿವ್ಯಧ್ವನಿಸಂಧಿ.)

ಮೇಲೆ ನಾನು ಸಸ್ಪಂದ ವಿಶ್ವ, ನಿಷ್ಪಂದ ವಿಶ್ವವೆಂದು ಹೇಳಿದ ವಿಭಾಗಗಳಿಗೇ ಜಿನಾಗಮದಲ್ಲಿ 'ಲೋಕಾಕಾಶ' 'ಅಲೋಕಾಕಾಶ' ಗಳೆಂಬ ಹೆಸರುಗಳಿವೆ.

**ಲೋಗಾಗಾಸ ಪದೇಸೇ ।**
ಎಕ್ಕೇಕ್ಕೇ ಜೇ ಠಿಯಾಹು ಎಕ್ಕೇಕ್ಕೇ ॥
ರಯಣಾಣಂ ರಾಸೀವಿವ
ತೇ ಕಾಳಾಣೂ ಅಸಂಖ ದವ್ವಾಣಿ ”

ಎಂಬ ಪ್ರಾಕೃತ ಶ್ಲೋಕದ ಅನುವಾದವೇ ನಮ್ಮ ರತ್ನಾಕರನ ಮೊದಲ ಪದ್ಯವಾಗಿದೆ. '**ಲೋಕಾಕಾಶ ಪ್ರದೇಶದಲ್ಲಿ** ದ್ರವ್ಯದ ಒಂದೊಂದು ಅಣುವಿರುವಲ್ಲೆಲ್ಲ ರತ್ನರಾಶಿಯಂತಿರುವ ಕಾಲದ ಒಂದೊಂದು ಅಣುವು ಇದ್ದುಕೊಂಡೇ ಬಿಟ್ಟಿದೆ.' 'ಇಂದು ರತ್ನರಾಶಿಯಂತೆ' ಎಂಬ ಶಬ್ದದಿಂದ ನಮಗೆ ಇನ್ನೊಂದು ಚಮತ್ಕಾರದ ಸಂಗತಿಯು ಕಲ್ಪನೆಗೆ ಬರುತ್ತದೆ. ಆದರೆ ನಮ್ಮ ಊಹೆ ಸರಿಯೋ ಅಲ್ಲವೋ ತಿಳಿಯದು. ಆದರೂ ಹಾಗೆ ಊಹಿಸಲಿಕ್ಕೆನೋ ಅವಕಾಶವಿದೆ— “ಕಾಲದ ಅಣುಗಳು ಯಾವುದೋ ಒಂದು ಹೆಚ್ಚಿನ ತರಗತಿಯ ಒಳಗಣ್ಣಿಗೆ ರತ್ನದ ರಾಶಿಯಂತೆ ಪ್ರಕಾಶಮಾನವಾಗಿ ಕಾಣುತ್ತಿರಬಹುದೋ ಏನೋ!” ಮಹಾ ಸಾಕ್ಷಾತ್ಕಾರದ ಪ್ರಸಂಗದಲ್ಲಿ ಮಹಾ ಪುರುಷರಿಗೆ ಗೋಚರಿಸುವ ಮಹಾಪ್ರಕಾಶವು ಈ ಕಾಲದ್ರವ್ಯದ್ದೇ ಆಗಿರುವುದಾಗಿ ನನಗೆ ಅನಿಸುತ್ತದೆ:—

“ದಿವಿ ಸೂರ್ಯ ಸಹಸ್ರಸ್ಯ
ಭವೇದ್ಯುಗ ಪದುತ್ಥಿತಾಃ
ಯದಿ ಭಾಃ ಸದೃಶೀ ಸಾ ಸ್ಯಾದ್
ಭಾಸಸ್ತಸ್ಯ ಮಹಾತ್ಮನಃ ॥”

'ಆಕಾಶದಲ್ಲಿ ಏಕಕಾಲಕ್ಕೆ ಸಾವಿರ ಸೂರ್ಯರು ಉದಯಿಸಿದ ಬೆಳಕಿಗೆ ಸಮಾನವಾಗಿ ಆ ಪರಮಾತ್ಮನ ತೇಜವಿರುತ್ತದೆ.' ಎಂದು ಗೀತೆ ಸಾರುತ್ತಿದೆ, 'ಜ್ಯೋತಿಷಾಮಪಿ ತಜ್ಜ್ಯೋತಿಃ' ಎಂದು ಉಪನಿಷತ್ತು ಗಳೂ 'ಬೆಳಗಿನೊಳಗಿನ ಮಹಾಬೆಳಗು' ಎಂದು ಶ್ರೀ ಬಸವಣ್ಣನವರೂ ಕಂಡುಂಡು ಉಸುರಿದ ಮಾತಿದು. "ಕಾಲೋಽಯಂ ಭಗವಾನ್ ವಿಷ್ಣುಃ! ಅನಂತಃ ಪರಮೇಶ್ವರಃ!" 'ಈ ಕಾಲವೆಂಬುದು ಅನಂತ ಪರಮಾತ್ಮನೇ. ವೈಭವಶಾಲಿಯಾದ ಶ್ರೀವಿಷ್ಣುವೂ ಈ ಕಾಲನೇ' ಎಂಬುದೊಂದು ಪೂರ್ವೋಕ್ತಿಯೂ ಇದೆ. ಆದರೆ ನಮ್ಮ ರತ್ನಾಕರ ನಾದರೋ ಅದರ ಅಣುಗಳ ಭಿನ್ನಭಿನ್ನತೆಯೊಂದನ್ನೇ ಸೂಚಿಸಿ 'ಒಂದ ನೊಂದು ಪತ್ತವು' ಎಂಬುದಕ್ಕೆ ರತ್ನರಾಶಿಯ ಉಪಮೆಯನ್ನು ಅನ್ವ ಯಿಸಿ ಹೇಳಿದ್ದಾನೆ. ಸಮಸ್ತವಿಶ್ವದ ಮಹಾಸ್ಥಲವೇ ಪರಮಾಣುಗಳ ನಿಧಿಯಾಗಿದೆಯೆಂದು ಹೇಳಿದ ಮೇಲೆ ಅದರಲ್ಲಿ ಓತಪ್ರೋತವಾಗಿ ಬೆರೆ ತಿರುವ ಕಾಲವೂ ಪರಮಾಣುಗಳ ನಿಧಿಯೇ ಆಗಿದೆಯೆಂದು ಹೇಳುವುದ ರಲ್ಲಿ ವಿಪರೀತವೇನು?'

ಇದಲ್ಲದೆ ಅವನು ಆ ಅಣುಗಳಿಗೆ ವರ್ಣರುಚಿಗಂಧಗಳಿಲ್ಲವೆಂದು ಹೇಳಿದುದಾಗಲಿ ವ್ಯವಹಾರಕಾಲ–ನಿಶ್ಚಿತಕಾಲವೆಂದು ವಿಭಾಗಿಸುವು ದಾಗಲಿ ನಮ್ಮ ಬುದ್ಧಿಗೇನೂ ಜಟಿಲವಾಗಿ ತೋರುವದಿಲ್ಲ. ಅನಾದ್ಯ ನಂತವಾದ ಮಹಾಶಾಶ್ವತ ಕಾಲಕ್ಕೇ ಆತನು ಮಿತಕ್ಕೆ ಬಾರದ ನಿಶ್ಚಯ ಕಾಲವೆಂದು ಅಂದಿದ್ದಾನೆ. 'ಹೊಸದನ್ನು ಹಳೆದೆನಿಸುವುದು' ಎಂದು ಆತನು ಹೇಳಿರುವುದು ಕೇವಲ ಸುಲಿದ ಅರ್ಥದಲ್ಲಿಯೇ ಎಂದು ನಮಗೆ ಅನಿಸುವುದಾದರೂ ಅದರೊಳಗೂ ಒಂದು ಏನೋ ಅನಾಕಲನೀಯವಾದ ಅರ್ಥವು ಇದ್ದಂತೆ ತೋರುತ್ತದೆ. ಅದೇನೇ ಇದ್ದರೂ ಅದರ ಮುಂದಿನ ಮಾತಿನಲ್ಲೇ ಅದು ಅಡಕವಾಗುತ್ತದೆಯೆಂದೆನ್ನಬಹುದು. "**ಪರಿಣತಿ ತಾನೆ ಕಾಲದ ಗುಣವು**" "**ಭಿನ್ನವಸ್ತುಗಳ ವರ್ತನೆಗೆ ಕಾರಣ ತಾನೆ**" ಎಂಬಲ್ಲಿ ಮತ್ತೊಂದು ಬಹಳೇ ಮಹತ್ವದ ವಿಷಯವು ನಮ್ಮ ಮುಂದೆ ಬಂದಿದೆ.

ಮೂಲದ್ರವ್ಯಗಳು ವಸ್ತು ಸ್ವರೂಪ ಬರುವುದಕ್ಕೆ ಕಾಲವೇ

ಕಾರಣವೆಂದು ಆತನು ಹೇಳುತ್ತಾನೆ. ಅರ್ಥಾತ್ ಅಂತಃಸ್ಪಂದನವೇ ಸೃಜನಶಕ್ತಿಯೆಂಬುದು ಅವನ ಅಭಿಪ್ರಾಯ. ಈಗ ಪಡುವಣದ ನಾಡಿನಲ್ಲಿ ಬಹಳ ಪ್ರಾಮುಖ್ಯತೆಗೆ ಬಂದಿರುವ ' ಎವ್ಹಲೂಶನ್ ' ( ' ವಿಕಾಸ ' ಅಥವಾ ' ಪರಿಣತಿ ' ) ಯೆಂಬುದು ಹಿಂದಿನ ನಮ್ಮವರ ' ಕಾಲದ ಕಂಪನ ' ವೇ ಎಂಬುದು ನಮ್ಮ ನಾಯಕನಿಗೆ ನಿರ್ವಿವಾದ ಸಂಗತಿಯಾಗಿ ತೋರುತ್ತಿದೆ. ಒಬ್ಬ ಪಾಶ್ಚಾತ್ಯ ಗ್ರಂಥಕಾರನು ಇದೇ ವಿಷಯಕ್ಕೆ ಹೇಳಿದ ಕೆಲವು ಮಾತುಗಳು ಬಹಳೇ ಮನನೀಯವಾಗಿರುವುದರಿಂದ ವಾಚಕರನ್ನು ಅತ್ತಕಡೆಗೆ ಸ್ವಲ್ಪ ಕರೆದೊಯ್ಯುವೆ.

" ಡಾರ್ವಿನ್ನನ ಗ್ರಂಥದ ಬಗ್ಗೆ ಮಾತು ನಡೆದಾಗ ಚಾರ್ಲಸ ಕಿಂಗ್ಸಲೇಯು ಉಪಯುಕ್ತವಾದ ಒಂದು ಸೂಚಕಾಭಿಪ್ರಾಯವನ್ನಾಡಿ ತೋರಿಸಿದ್ದೇನೆಂದರೆ:— ದೇವನು ಜಗತ್ತನ್ನು ಸೃಜಿಸುವನೆಂಬ ಮಾತಿನಲ್ಲಿಯೂ ಸೃಷ್ಟಿಯೇ ಜಗತ್ತನ್ನು ಸೃಜಿಸಿಕೊಂಡಿತೆಂಬ ಮಾತಿನಲ್ಲಿಯೂ ನನಗೆ ಬಹಳ ಭೇದ ತೋರದು .................. ಸದ್ವಸ್ತುವು ಅನ್ನದಲ್ಲಿ ಪ್ರಾಣಗತಿಯನ್ನುಂಟುಮಾಡಿತು; ಅನ್ನಬೀಜದಲ್ಲಿಯೇ ಬದಲು, ಬೆಳಿಗೆ, ಆಗುಹೋಗುಗಳಿಗೆ ಬೇಕಾದ ಶಕ್ತಿಯಿತ್ತು; ಈ ಶಕ್ತಿಗೇ ' ಹೇತುವು ' ಎಂಬುದಿನ್ನೊಂದು ಹೆಸರು; ಅನ್ನದ ಬದಲಾವಣೆಯಲ್ಲಿ, ಒಂದು ರೂಪ ತೊರೆದು ಇನ್ನೊಂದಾಗಿ ಪರಿಣಮಿಸುವಲ್ಲಿ; ತನ್ನ ಉತ್ತರೋತ್ತರ ಉನ್ನತಿಯಾಗುವಂತೆ ಉದ್ಧರಿಸಿಕೊಳ್ಳುವ ಹವಣಿಕೆಯಲ್ಲಿ ಈಶಸಂಕಲ್ಪವನ್ನೆ ಕಾಣುವೆವೆಂದು ನಾವೆನ್ನುತ್ತೇವೆ.' '

ಅಹಾ ! ನಮ್ಮ ಜ್ಞಾನಭಿಕ್ಷುವನ್ನು ಈ " **ಕಾಲದೇವ** " ನ ನವಸ್ವರೂಪದ ಕಲ್ಪನೆಯು ಅತಿಶಯವಾಗಿ ತನ್ನೆಡೆಗೆ ಆಕರ್ಷಿಸಿಕೊಂಡು ಬಿಟ್ಟಿತ್ತು ! ಆದರಿಂದ ಅವನ ಹಿಂದಿನ ಸಂಕಟವೆಲ್ಲಾ ಹಗುರಾದ ಹಾಗೆ ಅನಿಸಹತ್ತಿತ್ತು. ಅಷ್ಟರಲ್ಲಿ ತನ್ನ ಆ ಹಿರಿಗೆಳೆಯನಿಗೆ ಕಾರಣಾಂತರದಿಂದ ಸ್ಥಾನಾಂತರ ಮಾಡಬೇಕಾಗಿ ಬಂದುದರಿಂದ ಈತನೂ ಹೊರಟು ತನ್ನೂರಿಗೆ ಬಂದನು. ಅದೀಗ ಡಿಸೆಂಬರ ತಿಂಗಳ ತೀರ ಕೊನೆಯದಿನಗಳು. ಒಳಗೆ ಜೀವ ಜೀವಾಳದಲ್ಲೆಲ್ಲ ಕಾಲಸ್ವರೂಪದ ನವ ನಕಾಶೆಯೊಂದೇ.

ಆದರೂ ಮುಂದಿನ ವರುಷವನ್ನು ಹೇಗೆ ಸಾಗಿಸುವುದೆಂಬುದರ ವಿಷಯದಲ್ಲಿ ವಾರ್ಷಿಕ ಅಂತರ್ನಿರ್ದೇಶವು ಇನ್ನೂ ಬರಲೇ ಇಲ್ಲ.

(೧೮)

ಇಂದು ಡಿಸೆಂಬರ್ ಮೂವತ್ತೊಂದನೆ ತಾರೀಖು. ನಮ್ಮ ನಾಯಕನ ಚಿತ್ತವು ಅಂತರ್ನಿರ್ದೇಶದ ಕಡೆಗೆ ಚಾತಕಪಕ್ಷಿಯಂತೆ ಬಾಯ್ಬಿಟ್ಟು ಕುಳಿತಿದೆ. ಇದೀಗ ಸಂಜೆಯ ಎಂಟುಗಂಟೆ. ಗೆಳೆಯರೆಲ್ಲರೊಡನೆ ಊರ ಸಮೀಪದ ಒಂದು ಅಡವಿಯ ಬೈಲಲ್ಲಿ ಮಾತನಾಡುತ್ತ ಕುಳಿತಿದ್ದಾನೆ. ಒಳಗೆಲ್ಲಾ ಅದೇ ಆ ಐನ್‌ಸ್ಟೀನರ ಕಾಲಚಿತ್ರದ ಮಹಾ ಆಶ್ಚರ್ಯ.

ಇದೀಗ ಆತನು ಗೆಳೆಯರೆದುರಿಗೆ ತನ್ನ ಕೆಲವೊಂದು ನಿರೀಕ್ಷಣಗಳನ್ನು ಕುರಿತು ಪ್ರಸ್ತಾಪಿಸುತ್ತಲಿದ್ದಾನೆ. ಅದು ಹೇಗೆಂದರೆ—

"ನಾವು ನಮ್ಮ ಸುತ್ತುಮುತ್ತಲಿನ ದೈನಂದಿನ ಜೀವನವನ್ನೇ ಚೆನ್ನಾಗಿ ನಿರೀಕ್ಷಿಸುತ್ತಲಿದ್ದರೆ ನಮಗೆ ಎಷ್ಟೊ ಗೂಢ ವಿಷಯಗಳು ಅನಾಯಾಸವಾಗಿ ಗೋಚರಿಸುವಂತಿವೆ. ದೃಶ್ಯಜೀವನದೊಳಗಿಂದಲೇ ನಾವು ಅದೃಶ್ಯಜೀವನದ ಎಷ್ಟೋ ಕುರುಹುಗಳನ್ನು ಕಾಣಬಲ್ಲೆವು. ಇದೀಗ ಜಗದೀಶಚಂದ್ರರು ಕೇವಲ ಬಾಹ್ಯವಸ್ತು ನಿರೀಕ್ಷಣೆಯಲ್ಲಿಯೇ 'ಅವ್ಯಕ್ತ'ವೊಂದನ್ನು ಕಂಡು ಹಿಡಿಯುತ್ತಲಿದ್ದಾರೆ. ಅವ್ಯಕ್ತದ ಕುರುಹುಗಳು ಇಂಥಲ್ಲೇ ಒಂದು ಕಡೆಯಲ್ಲಿ ಇವೆಯೆಂತಲ್ಲ. ಎಲ್ಲಿ ಬೇಕಾದಲ್ಲಿ ಹುಡುಕಿದರೂ ಅಲ್ಲಿ ಅದು ಕೈಗೆ ಸಿಕ್ಕುವಂತಿದೆ.

"ದೃಢಶ್ರದ್ಧೆಯುಳ್ಳವರಿಗೆ ಕುರುಹುಗಳು ಭೂಮಿಯ ಮೇಲೆಯೂ ಇವೆ, ಅಂತರಂಗದಲ್ಲಿಯೂ ಇವೆ. ಹಾಗಾದರೆ ನೀವು ಅವುಗಳನ್ನು ಕಾಣಲಾರಿರಾ?.......... ಸಪ್ತಸ್ವರ್ಗಗಳು ಆ ದೇವದೇವನನ್ನು ಸ್ತುತಿಸುತ್ತಿವೆ. ಭೂಮಿಯೂ ಅದರ ಮೇಲಿರುವ ಸಮಸ್ತವೂ ಆತನನ್ನು ಹೊಗಳುತ್ತಿವೆ. ಆತನ ಸ್ತೋತ್ರ ಪಾಠವನ್ನು ಉಚ್ಚರಿಸದ ವಸ್ತುವೊಂದೂ ಇರಲಾರದು. **ಆದರೆ ಅವುಗಳ ವಾಣಿಯನ್ನು ಮಾತ್ರ ನೀವು ಅರಿಯಿರಲ್ಲಾ.**" ಎಂದು ಕುರಾನದಲ್ಲಿ ಹೇಳಿದೆ.

"ಲೋಕದಲ್ಲಿ ಒಂದು ನಿಯಮವಂತೂ ಸರ್ವರಿಗೂ ಸ್ಪಷ್ಟವಾಗಿ

ಕಾಣುತ್ತಿದೆ. ಅದಕ್ಕೆ ನಾವು ನಿಸರ್ಗನಿಯಮವೆಂದು ಅನ್ನುತ್ತೇವೆ. ಅದನ್ನು ಅನುಸರಿಸಿ ನಡೆದರೆ ನೂರರಲ್ಲಿ ತೊಂಬತ್ತರೊಬ್ಬತ್ತು ಕೆಲಸಗಳು ಗೆದೆಯುವದು ನಿಶ್ಚಿತ. ಅದರಂತೆ ಅದನ್ನು ಅಲಕ್ಷಿಸಿ ನಡೆದರೆ ಅದೇ ಪ್ರಮಾಣದಿಂದ ಕಾರ್ಯಹಾನಿಯಾಗುವುದೂ ಅಷ್ಟೇ ನಿಶ್ಚಿತ. ಅಂತಲೇ ಈ ಲೋಕನಿಯಮದ ತಳಹದಿಯ ಮೇಲೆ ಎಸೋ ವ್ಯವಹಾರ ಶಾಸ್ತ್ರಗಳು ಜನ್ಮತಾಳಿ ಸಾಮ್ರಾಜ್ಯವನ್ನು ಮಾಡುತ್ತಲಿವೆ. ಆದರೆ ಇಲ್ಲಿ ಒಂದು ವಿಶೇಷವೇನೆಂದರೆ, ಭೌತಿಕ ನಿಯಮದ ಆಳಿಕೆಯು ಇಷ್ಟೊಂದು ಘನ ಪ್ರಮಾಣದಲ್ಲಿ ದಿಟಕ್ಕೆ ಬರುತ್ತಿದೆಯಾದರೂ ಇದಕ್ಕೆ ವಿಪರೀತವಾದ ಉದಾಹರಣೆಗಳು ಸಾವಿರದಲ್ಲೊಂದಾದರೂ ಸಿಕ್ಕೇಸಿಗುತ್ತವೆ. ತುಂಬಾ ವಿವೇಕದಿಂದ ನಡೆದೂ ಕೂಡ ಅವನತಿಯಾದದ್ದೂ ಉಂಟು; ಪೂರ್ಣ ಅವಿವೇಕದಿಂದ ನಡೆದೂ ಕೂಡ ಅಪಜಯವನ್ನರಿಯದುದೂ ಉಂಟು; ಆದರೆ ಇಂಥ ಉದಾಹರಣೆಗಳು ತೀರ ವಿರಳವೆಂಬುದನ್ನು ನಾನೊಪ್ಪುವೆ.

"ಇಂಥ ಅಕಲ್ಪಿತ ಸಂಗತಿಗಳನ್ನು ನಾವು ಕಾಕತಾಲೀಯ ನ್ಯಾಯಕ್ಕೆ ಸೇರಿಸುತ್ತೇವೆ. ಆದರೆ ಅಂಥವುಗಳದೇ ಒಂದು ದೊಡ್ಡ ಸಂಗ್ರಹವನ್ನು ಸೇರಿಸಿ ಅವುಗಳನ್ನೆಲ್ಲಾ ಪರೀಕ್ಷಿಸಿದಾಗ, ಅವುಗಳಲ್ಲೆಲ್ಲಾ ಒಂದು ನಿಯಮಬದ್ಧತೆಯು ಕಂಡುಬಂದರೆ ಆಗ ನಾವು ಅವುಗಳನ್ನು ಕಾಕತಾಲೀಯವರ್ಗದಿಂದ ತೆಗೆದು, ಇನ್ನೊಂದು ಯಾವುದೋ ಸುಸಂಬದ್ಧ ಶಾಖೆಗೆ ಸೇರಿಸಲಾರೆವೇನು?"

"ಇಂಥ ಸಂಗತಿಗಳು ಲೋಕದಲ್ಲಿ ಬಹಳ ವಿರಳವಾಗಿರುವಂತೆ ನಮ್ಮ ಜೀವನದಲ್ಲಿಯೂ ವಿರಳವಾಗಿಯೇ ಆಗಲೊಲ್ಲದೇಕೆ—ಆದರೆ ಕಂಡುಬರುವುದು. ನಿಶ್ಚಯ. ಆದಕೆಂತಲೇ ಇಂಥವುಗಳ ಕಡೆಗೆ ಲಕ್ಷ್ಯ ವಿಡುವವರೂ ವಿರಳ; ಮತ್ತು ಹಾಗೆ ಲಕ್ಷಿಸಿದವರಲ್ಲಿ ಸಂಪೂರ್ಣ ಸಿದ್ಧಾಂತಕ್ಕೆ ಬರುವವರಂತೂ ತೀರಾ ವಿರಳ. ಹೀಗೆಂತಲೇ ಗೀತೆಯು ಹೀಗೆ ಹೇಳುತ್ತಿದೆ:—

'ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ॥'

'ಸಾವಿರಕೊಬ್ಬ ಸತ್ಯ, ಲಕ್ಷಕೊಬ್ಬ ಭಕ್ತ, ಕೋಟಿಗೊಬ್ಬ

ಶರಣ ಕಾಣಾ ಕೂಡಲಚೆನ್ನಸಂಗಮದೇವಾ ' ಎಂದು ಚೆನ್ನಬಸವಣ್ಣನವರು ಹೇಳಿದುದರ ಅರ್ಥವೂ ಇದೇ. ವಿಷಯವು ವಿರಳವಾಗಿರುವಂತೆ ಅದನ್ನರಿತುಕೊಳ್ಳುವವರೂ ವಿರಳವಾಗಿಯೇ ಸಿಕ್ಕಬೇಕಾದುದು ಸುಸಂಗತವೇ ಇದೆ.

" ನಾವು ಇಂಥ ಕೆಲವು ಸಂಗತಿಗಳನ್ನು ಚೆನ್ನಾಗಿ ನಿರೀಕ್ಷಿಸಿದರೆ ಅವುಗಳಲ್ಲಿ ಕೆಲವು– ' ಕಾಲವನ್ನು ತಪ್ಪಿಸುವವರಾರು ? ' ಎಂಬ ಸಿದ್ಧಾಂತಕ್ಕೆ ಸಾಕ್ಷಿಯನ್ನು ಕೊಡುತ್ತವೆ. ಇನ್ನು ಕೆಲವು– 'ಬಿತ್ತಿದ್ದನ್ನು ಬೆಳಕೊಳ್ಳುವುದು ' ಎಂಬ ಮಾತಿಗೆ ಉದಾಹರಣೆಗಳಾಗುತ್ತವೆ. ಬೇರೆ ಕೆಲವು— ' ಈಶ್ವರನ ದಯವಿದ್ದರೆ ಯಮನ ಸದಾದರೂ ಏನು ಅಂಜಿಕೆ ? ' ಯೆಂದು ಉದ್ಘೋಷಿಸುತ್ತವೆ. ಮತ್ತೆ ಕೆಲಕೆಲವು— ' ದೇವರು ಮಾಡುವುದೆಲ್ಲಾ ನಮ್ಮ ಹಿತಕ್ಕೇ ' ಎಂದು ಸಾರಿಹೇಳುತ್ತವೆ. ಇಂಥ ಸಂಗತಿಗಳನ್ನು ನಾವು ಹೇರಳವಾಗಿ ಸಂಗ್ರಹಿಸಿ ಅವುಗಳನ್ನು ಪರಿಶೀಲಿಸುತ್ತ ಬಂದರೆ ಮುಂದೆ ಮುಂದೆ ನಮ್ಮ ಸ್ವತಃದ ಜೀವನದಲ್ಲಿಯೇ ಅಂಥವುಗಳನ್ನು ನಾವು ಹೆಜ್ಜೆಜ್ಜೆಗೆ ಕಾಣಬಹುದು.

" ಸಾಧುಸುಂದರಸಿಂಗರ* ಜೀವನ ಚರಿತ್ರೆಯಲ್ಲಿ ವ್ಯಾವಹಾರಿಕ ದೈನಂದಿನ ಜೀವನದೊಳಗಿನ ಇಂಥ ಅಗಾಧ ಸಂಗತಿಗಳನ್ನು ಪುಟಕ್ಕೊಂದರಂತೆ ಕಾಣಬಹುದು. ಪುಸ್ತಕಗಳನ್ನೋದಿ ತಿಳಿದುಕೊಳ್ಳುವುದಕ್ಕಿಂತ ಇಂಥ ನಿರೀಕ್ಷಣದಿಂದ ಸಾವಿರಪಟ್ಟು ಸಮಾಧಾನವು ಬೆಳೆಯುವಂತಿದೆ– ಮಾನವ ಬುದ್ಧಿಯು ಸರ್ವಸಂಪೂರ್ಣವಿಲ್ಲದ್ದರಿಂದ ಇಂಥವುಗಳೊಳಗಿಂದ ಒಮ್ಮೊಮ್ಮೆ ನಿಶ್ಚಿತ ಸಿದ್ಧಾಂತವನ್ನೇ ಹೊರಡಿಸುವುದು ಬಿಗಿಯಾಗಬಹುದು. ಅಂಥ ಪ್ರಸಂಗಗಳೂ ಕೂಡ ತೀರ ಸ್ವಲ್ಪವೇ ಮಾತ್ರ. ಅವುಗಳ ಅಗತ್ಯವೂ ಕೂಡ ಇಲ್ಲದೆಯಿರಲಾಗದು. ' ಬರೇ ಬಾಹ್ಯ ನಿರೀಕ್ಷಣವೊಂದೇ ಸಾಲದು, ಅದಕ್ಕಿಂತ ಹೆಚ್ಚಿನದಿನ್ನೊಂದೇನಾದರೂ ಬೇಕು ' ಎಂಬ ಅನಿಸಿಕೆಯು ನಮಗೆ ಬರುವುದಕ್ಕೆ ಅಂಥವುಗಳೇ ಕಾರಣವಾಗುವವು. ಅದಕ್ಕಿಂತ ಮುಂದೆ ಹೋದರೆ ಅದರೊಳಗೂ ಹಾಗೇ ಅಪೂರ್ಣತೆ ಮತ್ತು ಮುಂದೋಟ ಇವು ಇದ್ದೇ ತೀರಬೇಕಲ್ಲವೆ?

" ಅನಂತನ ಅಕ್ಷಯ್ಯ ಭಾಂಡಾರವನ್ನು ಮುಗಿಸಿ ಬರಿದಾಗಿಸುವ ಬಂಟನಾರು ! " ಎಂದು ಅರವಿಂದರು ಅದಕ್ಕೆಂತಲೇ ಹೇಳಿದ್ದಾರೆ.

" ನನಗೀಗ ಬಹುದಿನಗಳ ಇಂಥ ನಿರೀಕ್ಷಣದಿಂದ ಒಂದು ಆತ್ಯಾಶ್ಚರ್ಯಕರವಾದ ವಿಷಯವು ಹೊಳೆದಿದೆ. ಅದೇನೆಂದರೆ— ಜಗತ್ತಿನಲ್ಲಿ ಯಾವದೊಂದು ಕಾರ್ಯವಾಗಬೇಕಾದರೂ ಅದಕ್ಕೆ ಆಗ ಎಲ್ಲಾ ಕೋಟಿಯ ನಿಯಮಗಳೂ ಅನುಕೂಲವಾಗಿರುತ್ತವೆ. ಈಗ ನಾನು ಈ ಮಾತನ್ನು ಹೇಗೆ ಸಿದ್ಧಮಾಡುವೆನೆಂದರೆ— ಒಬ್ಬನಿಗೆ ಒಂದು ರೋಗ ಬರಬೇಕಾದರೆ ಅವನಿಂದ ಆಗ ಆರೋಗ್ಯದ ನಿಯಮಗಳಿಗಂತೂ ತಪ್ಪದೆ ಭಂಗ ಬಂದುಬಿಟ್ಟಿರುತ್ತದೆ, ಇಷ್ಟೇ ಅಲ್ಲ ಅವನ ಜನ್ಮಕಾಲದ ಗ್ರಹಸ್ಥಿತಿ ನಿದರ್ಶಕವಾದ ಕುಂಡಲಿಯಲ್ಲಿ ಆಗ ಅದಕ್ಕನುಗುಣವಾದ ದೂಯೋಗಗಳು ತಪ್ಪದೆ ಒದಗಿ ಬಂದಿರುತ್ತಿರುತ್ತವೆ. ಅಂದರೆ ಭೌತಿಕ ನಿಯಮ ಹಾಗೂ ಗೂಢ ನಿಯಮ ಇವೆರಡೂ ಇಲ್ಲಿ ಏಕಕಾಲಕ್ಕೆ ಕೂಡಿ ಬಂದ ನೆಂದಂತಾಗಲಿಲ್ಲವೆ ? ಇದರಂತೆ ಆಗಿನ ಕಾಲಕ್ಕೆ ಕರ್ಮನಿಯಮ ಹಾಗೂ ಭಗವತ್ಸಂಕಲ್ಪ ಇವೂ ಕೂಡ ಯಾಕೆ ಕೂಡಿರಬಾರದು ? ಮೇಲೆ ಹೇಳಿದ ರೋಗಿಗೆ ಆಗ ಆತನ ಪೂರ್ವಕರ್ಮಗಳೂ ಉದಯಕ್ಕೆ ಬಂದಿದ್ದು, ಈಶ ಸಂಕಲ್ಪವಂತೂ ಎಲ್ಲವುಗಳ ಮೇಲೆ ನೈಯೇ ನೈ. ಒಬ್ಬನು ಈಗ ಒಂದು ವಿಚಿತ್ರ ಸಂಕಟದಲ್ಲಿ ಬಿದ್ದಿದ್ದಾನೆಂದು ತಿಳಿಯುವಾ- ಅವನ ಯಾವುದೋ ಒಂದು ತುಸು ದಿನಗಳ ಹಿಂದಿನ ದುಷ್ಕೃತಿಯ ಪ್ರತಿಕ್ರಿಯೆಯೇ ಅದು ಎಂದು ಸ್ಪಷ್ಟವಾಗಿ ನಮಗೆ ತೋರುತ್ತಿದೆಯೆನ್ನೋಣ. ಆಗಿನ ಅವನ ಸಂಕಟಕ್ಕೆ ಅವನ ಗ್ರಹಸ್ಥಿತಿಯೂ ಅನುಕೂಲ ಸಾಕ್ಷಿಯನ್ನು ನುಡಿದರೆ ಆಗ ಅದಕ್ಕೆ ನಾವು ಏನು ಅನ್ನಬೇಕು ? ಕಷ್ಟನಷ್ಟಗಳಿಗೆ ಹೊರಗಿನ ಪ್ರಮಾದಗಳು ಕಾರಣವಾಗಿರುವುದಂತೂ ಸರಿಯೇ ಸರಿ. ಆದರಲ್ಲೀಗ ನಾವು ಕರ್ಮಫಲವನ್ನೂ ಒಂದು ಜೋಡಿಸಿಕೊಂಡೆವು. ಅದಕ್ಕೆ ಗ್ರಹಸ್ಥಿತಿಯು ಬೇರೆ ಸಾಕ್ಷಿಯನ್ನು ಕೊಡುತ್ತದೆ. ಆದರೆ ಆ ಗ್ರಹಗಳಾದರೊ ತಮ್ಮ ಸ್ವಾತಂತ್ರ್ಯದಲ್ಲಿ ತಾವಿಲ್ಲ. ಯಾವುದೋ ಒಂದು ಗೂಢ ವಿಶ್ವಶಕ್ತಿಯು ಅವುಗಳನ್ನೆಲ್ಲ ಅಪರಿಮಿತ ಕಾಲದಿಂದಲೂ ಆಳತೆ

ಯಿಂದ ಕುಣಿಸುತ್ತಾ ಇದೆ! ಹಾಗಾದರೆ ಆ ವ್ಯಕ್ತಿಯ ಸಂಕಟಕ್ಕೆ ಈ ನಾಲ್ಕರಲ್ಲಿ ನಿಜವಾದ ಕಾರಣವು ಯಾವುದು? ನಿಸರ್ಗ ನಿಯಮದ ಅವ ಹೇಲನೆಯೊ? ಕರ್ಮಫಲವೊ? ಗ್ರಹಚಲನವೋ? ಅಥವಾ ಪರಮ ಶಕ್ತಿಯೋ? ಅಥವಾ ನಾಲ್ಕೂ ನಿಯಮಗಳ ಸಮಷ್ಟಿಯೋ?

"ಹೀಗೆಂದಾಗ ಇದೆಲ್ಲಾ ಬಿಟ್ಟು ಎಲ್ಲಕ್ಕೂ ಮೊದಲಿಗೆ ನಿಮಗೆ ಹೀಗೆ ಸಂದೇಹ ಬರಬಹುದು– 'ಎಲ್ಲಿಯ ಜ್ಯೋತಿಷ್ಯವೋ ಯಾರು ಬಲ್ಲರು? ಅದನ್ನು ಸತ್ಯವೆಂದು ನಂಬಿದರೆ ಮಾತ್ರ ಇದೆಲ್ಲಾ ತೊಡಕು. ಇಲ್ಲದಿದ್ದರೆ ಅದೇನು!' ಒಳ್ಳೆಯದು, ಇಲ್ಲಿ ನಿಮಗೆ ನಾನು ಒಂದು ಮಾತನ್ನು ಹೇಳುವೆ. ಆರೇಳು ವರುಷಗಳ ಸತತ ಅಭ್ಯಾಸ ಮತ್ತು ಪರಿಶೀಲನೆಯಿಂದ ನನಗೆ ಅದು ಬಹಳೇ ಸತ್ಯವಾದ ಶಾಸ್ತ್ರವೆಂದು ದಿನ ದಿನಕ್ಕೂ ನಿದರ್ಶನಕ್ಕೆ ಬರುತ್ತಾ ಇದೆ. ಆದರೆ ಮಾನವ ಬುದ್ಧಿಯ ಅಸಂಪೂರ್ಣತೆಯನ್ನು ಕುರಿತು ನಿಮಗೆ ನಾನು ಮೊದಲೇ ಹೇಳಿರುವದಿಲ್ಲವೆ? ಅದರ ಮೂಲಕ ಎಷ್ಟೋ ಸಾರೆ ಬಹಳ ಅಪೂರ್ಣತೆಯು ಕಂಡು ಬರುವುದರಿಂದ ನನಗೂ ಕೂಡ ಒಮ್ಮೊಮ್ಮೆ ಹೀಗೆ ಅನಿಸುತ್ತಿರುತ್ತದೆ– 'ಇದೇನಪ್ಪಾ! ತಾಳಮೇಳ ಹಾಕುತ್ತ ಹೋದರೆ ಯಾವದು ಬೇಕಾದ್ದು ಅಲ್ಪಸ್ವಲ್ಪವಾದರೂ ಕೂಡುತ್ತಲೇ ಹೋಗಬಹುದು. ಹೀಗೆಂದ ಮೇಲೆ ನಾನೇ ಎಲ್ಲಿಯಾದರೂ ಮೋಸಹೋಗುತ್ತಿರಬಾರದೇಕೆ? ಏನಿದೆಯೋ ಆ ಜಗದೀಶನೇ ಬಲ್ಲ!'

"ಆದರೆ ಅಂಥ ಸಂದರ್ಭಗಳು ತೀರಾ ವಿರಳ. ಆವಾಗಲೆಲ್ಲಾ ನನ್ನ ಮನಸ್ಸಿನಲ್ಲಿ ಒಂದೇ ಮಾತು ಮುಂದೆ ಬಂದು ನಿಲ್ಲುತ್ತದೆ. ಅದೇನಂಬರೆ– ಅರವಿಂದರು ತಮ್ಮ 'ಆರ್ಯ' ಪತ್ರಿಕೆಯ ನಾಲ್ಕನೇ ಸಂಪುಟದಲ್ಲಿ 'ಕಾಲಪ್ರಕಾಶ' ವೆಂಬೊಂದು ಜ್ಯೋತಿಷ್ಯಗ್ರಂಥದ ವಿಮರ್ಶೆಯ ನೆವದಿಂದ ಆ ಶಾಸ್ತ್ರದ ಸತ್ಯತೆಯನ್ನು ಕುರಿತು ಹತ್ತೆಂಟು ಪುಟಗಳ ಲೇಖನವನ್ನೇ ಬರೆದಿದ್ದಾರೆ. ಆದರೆ ಆರ್ಯಪತ್ರಿಕೆಯನ್ನು ಆರಂಭಿಸುವುದಕ್ಕೆ ಮೊದಲೇ ತಮಗೆ ಲೋಕಲೋಕಾಂತರ ಜ್ಞಾನವೆಲ್ಲಾ ಪ್ರತ್ಯಕ್ಷವಾಗಿ

ಕರತಲಾಮಲಕವಾಗಿದೆಯೆಂದು ಸ್ವತಃ ತಾವೇ ಒಪ್ಪಿಕೊಂಡಿದ್ದಾರೆ. * ಹೀಗೆಂದ ಬಳಿಕ ಇಂಥ ಅಸಾಮಾನ್ಯ ದೃಷ್ಟಿಯುಳ್ಳವರೇ ಹೀಗೆ ಜ್ಯೋತಿಷ್ಯದ ಸತ್ಯತೆಯ ಬಗೆಗೆ ಭರವಸವನ್ನು ಹೇಳುತ್ತಿರುವಾಗ ನನ್ನ ದಣಿದ ಅಲ್ಪಬುದ್ಧಿಗೆ ಅದು ಅರೆಭರವಸದ್ದೆಂದು ಒಮ್ಮೊಮ್ಮೆ ಕಂಡರೆ ಇದರಿಂದ ಅದಕ್ಕೇನು ಕೊರತೆ ?

" ಅದೇನೇ ಇರಲಿ. **ಸರ್ವನಿಯಮಗಳು ಒಂದಕ್ಕೊಂದು ಸಾನುಕೂಲವಾಗಿಯೇ ವರ್ತಿಸುತ್ತಿವೆ**ಯೆಂಬುದು ನನ್ನ ಒಳ ಅನಿಸಿಕೆ. "

ಹೀಗೆಂದು ನಮ್ಮ ನಾಯಕನು ಸಿದ್ಧಮಾಡುತ್ತ ಒಳ್ಳೇ ಉದ್ದೀಪಿತ ಬುದ್ಧಿಯ ಅವಸ್ಥೆಗೆ ಬಂದು ಬಿಟ್ಟಕೂಡಲೇ ಅವನಿಗೆ ಒಳಗೆ ಒಂದು ಮಾತು ಹೊಳೆದು ಅದೇ ಈ ವರುಷದ ಅಂತರ್ನಿರ್ದೇಶವಾಗಿ ಬಿಟ್ಟಿತು.

" ಆಧ್ಯಾತ್ಮಿಕ ಅವಸ್ಥೆಯು ಪೂರ್ಣದಶೆಗೆ ಬರುವುದಕ್ಕೆ ನಮ್ಮ ಒಳಗಿನ ಅಪೂರ್ಣತೆಗಳು ಅಡ್ಡಬರುತ್ತವೆ. ಇದೀಗ ನನ್ನ ಅಂತರಂಗವನ್ನು ನಿರೀಕ್ಷಿಸಿದರೆ ಬುದ್ಧಿ ಮತ್ತು ಹೃದಯ ಇವೆರಡರ ಸಂಪೂರ್ಣ ಶುದ್ಧಿಯಾಗಿದ್ದು ಅವುಗಳ ಅನಂತರದ ರಾಜ್ಯವಾದ ವಾಸನಾ ಕ್ಷೇತ್ರವು ಅರ್ಧ ಶುದ್ಧ ಹಾಗೂ ಅರ್ಧ ಅಶುದ್ಧ ಈ ಮಧ್ಯ ಅವಸ್ಥೆಯಲ್ಲಿದೆ. ಅದರ ಮುಂದಿನ ಮನ ಹಾಗೂ ದೇಹ ಇವೆರಡೂ ಇನ್ನೂ ಸಂಪೂರ್ಣ ದೋಷಯುಕ್ತವಾಗಿವೆ. ಮನವು ಅತಿಶಯ ಅಸ್ಥಿರವೂ ದೇಹವು ಅತಿಶಯ ದುರ್ಬಲವೂ ಆಗಿರುವುದೇ ಇವೆರಡರ ದೋಷವು. ಇಚೆಗೆ ದೇಹ ಮತ್ತು

---

* ಪಾಲ್ ರಿಚರ್ಡರರು ೧೯೧೯ ರಲ್ಲಿ ಜಪಾನದೊಳಗೆ ಉಪನ್ಯಾಸ ಮಾಡಿದಾಗ ಅದರಲ್ಲಿ ಅರವಿಂದರ ವಿಷಯದಲ್ಲಿ—

"......He had gained the light. The light owing to which nothing more hence forth, *in heaven or on earth or in any world*. Can remain hidden from him." ಹೀಗೆ ಹೇಳಿದ್ದಾರೆ. ಆದರೆ ಇಲ್ಲಿ ಒಂದು ವಿಚಿತ್ರವೇನೆಂದರೆ, ರಿಚರ್ಡರ ಮೂಲ ಫ್ರೇಂಚ್ ಭಾಷೆಯ ಉಪನ್ಯಾಸಗಳನ್ನು ಇಂಗ್ಲಿಷಿನಲ್ಲಿ ಅರವಿಂದರೇ ( ಪುಸ್ತಕಾಕಾರದಲ್ಲಿ ) ಅನುವಾದ ಮಾಡಿದ್ದಾರೆ. ಇದರ ಮೇಲಿಂದ ರಿಚರ್ಡರು ಹೇಳಿದ ಮಾತಿಗೆಲ್ಲ ಅರವಿಂದರು ತಮ್ಮ ರುಜುವನ್ನೇ ಹಾಕಿದಂತಾಗಿದೆ.

ಮನಸ; ಆಚೆಗೆ ಬುದ್ಧಿ ಮತ್ತು ಹೃದಯ; ಇವೆರಡರ ನಡುವೆ ವಾಸನಾಮಯ ಪ್ರಾಣರಾಜ್ಯ. ಆಚೆಗಿನದು ತುಂಬಾ ಶುದ್ಧ, ಈಚೆಗಿನದು ತುಂಬಾ ಅಶುದ್ಧ, ಮಧ್ಯದಲ್ಲಿದ್ದುದು ಎರಡೂ ಕಡೆಯ ಅಲೆಗಳನ್ನುಳ್ಳುದಾಗಿದೆ. ಇನ್ನು ಹೊರಮಗ್ಗುಲಿನ ಅಪೂರ್ಣತೆ ಅಳಿದುಹೋದರೆ ನಡುವಿನದು ತಾನೇ ಸಂಪೂರ್ಣ ಶುದ್ಧವಾಗುವದು. ಆದುದರಿಂದ **ಮನಸ್ಥೈರ್ಯವನ್ನು ತಂದುಕೊಳ್ಳುವುದರ ಕಡೆಗೆ ಲಕ್ಷ್ಯವನ್ನು ಪೂರೈಸುವದೇ ಇನ್ನು ಮುಂದಿನ ಕೆಲಸವಾಗಿದೆ**" ಇದೇ ಈ ವರುಷದ ಅಂತರ್ನಿರ್ದೇಶವು.

## (೧೯)

ಹೊಸ ವರುಷದ ಅಂತರ್ನಿರ್ದೇಶ ಬಂದ ಬಳಿಕ ಐದಾರು ದಿನಗಳಲ್ಲಿಯೇ ಮಾವಿನತೋಪಿನಲ್ಲಿ ನಮ್ಮ ನಾಯಕನ ಗುಡಿಸಲು ಸಿದ್ಧವಾಯಿತು. ಮಡದಿ ಮಕ್ಕಳು ಮತ್ತು ಜೀವದೊಡನಾಡಿಯಾದ ಮಂಜುಳ ಇವರೆಲ್ಲರೊಡನೆ ಮುಕ್ತಸೃಷ್ಟಿಯಲ್ಲಿ ಮತ್ತೆ ಬೀಡುಬಿಟ್ಟನು. ಇದೀಗ ಸುಗ್ಗಿಯ ಕಾಲ. ಅಂದ ಮೇಲೆ ಕೇಳುವದೇನು ? ಸೃಷ್ಟಿದೇವಿಯ ಶೃಂಗಾರ ಸಮಯವಿದು ! ಹಕ್ಕಿಪಕ್ಕಿಗಳು ಮೊದಲುಮಾಡಿ ಸಮಸ್ತ ಜೀವರಾಶಿಗಳಿಗಿದು ಸುಖಶಾಂತಿಗಳ ಕಾಲ ! ಇಂಥ ಮಂಗಳಸಂಧಿಯಲ್ಲಿ ನಮ್ಮ ನಾಯಕನ ಹೊಸ ವರುಷದ ಜೀವನದಲ್ಲಿ ಏನಾದರೊಂದು ಹೊಸತನವು ಹೊರಹೊಮ್ಮಲೇ ಬೇಕಲ್ಲವೆ ?

ಹಿಂದೊಂದು ಪ್ರಕರಣದಲ್ಲಿ ಹೇಳಿದ "The time, space and causality of every event and its development have been fixed ages ago by *yourself* and Parameshwara, when the Kalpa began" "ಪ್ರತಿಯೊಂದು ಘಟನೆ ಮತ್ತು ಅದರ ಬೆಳವಣಿಗೆಯ ಸ್ಥಾನ, ಕಾಲ, ನಿಮಿತ್ತಗಳು ಬಹು ಪೂರ್ವದಲ್ಲಿ ಕಲ್ಪಾರಂಭದಲ್ಲಿಯೇ **ಸ್ವತಃ ನಿನ್ನಿಂದಲೂ** ಪರಮೇಶ್ವರನಿಂದಲೂ ಕೂಡಿಯೇ ನಿರ್ಧಾರಿತವಾಗಿವೆ." ಎಂಬ ಅರವಿಂದರ ವಾಕ್ಯದೊಳಗಿನ "**ನಿನ್ನಿಂದಲೂ**' (By yourself) ಎಂಬ ಶಬ್ದದ ಅರ್ಥವೇ ನಮ್ಮ ನಾಯಕನಿಗೆ ಎಷ್ಟೋ ಕಾಲದವರೆಗೆ ಆಗಿರಲಿಲ್ಲ. 'ನಿನ್ನಿಂದ' ಮತ್ತು 'ದೇವನಿಂದ' ಎಂಬವುಗಳ ಜೋಡಣೆಯನ್ನು

ಹೇಗೆ ಮಾಡಿಕೊಳ್ಳಬೇಕೆಂಬುದೇ ಅವನಿಗೆ ಅರಿಯದುದಾಗಿದ್ದಿತು. ಅವನಿಗೆ ಅದೊಂದು ಬಗೆಯ ದೊಡ್ಡ ಸಮಸ್ಯವೇ ಆಗಿಬಿಟ್ಟಿತ್ತು. ಅದಕ್ಕೆಂತಲೇ ಅವನು 'ನಿನ್ನಿಂದಲೂ' ಎಂಬ ಶಬ್ದವನ್ನೇ ಉಚ್ಚರಿಸದೆ ಬಿಟ್ಟುಬಿಡುತ್ತಿದ್ದನು. ಸರ್ವವೂ ದೇವದೇವನ ಅಧೀನವಾಗಿರುವಾಗ ಅವನಿಂದ ನಿರ್ಧಾರಿತವಾಯಿತೆಂಬುದು ಬಹಳ ಸ್ಪಷ್ಟವಾಗಿ ತಿಳಿಯುವ ಮಾತಾಗಿದೆಯೆಂಬುದೇನೋ ನಿಜವೇ. ಆದರೆ ಆ ಪೂರ್ವನಿರ್ಧಾರಕ್ಕೆ 'ನೀನೂ ಅಷ್ಟೇ ಕಾರಣನಾಗಿದ್ದೀ'ಯೆಂದು ಹೇಳಿರುವುದರ ಭಾವವನ್ನು ಗ್ರಹಿಸುವುದು ನಮ್ಮ ಮೆದುಳಿಗೆ ತೀರ ಅಶಕ್ಯಕೋಟಿಯೊಳಗಿನ ಮಾತಾಗಿದೆಯೆಂಬುದೂ ಅಷ್ಟೇ ಸತ್ಯ. ಆದರೆ ಈ ಮೊದಲು ಕೆಲದಿನಗಳೊಳಗಾಗಿ ಜ್ಞಾನಭಿಕ್ಷುವಿನ ನಿರೀಕ್ಷಣೆಯಲ್ಲಿ ಕರ್ಮಫಲದ ಪರಿಣಾಮವು ಬಹಳೇ ಸ್ಪಷ್ಟವಾಗಿ ಕಂಡು ಬಂದದ್ದರಿಂದಲೂ, ಜೈನಶಾಸ್ತ್ರಗಳ ಮೂಲ ತಳಹದಿಯೇ ಅದೇ ಆಗಿರುವದರಿಂದ ಅದರ ಘನವಾದ ವ್ಯಾಸಂಗದ ಮೂಲಕ ಅದು ಆತನಲ್ಲಿ ಮತ್ತಿಷ್ಟು ಬೇರೂರಿ ಬಲಪಟ್ಟದ್ದರಿಂದಲೂ ಅವನಿಗೀಚೆಗೆ ಒಂದು ಸಿದ್ಧಾಂತವು ತೀರ ದಿಟವಾಗಿ ಬಿಟ್ಟಿದೆಯೆಂಬುದನ್ನು ಹಿಂದಿನ ಪ್ರಕರಣದಲ್ಲಿಯೇ ನಾನು ನಿಮ್ಮ ಲಕ್ಷ್ಯಕ್ಕೆ ತಂದು ಕೊಟ್ಟಿರುವೆನು. ಅದೇನೆಂದರೆ– **'ಒಬ್ಬನ ಜೀವನದಲ್ಲಿ ಒಂದಾನೊಂದು ಘಟನೆಯು ನಡೆಯಬೇಕಾದರೆ ಅದಕ್ಕೆ ಲೌಕಿಕನಿಯಮ, ಪೂರ್ವಕರ್ಮದ ಮತ್ತು ಗ್ರಹಸ್ಥಿತಿ ಹಾಗೂ ಈಶಸಂಕಲ್ಪ ಇವುಗಳೆಲ್ಲಾ ಏಕಕಾಲಕ್ಕೆ ಒಂದೇ ತಂತಿಯನ್ನು ಮಿಾಟುತ್ತಿರುತ್ತವೆ.'**

ಈ ಚತುರ್ಮುಖ ಸಿದ್ಧಾಂತದ ಹೊಳವಿನಿಂದ ಇದೀಗ ನಮ್ಮ ನಾಯಕನಿಗೆ ಅರವಿಂದರ ಆ '**ನಿನ್ನಿಂದಲೂ ದೇವನಿಂದಲೂ**' ಎಂಬ ದಕ್ಷಿಣೋತ್ತರ ಧ್ರುವಬಿಂದುಗಳ ನಡುವಿನ ಏಕಸೂತ್ರವನ್ನು ಕಂಡುಕೊಳ್ಳುವುದಕ್ಕೆ ಶಕ್ಯವಾಯಿತು. ಉಪನಿಷತ್ತಿನೊಳಗಿನ 'ಕಂ ಬ್ರಹ್ಮ. ಖಂ ಬ್ರಹ್ಮ । ಕ ಏವ ಖಂ– ಖ ಏವ ಕಂ । ಊರ್ಧ್ವಮೂಲಮಧಃಶಾಖಂ ಬ್ರಹ್ಮ ಸನಾತನಂ ।' ಮುಂತಾದ ಮುಂಡಿಗೆಗಳೆಲ್ಲಾ ಇದೇ ಬಗೆಯ ಗೂಢಸಮಸ್ಯಗಳಾಗಿವೆಯೆಂಬುದೀಗ ಜ್ಞಾನಭಿಕ್ಷುವಿಗೆ ಮನಗಂಡ

ಮಾತಾಯಿತು. ಇಂಥ ಪೂರ್ವಪಕ್ಷಿಮಗನನ್ನು ಹೊಂದಿಸಿಕೊಂಡು ಹೋಗುವ ಬುದ್ಧಿಯುಂಟಾದರೆ ಅದಕ್ಕೆ ಲೋಕದಲ್ಲಿ ಇನ್ನಾವುದನ್ನು ತಿಳಿದುಕೊಳ್ಳಲಿಕ್ಕೆ ಅಶಕ್ಯವಾದೀತು? 'ಯಾವ ಒಂದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಳ್ಳಲಿಕ್ಕೆ ಬಂದೀತು?' ಎಂಬ ಉಪನಿಷತ್ತಿನ ಮಹೇಂದ್ರಜಾಲವೆಲ್ಲಾ ಇಂಥ ಉಭಯ ಧ್ರುವಗಳ ಸಮೀಕರಣದಲ್ಲಿಯೇ ಅಡಕವಾಗಿದೆಯೆಂದು ಇಂದು ನಮ್ಮ ನಾಯಕನಿಗೆ ಘನಘನವಾಗಿ ಅನಿಸುತ್ತಿದೆ-

ಗೀತೆಯಲ್ಲಿ– 'ಮಯೈವೈತೇ ನಿಹತಾಃ ಪೂರ್ವಮೇವ ನಿಮಿತ್ತಮಾತ್ರಂ ಭವ ಸವ್ಯಸಾಚಿನ್' 'ಇವರೆಲ್ಲರೂ ಮೊದಲೇ ನನ್ನಿಂದ ಹತರಾಗಿದ್ದಾರೆ, ನಿಮಿತ್ತದ ಸಲುವಾಗಿ ಮಾತ್ರ ನೀನು ಹದೆಯೇರಿಸಿ ಮುಂದೆ ಬಾ' ಎಂದು ಹೇಳಿರುವ ಮಾತಿನಲ್ಲಿ ಮೇಲಿನ ಸಿದ್ಧಾಂತವೇ ಮೂರ್ತಿಮಂತವಾಗಿ ನಿಂತುಕೊಂಡಿದೆ. 'ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ' ಎಂಬ ಯುಗ್ಮದಲ್ಲಿಯೂ ಅದೇ ಅಡಕವಾಗಿದೆ. ದೇವ ಮತ್ತು ಜೀವ ಇವರಿಬ್ಬರೂ ಒಬ್ಬರನ್ನೊಬ್ಬರು ಅನುಸರಿಸಿಕೊಂಡೇ ಸಾಗುವರು. ಬೇಕಾದರೆ ಹೀಗೆ ಅನ್ನೋಣ- 'ದೇವನು ಜೀವನಲ್ಲಿ ಸಂಕಲ್ಪವನ್ನೆಬ್ಬಿಸಿ ತಾನು ಅದಕ್ಕೆ ಫಲರೂಪವಾಗಿಯೆಂದೆನ್ನುವಂತೆ ತನ್ನ ಲೀಲೆಯನ್ನು ಪ್ರಕಟಿಸುವನು.' ಆತನು ಬೇಕೆಂತಲೇ ಹೀಗೆ ಜೀವಕರ್ತೃತ್ವದ ನೆವಮಾಡಿ ಪರದೆಯಲ್ಲಿದ್ದುಕೊಂಡು ಬಿಟ್ಟಿರುತ್ತಾನೆಂದು ತೋರುತ್ತದೆ. ಹೀಗೆ ಆತನು '**ಮಮ ಮಾಯಾ ದುರತ್ಯಯಾ**' ಎಂದು ಹೇಳಿದ ಮಹೇಂದ್ರಜಾಲದ ಮಂಕುಬೂದಿಯನ್ನೆರಚದೆ ಇದ್ದಿದ್ದರೆ ಜೀವಿಗಳಿಗೆ ದೇವನ ಸಾನ್ನಿಧ್ಯನಾಸ್ತಿಯ ಅನಿಸಿಕೆಯೇ ಇರುತ್ತಿರಲಿಲ್ಲ. ಆ ಅನಿಸಿಕೆಯೇ ಇಲ್ಲದೆ ಹೋಗಿದ್ದರೆ ಇಷ್ಟು ದಿನಗಳ ವರೆಗಿನ ಭಗವದ್ಭಕ್ತರ ವಿರಹವ್ಯಥೆಯ ಕಥೆಗಳೇ ಹುಟ್ಟುತ್ತಿದ್ದಿಲ್ಲ. ಅಪೂರ್ಣತೆಯಿಂದ ಪೂರ್ಣತೆಗೆ ಹೋಗುವದರಲ್ಲಿಯೇ ಲೋಕಲೀಲೆಯ ಸ್ವಾರಸ್ಯವಿದೆ.

ಈ ಮಾತಿನಿಂದ ನಾವು ಅಧ್ಯಾತ್ಮಲೋಕದ ಒಂದು ಹೊಸ ರಾಜ್ಯಕ್ಕೇ ಬಂದು ಬಿಡುವೆವು. ಅದು ಹೇಗೆಂದರೆ– ಅರವಿಂದರ ಪೂರ್ಣ

ಯೋಗದ ಮೂಲಸೂತ್ರಗಳು ಎರಡು ಚಿಕ್ಕ ಪುಸ್ತಕಗಳಲ್ಲಿ ಅಡಕವಾಗಿವೆ. ಒಂದು "ಯೋಗದ ಗೊತ್ತುಗುರಿ" (yoga and its objects) ಮತ್ತೊಂದು "ಯೌಗಿಕ ಸಾಧನ" (Yogic Sadhan). ಇವೆರಡರಲ್ಲಿ ಮೊದಲನೆಯ ಗ್ರಂಥದ ಮುಖ್ಯ ಸೂತ್ರಗಳನ್ನು ನಾನು ಹಿಂದಿನ ಪ್ರಕರಣಗಳಲ್ಲಿ ಹೇಳಿಯೇ ಇದ್ದೇನೆ. "ಸರ್ವಸಮರ್ಪಣ," "ಸರ್ವತ್ರ ಸಾಕ್ಷಾತ್ಕಾರ" ಇವೆರಡೇ ಮಾತುಗಳಲ್ಲಿ ಆ ನೂರೊಂದು ಸೂತ್ರಗಳೆಲ್ಲಾ ಅಡಕವಾಗಿವೆಯೆನ್ನೋಣ. ಇದೆಲ್ಲ ಆ ಮೊದಲನೆಯ ಗ್ರಂಥದ ವಿಷಯ. ಆದರೆ ಎರಡನೆಯದನ್ನು ಓದಿದ ಹಾಗೆ ನಮ್ಮ ಮತಿಯು ಭ್ರಮಿಸಿ ಹೋಗುತ್ತದೆ. ಮೇಲೆ ಹೇಳಿದ "**ನಿನ್ನಿಂದಲೂ ಪರಮೇಶ್ವರನಿಂದಲೂ**" ಎಂಬ ವಾಕ್ಯವು ಅದರೊಳಗಿನದೇ. ಅದೊಂದೇ ವಾಕ್ಯವೇಕೆ? ಆ ಇಡೀ ಪುಸ್ತಕವೇ ಅಂಥ ಅನಾಕಲನೀಯ ಸೂತ್ರಗಳ ಸಮಷ್ಟಿಯಾಗಿದೆ.– '**ನೀನು ವ್ಯಷ್ಟಿಯ (ವ್ಯಕ್ತಿಗತ) ದೇವನಿರುವಿ; ಆತನು ಸಮಷ್ಟಿಯ (ವಿಶ್ವಗತ) ದೇವನಿದ್ದಾನೆ. ಆದುದರಿಂದ ಎಲ್ಲಕ್ಕೂ ಮೊದಲು ನಿನಗೆ ನಿನ್ನ ಮೇಲೆ ವಿಶ್ವಾಸವುಂಟಾಗಬೇಕಾದುದು ಅವಶ್ಯಕ. ಬಳಿಕ ದೇವನ ಮೇಲೆ.**"

ಆ ಮೊದಲನೆಯ ಪುಸ್ತಕವನ್ನೋದಿದಾಗ ನಮಗೆ ಪ್ರವಾಹದ ಗುಂಟ ಈಸಿದಂತೆ ಅನಿಸುತ್ತಿದ್ದರೆ ಈ ಎರಡನೆಯದನ್ನೋದುವಾಗ ಪ್ರವಾಹಕ್ಕೆ ವಿರುದ್ಧವಾಗಿ ಈಸಿದಂತೆ ಹೆಜ್ಜೆ ಹೆಜ್ಜೆಗೆ ದಣಿವಾಗುತ್ತದೆ. ಬುದ್ಧಿಗೆ ಎಷ್ಟೋ ಸಾರೆ ಅದು ಸಮಂಜಸವೆಂದೇ ತೋರುವದಿಲ್ಲ. ಇನ್ನು ನಡತೆಯಲ್ಲಿ ಅದನ್ನು ಇಳಿಸುವುದು ಹೇಗೆ? ಆದರೆ ಈ ಪ್ರಕರಣದ ಮೊದಲಲ್ಲಿ ಹೇಳಿದ ಮೇರೆಗೆ ಚತುರ್ಮುಖಸಿದ್ಧಾಂತವೊಂದು ನಮ್ಮ ನಾಯಕನಿಗೆ ಕರತಲಾಮಲಕವಾದದ್ದರಿಂದ ಈಗ ಈ ದ್ವಿತೀಯ ಗ್ರಂಥದ ಜಟಿಲಸೂತ್ರಗಳು ಒಂದೊಂದಾಗಿಯೇ ಬುದ್ಧಿಗೆ ಹೌದೆಂದೆನಿಸಹತ್ತಿದವು. ಹೀಗಾಗಿ ನಮ್ಮ ನಾಯಕನಿಗೆ ಮುಂದುವರಿಯುವುದಕ್ಕೆ ಮತ್ತೊಂದು ಹೊಸರಾಜ್ಯವೇ ತೆರೆದಂತಾಯಿತು.

" ನಮ್ಮ ಮಹತ್ತರವಾದ ಮತ್ತು ಕಠಿಣತರವಾದ ಧ್ಯೇಯ ಸಾಧನೆಯು ಸಿದ್ಧಿಸುವುದಕ್ಕೆ– **ಒಂದಕ್ಕೊಂದು ಜೊತೆಯಾದರೆ**

**ಮಾತ್ರ ಪರಿಣಾಮವನ್ನುಂಟುಮಾಡುವ ಎರಡು ಶಕ್ತಿಗಳಿವೆ.** ಕೆಳಗಿನಿಂದ ಕರೆಯುವ **ದೃಢವಾದ ಅಜೇಯ್ಯ ಮಹದಾಕಾಂಕ್ಷೆಯೊಂದು,** ಮತ್ತು ಮೇಲಿನಿಂದ ಮಾರ್ದಸಿಗುಡುವ **ದಿವ್ಯಾನುಗ್ರಹವೊಂದು,"** ಎಂಬುದಿದು ಅರವಿಂದರ 'ಮಾತಾ' (Mother) ಎಂಬುವ ನೂತನ ಗ್ರಂಥದ ಪಟ್ಟಲಿಖಿತವಾಗಿದೆ. ಇದು ತಾನೆ ಈಗ ನಮ್ಮ ನಾಯಕನಲ್ಲೊಂದು ಹೊಸ ಸ್ಫೂರ್ತಿಯ ಕಿರಣವನ್ನು ಬೆಳಗಿಸಿದೆ. ಇದರಿಂದ ನಮ್ಮ ನಾಯಕನ ಮಿಸುಕಿಲ್ಲದ ಆತ್ಮಸಮರ್ಪಣದಲ್ಲಿ (Passive self surrender) ಒಂದು ಬಗೆಯ ಹೊಸ ಮಿಸುಕು ಹುಟ್ಟಿದಂತಾಗಿದೆ. "ನಮ್ಮ ಬುದ್ಧಿಗೆ ಹೊಳೆದುದನ್ನೆಲ್ಲಾ ಮಾಡುತ್ತಾ ಹೋಗೋಣ. ಆಗುವುದು ಹೋಗುವುದು ಹೇಗೂ ಆತನ ಕಡೆಗೆ ಇದ್ದೇ ಇರುತ್ತಿರುತ್ತದೆ.' ಎಂಬುದೀಗ ಜ್ಞಾನಭಿಕ್ಷುವಿನ ಒಳ ಅನಿಸಿಕೆ.

ಇದೆಲ್ಲಾ ಸರಿ, ಆದರೆ ಆ ಮಾವಿನ ತೋಪಿನಲ್ಲಿ ಆತನು ದಿನಾಲು ಕಾಲಕ್ರಮಣವನ್ನು ಹೇಗೆ ಹೇಗೆ ಮಾಡುತ್ತಿದ್ದನು? ಎಂಬುದೊಂದು ಪ್ರಶ್ನವೀಗ ನಮ್ಮಲ್ಲಿ ಏಳುವುದು ಸಹಜವಾಗಿದೆ.

ಆತನೋ ಓದುವ ಪ್ರಾಣಿ. ಆತನ ಸತಿಗೋ ಈಗ ಗರ್ಭಧಾರಣೆ. ಆತನ ಗೆಳೆಯನಿಗಂತೂ ಮನೆಗೊಮ್ಮೆ ತೋಪಿಗೊಮ್ಮೆ ಎಡತಾಕುವ ಕೆಲಸ. ಮುದ್ದಿಸಿ ನಲಿಯಲಿಕ್ಕೊಂದು ಮಗು. ಕೈಯಲ್ಲಿ ಬಾಯಲ್ಲಿ ಸಣ್ಣಪುಟ್ಟ ಕೆಲಸಬೊಗಸೆ ಮಾಡಲಿಕ್ಕೊಂದು ತೀರ ಚಿಕ್ಕ ಮಗಳು. ಹುಲ್ಲಿನದೊಂದು ಗುಡಿಸಲು. ಆಯಿತು. ಇಷ್ಟು ನಮ್ಮ ನಾಯಕನ ಸಂಸಾರ. ತಾಯಿಯೋ ತನ್ನ ಹೊಲಮನೆಗಳ ತಾಕಲಾಟದಲ್ಲಿ ಮನೆಯೊಳಗೆ.

ವಾರದಲ್ಲಿ ಒಬ್ಬಿಬ್ಬ ಗೆಳೆಯರ ಹೊಸಭೆಟ್ಟಿ. ಕೈಯಲ್ಲಿ ಮಂದಿ ಸಿಕ್ಕಾಗ ವಿವಿಧ ವಿಷಯಗಳ ಮೇಲೆ ಮಾತನಾಡುವುದು, ಸಿಕ್ಕದಿದ್ದಾಗ ಓದುತ್ತಲಿರುವುದು, ಇದು ಜ್ಞಾನಭಿಕ್ಷುವಿನ ಹಗಲು ಹನ್ನೆರಡು ತಾಸಿನ ಕೆಲಸ.

ಈಗೊಂದು ವರುಷದಿಂದ ದಿನಾಲು ಎನಿಮಾ ಉಪಯೋಗಿಸುತ್ತಲಿದ್ದಾನೆ. ಆದ್ದರಿಂದ ಮೈಯಲ್ಲಿ ಮೊದಲಿಗಿಂತ ಒಂದಿಷ್ಟು ಹೆಚ್ಚು ಶಕ್ತಿ ಬಂದಿದೆ. ಮೇಲಾಗಿ ಬೈಲಿನ ಶುದ್ಧ ಹವೆ, ಮುಕ್ತಸೃಷ್ಟಿಯ ಸಂದರ್ಶನ, ಅನುಕೂಲ ವ್ಯಕ್ತಿಗಳ ಸಹವಾಸ, ವಿರುದ್ಧ ಪರಿಸ್ಥಿತಿಯ ಅಸಾನ್ನಿಧ್ಯ, ಇಚ್ಛಿತ ಪುಸ್ತಕಗಳ ಸಂಭರಾಯ, ಅಕ್ಕರತೆಯ ಮಗುಗಳ ಮುದ್ದಾಟ, ಬಾಯಿ ತಣಿಯುವ ಊಟ, ಸುಗ್ಗೀ ಕಾಲದ ಚೆಲ್ಲಾಟ, ಇಷ್ಟೆಲ್ಲಾ ಇದ್ದ ಮೇಲೆ ಅಂತಿಂತೆಂದು ಅನ್ನಬಹುದೇ ? ಇಷ್ಟೆಲ್ಲಾ ಇದ್ದರೂ ಆರ್ಥಿಕ ಸಂಕಟವೊಂದೇನೋ ಇದ್ದೇ ಇದೆಯಾದರೂ ಬಹಳ ಅನುಕೂಲತೆಗಳಲ್ಲಿ ಅದರ ಆಟವೇನು ನಡೆಯಬೇಕು ?!

ತೋಪಿನ ಸುತ್ತುಮುತ್ತಲೆಲ್ಲ ಮರಗಳ ಒದಿಯಲ್ಲೇ ಹರಿಯುವ ತಿಳಿನೀರಿನ ಹಳ್ಳದಲ್ಲಿ ಮಧ್ಯಾಹ್ನದ ಹೊತ್ತಿಗೆ ಹಿತಕರವಾದ ಜಳಕ. ಆಹಾ ! ಅಗನ ಸಿರಿಯನ್ನೇನೆಂದು ಬಣ್ಣಿಸಲಿ ! " ರಸೋಽಹಮಪ್ಸು ! ........ಪ್ರಭಾಸ್ಮಿ ಶಶಿ ಸೂರ್ಯಯೋಃ !!.... ಪುಣ್ಯೋಗಂಧಃ ಪೃಥಿವ್ಯಾಂಚ !!!........" ಎಂದು ಮಾತ್ರ ಹೇಳಿ ಬಿಡುವೆನು.

ಜಳಕ ಮುಗಿದ ಬಳಿಕ ಹೂಮಿಡಿಗಳ ತೋರಣಗಟ್ಟಿದ ಒಂದು ದಟ್ಟನೆರಳಿನ ಮಾವಿನ ಮರದ ಕೆಳಗೆ ಆರಾಮಖುರ್ಚಿಯ ಮೇಲೆ ಒರಗಿಕೊಂಡು ಒಂದು ಗಳಿಗೆ ಸಿವಾಂತ ಚಿತ್ತನಾಗಿ ದೇವದೇವನನ್ನು ಅಂತರಂಗದಲ್ಲಿ ಅನುಸ್ಮರಿಸುವುದು. ಬಳಿಕ ದಿನದ ಇನ್ನುಳಿದ ಕೆಲಸಗಳಂತೂ ಮೊದಲೇ ಹೇಳಲ್ಪಟ್ಟಿವೆ. ಒಟ್ಟಿಗೆ ಈ ಆರು ತಿಂಗಳ ತೋಪಿನ ವಾಸವೆಂದರೆ ಆತನ ಜನ್ಮದಲ್ಲಿ ಎಂದೆಂದೂ ಪಡೆಯದ ಸುಖದ ಸುಗ್ಗಿ ! " ಸಾಂದ್ರಚ್ಛಾಯಾ ತರುಷು ವಸತಿಂ ರಾಮಗಿರ್ಯಾಶ್ರಮೇಷು " ಎಂಬ ಕಾಳಿದಾಸನ ರಮ್ಯವಾಕ್ಯವು ಆತನಿಗೆ ಅಲ್ಲಿ ನೆನಪಾಗದ ಕ್ಷಣವಿಲ್ಲ.

ಇದೆಲ್ಲಾ ಹಗಲರಸಿಯ ಹಿರಿ ವೈಭವದ ವಿವರಣೆಯಾಯಿತು. ಆದರೆ ಇರುಳರಸಿಯ ಕರಾಳ ಭೀಕರತೆಯನ್ನಿಷ್ಟು ಬಣ್ಣಿಸದೆ ಬಿಟ್ಟರೆ ಅರವಿಂದರ " ಸೌಮ್ಯ ರೌದ್ರಗಳ ದ್ವಿಗುಣಿತ ಪರಿಪೂರ್ಣತೆ'ಯ ಕಲ್ಪನೆಯಾದರೂ ನಮ್ಮ ವಾಚಕರಿಗೆ ಹೇಗೆ ಉಂಟಾಗಬೇಕು ?

ಇದೀಗ ಬಯಲುಬೆಳೆಯ ಸುಗ್ಗಿಯೆಲ್ಲಾ ಮುಗಿದು ಹೋಗಿದೆ ಮಾವಿನ ಮರಗಳಲ್ಲಿ ಇನ್ನೂ ಈಗ ಹೂವಿಂಡಿಗಳು ಮಾತ್ರ. ಹೀಗಾದುದ ರಿಂದ ಅಡವಿಯಲ್ಲಿ ಈಗ ಜನರ ಸುಳಿದಾಟವೆಂಬುದೆಷ್ಟೂ ಇಲ್ಲ. ಹಗಲು ಹೊತ್ತು ದನಗಾಹಿಗಳ ಅಲೆದಾಟ ಅಲ್ಲಿಯಿಲ್ಲಿ ಎಲ್ಲೋ ಅಲ್ಪಸ್ವಲ್ಪವಿದೆ ಯಾದರೂ ಇರುಳಲ್ಲಿ ತುಂಬಾ ಕರಿನೆಲದ ಕಟ್ಟುಗ್ರ ಕರಾಳ ಸ್ವರೂಪ ವೊಂದು ಬಿಟ್ಟರೆ ಇನ್ನೇನೂ ಇಲ್ಲ. ಅತ್ತ ಕತ್ತಲಲ್ಲಿ ಮತ್ತಿಷ್ಟು ಕಪ್ಪಾಗಿ ಕಾಣುವ ಕರಿನೆಲ. ಇತ್ತ ಬಳಿಯಲ್ಲಿ ಕಗ್ಗತ್ತಲೆಗೆ ತವರೂರಂತಿದ್ದ ಕಿರ ಗುಡುವ ಕಿಕ್ಕಿರಿದ ದಟ್ಟಬನ. ಅಂಥ ಭಯಾನಕ ರಾತ್ರಿಯಲ್ಲಿ ಅಲ್ಲಿ ಗುಡಿಸಲಲ್ಲಿ ಮೂರೆಂದರೆ ಎಣಿಸಿ ಮೂರೇ ಜೀವಗಳು. ಚಿಕ್ಕ ಮಗುಗಳು ಇರುಳು ಒರುವದರೊಳಗಾಗಿ ಮಲಗಿ ಬೆಳಗಾದ ಮೇಲೆ ಏಳುವವುಗ ಳಾದುವರಿಂದ ಅವುಗಳನ್ನು ಎಣಿಕೆಯಲ್ಲಿ ಹಿಡಿಯುವದರಿಂದ ಪ್ರಯೋಜನ ವಿಲ್ಲವಷ್ಟೆ? ಬಳಿಯಲ್ಲೇ ಹರಿಯುವ ಹಳ್ಳದ ಬದಿಯ ಹುಲ್ಲಿನ ಗಡ್ಡೆ ಗಳಲ್ಲಿ ಕಪ್ಪೆಗಳ ಕುರುಕುಟುಕು. ಮರದ ಹೊದರುಗಳಲ್ಲಿ ಎಂದೂ ಕಂಡು ಕೇಳದ ಬಗೆಬಗೆಯ ಹಕ್ಕಿಪಕ್ಕಿಗಳ ಹೌಹಾರಿಸುವ ಕೂಗು. ಸುತ್ತುಮುತ್ತು ಮೈಲೆರಡು ಮೈಲುಗಳ ವರೆಗೆ ಜನಸಂಚಾರದ ಸುಳುವಿಲ್ಲ. ಹಳೆಯ ಬನಗಳ ಹಕ್ಕಿಪಕ್ಕಿಗಳ ಕೂಗಿನ ಹಾವಳಿ ಹೇಳ ಲಾಸಲ್ಲ. ಕಂಡು ಅರಿಯದವರಿಗೆ ಅದರ ಕಲ್ಪನೆಯೇ ಆಗುವುದು ಶಕ್ಯವಿಲ್ಲ. ಕೇವಲ ಹಾದೀ ತಪ್ಪಿಕೊಂಡ ಮನುಷ್ಯನೊಬ್ಬನು 'ಹಕಾರಿ, ಹೊಡೆಯುವಂತೆ ಕೂಗುಗಳು ಕೇಳಿಸುತ್ತಿದ್ದವು. ಗೊತ್ತಿಲ್ಲದವರಾದರೆ ತಿರುಗಿ ಮಾರ್ದನಿ ಕೊಟ್ಟಿರಬೇಕು! ಇಂಥ ವಿಚಿತ್ರ ಕೂಗು! ಅಂಥ ಪ್ರಸಂಗಗಳಲ್ಲೆಲ್ಲಾ ನಮ್ಮ ನಾಯಕನ ಎದೆ ಝಲ್ಲೆನ್ನುತ್ತಿದ್ದಿತಾದರೂ ಮಡದಿಗೆ ಹೆಚ್ಚು ಹೆಚ್ಚು ಧೈರ್ಯವನ್ನೇ ಹೇಳುತ್ತಿದ್ದನು. "ಹಳೆಯ ಬನಗಳಲ್ಲೆಲ್ಲಾ ಇಂಥಿಂಥಾ ಹಕ್ಕಿಪಕ್ಕಿಗಳಿರುತ್ತವೆಯೆಂಬುದಾದರೂ ನಮಗೆ ಗೊತ್ತಾದಂತಾಯಿತಲ್ಲಾ! ಜನರು ಇಂಥ ಕೂಗುಗೀಗು ಗಳಿಗೇ ಸುಮ್ಮಸುಮ್ಮನೆ ಹೆದರಿಕೊಂಡು ಕಂಡಕಂಡಂತೆ ಕತೆಗಳನ್ನು ಕಟ್ಟುತ್ತಾರೆ." ಮುಂತಾದುದಾಗಿ ಮಾತನಾಡುತ್ತ ಮೇಲೆ "ಅಂಜಿ ಕಿನ್ನೇತಕಯ್ಯಾ। ಸಜ್ಜನರಿಗೆ। ಭಯವು ಇನ್ನೇತಕಯ್ಯಾ!" ಎಂಬ

ದಾಸರ ಹಾಡನ್ನು ಎತ್ತರು ಸ್ವರದಿಂದ ಮಂಜುಳನೊಡನೆ ದನಿಗೂಡಿಸಿ ಹಾಡುತ್ತ ಕೂಡುವನು. ಇದರಿಂದ ರೋಹಿಣಿಗೆ ನಿರ್ಭಯವಾಗ ಬೇಕೆಂಬುದೊಂದು ಇಚ್ಛೆ; ಮತ್ತು ತನ್ನ ತಲ್ಲಣಿಸಿದ ಎದೆಯೂ ಸ್ಥೈರ್ಯಕ್ಕೆ ಬರಬೇಕೆಂಬುದೊಂದು ಆಡಿ ತೋರಿಸಲಾರದ ಒಳಗೊಳ ಗಿನ ಇಚ್ಛೆ. ತಾನೂ ಹೆದರುತ್ತಿದ್ದೇನೆಂದು ಹೇಳಿದರೆ ಅವಳಿಗೆ ನಿರ್ಭೀತ ಳಾಗುವುದಕ್ಕೆ ದಾರಿಯೇ ಉಳಿಯಲಾರದೆಂದು ಬಗೆದು ಹೀಗೆ ತನ್ನ ತಲ್ಲಣವನ್ನು ಗೌಪ್ಯವಾಗಿಡುತ್ತಿದ್ದನು.

ಹಿಂದೊಮ್ಮೆ "ಟಾಯಿಮ್ ಇಜ್ ಗಾಡ್" (ಕಾಲವೇ ಪರ ಮಾತ್ಮನು)ಎಂದು ನಮ್ಮ ನಾಯಕನಿಗೆ ಹೊಳೆದದ್ದು ಇದೇ ವನದಲ್ಲೆಂದು ನಾನು ಹೇಳಿರುವೆನಷ್ಟೆ? ಆಗ ಈ ತೋಟದಲ್ಲಿ ಬಾಳೆ ಮುಂತಾದ ಬೆಳೆ ಯಿದ್ದಿತು. ಆದುದರಿಂದ ಆಗ ಕಾವಲುಗಾರರಿರುತ್ತಿದ್ದರು. ಅವರ ಲ್ಲೊಬ್ಬನು ಹೇಳಿದ್ದೇನೆಂದರೆ– "ಈ ಬನದಲ್ಲಿ ಕೇವಲ ಮನುಷ್ಯರು ಅತ್ತಂತೆ ಒಂದೇನೋ ಅಳುತ್ತಿರುವುದನ್ನು ನಾನು ಪ್ರತ್ಯಕ್ಷವಾಗಿ ಕೇಳಿದ್ದೇನೆ ಆಗಿನಿಂದಲೇ ನಾನು ನನ್ನ ಮೆಟ್ಟಿಗೆಯನ್ನು ಬನವನ್ನು ಬಿಟ್ಟು ದೂರದಲ್ಲಿ ಬಯಲೊಳಗೆ ಮಾಡಿದ್ದೇನೆ." ಈ ಮಾತು ನಮ್ಮ ನಾಯಕನಿಗೆ ಆಗಿನಿಂದಲೂ ಗೊತ್ತು ಇದ್ದೇ ಇತ್ತು. ಅದನ್ನು ತನ್ನ ಜೀವದೊಡನಾಡಿ ಗಳಿಬ್ಬರಿಗೂ ಎಂದೋ ಆವಾಗಲೇ ಹೇಳಿಯೇಬಿಟ್ಟಿದ್ದನು.ಅದೆಲ್ಲಾ ಹಳೆಯ ಬನದ ಹಕ್ಕಿಪಕ್ಕಿಗಳ ಹಾವಳಿಯೆಂಬುದು ಮೂವರಿಗೂ ಗೊತ್ತಿದ್ದಿತು. ಅಂತಲೇ ಈಗ ನಿರ್ಭಯದಿಂದಿರುವುದಕ್ಕೆ ಅವರಿಗೆ ಎಷ್ಟೋ ಶಕ್ಯವಾಗಿತ್ತು.

ಒಂದು ದಿನ ನಡುರಾತ್ರಿ ಮೂವರೂ ಮಲಗಿಕೊಂಡಿದ್ದಾರೆ. ಜ್ಞಾನಭಿಕ್ಷುವಿಗೆ ಗಾಢನಿದ್ರೆ. ಉಳಿದಿಬ್ಬರಿಗೆ ಎಚ್ಚರ. ಆದರೆ ಅವರಿಬ್ಬ ರಿಗೂ ತನ್ನ ಹೊರತು ಎಲ್ಲರಿಗೂ ನಿದ್ರೆಯೆಂದೇ ಕಲ್ಪನೆ. ಆಗ ತೀರ ಗುಡಿಸಲ ಮುಂದೆಯೇ ಒಂದು ಅಳುವ ದನಿ! ಇನ್ನೊಂದು ರಮಿಸುವ ದನಿ!! ಆದರೂ ಅವರಿಬ್ಬರೂ ಹೆದರಲಿಲ್ಲ. "ಆಹಾ! ಹಿಂದೊಂಮೆ ಆ ಕಾವಲುಗಾರನು ಹೇಳುತ್ತಿದ್ದುದು ಇದೇ ಇರಬಹುದು." ಎಂದು ಸೋಜಿಗಬಟ್ಟರೇ ಹೊರತು ಎದೆಗೆಡಲಿಲ್ಲ. ಆ ದನಿಯೇನೂ ತೀರ ತುಸು ಕ್ಷಣವೇ ಇದ್ದಿತೆಂತಲ್ಲ. ಏಸೋ ಮಿನೀಟುಗಳ ವರೆಗೆ ನಡೆದಿದ್ದಿತು.

ಬೆಳಗಾದ ಮೇಲೆ ನಮ್ಮ ನಾಯಕನ ಮುಂದೆ ಇಬ್ಬರೂ ಕತೆ ಮಾಡಿ ಹೇಳಿದರು ! " ಎಚ್ಚರಿದ್ದದ್ದು ಒಬ್ಬರಿಗೆ ಅಲ್ಲ; ಇಬ್ಬರಿಗೇ " ಎಂಬುದು ಅಲ್ಲಿಯವರೆಗೆ ಅವರಿಗೆ ಗೊತ್ತೇ ಇಲ್ಲ. ಇರುಳಲ್ಲಿ ಯಾರನ್ನೂ ಯಾರೂ ಎಬ್ಬಿಸಿಯೇ ಇರಲಿಲ್ಲ. ಆಗ ನಮ್ಮ ನಾಯಕನು ತನ್ನ ಮನದಲ್ಲಿ ಹೀಗೆ ಅಂದುಕೊಂಡನು:- " ನೀವು ಎಚ್ಚರಿರುವುದಕ್ಕೆ ಬದಲು ನಾನೇ ಇದ್ದಿದ್ದರೆ ಇಷ್ಟೊತ್ತಿಗೆ ನನ್ನ ಪಡ ಮುಗಿದು ಬಹಳ ಹೊತ್ತಾಗುತ್ತಿದ್ದಿತು ! ಭಲಾ! ನೀವು ಒಳ್ಳೇ ಗಟ್ಟಿಗರು ! " ಹೀಗೆ ಅವರ ಇದಿರಿಗೆ ಅನ್ನಲಿಲ್ಲ, ತನ್ನ ಮನದೊಳಗೆ.

ಆಗ ಆತನಿಗೆ ಅರವಿಂದರ 'ಮಾತಾ' ಎಂಬ ಗ್ರಂಥದೊಳಗಿನ ಕೆಲವೊಂದು ವಿಷಯವು ಬಹಳವಾಗಿ ಲಕ್ಷ್ಯಕ್ಕೆ ಬಂದಿತು. ಅದೇನೆಂದರೆ- " ದೇವದೇವನ ರಮಣೀಯತೆಯ ವ್ಯಕ್ತಿತ್ವಸ್ವರೂಪಳಾದ ಮಹಾಲಕ್ಷ್ಮಿಯನ್ನು ಪ್ರೀತಿಸುವಂತೆಯೇ ನಾವು ಆತನ ಅತ್ಯುಗ್ರತೆಯ ವ್ಯಕ್ತಿತ್ವಸ್ವರೂಪಳಾದ ಮಹಾಕಾಲಿಯನ್ನೂ ಪ್ರೀತಿಸಬೇಕು. ಅಪೂರ್ಣತೆಯನ್ನು ಚದರಿಸುವುದರಲ್ಲಿ ತೋರಿಸುವ ಭೀಮಪರಾಕ್ರಮವು ಆತ್ಮಗಳಿಗೆ ಅದೊಂದು ಅವಳ ಪರಮಾನುಗ್ರಹವೇ ಆಗಿದೆ. ಎದೆಗೊಡುವ ಗಂಡುಗಲಿತನವೇ ಅವಳನ್ನು ಅರ್ಚಿಸುವುದಕ್ಕೆ ಅರ್ಹವಾದದ್ದು. ಆದರೆ ಎಡೆಗೆಡುವ ಹೇಡಿಗಳಿಗೆ ಅವಳು ಆರಾಧ್ಯಳಲ್ಲ. "

ಇದೀಗಿನ ಉಗ್ರಭಯಾಸಕ ಪ್ರದರ್ಶನವೆಲ್ಲಾ ಆ ಮಹಾತಾಯಿಯ ಕಡೆಗೆ ತಮ್ಮನ್ನು ಹೊರಳಿಸುವುದಕ್ಕೇ ಎಂದು ಆತನು ವಿವರಿಸಿ ಹೇಳಿದನು. ಅಂದಿನ ಹಗಲು ಹನ್ನೆರಡು ತಾಸೆಲ್ಲಾ ತಲೆಯಲ್ಲಿ ಇದೇ ವಿಚಾರ. ಇರುಳಲ್ಲಿ ನಮ್ಮ ನಾಯಕನಿಗೊಂದು ಕನಸು. ಇಲ್ಲಿ ಕನಸುಗಿನಸುಗಳ ಕತೆ ಬೆಳೆದ ಹಾಗೆಲ್ಲಾ ವಾಚಕರು ಒಂದಿಷ್ಟು ಬೇಸರಿಸಬಹುದು. " ಅದೇನೊ ಕನಸೋ ಕಾಣೆ ! ಕನಸುಗಿನಸುಗಳಿಗೆಲ್ಲಾ ಇಷ್ಟೊಂದು ಪಟ್ಟವೇಕೆ? " ಎಂದು ಒಳಗೊಳಗೆ ಗುಣಗುಟ್ಟಬಹುದು. ಆದರೆ ಇಲ್ಲಿ ನಾನು ಹೇಳುವುದಿಷ್ಟೇ: ಅದೇನೆಂದರೆ— " ಇವು ಎಲ್ಲಾ ಕನಸುಗಳಂಥವುಗಳಲ್ಲ. ಕನಸುಗಳ ಉತ್ಪತ್ತಿಗೆ ನಮ್ಮ ತಲೆಯೊಳಗಿನ ಪೂರ್ವಸ್ಮೃತಿ ಚಿತ್ರಗಳ ತಾಕಲಾಟವೇ ಕಾರಣವೆಂಬುದೇನೋ ಸತ್ಯವೆ.

ಆದರೆ ಇಂಥ ಕನಸುಗಳಿಗೆ ನಮ್ಮ ತಲೆಯೊಳಗಿನ ತೀರ ಒಳ ಒಳಗಿನ ಪ್ರದೇಶದಲ್ಲಿ ( ಅಂದರೆ ಹಿಂದೊಂದು ಪ್ರಕರಣದಲ್ಲಿ ಕಾಶ್ಮೀರದ ಚಿತ್ರಗಳ ಪರಿಣಾಮವು ಒಳಗಿನ ಯಾವ ಇಂದ್ರಿಯದ ಮೇಲೆ ಆಗುತ್ತಿದ್ದಿತೆಂದು ಬಣ್ಣಿಸಲಾಗದೆಯೇ ಆ ಪ್ರದೇಶದಲ್ಲಿ ) ನಡೆಯುವ ಸ್ಪಂದನಗಳು ಅಥವಾ ಸ್ಫುರಣಗಳು ಕಾರಣವಾಗುತ್ತಲಿರುತ್ತವೆ. ಆದುದರಿಂದ ಇವುಗಳಿಗೆ ಆಚೆಯ ದಂಡೆಯ ಸ್ವಪ್ನಗಳೆಂದು ಹೆಸರಿಡೋಣ. ಇಂಥ ಕನಸುಗಳ ಕುರುಹುಗಳೊಳಗೆ ಆಚೆಗಿನ ಸತ್ಯದೊಂದು ತಿಲಮಾತ್ರವಾದರೂ ಅಂಶ ವಿರುತ್ತದೆ. ಉಳಿದ ದಿನಬಳಿಕೆಯ ಸ್ವಪ್ನಗಳು ಬೀಜವಿಲ್ಲದ ಗೊರಟು ಗಳು. ಆದರೆ ಮೊದಲನೇ ಬಗೆಯ ಕನಸುಗಳಲ್ಲಿ ಭಾವನಾಪ್ರದೇಶದಲ್ಲಿ ಎಚ್ಚರಾದ ಮೇಲೆ ಅಸಂದಿಗ್ಧತೆಯ ಪ್ರಗಾಢ ಸ್ಪಂದನಗಳೇಳುತ್ತಿರು ತ್ತವೆ. ಇದೇ ಆಚೆಯ ನಾಡಿನ ಸ್ವಪ್ನಗಳ ಮುಖ್ಯ ಲಕ್ಷಣವು. ಅದರ ಅರ್ಥವು ಎಚ್ಚರಕ್ಕಿಂತ ಮೊದಲೇ ಹೊಳೆದುಬಿಟ್ಟಿರುತ್ತಿರುತ್ತದೆ. ಇದಿರಲಿ. ಆ ಕನಸು ಏನೆಂದರೆ—

" ದಕ್ಷಿಣ ದೇಶದ ಒಂದು ದೊಡ್ಡ ದೇವಸ್ಥಾನ. ಅಲ್ಲಿ ಸಾವಿರಾರು ಮಂದಿ ಯಾತ್ರಿಕರು ನೆರೆದಿದ್ದಾರೆ. ಅವರೊಳಗೆ ನಮ್ಮ ನಾಯಕನೂ ಒಬ್ಬ. ಅಲ್ಲಿ ಗರ್ಭಗುಡಿಯೊಳಗಿನ ಗದ್ದಿಗೆಯ ಮೇಲಿನ ದೇವತಾ ಮೂರ್ತಿಯ ರೀತಿಯೇ ಬೇರೆ. ಅದೊಂದು ಪ್ರತಿಮೆಯಾಗಿರಲಿಲ್ಲ, ಒಂದು ಸೋಜಿಗದ ಪ್ರಾಣಿ. ಅದರ ಮೈದೊಗಲು ಕಪ್ಪೆಯ ಬೆನ್ನಿನಂತೆ ಹಾವಸೆ ಗಟ್ಟಿದ್ದು. ಆಕೃತಿ ಕೋತಿಯ ಹಾಗೆ. ಮುಖ ಚಿತ್ರದೊಳಗಿನ ನರಸಿಂಹ ನಂತೆ. ಅದೊಂದು ಕುರೂಪದ ಕಣಿ, ಕರಾಳದ ನಿಧಿ, ಹೇಸಿಗೆಯ ರಾಶಿ- ಹೀಗಿದ್ದಿತಾ ದೇವತಾಪ್ರಾಣಿ ! ಅದನ್ನು ನೋಡಿದವರೆಲ್ಲಾ ಅದಕ್ಕೇ ಶ್ರೀಮನ್ಮಹಾಭಗವಾನನೆಂದು ತಿಳಿಯುತ್ತಿದ್ದರು. ಅದು ಏನೋ ಮಾತಾಡುವುದಕ್ಕೆ ಮೊದಲು ಮಾಡಿತು. ಆಗ ನೆರೆದವರ ಮನಸ್ಸಿನಲ್ಲಿ ಏನೋ ಸಂಶಯ ಬಂದಿರಬೇಕೆಂದೆಣಿಸಿ ಅದು ಹೀಗೆ ಹೇಳಹತ್ತಿತು—

' ಇಗೋ ನೋಡಿರಿ. ಇದು ಪೂಜಾರಿ–ಗೀಜಾರಿಗಳ ಮೋಡಿಯೆಂದು ಬಗೆದಿರುವಿರೇನು ? ಛೀ ಛೀ ! ಹಾಗೆಂದಿಗೂ ಇಲ್ಲ. ನನ್ನ ಹೊಟ್ಟೆ ಹರಿದು ಎದೆಬಿಚ್ಚಿ ತೋರಿಸುತ್ತೇನೆ ನೋಡಿರಿ. ( ಎಂದು ಎದೆಯನ್ನು

ಹೊಟ್ಟೆಯತನಕ ನಿಡಿದಾಗಿ ಸೀಳಿ ಎರಡೂ ಕೈಗಳಿಂದ ಬಿಚ್ಚಿ ತೋರಿಸಿ ) ಇಲ್ಲಿ ನೋಡಿರಿ– ಒಳಗೆ ಯಾರಾದರೂ ಕುಳಿತು ನಿಮ್ಮನ್ನೆಲ್ಲಾ ಮೋಸ ಮಾಡುವುದಕ್ಕೆ ಹೀಗೆ ಮಾತಾಡುತ್ತಿದ್ದಾರೆಂದು ಎಣಿಸಬೇಡಿರಿ. **ಸ್ವತಃ ನಾನೇ ಮಾತಾಡುತ್ತಿದ್ದೇನೆ! ಸ್ವತಃ ನಾನೇ !! ನಾನೇ ಮಾತಾಡುತ್ತಿದ್ದೇನೆ!!!** ಇಲ್ಲಿ ಕೇಳಿರಿ– ನನ್ನ ಕೈಯಲ್ಲೊಂದು ಲಿಂಗವಿದೆ. ಅದು ತಾನಾಗಿ ಹೊರಟು ಯಾರ ಮೈಮೇಲೆ ಕುಳಿತುಕೊಳ್ಳುವದೊ ಅವರ ಬೆನ್ನಹಿಂದೆ ನಾನು ಸದಾ ಇದ್ದೇನೆಂದು ತಿಳಿಯಿರಿ " ಹೀಗೆಂದ ಕೂಡಲೇ ಆ ಮೂರ್ತಿಯು ಕೈಯ್ಯೊಳಗಿನ ಲಿಂಗವು ಅಲ್ಲಿಂದ ಎದ್ದು ಗುಂಗೀಹುಳದಂತೆ ಹಾರಿ ಬಂದು, ನಮ್ಮ ನಾಯಕನ ಮೈಯ ಮೇಲೆ ಕುಳಿತು ಬಿಟ್ಟಿತು. "

ಆಯಿತು ! ಎಚ್ಚರಾಯಿತು ! **" ಸ್ವತಃ ನಾನೇ ಮಾತಾಡುತ್ತಿದ್ದೇನೆ, ಸ್ವತಃ ! ಅವನ ಬೆನ್ನಹಿಂದೆ ನಾನು ಸದಾ ಇದ್ದೇನೆ!! "** ಎಂಬ ದೃಢತರದ ವಾಕ್ಯಗಳು ನಮ್ಮ ನಾಯಕನ ಕಿವಿಯಲ್ಲಿ ಈಗಲೂ ಉಲಿಯುತ್ತಲಿವೆ.

## (೨೦)

ಆ ಮಾವಿನಬನದಲ್ಲಿದ್ದಾಗ ನಮ್ಮ ನಾಯಕನು ಓದಿದ ಪುಸ್ತಕಗಳಲ್ಲಿ ಮುಖ್ಯವಾದವುಗಳೆಂದರೆ 'ಅಂಡರ್ ಹಿಲ್ಲ'ರು ಬರೆದ 'ಮಿಸ್ಟಿಸಿಜಂ' (ಅನುಭಾವವಿದ್ಯೆ), ಮತ್ತು ಪ್ರಾಚೀನ ಗ್ರಂಥವಾದ 'ಪಾತಂಜಲಯೋಗ ಸೂತ್ರ.' ಇವುಗಳಲ್ಲಿ ಮೊದಲನೆಯದರ ವಿಷಯದಲ್ಲಿ ನಾನು ಮುಂದಿನ ಪ್ರಕರಣಗಳಲ್ಲಿ ಪ್ರಸಂಗವಶದಿಂದ ಕೆಲವು ಮಾತುಗಳನ್ನು ಹೇಳತಕ್ಕವನೇ ಇರುವದರಿಂದ ಇಲ್ಲಿ ಈಗ ಅದರ ಪ್ರಸ್ತಾಪವನ್ನೆತ್ತುವದಿಲ್ಲ. ಒಟ್ಟಾರೆ ಈ ಇಡೀ ವರ್ಷದಲ್ಲಿ ಚಿತ್ತಸ್ಥಿರೀಕರಣದ ವಿಷಯದಲ್ಲಿ ಎಷ್ಟು ಬಗೆಯ ಶಾಸ್ತ್ರಗಳು ಉಪಲಬ್ಧವಿರುವವೋ ಅವುಗಳನ್ನೆಲ್ಲ ಆತನು ವ್ಯಾಸಂಗಿಸಿರುವದರಿಂದಲೂ, ಅಂಥವುಗಳಲ್ಲೆಲ್ಲ ಪಾತಂಜಲಸೂತ್ರವೇ ಪ್ರಖ್ಯಾತವಾಗಿರುವುದರಿಂದಲೂ ನಾನಿಲ್ಲಿ ಅದೊಂದರ ವಿಷಯದಲ್ಲಿಯೇ ಕೆಲವೊಂದು

ಮಹತ್ತ್ವದ ವಿಚಾರಗಳನ್ನು ಮಂಡಿಸುವುದು ಅಗತ್ಯವೆಂದು ನನಗೆ ತೋರುತ್ತದೆ.

ಇದೀಗ ನಮ್ಮ ನಾಯಕನಿಗೆ ತನ್ನ ಚಿತ್ತಚಾಂಚಲ್ಯದ ಹೊರತು ಇನ್ನಾವ ದೋಷವೂ ತನ್ನಲ್ಲಿದೆಯೆಂದೆನಿಸುತ್ತಾ ಇರಲಿಲ್ಲ. ಬರೀ ಮನಸ್ಸಿನ ಅಲೆದಾಟ (mind wandering) ಒಂದು ಮಾತ್ರ. ಈತನ ಈಗಿನ ಅಪೂರ್ಣತೆಯ ವಿವರವನ್ನು ನಾವು ಯೋಗಸೂತ್ರದ ಪ್ರಥಮಪಾದದ ಮೂವತ್ತನೇ ಸೂತ್ರದಲ್ಲಿ ಒಟ್ಟಾರೆ ಕಾಣಬಹುದು. "ವ್ಯಾಧಿ, ಮನಸ್ಸಿನ ಶೈಥಿಲ್ಯ, ಸಂಶಯ, ಪ್ರಮಾದ, ಆಲಸ್ಯ, ಭ್ರಮೆ, ವಿಷಯಾಕಾರ-ಸ್ಥಿತಿ, ಚ್ಯುತಿ ಮುಂತಾದ ಚಿತ್ತವಿಕ್ಷೇಪಗಳೇ ವಿಘ್ನಗಳು." ಈ ಅಂತರಾಯವನ್ನು ನಿವಾರಿಸಿಕೊಳ್ಳುವ ಉಪಾಯಗಳು ಮುಂದಿನ ಸೂತ್ರಗಳಲ್ಲಿ ಹೇಳಲ್ಪಟ್ಟಿವೆ. ಅವುಗಳಲ್ಲಿ ಮೂವತ್ನಾಲ್ಕನೇ ಸೂತ್ರದಲ್ಲಿ ಶ್ವಾಸೋಚ್ಛ್ವಾಸವನ್ನು ನಿಯಮಿತ ಸ್ಥಿತಿಗೆ ತರುವುದರ ಕುರಿತು ಹೇಳಿದ್ದೇನೋ ನಿಜವೇ, ಆದರೂ ಅದೊಂದೇ ಏಕಮಾತ್ರ ಉಪಾಯವೆಂದೇನೂ ಈಗಿನವರಂತೆ ಘಂಟಾಘೋಷವಾಗಿ ಹೇಳಿರದೆ ಮೂವತ್ತೊಂಬತ್ತನೇ ಸೂತ್ರದವರೆಗೆ ಏನೋ ಬೇರೆ ಬೇರೆ ಉಪಾಯಗಳನ್ನು ಹೇಳಿ, ಅವುಗಳಲ್ಲಿ ಪ್ರತಿಯೊಂದಕ್ಕೂ ಅಷ್ಟಷ್ಟೇ ಮಹತ್ವವನ್ನು ಕೊಟ್ಟಿದೆ. ಇಷ್ಟೇ ಅಲ್ಲ. ಯೋಗಶಾಸ್ತ್ರದ ಮೂಲಸೂತ್ರವಾದ "ಚಿತ್ತವೃತ್ತಿನಿರೋಧ" ಕ್ಕೆ "ಅಭ್ಯಾಸ ವೈರಾಗ್ಯಗಳೇ ಉಪಾಯಗಳು" ಎಂದು ಹೇಳಿ ಕೊನೆಗೆ ಅದು "ಈಶ್ವರ ಪ್ರಣಿಧಾನದಿಂದಲೂ" ಕೂಡ ಸಾಧ್ಯವಾಗುವದೆಂದು ಸ್ಪಷ್ಟವಾಗಿ ಹೇಳಿದೆ. ಹೀಗೆಂದ ಬಳಿಕ ಆಧುನಿಕ ಗುರುಶಿಷ್ಯ ಪರಂಪರೆಯವರು "ಶ್ವಾಸ-ಮುದ್ರಾ" ಮುಂತಾದವುಗಳಿಗೇ ಏಕಾಧಿಪತ್ಯವನ್ನು ಕೊಟ್ಟಂತೆ ಸ್ವತಃ ಆ ಶಾಸ್ತ್ರದ ಮೂಲ ಋಷಿವರ್ಯನೇನೂ ಹಾಗೆ ಮಾಡಲಿಲ್ಲವಲ್ಲಾ ! ಎಂದು ನಮಗೆ ಅಚ್ಚರಿಯಾಗುವುದಿಲ್ಲವೆ ?

ಇದೇ ವಿಷಯದಲ್ಲಿ ವಿವೇಕಾನಂದರು ತಮ್ಮ ರಾಜಯೋಗ ವ್ಯಾಖ್ಯಾನಮಾಲೆಯಲ್ಲಿ ಹೀಗೆ ಹೇಳಿದ್ದಾರೆ:-

"ಸಂಪೂರ್ಣ ಜ್ಞಾನವನ್ನೂ ಸಂಪೂರ್ಣ ಚೈತನ್ಯವನ್ನೂ ಪಡೆದುಕೊಳ್ಳಬೇಕಾದರೆ ಕುಂಡಲಿನೀ ಶಕ್ತಿಯನ್ನು ಜಾಗೃತಪಡಿಸಿಕೊಳ್ಳುವು

ದೊಂದೇ ಉಪಾಯವು ನಮಗೆ ಉಪಲಬ್ಧವಿದೆ. ಈ ಜಾಗೃತಿಯೆಂಬುದು ಎಷ್ಟೋ ದಾರಿಗಳಿಂದಲಾಗುತ್ತದೆ. ದೇವದೇವನ ಮೇಲೆ ಸಾತಿಶಯ ದೃಢಭಕ್ತಿಯಿದ್ದರೆ ಕುಂಡಲಿನಿಯು ಜಾಗೃತವಾಗುವದು. ಅಥವಾ ಒಬ್ಬ ದಿವ್ಯಜ್ಞಾನಿಯ ಕೃಪಾಪೂರ್ಣ ವರದಹಸ್ತದ ಸ್ಪರ್ಶದಿಂದಲೂ ಅದು ಜಾಗೃತವಾಗುವದು. ಅಥವಾ ನಿಸ್ಸೀಮಜ್ಞಾನಮಾರ್ಗದಿಂದಲೂ ಅದು ಹಾಗೆ ಸಾಧಿಸುವದು. ಅಂತರ್ಗತ ಭಾಂಡಾರದಿಂದ ಹೊರಚಿಮ್ಮುವ ಅತ್ಯಂತ ಸೂಕ್ಷ್ಮವಿಚಾರಗಳನ್ನು ಅವಲೋಕನ ಮಾಡದೆ ದೃಷ್ಟಿಪಥದಿಂದ ದೂರ ಹೋಗಗೊಡಲಾರೆನೆಂಬ ನಿಶ್ಚಯದಿಂದ ವೃತ್ತಿಪರಿಶೀಲನವನ್ನು ಮಾಡುತ್ತಲಿದ್ದರೂ ಕೂಡ ನಿಮ್ಮ ಕೆಲಸವಾಗುವದು. ಆರಾರಲ್ಲಿ ನಿಮ್ಮ ಸಾಮಾನ್ಯಜ್ಞಾನದ ಆಳವಿಗೆ ಮೀರಿದ ಸಂಗತಿಗಳು ಘಟಿಸುವುದನ್ನು ನೀವು ಕಾಣುವಿರೋ ಅವರಲ್ಲೆಲ್ಲಾ ಕುಂಡಲಿನೀ ಶಕ್ತಿಯು ಅತ್ಯಲ್ಪ ಪ್ರಮಾಣದಿಂದಲೇ ಆಗಲೊಲ್ಲದೇಕೆ- ಜಾಗೃತವಾಗಿದೆಯೆಂದು ನಿಶ್ಚಯವಾಗಿ ತಿಳಿಯಿರಿ.''

ಅರವಿಂದರೂ ಕೂಡ ತಮ್ಮ 'ಪೂರ್ಣಯೋಗ' (Synthesis of yoga) ವೆಂಬ ಗ್ರಂಥದಲ್ಲಿ ಈ ವಿಷಯದಲ್ಲಿ ಹೀಗೆಯೇ ಹೇಳಿದ್ದಾರೆ.—

"ಸುಪ್ತ ಪ್ರಾಣಶಕ್ತಿಗಳನ್ನು ಮುಕ್ತಗೊಳಿಸಿ, ಅವುಗಳನ್ನು ಸಂಯಮಿಸುವ ತ್ರಾಣ ಉಂಟಾಗಲು ಪ್ರಾಣಾಯಾಮಾದಿಗಳು ರೂಢಿಯ ಹಠಯೋಗದ ಉಪಾಯಗಳಾಗಿವೆ. ತಮ್ಮ ಕರ್ಮಚೇಷ್ಟೆಗಳಿಗಾಗಿ ಪ್ರಾಣಶಕ್ತಿಯನ್ನೆ ಅವಲಂಬಿಸಿರುವ ಸೂಕ್ಷ್ಮ, ಕಾರಣ, ಮಹಾಕಾರಣ ಶರೀರಗಳ ಶಕ್ತಿಗಳಾದರೂ ಈ ಉಪಾಯಗಳಿಂದ ಜಾಗೃತವಾಗಿ ಉದ್ದೀಪಿತವಾಗುವವು. ಮನಃಸಂಕಲ್ಪದಿಂದ, ಅಭ್ಯಾಸಯೋಗದಿಂದ ಮೂಲಶಕ್ತಿಯು ಉನ್ನತ ಆಧ್ಯಾತ್ಮಿಕಪ್ರಭಾವಕ್ಕೆ ನಮ್ಮಲ್ಲಿ ಹೆಚ್ಚುಹೆಚ್ಚು ಎಡೆಗೊಡುವದರಿಂದಲೂ ಮೇಲಿನ ಸಂಗತಿಗಳನ್ನು ಸಾಧಿಸಬಹುದು''

ಇಷ್ಟೇ ಅಲ್ಲ. ಅರವಿಂದರು 'ಯೌಗಿಕಸಾಧನ'ವೆಂಬ ಪುಸ್ತಕದ ಮೊಟ್ಟಮೊದಲಲ್ಲಿ ಹೇಳಿದ ಮಾತನ್ನು ನೋಡಿದರೆ ನಮಗೆ ತೀರ. ಹೊಸ ಮಾತಾಗಿ ತೋರುವಂತಿದೆ-

" ಸಾಮಾನ್ಯ ಜನರಂತೆಯೇ ನೀನೂ ಹಿಡಿದ ಹಾದಿಗೆ ತೀರ ವಿರುದ್ಧ ವಾಗಿಯೇ ಸಾಧನೆಯ ಯುಕ್ತವಾದ ಮಾರ್ಗವಿದೆ. ಜನರು ದೇಹ-ಪ್ರಾಣಗಳಿಂದ ಪ್ರಾರಂಭಿಸಿ ಚಿತ್ತ ಮನಸ್ಸುಗಳಿಗೆ ಸಾಗಿ, ಬುದ್ಧಿಸಂಕಲ್ಪ ಗಳಲ್ಲಿ ಮುಗಿತಾಯ ಮಾಡುವರು. ಸಂಕಲ್ಪದಿಂದ ಪ್ರಾರಂಭಿಸಿದವ ನಿಗೆ ಆಸನ, ಪ್ರಾಣಾಯಾಮ, ಕುಂಭಕ, ಚಿತ್ತಶುದ್ಧಿ ಮೊದಲಾದವುಗಳ ಪ್ರಾಸ್ತಾವಿಕ ಸಿದ್ಧತೆಯ ಅಗತ್ಯವೇ ಇಲ್ಲ."

ಇವೆಲ್ಲ ಮಾತುಗಳಿಂದ ನಮ್ಮ ನಾಯಕನಿಗೆ ತನ್ನ ಮಾರ್ಗವು ನಿಶ್ಚಿತವೆಂಬುದರ ಕಲ್ಪನೆ ಇನ್ನೂ ಎಷ್ಟೋ ಹೆಚ್ಚಾಯಿತು. ಆದರೆ ಇಲ್ಲಿ ಒಂದು ಮಾತೇನೆಂದರೆ ಆತನು ತನ್ನ ಅವಸ್ಥೆಯ ಪರಿಪೂರ್ಣತೆಯ ಕಾಲವು ಬರುವ ವರೆಗೆ ಓದದೆ ಹೊತ್ತುಗಳೆಯುವ ಹಾದಿಯೊಂದನ್ನು ಹುಡುಕಹತ್ತಿ ಬಹಳ ದಿನಗಳಾಗಿವೆ. ಯಾಕೆಂದರೆ ಓದುತ್ತಿದ್ದ ಹಾಗೆಲ್ಲಾ ಮಜ್ಜಾತಂತುಗಳಿಗೆ ಹೆಚ್ಚು ಹೆಚ್ಚು ಎಳೆತಬಿದ್ದು ಪ್ರಕೃತಿಯಲ್ಲಿ ಅಶಕ್ತತೆ ಮತ್ತಿಷ್ಟು ಹೆಚ್ಚಾಗುವುದಕ್ಕೇ ಕಾರಣವಾಗುತ್ತಿತ್ತು. ಅಲ್ಲದೆ ಪುಸ್ತಕ ಗಳನ್ನು ತರಿಸಿಕೊಳ್ಳಲಿಕ್ಕೆ ಕಾಸಿನ ಅಭಾವ. ಅತ್ತಿತ್ತ ಅಲೆದಾಡಿ ಮನ ವನ್ನು ರಮಿಸಿಕೊಳ್ಳಲು ದೈಹಿಕ ಶಕ್ತಿಯಿಲ್ಲ. ಒರಗಿಕೊಂಡೇ ಹೊತ್ತು ಗಳೆಯಬೇಕಾದರೆ ಓದುವುದರ ಹೊರತು ಗತಿಯಿಲ್ಲ. ಆದುದರಿಂದ ಆತನು ಇಂಥದೊಂದು ಯಾವದಾದರೂ ಸಣ್ಣಪುಟ್ಟ ಸಾಧನದಿಂದ ಒಳ ಗಿನ ಸೈಕಿಕಲ್ ಪಾವರ್ (ಸೂಕ್ಷ್ಮಮಾನಸ ಶಕ್ತಿ) ಬೆಳೆಯಿಸಿಕೊಂಡು ಮನರಂಜನ ಮಾಡಿಕೊಳ್ಳಬೇಕೆಂದು ಹವಣಿಸುತ್ತಿದ್ದನು. ಕಾಶ್ಮೀರದ ಬನಸಿರಿ, ಹಿಮಾಲಯದ ದರಿ ಕಂದರ, ಜ್ರಾಝುಲದ ಕಾನನಕಾಂತಾರ ಮುಂತಾದ ರಮಣೀಯ ದೃಶ್ಯಗಳನ್ನೂ, ಅರವಿಂದರ ಒಳಮನೆ, ಎ. ಈ. ಯವರ ದಿನಚರಿ, ಲೋಕೋತ್ತರ ಪುರುಷರ ದೈನಂದಿನ ಜೀವನ ಮುಂತಾದ ಅಲೌಕಿಕ ಸಂಗತಿಗಳನ್ನೂ ಕುಳಿತಲ್ಲಿಂದಲೇ ಕಂಡು ತಣಿ ಯಲಿಕ್ಕೆ ಶಕ್ಯವಾದರೆ ಒಮ್ಮೆ ಓದಿನ ರಾಕ್ಷಸನ ದವಡೆಯಲ್ಲಿ ನುಗ್ಗಾಗು ವುದು ತಪ್ಪಿದಂತಾಗುವದೆಂದು ಅವನ ಹಂಚಿಕೆ. ಅದಕ್ಕೆಂತಲೇ ಅವನು ಈ ವರುಷ ರಾಜಯೋಗದ ವಿವಿಧ ಪದ್ಧತಿಗಳ ಬಗೆಗೆ ಪರಿಶೀಲನವನ್ನು ನಡೆ ಯಿಸಿದನು. ಆದರೆ ದೈಹಿಕ ಮಾನಸಿಕ ಅಶಕ್ತತೆಯಲ್ಲಿ ಅದು ಅಪಾಯ

ಕರವೆಂಬ ಅಂಶವು ತಿಳಿದು ಬಂದ ಹಾಗೆಲ್ಲಾ ಆತನು ಅದರ ಆಶೆಯನ್ನೂ ಬಿಟ್ಟುಬಿಟ್ಟನು.

ಇಷ್ಟು ಹೊತ್ತಿಗೆ ಮಾವಿನಬನವೆಲ್ಲಾ ತುಂಬಾ ಫಲವೈಭವ ವನ್ನು ಬೀರಹತ್ತಿತು. ಆಗಿನ ರಮಣೀಯತೆಯನ್ನು ನೋಡಿ ನೋಡಿ ನಮ್ಮ ನಾಯಕನು ನಲಿನಲಿದು ಕುಣಿದಾಡಿದುದಕ್ಕೆ ಮೇರೆಯಿಲ್ಲ. ಕುಳಿತಲ್ಲಿ, ನಿಂತಲ್ಲಿ,ಅಲೆದಾಡಿದಲ್ಲಿ–ಕಡೆಗೆ ಮಲಗಿದಲ್ಲಿ, ಎಲ್ಲೆಲ್ಲಿಯೆಂದರೆ ಅಲ್ಲಲ್ಲಿ ಜೋಲುವ ಕಾಯಿಗೊಂಚಲುಗಳ ತೋರಣ. ಮೂಗಿಗೆ ಸುಗಂಧ ನಾಲಿಗೆಗೆ ಮಾಧುರ್ಯ, ಕಣ್ಣಿಗೆ ಸೌಂದರ್ಯ, ಮೈಗೆ ಹಸುರೆಲೆಗಳ ಸುಖಸ್ಪರ್ಶ, ಕಿವಿಗಳಿಗೆ ಗಿಳಿಕೋಗಿಲೆಗಳ ಕಲಕಲನಾದ. ಆಹಾ! ಪಂಚೇಂದ್ರಿಯ ತೃಪ್ತಿಗೆ ಏಕಮಾತ್ರಸ್ಥಾನವೆಂದರೆ ಆಗಿನ ಆ ವನವೈಭವ! ಅಂಥ ಅನುಪಮ ಸುಖದ ನಿಧಿಯಲ್ಲಿ ಆರುತಿಂಗಳುಗಳ ವರೆಗೆ ಓಲಾಡಿ ನಮ್ಮ ನಾಯಕನು ಮಹಾಕಾಲೀಮಾತೆಗೆಂದು ಕಾದಿಟ್ಟ ಕೊನೆಯ ದುರ್ಧರದ ಆರು ತಿಂಗಳುಗಳ ಸಲುವಾಗಿ ಮನೆಯ ಕಡೆಗೆ ಬಿಡಾರ ವನ್ನು ಕಿತ್ತಿದನು,

ಮನೆಗೆ ಹೋಗಿ ಹಾಗೆ ಹೀಗೆ ಇನ್ನೂ ಒಂದು ತಿಂಗಳಾಗಿಲ್ಲ. ಅಷ್ಟರಲ್ಲಿ ಸುತ್ತುಮುತ್ತಲಿನ ಪ್ರಾಂತದಲ್ಲೆಲ್ಲಾ 'ಈತನು ಧರ್ಮ ಚಿಹ್ನವನ್ನು ಕಿತ್ತಿಹಾಕಿದ ಮಹಾನಾಸ್ತಿಕ' ನೆಂಬ ಕೂಗು ಕೇಸರಿಟ್ಟು ಬಿಟ್ಟಿತು. ಈತನನ್ನು ಅತಿಶಯವಾಗಿ ಪ್ರೀತಿಸುವವರೂ, ನಿಜ ಆಧ್ಯಾತ್ಮ ಜೀವನದ ಆಶೆಯುಳ್ಳವರೂ, ಆ ಭಾಗದಲ್ಲೆಲ್ಲ ಖ್ಯಾತಿಹೊಂದಿದವರೂ ಆದ ಒಬ್ಬ ತರುಣ ಮಠಾಧೀಶರಿದ್ದರು. ಅವರು ಈಗ ಜ್ಞಾನಭಿಕ್ಷು ವನ್ನು ಭೆಟ್ಟಿಗೆಂದು ಕರೆಯಿಸಿಕೊಂಡು, "ಜನತೆಯಲ್ಲೆಲ್ಲಾ ಗದ್ದಲವಾಗುವಂತೆ ಹೀಗೇಕೆ ಮಾಡುವುದು?" ಎಂದು ಕೇಳಿದರು. ಅದಕ್ಕೆ ಆತನು "ನಾನೇನೂ ಧರ್ಮಚಿಹ್ನವನ್ನು ಬಿಟ್ಟೇ ಬಿಡಬೇಕೆಂಬ ಸಿದ್ಧಾಂತಕ್ಕೂ ಬಂದಿಲ್ಲ; ಅದಿಲ್ಲದೆ ಉನ್ನತಿಯೇ ಇಲ್ಲವೆಂದೂ ಗ್ರಹಿಸಿಲ್ಲ. ನನ್ನ ಮಟ್ಟಿಗೆ ಅದೊಂದು ಸಾಮಾಜಿಕ ಚಿಹ್ನವೇ ಹೊರತು ಧಾರ್ಮಿಕವೇನೂ ಅಲ್ಲ. ಆದರೆ ಸಾಮಾಜಿಕ ವಿಷಯದಲ್ಲಿ ಇನ್ನೂ ನನಗೆ ಪೂರ್ಣವಿಚಾರಗಳು ಹೊಳೆಯಬೇಕಾಗಿವೆ. ಆದರೆ ಇಷ್ಟೇನೋ ನಿಜ. ಅದೇನೆಂದರೆ, ಅವರ

ಆಳವಿನಲ್ಲಿ ನಾವಾದರೂ ಇರಬೇಕು, ಅಥವಾ ನಮ್ಮ ಆಳವಿನಲ್ಲಿ ಅವರಾದರೂ ಬರಬೇಕು. ಅವರಿಂದ ದೂರದಲ್ಲಿದ್ದುಕೊಂಡು ನಾವೇನೂ ಮಾಡಬೇಕಾದುದಿಲ್ಲ. ಆದರೆ ಇದೀಗ ಅವರನ್ನು ನಮ್ಮಂತೆ ನಡೆಯಿಸಿಕೊಂಡು ಹೋಗುವುದಕ್ಕೆ ನಮಗೆ ಇನ್ನೂ ಸಾಕಷ್ಟು ಜ್ಞಾನವೂ ಶಕ್ತಿಯೂ ಬರಬೇಕು. ನಾವೇ ಅವರಂತೆ ಇದ್ದುಕೊಂಡು ಬಿಡುವುದಕ್ಕೆ ನಮ್ಮ ಜೀವವು ಸಹಸಾ ಒಪ್ಪದು. 'ಅವರದು ಬರೀ ಗತಾನುಗತಿಕದ ಗೊಂಟು. ನಮ್ಮದು ಇನ್ನೂ ರೂಪಕ್ಕೇ ಬಾರದ ಗರ್ಭಪಿಂಡ' ಅಂತೂ ಸದ್ಯಕ್ಕೆ ಎರಡೂ ಅಷ್ಟೇ ನಿಷ್ಪ್ರಯೋಜನ. ಹೀಗೆಂತಲೇ ನಮ್ಮಂಥವರು ಇಂಥ ಸಾಮಾಜಿಕಪ್ರಶ್ನದಲ್ಲಿ ಇನ್ನೂ ಅತ್ತಿಲ್ಲ ಇತ್ತಿಲ್ಲವೆನ್ನುವಂಥ ರೀತಿಯಲ್ಲಿ ಇದ್ದುಕೊಂಡು ಕಾಲವನ್ನು ನಿರೀಕ್ಷಿಸಬೇಕಾಗಿದೆ.

"ನನಗೇನೋ ಇಂಥದೊಂದು ಜಾತಿ ಮತದವನೆಂದು ಹೇಳಿಕೊಳ್ಳುವುದಕ್ಕೇ ಜೀವನದಲ್ಲಿ ಸಮ್ಮತಿಯಿಲ್ಲ. ಸರ್ವ ಮಾನವರೆಲ್ಲಾ ಒಂದೇ ಜಾತಿ; ಮನುಷ್ಯಜಾತಿಯೆಂಬುದೊಂದೇ ಒಂದು. ಈಗಿರುವ ಸರ್ವ ದೇಶಗಳ ಜನಾಂಗಗಳ ಧರ್ಮಗ್ರಂಥಗಳ ಸತ್ಯತೆಯು ಸರ್ವರಿಗೆ ವಿದಿತವಾಗಿ ಇನ್ನು ಮುಂದೆ ಒಂದೇ ಮನೆಯಲ್ಲಿ, ಒಬ್ಬೊಬ್ಬರು ತನ್ನ ತನ್ನ ಅಭಿರುಚಿಯಂತೆ ಬೇರೆ ಬೇರೆ ಯಾವದಾದರೊಂದರಲ್ಲಿ ಹೇಳಿದ ಪದ್ಧತಿಯಂತೆ, ಸಾಧನವನ್ನು ಮಾಡುತ್ತಲಿರಬಹುದಾದ ಕಾಲವೊಂದು ಬೇಗನೆಯೆ ಬರುವುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವು ತೋರುವದಿಲ್ಲ. ಕಾಲವೇ ಹಾಗೆ ಹೊರಳುತ್ತಿದೆಯೆಂದು ಈಗಿನ ಮಹಾ ಪುರುಷರ ಮನಸ್ಸಿನ ಒಲವಿನ ಮೇಲಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ. ನಾವು ಹೊಸಕಾಲದ ಗಾಳಿಯ ಅಲೆಗಳೆಂಬುದು ನಿಮಗೆ ತಿಳಿದ ವಿಷಯವೇ ಆಗಿದೆ. ಈಗಿರುವ ಅಂಧಪರಂಪರೆಯನ್ನೂ ಧರ್ಮಾಧಿಪತಿಗಳ ದರ್ಪದ ಒತ್ತಾಯವನ್ನೂ ನಾವು ಎಳ್ಳಷ್ಟೂ ಸಹಿಸಲಾರೆವು. ಲೋಕದೊಳಗಿಂದ ಅಂಥ ಅಜ್ಞಾನವೂ ಇಂಥ ಒತ್ತಾಯವೂ ಹೇಳಹೆಸರಿಲ್ಲದೆ ಹಾರಿಹೋಗಬೇಕೆಂದು ನಮ್ಮ ಅಂತರಾಳವು ಅನುಕ್ಷಣವೂ ಆಶಿಪಡುತ್ತಿದೆ. ಆದುದರಿಂದ ನಿಮಗೆ ಹೆಚ್ಚಿಗೇನೂ ಹೇಳಬೇಕಾಗಿಲ್ಲ. ಇದೊಂದಲ್ಲದೆ ನೀವು ನನಗೆ ಪರಮಪ್ರಿಯರೆಂಬ ಕಾರಣದಿಂದಲೇ ನಾನಿಲ್ಲಿಯ ವರೆಗೆ ಹರಿ

ಗೊಂಡು ಬರುತ್ತಿರುವೆನಲ್ಲದೆ ನೀವು ಧರ್ಮಾಧಿಕಾರಿಗಳೆಂಬ ಕಾರಣದಿಂದಲ್ಲವೆಂಬುದನ್ನು ನಾನೀಗ ನಿಮ್ಮ ಲಕ್ಷ್ಯಕ್ಕೆ ತಂದುಕೊಡುತ್ತೇನೆ. ಅಂಥವರೊಡನೆ ನಮ್ಮ ಕೆಲಸವು ಏನು ಮತ್ತು ಹೇಗೆಯೆಂಬುದು ನನಗೆ ಇನ್ನೂ ತಿಳಿದಿಲ್ಲ.''

## (೨೧)

ಇಷ್ಟು ಹೊತ್ತಿಗೆ ಮಗಳಿಗೂ ಮಗುವಿಗೂ ಗೊಬ್ಬರದ ರೋಗ. ನಮ್ಮ ನಾಯಕನ ಅಶಕ್ತತೆಯಂತೂ ಗೊತ್ತಿದ್ದ ವಿಷಯವೇ. ಇದಲ್ಲದೆ ಸಾಲದಲ್ಲಿ ಐದುನೂರು ರೂಪಾಯಿಗಳನ್ನು ತೀರಿಸಲೇ ಬೇಕಾಯಿತು. ಇಂಥ ಪ್ರಸಂಗದಲ್ಲಿ ರೋಹಿಣಿಯ ಹೆರಿಗೆ, ಅವಳ ಮಕ್ಕಳು, ಎರಡೂ ಗಂಡು. ಕಲ್ಪನಾತೀತ ಸುಖಪ್ರಸವ. ಅವಳ ಬಾಣಂತಿತನದ ಆರೈಕೆಯ ಐಸಿರಿಯಂತೂ ಹಿಂದಿನ ಸಾರಿಯೇ ತಿಳಿದಿದೆ. ಅವಳ ತಾಯಿಯೇನೊ ಲೋಕನಿಮಿತ್ತ್ಯದ ಸಲುವಾಗಿ ಬಾಣಂತಿತನವನ್ನು ಮಾಡಲಿಕ್ಕೆ ಈಗ ಸಿದ್ಧಳು. ಮೊದಲಿನ ನಾಲ್ಕಾರು ದಿನಗಳಲ್ಲಿ ಬಹಳೇ ತೊಂದರೆಯಾಯಿತು. ಆದರೆ ಇಷ್ಟರಲ್ಲಿ ಜ್ಞಾನಭಿಕ್ಷುವಿನ ಅಕ್ಕರತೆಯ ಗೆಳೆಯನೊಬ್ಬನು ಅದೇ ಊರಿಗೆ ಶಾಲಾಧ್ಯಾಪಕನಾಗಿ ಸತಿಸಹಿತವಾಗಿ ಬಂದನು. ಅವರಿಬ್ಬರೂ ಗೆಳೆಯನ ಮನೆಯಲ್ಲೇ ವ್ಯವಸ್ಥೆಯ ಸಲುವಾಗಿ ಕೆಲದಿನಗಳ ವರೆಗೆ ನಿಂತುಬಿಟ್ಟರು. ಆಗ ಎಲ್ಲಾ ಮತ್ತೆ ಅಳತೆಗೆ ಬಂದಿತು. ಜಡ್ಡಿಗೆ ಬಿದ್ದ ಮಗುಗಳಿಗೂ ಗುಣವಾಯಿತು.

ನಮ್ಮ ನಾಯಕನಿಗೆ ಅಕ್ಕರತೆಯ ಗೆಳೆಯನೊಬ್ಬನ ಹೊಸ ಒಡನಾಟ, ಮನೆಯ ವ್ಯವಸ್ಥೆಯೆಲ್ಲಾ ನೆಟ್ಟಗೆ, ಅಂಗಳ ತುಂಬಾ ಒಂದು ಹಸುರು ಬಳ್ಳಿಯ ಸೌಂದರ್ಯ, ಹಿಂದಿನ ಆರು ತಿಂಗಳ ಒಳ ತೃಪ್ತಿ, ಇಂಥ ಹೊತ್ತಿಗೆ ಸರಿಯಾಗಿ ಈತನ ಆತ್ಮಚರಿತ್ರವನ್ನು ಬರೆಯುವುದಕ್ಕೆ ಬೇರೆ ಗೆಳೆಯರಿಂದ ನಡಿಸಲ್ಪಡುತ್ತಿದ್ದ ಒಂದು ಗ್ರಂಥಮಾಲೆಯ ಒತ್ತಾಯದ ಓಲೆ ಬಂದುದು ಒಳಿತೇ ಆಯಿತು. ಎರಡು ವಾರಗಳಲ್ಲಿ ಪುಸ್ತಕವು ಬರೆದು ಮುಗಿಯಿತು. ಈ ಪುಸ್ತಕವನ್ನು ಬರೆಯುವುದರ ಬಗೆಗೆ ಎರಡು ಮೂರು ವರುಷಗಳಿಂದಲೂ ಒಂದೇ ಸಮನೆ ಪ್ರಸ್ತಾಪವು ನಡೆದೇ

ಇದ್ದಿತು. ಹಿಂದೆ ಸ್ವಾನುಭವದ ಆತ್ಮಗೀತಿಯನ್ನು ಬರೆದು ಪ್ರಸಿದ್ಧಿಸಿದ್ದ ನಷ್ಟೇ? ಆದರೆ ನಾಡಿನಲ್ಲಿ ಎಷ್ಟೋ ಜನರಿಗೆ ಅದರ ಹೊಲಬೇ ಹೊಳೆಯು ಲಿಲ್ಲ. ಅದಕ್ಕೆಂತಲೇ ಅವನು ಗದ್ಯದಲ್ಲೊಂದು ಆತ್ಮಕಥೆಯನ್ನು ಬರೆ ಯಬೇಕೆಂದು ಆಗಿನಿಂದಲೇ ಆಲೋಚಿಸುತ್ತಿದ್ದನು. ಆದರೆ ಆತನ ಆತ್ಮವು ಎಷ್ಟೋ ಸಾರೆ ಆ ವಿಚಾರಕ್ಕೆ ಅಡ್ಡ ಬರುತ್ತಿತ್ತು. ಮೊದಮೊದ ಲಿಗೆ ಅನುಭವಿಕ ಪ್ರಾಮಾಣಿಕ ವಾಙ್ಮಯದ ಕೊರತೆಯು ಆಧುನಿಕ ಕಾಲದಲ್ಲಿ ಬಹಳವಾಗಿದ್ದುದನ್ನು ಕಂಡು ಆತನು ಹೀಗೆಲ್ಲಾ ಆಲೋಚಿ ಸುತ್ತಿದ್ದನು.ಆದರೆ ಒಳಗೊಳಗೆ ಯಾಕೋ ನಕಾರ ವೃತ್ತಿಯೇಳುತ್ತಿತ್ತು. ಇವೆರಡರ ಕಲಹದಲ್ಲಿಯೇ ಆತ್ಮಗೀತಿಯೊಂದು ಹೊರಹೊಮ್ಮಿದ್ದು. ಈಗ ಈ ಗದ್ಯ ಪುಸ್ತಕದ ಹಣೇಬರಹವೂ ಅದೇ. ಜಗತ್ತಿನಲ್ಲಿ ಆಧುನಿಕ ಆಧ್ಯಾತ್ಮಿಕ ಪ್ರಾಮಾಣಿಕ ವಾಙ್ಮಯವು ಎಷ್ಟೋ ಹೊರಬಿದ್ದಿದೆ ಯೆಂಬುದು ಗೊತ್ತಾದ ಮೇಲಂತೂ ಆ ನಕಾರ ವೃತ್ತಿಯು ಇನ್ನಿಷ್ಟು ಬೆಳೆದು ಬಿಟ್ಟಿತು. ಆದರೂ ಕೊನೆಗೆ– "ಜಗತ್ತಿನ ಅನ್ಯಭಾಷೆಗಳಲ್ಲಿ ಏನಿದ್ದರೂ ಅದರಿಂದ ನಮ್ಮ ನಾಡಿಗೇನು ಪ್ರಯೋಜನ? ನಮ್ಮ ನಾಡ ನುಡಿಯನ್ನಷ್ಟೇ ಅರಿಯುವವರ ಸಲುವಾಗಿಯಾಗಿದರೂ ಬರೆಯುವುದರ ಅಗತ್ಯವು ಇದ್ದೇ ಇದೆ." ಹೀಗೆಂದು ಅನಿಸಿ ಕೊನೆಗೆ ಬರೆಯುವದನ್ನು ಒಮ್ಮೆ ನಿರ್ಧರಿಸಿ ಬಿಟ್ಟಿದ್ದನು. ಅದೇ ಈಗ ಕೃತಿಯಾಗಿ ಪರಿಣಮಿಸಿತು.

ಇಷ್ಟಾದ ಬಳಿಕ ಮಹಾಕಾಳಿಯು ಕರಾಳಹಸ್ತದ ಸ್ಪರ್ಶಕ್ಕೆ ಪುನಃ ಆರಂಭ! ಮುಂಚಿನ ಮಗುಗಳಿಗೆ ಹಿಂದಿನ ಜಡ್ಡಿನ ಪ್ರಭಾವ ದಿಂದ ಇದೀಗ ಅಳತೆಮೀರಿದ ಅತಿಸಾರ. ಸತಿಯು ತಾಯಿ ಮೆಲ್ಲಗೆ ಜಾರಿ ದಳು. ಗೆಳೆಯನೂ ಆತನ ಸತಿಯೂ ತಮ್ಮ ಸಲುವಾಗಿ ಗೊತ್ತು ಪಡಿ ಸಿಟ್ಟಿದ್ದ ಬೇರೆ ಮನೆಗೆ ಹೋದರು. ಈಗೀಗಿನ ಎಳೆ ಶಿಶುಗಳಿಗೆ "ಕೋಡಗ ಕೆಮ್ಮು." ಬಾಣಂತಿಯ ಎದೆಯ ಹಾಲು ಸಾಲದುದೊಂದು, ಹಾಕಿದ ಹಾಲು ದಕ್ಕದೆ ಇರುವುದಿನ್ನೊಂದು, ಮುಂಗುಡಿಯ ಮಕ್ಕಳ ಆರೈಕೆ ಯೊಂದು ಹಗಲೂ ಇರುಳೂ ಕೂಡಿಯೇ. ಇಷ್ಟೆಲ್ಲಾ ಹೊರೆ ಹೊರು ವವರು ಆರಾರು? ಕಂಕಾಲ ದೇಹದ ನಮ್ಮ ನಾಯಕನೊಬ್ಬ! ಎರಡು ಸಂಸಾರಗಳ ಭಾರವನ್ನು ಹೊತ್ತು ಕುಕ್ಕರಿಸಲಿರುವ ಚಿಕ್ಕ ವಯಸ್ಸಿನ

ಮಂಜುಳನೊಬ್ಬ !! ರೋಹಿಣಿಗೋ ಹಿಂದೊಂದು ಮುಂದೊಂದು ಎರಡು ಜಿಗಳೆಗಳು. ಅಲ್ಲದೆ ಅವೂ ರೋಗಿಷ್ಠ! ತಾನೋ ಹಸಿಮೈಯ್ಯ ಬಾಣಂತಿ. ಅವಳಿಗೂ ಇನ್ನೂ ಆರೈಕೆಯ ಅಗತ್ಯ ಆಗ ಇಷ್ಟು ಜೀವಗಳಲ್ಲಿ ಯಾರಿಗೂ ಹಗಲು ಸರಿಯಾಗಿ ಹೊಟ್ಟೆಗಿಲ್ಲ. ಇರುಳು ಸರಿಯಾಗಿ ನಿದ್ರೆಯಿಲ್ಲ. ಮೇಲಾಗಿ ದಾರಿದ್ರ್ಯದ ಬಕಾಸುರನಂತೂ ತೆರೆದ ಬಾಯಿ ತೆರಕೊಂಡೇ ನಿಂತಿದ್ದಾನೆ! ಹೀಗಾಗಿ ನಾಲ್ಕಾರು ತಿಂಗಳಲ್ಲಿ ಏಸೋ ಜನ್ಮದ ನರಕವನ್ನು ಒಮ್ಮೆಲೇ ಭೋಗಿಸಲು ನಿಂತ ಹಾಗಾಯಿತು.

ಹಾಸಲಿಕ್ಕೆ ಹರಕು ಕೌದಿ, ಹೊದೆಯಲಿಕ್ಕೂ ಅಂತಹದೇ ಇನ್ನೊಂದು ರಗಟೆ. ಇಂಥ ವೈಭವದಲ್ಲಿ ರೋಹಿಣಿಯು ನಾಲ್ಕು ಮಕ್ಕಳನ್ನು ಮಗ್ಗುಲಲ್ಲಿಟ್ಟುಕೊಂಡು ಮಲಗಿರುವಾಗ ಇತ್ತ ನಮ್ಮ ನಾಯಕನ ಶಯ್ಯಾಶೃಂಗಾರವನ್ನು ನೋಡಬೇಕು! ಏಸೋ ವರುಷಗಳ ಹಿಂದೆ ಗೆಳೆಯನೊಬ್ಬನ ಕಡೆಯಿಂದ ಇಸಿದುಕೊಂಡದ್ದೊಂದು ರಗ್ಗು. ಅದು ಈಗ ಹರಿದು ಚಿಂದಿಯಾಗಿದೆ. ಒಳಗೆ ಜೋಡಿಸಿಕೊಳ್ಳಲಿಕ್ಕೆ ಹೆಂಡತಿಯದೊಂದು ಸೀರೆ. ಮಗ್ಗುಲು ಹಾಸಿಗೆಗೂ ಇನ್ನೊಂದು ಅದೇ. ಮಂಜುಳನ ಮೈಮೇಲೆಯೂ ಹರಿಯಲಿಕ್ಕಾಗಿರುವಂತಹದೇ ಒಂದು ಕಂಬಳಿ. ಅದೂ ಹಿಂದೊಮ್ಮೆ ಗೆಳೆಯರಿಂದ ಇಸಗೊಂಡದ್ದೇ. (ಒಟ್ಟಾರೆ ಈಗ ಆರೇಳು ವರುಷಗಳಿಂದಲೂ ನಮ್ಮ ನಾಯಕನ ಹೊರೆಯೆಲ್ಲಾ ಗೆಳೆಯರ ಮೇಲೆಯೇ. ಆದರೆ ಅವರಿಗಾದರೂ ಹೀಗೇ ಏಸು ವರುಷ ಶಕ್ಯವಾಗಬೇಕು? ಅಂಥಾದ್ದರಲ್ಲಿ ಕೆಲವು ನಚ್ಚಿನ ಗೆಳೆಯರು ಕಾರ್ಯಾಂತರದಿಂದ ಈಗ ಪರದೇಶದಲ್ಲಿ. ಅವರದೇ ಅವರಿಗೀಗ ಹೆಚ್ಚಾಗಿದೆ. ಉಳಿದ ಕೆಲವರು ಗೆಳೆಯರೋ ಇವನಂತಹ ಸುದಾಮಸಂಘದ ಸದಸ್ಯರೇ.) ಇಷ್ಟೂ ಅಲ್ಲದೆ ಆ ಎಳೆಕೂಸುಗಳು ಇರುಳಲ್ಲಿ ಹೊಟ್ಟೆ ಹಸಿದು ಒಂದರ ಹಿಂದೊಂದು ಬೆಳತನಕ ಅಳುವ ಸ್ವರವನ್ನೇ ನಿಲ್ಲಿಸಲಾರವು. ಎರಡೂ ಏಕಕಾಲಕ್ಕೆ ಹಟ ಮಾಡಹತ್ತಿದರೆ ರೋಹಿಣಿಯಾದರೂ ಏನು ಮಾಡಬೇಕು?

ಇಂತಹದರಲ್ಲಿ ಮೊದಲಿನ ಮಗುವಿಗೆ ಒಂದು ವಿಧದ ಕಣ್ಣುಬೇನೆ ಬಂದು ಬಿಟ್ಟಿತು. ಏನು ಉಪಾಯಮಾಡಿದರೂ ಗುಣವಾಗಲೊಲ್ಲದು.

(ಅದು ಹಾಗೇ ಮುಂದೆ ಎರಡುವರುಷಗಳವರೆಗೆ ಉಳಿಯಿತು.) ಈಗೇನು
ಮಾಡುವುದು ? ಒಂದೇ ತೊಟ್ಟಿಲಲ್ಲಿ ಹೇಗಾದರೂ ಮಾಡಿ ಮೂರು
ಮಗುಗಳನ್ನು ಸೇರಿಸಬೇಕಾಗುತ್ತಿದ್ದಿತು. ಹೀಗೆಲ್ಲಾ ವಿಚಿತ್ರಗಳು
ನಡೆಯುತ್ತಲಿರುವಾಗಳೇ ಡಿಸೆಂಬರು ಸಮೀಪಿಸಿತು. ನಮ್ಮ ನಾಯಕ
ನಾದರೊ ಈಗ ಎರಡು ಮೂರು ವರುಷಗಳಿಂದಲೂ ಡಿಸೆಂಬರನ್ನು
ಬಹಳೇ ಕಾದುಕೊಂಡು ಕೂಡುತ್ತಿರುತ್ತಾನೆ. " ಈ ಡಿಸೆಂಬರದಲ್ಲಿ
ಯಾದರೂ ನನ್ನ ಅವಸ್ಥೆ ಬದಲಾದೀತು ! " ಎಂದು ವರುಷವರುಷವೂ
ಅವನು ಆಶೆಮಾಡುತ್ತಲೇ ಭಲಾ! ಅದು ಹಾಗೆ ಹಾಗೆಯೇ ಒಂದೊಂದು
ವರುಷದ ಮಟ್ಟಿಗೆ ಮಾತ್ರ ದಾರಿಯನ್ನು ಸುಲಭ ಮಾಡಿಕೊಟ್ಟು
ಹೋಗುತ್ತಲೇ ಭಲಾ!! ಒಂದು ಡಿಸೆಂಬರು ದಾಟಿತೋ, ಮತ್ತೆ
ಮುಂದಿನ ಡಿಸೆಂಬರದ ಮೇಲೆ ನಮ್ಮ ನಾಯಕನ ಕಣ್ಣು. ' ಒಂಟೆಯ
ತುಟಿ ಈಗ ಬಿದ್ದೀತು ಆಗ ಬಿದ್ದೀತು' ಎಂದು ಗೋಣು ಮೇಲಕ್ಕೆತ್ತರಿಸಿ
ಕೊಂಡು ಕುಳಿತ ನರಿಯಂತೆ ನಮ್ಮ ಜ್ಞಾನಭಿಕ್ಷುವಿನ ಸ್ಥಿತಿಯಾಗಿದ್ದಿತು
ತುಟಿಯು ತೀರ ಕೆಳಕ್ಕೆ ಜೋಲು ಬಿದ್ದಹಾಗೆಲ್ಲಾ ನರಿಯ ಭರವಸಕ್ಕೆ
ಹೆಚ್ಚಿನ ಉಕ್ಕು ಬಂದು, ಕೊನೆಗೆ ಆ ಒಂಟೆ ತನ್ನ ತುಟಿಯನ್ನು ಮತ್ತೆ
ಮೇಲಕ್ಕೆ ಎಳೆದುಕೊಂಡ ಕೂಡಲೆ ತಿರುಗಿ ಅದರ ಭರವಸವೆಲ್ಲಾ
ಮತ್ತೊಮ್ಮೆ ಜೋಲುಬೀಳುವುದರ ಕಡೆಗೆ ಮೋರೆ ಮಾಡುವುದು !
ಹೀಗೆ ನಡೆಯಿತು.

ಇಷ್ಟರಲ್ಲಿ ಪರದೇಶದಿಂದೊಬ್ಬ ಗೆಳೆಯನು ತನ್ನ ವ್ಯವಹಾರವನ್ನು
ತೀರಿಸಿಕೊಂಡು ತಿರುಗಿ ಬಂದನು. ಅವನು ಸಹಜವಾಗಿ ಒಂದು ಮಾತನ್ನು
ತೆಗೆದನು. ಅದೇನೆಂದರೆ- ನನಗೆ ಪರದೇಶದಲ್ಲಿ ಒಬ್ಬ ಒಳ್ಳೇ ಜ್ಯೋತಿ
ಷಿಯು ಸಿಕ್ಕಿದ್ದನು. ಅವನು ಒಂದು ವಿಚಿತ್ರತರಹದ ಪ್ರಾಚೀನ ಗ್ರಂಥ
ವನ್ನು ತನ್ನ ಕಣ್ಣಾರೆ ಕಂಡಿದ್ದಾನಂತೆ. ಅದರಲ್ಲಿ ಲೋಕದ ಸಮಸ್ತ
ಜನರ ಜಾತಕವನ್ನು ದಿವ್ಯದೃಷ್ಟಿಯಿಂದ ಒಬ್ಬ ಋಷಿಯು ಮೊದಲೇ
ಬರೆದಿಟ್ಟಿದ್ದಾನಂತೆ. ಅದರ ಹೆಸರು " **ಸತ್ಯಾಚಾರ್ಯ ಸಂಹಿತೆ**" ಅಂತೆ.
ಈ ಹೆಸರು ಕಿವಿಗೆ ಬಿದ್ದೊಡನೆ ನಮ್ಮ ನಾಯಕನ ಕುತೂಹಲವು
ಒಮ್ಮೆಲೆ ಹೊರಹೊಮ್ಮಿತು ! " ಹಾಂ! ಅದರ ವಿಷಯದಲ್ಲಿ ಸಮಸ್ತ

ಜಗತ್ತೇ ಬಾಯಿ ತೆರೆದುಕೊಂಡು ಕುಳಿತಿದೆ! ಅದು ಉಪಲಬ್ಧವಿದೆಯೆಂದು ಕೇಳಿ ನನಗೆ ಬಹಳ ಆತುರತೆ ಹೆಚ್ಚಿದೆ. ಹೇಳು, ಅದರ ಸಮಾಚಾರ ಇನ್ನೂ ಏನೇನು ಗೊತ್ತಾಗಿದೆಯೆಂಬುದನ್ನು ಹೇಳು!" ಎಂದು ಆ ಗೆಳೆಯನಿಗೆ ಕೇಳಲು— "ಗುಜರಾಥದ ಸಾಹಿತ್ಯಪರಿಷತ್ತಿನ ಮಾಸಪತ್ರಿಕೆಯಲ್ಲಿ ಅದರ ವಿಷಯಕ್ಕೆ ಒಂದು ವಿಸ್ತೃತ ಲೇಖನವೇ ಬಂದಿದೆಯಂತೆ. ಅದನ್ನು ನನ್ನ ಆ ಪರದೇಶಸ್ಥಮಿತ್ರನೇ ಬರೆದಿದ್ದಾನಂತೆ. ಬೇಕಾದರೆ ಅದನ್ನು ತರಿಸಿ ನೋಡಿಕೋ." ಎಂದು ಅವನು ಹೇಳಿದನು. ಕೂಡಲೆ ನಮ್ಮ ನಾಯಕನು ಆ ಪತ್ರಿಕೆಯ ಸಂಪಾದಕರಿಗೆ ಬರೆದು ಆ ಸಂಚಿಕೆಯನ್ನು ತರಿಸಿಕೊಂಡನು. ಆಹಾ! ಹಿಂದಿನ ವರುಷ ಇದೇ ತಾರೀಖಿಗೆ ಕೈಗೆ ಬಿದ್ದಿದ್ದ ಆ ಭೃಗುಸಂಹಿತೆಗಿಂತ ಇದರ ಮಹಾತ್ಮ್ಯೆ ಇನ್ನೂ ಎಷ್ಟೋ ಸಾವಿರಪಟ್ಟು ಹೆಚ್ಚಿನದು!

ಸತ್ಯಾಚಾರ್ಯಸಂಹಿತೆಯು ಒಬ್ಬ ಜೀವಂತ ಪಂಡಿತನ ಇಂದ್ರಜಾಲ! ನೀವು ಯಾರ ಜನ್ಮಟಿಪ್ಪಣಿಯನ್ನು ಕೊಟ್ಟರೂ ಆ ಪಂಡಿತನು ಅದರ ಜಾತಕವನ್ನು ತಾನೇ ಅಗಳಸಗಳ ಸಂಸ್ಕೃತ ಶ್ಲೋಕಗಳಲ್ಲಿ ಬರೆದು "ಪ್ರಾಚೀನ ಗ್ರಂಥದಿಂದ ಇದನ್ನು ಪ್ರತಿಮಾಡಿಕೊಟ್ಟಿದ್ದೇನೆ" ಎಂದು ಹೇಳಿ ದುಡ್ಡು ಸುಲಿಯುವವನು! ಭಲಾ! ಜಗತ್ತಿಗೆ ಜಾಲವನ್ನೊಡ್ಡುವುದೆಂದರೆ ಅದು ಏನು ಸಾಮಾನ್ಯವಾದ ಕೈಚಳಕವಲ್ಲ! ಆ ಮಹಾಗ್ರಂಥದೊಳಗಿಂದ ಮಹಾತ್ಮಾಗಾಂಧಿಯವರ ಜಾತಕವೆಂದು ಮೇಲ್ಕಾಣಿಸಿದ ಪತ್ರಿಕೆಯೊಳಗಿಂದ ಒಂದಿಷ್ಟು ನಿಮಗೆ ರುಚಿಯನ್ನು ತೋರಿಸದೆ ಹೇಗೆ ಬಿಡುವುದು? ಬಹಳವೇನೂ ಹೇಳುವುದಿಲ್ಲ. "ಶ್ಲೋಕಾರ್ಧೇನ ಪ್ರವಕ್ಷ್ಯಾಮಿ" ಎಂದು ನಾನೂ ಇಲ್ಲಿ ಹಳೆಯ ಮಾತಿನಲ್ಲೇ ಹೇಳಿಬಿಡುವೆನು—

"**ಸ್ವದೇಶೀ ವಸ್ತ್ರಧಾರೀಚ ಧಾರಯೇದನ್ಯಾನಪಿ**" ಇದು ನೋಡಿರಿ ಆ ಸತ್ಯಸಂಹಿತೆಯ ದಿವ್ಯವಾಣಿ! ಎಷ್ಟೋ ಸಾವಿರ ವರುಷಗಳ ಹಿಂದಿನ ಋಷಿಗಳ ಕಾಲದಲ್ಲಿಯೂ "ಸ್ವದೇಶೀ" "ವಿದೇಶೀ" ಎಂಬ ಕಲ್ಪನೆಗಳು ಇದ್ದುವಲ್ಲವೆ?! ಅದರಲ್ಲಿಯೂ "ಸ್ವದೇಶೀವಸ್ತ್ರ"ಗಳ ವಿಷಯ. ಆಹಾ! ನೂರೇ ವರುಷಗಳ ಹಿಂದೆ ಹಿಂದುಸ್ಥಾನವೇ

ಪರದೇಶಕ್ಕೆ ವಸ್ತ್ರಗಳನ್ನು ಪೂರೈಸುತ್ತಿದ್ದಿತಾದರೂ "ಸ್ವದೇಶೀ" ವಿದೇಶಿಗಳ ಶಬ್ದ ಸಾಮ್ರಾಜ್ಯವನ್ನು ಋಷಿಗಳ ಬಾಯಿಯಲ್ಲಿ ಕೂಡ ತುರುಕಿಬಿಟ್ಟಿರುವ ಈ ಪಂಡಿತರ ಪಟುತ್ವವೆಂಥಾದ್ದು! ಆಹಾ! ಧನ್ಯಧನ್ಯ! ಭಾರತಾಂಬೆಯೇ, ನಿನ್ನ ಉದರದಲ್ಲಿ ಇಂಥಾ ಅದ್ಭುತ ರತ್ನಗಳು ಉದಿಸಿದ್ದರಿಂದಲೇ ನಿನ್ನ ಗತಿಯು ಇಷ್ಟೊಂದು ಮೇಲಕ್ಕೆ ಬಂದಿದೆ!

ಆಯಿತು- ನಮ್ಮ ನಾಯಕನು ಅದನ್ನೂ ಹಿಂದಿನ ಆ ಭೃಗುಸಂಹಿತೆಯ ತಿಪ್ಪೆಗೇ ಸೇರಿಸಿ ಒಂದು ಬಗೆಯಿಂದ ತೃಪ್ತನಾದನು. ಆರು ತಿಂಗಳಿಂದ ಕುಸಿದ ಹೊಟ್ಟೆಗೆ ಇಷ್ಟು ತುಸು ಅನ್ನವು ಎಲ್ಲಿ ಏನಾಗಬೇಕು? ಎಲ್ಲಾ ಕಥೆ ಇನ್ನೂ ಮುಂದೆಯೆ ಇದೆ.

ಇಂದು ಡಿಸೆಂಬರ್ ಇಪ್ಪತ್ತೈದನೇ ತಾರೀಖು. ಇಂದಿನ ನಮ್ಮ ನಾಯಕನ ಆರ್ತಸ್ವರವು ಹಿಂದೆ ಮೂವತ್ತು ವರುಷಗಳಲ್ಲೆಂದೂ ಹೊರಬಿದ್ದಿಲ್ಲ! ಒಟ್ಟಾರೆ ಈ ಆರು ತಿಂಗಳಲ್ಲಿ ಭೋಗಿಸಿದಷ್ಟು ನಿಬಿಡ ಕಷ್ಟವನ್ನು ಆತನು ಹಿಂದೆ ತನ್ನ ಜನ್ಮದಲ್ಲೇ ಎಂದೂ ಅನುಭವಿಸಿಲ್ಲ. ಅದರಲ್ಲಿಯೂ ಈ ಆರು ತಿಂಗಳಲ್ಲಿ ಇಂದಿನದು ಶೋಕಸಾಮ್ರಾಜ್ಯದ ಶಿಖರ!

ಆರು ತಿಂಗಳಿಂದ ಒಂದೇ ಸಮನೆ ಹಗಲಿರುಳು ಮಗುಗಳ ಆರೈಕೆ ಮಾಡಿಮಾಡಿ ಮಂಜುಳನಿಗೆ ಇಂದು ತೀರಾ ತಲೆಚಿಟ್ಟು ಹಿಡಿದು ಹೋಗಿದೆ. ಆದುದರಿಂದ ಅವನು ನಿರ್ವಾಹವಿಲ್ಲದೆ ವಿಶ್ರಾಂತಿಯ ಸಲುವಾಗಿ ಇಂದಿನಿರುಳು ಬೇರೊಬ್ಬ ಗೆಳೆಯನ ಮನೆಯಲ್ಲಿ ಮಲಗಿಕೊಳ್ಳುವುದಕ್ಕೆ ಹೋದನು. ಇತ್ತ ಜ್ಞಾನಭಿಕ್ಷುವಿಗೆ ಹೊಸದಾಗಿ ಹಲ್ಲು ಬೇನೆಯೊಂದು. ಅತ್ತ ಹಿರಿಹುಡುಗನಿಗೆ ಅವಿಚ್ಛಿನ್ನ ನೇತ್ರರೋಗವೊಂದು ಇದ್ದೇ ಇದೆ. ಇರುಳಲ್ಲಿ ನಮ್ಮ ನಾಯಕನು ಇತ್ತ ಆ ಹುಡುಗನ ತೊಟ್ಟಿಲನ್ನು ತೂಗಬೇಕು; ಅತ್ತ ಎಳೆಮಗುಗಳು ಅಳಹತ್ತಿದಾಗಲೊಮ್ಮೆ ರೋಹಿಣಿಯನ್ನು ಎಚ್ಚರಿಸಿ ಅವುಗಳ ವ್ಯವಸ್ಥೆಮಾಡಿಸಬೇಕು. ಅಲ್ಲದೆ ತನಗೆ ಹಲ್ಲುನೋವಿನಿಂದ ಜೀವದಲ್ಲಿ ಸೊಗಸಿಲ್ಲ. ಇಷ್ಟೆಲ್ಲದರ ಮೇಲೆ ನಿದ್ರೆಯಿಲ್ಲದಕ್ಕೆ ಹೊಟ್ಟೆಯಲ್ಲೊಂದು ಬಗೆಯ ದೈಹಿಕ ಸಂಕಟ. ರೋಹಿಣಿಗೂ ಹಗಲು ಹೊತ್ತಿನಲ್ಲೆಲ್ಲಾ ಮೈಮೇಲೆ ನೀಗಲಾರದಷ್ಟು ಕೆಲಸಗಳಿರುತ್ತಿರುವದರಿಂದ ಇರುಳು ಯಾವಾಗ ನೆಲ ಸಿಕ್ಕೀತೋ

ಎಂದೆನ್ನುವಂತಾಗುತ್ತಿದ್ದಿತು. ಅಂತಹದರಲ್ಲಿ ಇಡೀ ಇರುಳಲ್ಲಿ ಕೂಸುಗಳು ಒಂದಾದ ಮೇಲೊಂದು ಅಪಳನ್ನು ಪೀಡಿಸುವವು. ಒಂದರದನಿಗೊಂದು ಎಚ್ಚತ್ತು ಎರಡೂ ಬೆಳತನಕ ಅಪಳ ಹರಣವನ್ನೆ ಹೀರಿಬಿಡುವವು! ಆಗ ಜ್ಞಾನಭಿಕ್ಷುವಿನ ತಾಳ್ಮೆಯ ಸೀಮೆಯು ಮುಗಿಯಿತು. ದೇವ ದೇವನನ್ನು ನೆನೆನೆನೆದು (ಧ್ವನಿ ತೆಗೆಯದೆ) ಒಂದೇ ಸವನೆ ಆಕ್ರೋಶ ಮಾಡಹತ್ತಿದನು!

"ತಂದೇ, ಹೀಗೆ ಕೈಕಾಲು ಕಟ್ಟಿ ಹೊಡೆತ ಕೊಟ್ಟರೆ ನಾನು ಹೇಗೆ ತಾಳೇನು! ನನಗೆ ಏನು ಮಾಡೆನ್ನುತ್ತೀ? ನಿನ್ನ ಇಚ್ಛೆಯೇ ತಿಳಿಯದು! ಮೇಲೆ ಏಟೋ, ಅಪರಿಮಿತ!!" ಹೀಗೆ ಅಂದಂದು ಎದೆ ಎದೆ, ಹಣೆಹಣೆ, ಬಾಯಿಬಾಯಿ ಘಟ್ಟಿಸಿಕೊಳ್ಳುವನು!!!

ಆಗ ಶಾಕುಂತಳದಲ್ಲಿ ಅನ್ಯಮನಸ್ಕನಾಗಿ ಜೋತುಗೊಂಡು ಕುಳಿತ ದುಷ್ಯಂತನನ್ನು ರೊಚ್ಚಿಗೆಬ್ಬಿಸಿ ಹುರಿದುಂಬಿಸುವುದಕ್ಕಾಗಿ ಇಂದ್ರ ಸಾರಥಿಯಾದ ಮಾತಲಿಯು ಅಂತರ್ಧಾನನಾಗಿದ್ದುಕೊಂಡು ರಾಜನ ನರ್ಮಸಖನ ಕುತ್ತಿಗೆ ಹಿಚಕುತ್ತಿದ್ದ ಕಥೆಯು ನೆನಪಿಗೆ ಬಂತು. ಆಗ ನಮ್ಮ ನಾಯಕನು ಹೀಗೆನ್ನುತ್ತಾನೆ: "ತಂದೇ! ನನ್ನನ್ನು ಬಡಿದು ಬಡಿದು ಎತ್ತ ಓಡಿಸ[illegible]ಸುತ್ತೀ? ಮುಂದೆ ಬೇಲಿ–ಹಿಂದೆ ಬೇಲಿ, ಎಡಕ್ಕೆ ಬೇಲಿ–ಬಲಕ್ಕೆ ಬೇಲಿ, ಎಲ್ಲ ಕಡೆಗೆ ದಾರಿಗೆ ಮುಳ್ಳಿಟ್ಟು ಮೇಲೆ ನನ್ನ ಕಡಿವಾಣವನ್ನು ಒಸಡೆ ಹರಿಯುವಂತೆ ಜಗ್ಗಾಡಿದರೆ ನಾನೆತ್ತ ಹೆಜ್ಜೆ ಚೆಲ್ಲಲಿ? ಇಲ್ಲಿಯೂ ನನಗೆ ಯಾವದೋ ಒಂದು ಗೂಢವಾದ ಫೋರ್ಥ್ ಡಾಯ್‌ಮೆನ್ಶನ್ ಹುಡುಕಿಕೊಳ್ಳಹಚ್ಚಿರುವಿಯೇನು? ನನಗೆ ಯಾವ ಮಗ್ಗಲಿಗೂ ಹಾರುವುದಕ್ಕೆ ತಿಳಿಯದಲ್ಲಾ! ತಂದೇ, ದಾರಿಯನ್ನು ತೋರಿಸದೆ ನನ್ನ ಮೇಲೆ ಚಬಕವನ್ನು ಸೆಳೆಯಬೇಡ!" ಎಂದು ಗೋಳಿಡುವನು.

ಆಗ ಆತನಿಗೆ ತನ್ನ ಜೀವನವು ಕೇವಲ ಅದೊಂದು ಮಹಾ ಕುಂಭೀಪಾಕನರಕವೆಂದೆನಿಸಹತ್ತಿತು. ಏನು ಜನ್ಮಗಳ ಪೂರ್ವಕರ್ಮ ಈಗ ಒಟ್ಟೈಸಿ ಬಂದು ಹೀಗೆ ಪೀಡಿಸುತ್ತಿದೆಯೋ? ಎಂದುಕೊಂಡನು. ಪೂರ್ವಕರ್ಮವಾದರೂ ಸರಿ– ಪಶ್ಚಿಮಕರ್ಮವಾದರೂ ಸರಿ– ಕಷ್ಟದ

ಕಾರಣವು ಏನೇ ಇರಬಹುದಾದರೂ ಈಗ ಭೋಗಿಸಿ ತೀರಿಸುವುದೊಂದು ಬೇಕೋ ಬೇಡವೋ ? ತಾನೀ ಪರಿ ನರಕಕುಂಡದಲ್ಲಿ ಮುಳುಮುಳುಗಿ ಗೋಳಿಡುತ್ತಿರುವುದನ್ನು ಸೂಕ್ಷ್ಮಲೋಕದ ಜೀವಿಗಳು ನೋಡಿ, ಗೇಲಿ ಮಾಡಿ ನಗುತ್ತಿರಬಹುದಲ್ಲಾ ! ಎಂದುಕೊಳ್ಳುವನು. " ನಗಿರಿ ನಗಿರಿ ! ಒಬ್ಬ ದುರ್ದೈವಿಯು ತನ್ನ ಬಹು ಪೂರ್ವಜನ್ಮಗಳ ಪಾಪರಾಶಿಯಲ್ಲಿ ಸುಟ್ಟು ಸುಣ್ಣವಾಗುತ್ತಿರುವ ಗೋಳನ್ನು ಕಂಡು ನಗಿರಿ ನಗಿರಿ !! " ಎಂದು ಒಳಗೊಳಗೇ ಒಟಗುಟ್ಟಿ ಮತ್ತೆ ಮತ್ತೆ ಬಾಯಿಬಾಯಿ ಘಟ್ಟಿಸಿ ಕೊಳ್ಳುವನು ! ಎದೆಎದೆ ಗುದ್ದಿಕೊಳ್ಳುವನು !! ಹಣೆಹಣೆ ಒಡಕೊಳ್ಳುವನು !!! ಕಣ್ಣೀರಿನಿಂದ ಮೋರೆಯೆಲ್ಲ ತೊಯ್ದು ಬಿಟ್ಟಿರುವದು.

ಇಂಥ ಕಥೆಯಾಗಿ ಹೊತ್ತು ಹೊರಟಿತು. ಆಗ ಜ್ಞಾನಭಿಕ್ಷುವು ಏನೂ ದಾರಿತೋಚದೆ ದಂಗುವರಿದು ಹೊರಗೆ ಎಳ್ಳಷ್ಟೂ ದೃಷ್ಟಿಯಿಲ್ಲದೆ ತಲೆಯೊಳಗೇ ಏನೇನೋ ಅಂದುಕೊಳ್ಳುತ್ತ ಸುಮ್ಮನೆ ಮಂಕುಹಿಡಿದು ಕುಳಿತಿದ್ದಾನೆ.

ಹೀಗೆ ಏನೂ ತಿಳಿಯದಂತಾದಾಗ ಬಾಯ್ಬಲ್ಲಿನ ಕಾಲದ ಭಗವದ್ಭಕ್ತರು ಗೋಣಿಯ ತರಟನ್ನು ಉಟ್ಟುಕೊಂಡು, ಉಪವಾಸ ಬಿದ್ದು ಹುಡಿಯಲ್ಲಿ ಹೊರಳಾಡುತ್ತಿದ್ದರೆಂದು ನಾವು ಕಥೆಯಲ್ಲೇ ಕೇಳುತ್ತಿದ್ದೆವು. ಆದರೆ ನಮ್ಮ ನಾಯಕನ ಜೀವನದಲ್ಲಿ ಇಂಥ ದಿಕ್ಕುಗಾಣದ ಪ್ರಸಂಗಗಳು ಹೇರಳವಾಗಿ ಬರುತ್ತಿರುವದರಿಂದ ಆ ಕಥೆಗಳಿವನಲ್ಲಿ ನಮಗೆ ಕಣ್ಣಾರೆ ಕಾಣಲಿಕ್ಕೆ ಸಿಗುತ್ತಿವೆ. ಇಂತಹ ದಾರಿದೋರದ ಸಂಕಟಗಳು ಬಂದಾಗಲೆಲ್ಲಾ ಆತನು ಒಂದು ದಿನ ಉಪವಾಸವಿದ್ದು ದೇವದೇವನನ್ನು ಪ್ರಾರ್ಥಿಸುವನು. ಅದರಂತೆ ಇಂದು ಆತನ ಉಪವಾಸ. ಇಡೀ ದಿನವೆಲ್ಲಾ ಒಳಗೊಳಗೆ ಅನುತಾಪಪೂರ್ಣಪ್ರಾರ್ಥನೆ. ಇಂದಿನಿರುಳು ತನ್ನ ಸತಿಗೆ ಹಿಂದಿನ ರಾತ್ರಿಯ ಕರುಣಕಥೆಯನ್ನೆಲ್ಲಾ ಬಣ್ಣಿಸಿ ಹೇಳಿ— " ನನಗಂತೂ ಈಗ ಏನೂ ದಿಕ್ಕು ತೋಚದು. ನಾನು ನಾಳಿಗೆ ಮಾವಿನ ಬನಕ್ಕೆ ಪಯಣ ಬೆಳೆಸುವೆನು. ಈಗ ಹೇಗೂ ಡಿಸೆಂಬರ್ ತಿಂಗಳ ಕೊನೆಯವಾರ. ಅಂತೂ ಬೇಗನೆಯೇ ಮುಂದಿನ ಹಾದಿ ಹೇಗಾದರೂ ತೆರೆದೇ ತೆರೆಯುವದು. ಅದು ವರೆಗೆ ನನ್ನನ್ನು ತಡೆಯಬೇಡ. ನೀನು ಮತ್ತು ಮಂಜುಳ

ಇಬ್ಬರೂ ಕೂಡಿ ಹೇಗಾದರೂ ಎಲ್ಲಾ ನೋಡಿಕೊಳ್ಳಿರಿ. ನನಗೀಗ ಏಕಾಂತದ ವಿಶ್ರಾಂತಿ ಸಿಕ್ಕ ಹೊರತು ಗತಿಯಿಲ್ಲ'' ಎಂದು ತಿಳಿಸಿದನು. ಅದಕ್ಕೆ ಅವಳು ಆತನ ಕಾರುಣ್ಯಾಜನಕ ಸ್ಥಿತಿಗೆ ಕಣ್ಣೀರು ಸುರಿಸಿ ಅಡವಿಗೆ ಹೋಗಲಿಕ್ಕೆ ಸಮ್ಮತಿಯನ್ನಿತ್ತಳು. ಮರುದಿನವೇ ಪಲಾಯನ!

## [೨೨]

ಪ್ರತಿವರ್ಷವೂ ಡಿಸೆಂಬರ್ ತಿಂಗಳ ಸುಮಾರಿಗೆ ಅಧ್ಯಾತ್ಮವಿದ್ಯೆಯ ಯಾವದಾದರೊಂದು ಶಾಖೆಗೆ ಸಂಬಂಧಿಸಿದ ಪ್ರೌಢ-ಪ್ರಾಮಾಣಿಕ ಗ್ರಂಥವೊಂದು ನಮ್ಮ ನಾಯಕನ ಕೈಗೆ ಬಂದು, ಅದರ ವಾಚನದಿಂದ ಅಂತರಂಗದಲ್ಲೊಂದು ಅಗಾಧ ವಿಸ್ಮಯವುಂಟಾಗಿ, ಬುದ್ಧಿಯಲ್ಲೊಂದು ಬಗೆಯ ಪ್ರಗಾಢ ಗಂಭೀರತೆಯುದಿಸಿ ಮುಂದಿನ ಮಾರ್ಗವನ್ನು ನಿಚ್ಚಳ ಗೊಳಿಸುವಂತಹದೊಂದು ಅಂತರ್ನಿರ್ಧಾರಣವು ಹೊರಹೊಮ್ಮುತ್ತಿರುವುದು ಆತನ ಅನುಭವದ ವಿಷಯವು.

ವರ್ಷಾಂತ್ಯದ ಹೊರತು ಇನ್ನುಳಿದ ತಿಂಗಳುಗಳಲ್ಲಿ ಅಂಥವೇ ಗ್ರಂಥಗಳು ಕೈಗೆ ಸಿಕ್ಕರೆ, ಅವುಗಳ ವಾಚನದಿಂದ ಆತನಿಗೆ ಆನಂದವಾಗುತ್ತಿದ್ದುದೇನೋ ನಿಜವಾದರೂ ಅಂತರಂಗದಲ್ಲಿ ಅಗಾಧ ಪರಿಸ್ಫುರಣವೇನೂ ಉಂಟಾಗುತ್ತಿರಲಿಲ್ಲ. ವರ್ಷಾಂತ್ಯದಲ್ಲೇ ಅಂಥ ವಿಸ್ಮಯಕರ ಸಂಗತಿಯ ಆವಿರ್ಭಾವ.

ಇದೀಗ ಕೆಲವೇ ದಿನಗಳ ಹಿಂದೆ ಒಂದು ವೃತ್ತಪತ್ರದ ವಾಙ್ಮಯ ವಿಭಾಗದಲ್ಲಿ- ಒಬ್ಬ ಆಧುನಿಕ ಡಾಕ್ಟರರು ಅಧ್ಯಾತ್ಮವಿದ್ಯೆಯ ವಿಷಯದಲ್ಲಿ ಮಹಾರಾಷ್ಟ್ರದ ಪ್ರಾಚೀನ ಸಾಧುಸಂತರ ಅನುಭವಗಳನ್ನೆಲ್ಲ ಸುಸಂಬದ್ಧವಾಗಿ ಕ್ರಮಗೊಳಿಸಿ, ಅವುಗಳನ್ನು ಸ್ವಾನುಭವದ ಒರೆಗಲ್ಲಿಗೆ ತಿಕ್ಕಿ ದೃಢೀಕರಿಸಿ ಒಂದು ಪುಸ್ತಕವನ್ನು ಬರೆದಿದ್ದಾರೆಂದು ಹೇಳಿತ್ತು. ಅದನ್ನು ಎಂದಾದರೊಮ್ಮೆ ನೋಡಿದರೆ ನೋಡಬಹುದೆಂದು ಆಗ ನಮ್ಮ ನಾಯಕನು ಅಂದುಕೊಂಡು ಅಷ್ಟಕ್ಕೇ ಬಿಟ್ಟಿದ್ದನು. ಆದರೆ ಈಗ ಹೊಸ ವರುಷದ ಸಂಧಿಕಾಲವಾದುದರಿಂದ ಅದನ್ನು ತರಿಸಿಯೇ ಬಿಡೋಣವೆಂದು

ಇಂದು ಪುಸ್ತಕ ವ್ಯಾಪಾರಿಗಳ ಕಡೆಗೆ ಪತ್ರ ಬರೆಸೇ ಅತ್ತ ತನ್ನ ಮಾವಿನ ತೋಪಿಗೆ ಪಯಣ ಬೆಳೆಸಿದನು. ಇಂದು ಡಿಸೆಂಬರ್ ೨೭ನೇ ತಾರೀಖು.

ಹಿಂದಿನ ಸಲದ ಡಿಸೆಂಬರದಲ್ಲಿ ಕೊನೆಯ ತಾರೀಖಿಗೆ ಅಂತರ್ನಿ ರ್ದೇಶ ಬಂದದ್ದರಿಂದ ಈ ಸಾರಿ ಅದಕ್ಕಿಂತಲೂ ಬಂದಿಷ್ಟು ಮುಂದಕ್ಕೆ ಬಿದ್ದರೂ ಬೀಳಬಹುದೆಂದು ಆತನು ಭಾವಿಸಿರುವನು.

ಹಳ್ಳದ ದಡದಲ್ಲಿ ಮಿಾನಿನ ಅನುಸಂಧಾನದಲ್ಲಿ ಬಕಪಕ್ಷಿಯು ಹೇಗೆ ಅನ್ಯವಿಷಯಗಳ ಕಡೆಗೆ ಲಕ್ಷ್ಯವಿಲ್ಲದೆ ಅರೆಮುಚ್ಚಿದ ಕಣ್ಣುಗಳಿಂದ ಒಂದೇ ಕಡೆಗೆ ಚಿತ್ತವನ್ನೂ, ದೃಷ್ಟಿಯನ್ನೂ ಕೀಲಿಸಿಕೊಂಡು ಕುಳಿತು ಕೊಂಡಿರುವುದೋ, ಕೇವಲ ಹಾಗೆಯೇ ನಮ್ಮ ನಾಯಕನ ಈ ಕಾಲದ ಸ್ಥಿತಿಯು. ಆತನ ಆಹಾರ ವಿಹಾರ ಆಮೋದ ಪ್ರಮೋದಗಳೆಲ್ಲಾ ಹೊರಗೆ ಏನೋ ಒಂದು ಕುರುಡು ಯಂತ್ರದಂತೆ ಅಲಕ್ಷಿತವಾಗಿ ಸಾಗುತ್ತಿರು ವವು. ಚಿತ್ತವೆಲ್ಲಾ ಆ ಅಂತರ್ನಿರ್ದೇಶ ಬರಲಿರುವ ಕ್ಷಣದ ಕಡೆಗೆ. ಬಾಯಲ್ಲಿ "ಓಂ ಭಗವಾನ್, ಓಂ ಭಗವಾನ್" ಎಂಬ ಶಬ್ದವು ತೆರಪಿ ಲ್ಲದೆ ಕುಣಿಯುತ್ತಿದೆ. ಚಿತ್ತದಲ್ಲಿ ಅನಂತ ಆಕಾಶವೂ, ಶಾಶ್ವತ ಮಹಾ ಕಾಲವೂ ವಿಶಾಲ ಪೃಥಿವಿಯೂ ಸತತವಾಗಿ ಕಣ್ಣು ಮುಂದೆ ಕಟ್ಟಿದಂತೆ ಕಾಣುತ್ತಿವೆ. ಗೀತೆಯ ಪರಿಭಾಷೆಯಲ್ಲಿ ಹೇಳುವುದಾದರೆ "ಬಾಯಲ್ಲಿ ಓಂ ಎಂಬ ಏಕಾಕ್ಷರಂ ಬ್ರಹ್ಮದ ಆವರ್ತನೆ, ಅಂತರಂಗದಲ್ಲಿ ಈಶ ಚಿಂತನ" (ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್.) ಎಂದು ಬಣ್ಣಿಸಬಹುದು

ಡಿಸೆಂಬರು ಮುಗಿಯಿತು. ಜನವರಿ ಮೊದಲನೆಯ ತಾರೀಖೂ ಸಂದಿತು. ಇನ್ನೂ ಏನೂ ಇಲ್ಲ. ಎರಡನೆಯ ತಾರೀಖಿಗೆ ಆತನ ಮಡದಿ ಮಕ್ಕಳೆಲ್ಲರು ಮತ್ತು ಜೀವದೊಡನಾಡಿಯಾದ ಮಂಜುಳನು ಎಲ್ಲರೂ ಕೂಡಿ ಭೆಟ್ಟಿಗೆಂದು ಬಂದರು. ಬರುವಾಗ ಅಂದೇ ಹೊಸದಾಗಿ ಪೋಸ್ಟಿ ನಿಂದ ಬಂದ ಆ ಹೊಸ ಪುಸ್ತಕವನ್ನು ಸಂಗಡ ತಂದಿದ್ದರು. ಅಂದು ಸಂಜೆಯ ವೇಳೆಗೆ ಅವರೆಲ್ಲರೂ ತಿರುಗಿ ಮನೆಗೆ ಹೋದರು. ಇಲ್ಲಿ ಇನ್ನೊಂದು ಮಾತೇನೆಂದರೆ ಬಹಳ ತಿಂಗಳುಗಳಿಂದ ಕಣ್ಣು ಬೇನೆ ಬಂದಿದ್ದ ಹಿರಿ ಮಗುವಿಗೆ ಡಾಕ್ಟರರು ಏನೋ ಒಂದು ಹೊಟ್ಟೆಯೊಳಗೆ ತೆಗೆದು

ಕೊಳ್ಳುವ ತೀರ ಕಹಿಯಾದ ಔಷಧವನ್ನು ಕೊಟ್ಟು ಬಹಳೇ ಬಿಕ್ಕಟ್ಟಿನ ಪಥ್ಯವನ್ನು ಮಾಡಿಸ ಹೇಳಿದ್ದರಿಂದಲೂ, ಅಷ್ಟೊತ್ತಿಗೆ ಮಂಜುಳನ ಹೊಲದಲ್ಲಿ ಸುಗ್ಗಿಯ ಸಲುವಾಗಿ ಮನೆಯವರೆಲ್ಲರು ಅಡವಿಯನ್ನು ಸೇರಬೇಬೇಕಾಗಿ ಬಂದುದರಿಂದಲೂ, ತಾಯಿತಂದೆಗಳು ಬಳಿಯಲ್ಲಿಷ್ಟರೆ ಮಗುವಿನ ಔಷಧ ಪಥ್ಯಗಳು ಅಶಕ್ಯವೆಂತಲೂ ಆತನು ಆ ಮಗುವನ್ನು ಕಟ್ಟಿಕೊಂಡು ತನ್ನ ಹೊಲದಲ್ಲಿಯೇ ನಿಂತುಬಿಟ್ಟಿದ್ದನು. ಅಂತೂ ಹೀಗೆ ಮೂವರು ಮೂರು ಸಿಟ್ಟಿಗೆ ಚೆದರಿದಂತಾಗಿದ್ದಿತು. ರೋಹಿಣಿಯು ಎಳೆ ಮಗುಗಳೊಡನೆ ಒಬ್ಬಳೇ ಅತ್ತ ಮನೆಯಲ್ಲಿ, ಮಂಜುಳನೋ ಬೇನೆಯ ಮಗುವನ್ನು ಕಟ್ಟಿಕೊಂಡು ಮತ್ತೊಂದು ಕಡೆಗೆ ಅಡವಿಯಲ್ಲಿ, ಇತ್ತ ಜ್ಞಾನಭಿಕ್ಷುವೋ ಒಂಟಿಗನಾಗಿ ಈ ಮಾವಿನ ತೋಪಿನಲ್ಲಿ. ಮೂವರಿಗೂ ಈ ಕಾಲದಲ್ಲಿ ಹರಿಶ್ಚಂದ್ರನ ಹಗರಣದ ಕಥೆಯು ಕಣ್ಣಮುಂದೆ ಕಟ್ಟಿಬಿಟ್ಟಂತಾಗಿದ್ದಿತು. ಬಿಸಿಲಬೇಗೆಯಲ್ಲಿ ಅರಣ್ಯದೊಳಗೆ ಅತ್ತ ಹರಿಶ್ಚಂದ್ರನೊಂದು ಕಡೆ, ರೋಹಿತನು ಇನ್ನೊಂದು ಕಡೆ, ತಾರಾಮತಿಯು ಮತ್ತೊಂದು ಕಡೆ ಆಗಿದ್ದರಲ್ಲಾ, ಕೇವಲ ಈಗಿನ ಇವರ ಅವಸ್ಥೆಯು ಅಂತಹದೇ ಎಂಬುದು ಆವರದವರಿಗೆ ಅನಿಸುತ್ತಿದ್ದಿತು. ಆದರೆ ಮಾಡುವುದೇನು ? ಉಪಾಯವೇ ಇಲ್ಲ. ಸುಲಭವಾಗಿ ನೀಗಿಸಿಕೊಳ್ಳಲಿಕ್ಕೆ ಶಕ್ಯವಿರುತ್ತಿದ್ದರೆ ಅದಕ್ಕೆ ಕಷ್ಟವೆಂಬ ಹೆಸರೇತಕ್ಕೆ ? ಕಷ್ಟವೆಂದರೆ ಅದೊಂದು ಬಿಡಿಸಿಕೊಳ್ಳಲಾಗದ ಬಲೆ. ಅದೂ ದೇವರಾಯನ ಚಾತುರ್ಯದ ಬಲೆ. ಅಂದಬಳಿಕ ಅದರಲ್ಲಿ ಬಿದ್ದ ಪ್ರಾಣಿ ಏಲಿವಿಲಿ ಒದ್ದಾಡಿಯೇ ತೀರಬೇಕಲ್ಲದೆ ತಪ್ಪಿಸಿಕೊಂಡು ಜಾರುವುದಕ್ಕಾದರೆ ಆತ ಬಲೆಯನ್ನೊಡ್ಡಿದುದರ ಪ್ರಯೋಜನವೇನಾದಂತಾಯಿತು ?!

ಹೀಗೊಂದು ಬಗೆಯಿಂದ ಹೊರಗೆಲ್ಲಾ ದಿಗ್ಭ್ರಮೆಯ ಮೋಡ ಮುಸುಕಿಕೊಂಡು ಬಿಟ್ಟಿದೆ; ಒಳಗೆಲ್ಲಾ ಅನಿರ್ವಚನೀಯವಾದ ಅಗ್ನಿಯೊಂದು ಹೊತ್ತುತ್ತಲೇ ಇದೆ. ಇದಕ್ಕೆ ಯಾವ ಯಜ್ಞವೆಂದು ಕರೆಯಬೇಕೋ ನೀವೇ ಆಲೋಚಿಸಿರಿ.

ಎಲ್ಲರೂ ಅತ್ತ ತಮ್ಮ ತಮ್ಮ ಬೀಡಿಗೆ ಹೋದರು. ಇತ್ತ ಇರುಳಲ್ಲಿ ಜ್ಞಾನಭಿಕ್ಷುವು ಹೊಸಪುಸ್ತಕವನ್ನು ಕಂದೀಲದ ಬೆಳಕಿನಲ್ಲಿ ಓದುವುದಕ್ಕೆ

ಮೊದಲುಮಾಡಿದನು. ಅದರ ಹೆಸರು– "ಸಾಧುಸಂತರ ದೇವ ಯಾನಪಂಥ ಅಥವಾ ಸಾಕ್ಷಾತ್ಕಾರಯೋಗ" ವೆಂದು ಇದೆ. ಅದರಲ್ಲಿ ಮಹಾರಾಷ್ಟ್ರದ ಸಂತಶಿರೋಮಣಿಗಳ ಅನುಭಾವದ ಮೆಟ್ಟಿ ಲುಗಳನ್ನು ಅವರವರ ವಾಕ್ಯಗಳಿಂದಲೇ ವಿವರಿಸಲಾಗಿದೆ. ಅಥವಾ ಕೊನೆ ಯಲ್ಲಿ ಜೋಡಿಸಿದ ಚಿಕ್ಕವೆರಡು ಪ್ರಾಚೀನ ಪ್ರಕರಣ ಗ್ರಂಥಗಳ ಮೇಲೆ ಈ ಇಡೀ ಪುಸ್ತಕವು ಆಧುನಿಕ ಭಾಷ್ಯವಾಗಿದೆಯೆಂದು ಹೇಳಬಹುದು.

ಆ ಪ್ರಕರಣಗ್ರಂಥಗಳಲ್ಲೊಂದರಲ್ಲಿ ಜಿಜ್ಞಾಸುವೊಬ್ಬನು ಮಹಾ ಪುರುಷನೊಬ್ಬನಿಗೆ ಹೀಗೆ ಪ್ರಶ್ನಿಸುತ್ತಾನೆ:– "ಅಷ್ಟಾಂಗಿಕ (ರಾಜ್ಯ ಯೋಗವು ಆಚರಿಸುವುದಕ್ಕೆ ಅತಿಶಯವಾಗಿ ಬಿಗಿಯಾಗಿರುವದರಿಂದ ಸಹಜಸ್ಥಿತಿಯ ಪ್ರಣವಾನುಸಂಧಾನವನ್ನು ಹೇಳಿಕೊಡಬೇಕು." ಇಲ್ಲಿ ಮುಖ್ಯವಾಗಿರುವ ಒಂದು ಮಾತಾವುದೆಂದರೆ, ಈ ಇಡೀ ವರುಷದಲ್ಲಿ ನಮ್ಮ ನಾಯಕನು ರಾಜಯೋಗಕ್ಕೆ ಸಂಬಂಧಿಸಿದ ವಿವಿಧ ಗ್ರಂಥ ಗಳನ್ನೋದಿ "ಚಿತ್ತವೃತ್ತಿ ನಿರೋಧಕ್ಕೆ ಅದೊಂದೇ ಏಕಮಾತ್ರ ಪರ ಮೋಪಾಯವೇನೂ ಅಲ್ಲ"ವೆಂಬ ಸಿದ್ಧಾಂತಕ್ಕೆ ಬಂದಿರುವಾಗ ಈ ಹೊಸ ಪುಸ್ತಕವೂ ಅದೇಮಂತ್ರವನ್ನು ಮೊದಲಿಗೇ ಉಚ್ಚರಿಸಿದ್ದರಿಂದ ಅವನಿಗೆ ಒಂದು ಬಗೆಯ ಸೋಜಿಗವೇ ಆಯಿತು. ನಾಮಸ್ಮರಣವೇ ಸಾಧು ಸಂತರ ಬೀಜಮಂತ್ರವಾಗಿರುವದರಿಂದ ಜ್ಞಾನಭಿಕ್ಷುವಿಗೆ ಅದು ತನಗೆ ಕೇವಲ ಸಮೀಪ ಸಂಬಂಧ ವಿಷಯವಾಯಿತು. ಆದರೆ ಆ ನಾಮಾನು ಸಂಧಾನಕ್ಕೆ ಕೆಲವೊಂದು ಕಟ್ಟು ನಿಟ್ಟುಗಳಿದ್ದುದರ ಬಗೆಗೆ ಆತನ ಸಹ ಮತವಿಲ್ಲವಾದರೂ ಅಂತೂ ಅದು ಈಶಚಿಂತನವೆಂಬುದೊಂದು ಮಾತಾ ದರೂ ತುಂಬಾ ಸತ್ಯವಷ್ಟೇ? ಯಾವನಿಗೇ ಆಗಲಿ, ಆತನು ಹೊರಟ ಹಾದಿಯಲ್ಲೇ ನಡೆದು ಗತಿಗಂಡು ಬೇರೆಯವರ ಸಾಕ್ಷಿಗಳು ಸಿಕ್ಕ ಹಾಗೆಲ್ಲಾ ಆತನಿಗೆ ತನ್ನ ಧ್ಯೇಯಸಿದ್ಧಿಯ ವಿಷಯದಲ್ಲಿ ಹೆಚ್ಚಿನ ಆಶೆ ಭರವಸೆಗಳು ಹುಟ್ಟುತ್ತವೆಯೆಂಬುದು ಸರ್ವಸಮ್ಮತವಾದ ವಿಷಯ ವಲ್ಲವೆ?

ಹೀಗೊಂದು ಬಗೆಯ ಹೊಸ ಆಶೆ ಭರಸೆವಗಳ ಹೆಚ್ಚಳ; ಮತ್ತು ಪುಸ್ತಕದೊಳಗಿನ ಅನುಭವಕ್ರಮದ ಒಂದು ಭಿನ್ನವೈಶಿಷ್ಟ್ಯವನ್ನು

ಕಂಡು— “ಆಹಾ ! ಸತ್ಯದ ಮುಖಗಳೆಷ್ಟು ?!” ಎಂಬ ಇನ್ನೊಂದು ಬಗೆಯ ಆಗಾಧ ವಿಸ್ಮಯಗಳ ಕೌತುಕ. ಹೀಗಾಗಿ ನಮ್ಮ ನಾಯಕನ ಅಂತರಾಳದಲ್ಲಿ ಹಗುರಾಗಿ ಏನೋ ಒಂದು ಬಗೆಯ ಹೊಸ ಸ್ಪಂದನಗಳು ಸ್ಫುರಿಸಲಾರಂಭಿಸಿದವು!

ಇದೀಗ ಆ ಅಚ್ಚರಿಗೊಳಿಸಿದ ಅನುಭಾವ ಕ್ರಮದ ಸಾರಾಂಶವನ್ನು ಇಲ್ಲಿ ಒಂದಿಷ್ಟು ವಿವರಿಸದೆ ನನ್ನ ಚಿತ್ತವು ಮುಂದೆ ಹೆಜ್ಜೆಯನ್ನಿಡುವುದಕ್ಕೆ ಒಪ್ಪಲೊಲ್ಲದು. ಆದುದರಿಂದ ಹಾಗೇ ಮಾಡುವೆ—

“ಯಾವದೊಂದು ಇಚ್ಛಿತಪದ್ಧತಿಯಿಂದ (ಇಲ್ಲಿ ಪಾತಂಜಲ ದರ್ಶನದ ‘ಯಥಾಭಿಮತ ಧ್ಯಾನಾದ್ವಾ’ ಎಂಬ ಸೂತ್ರವು ನೆನಪಿಗೆ ಬಾರದಿರದು) ಚಿತ್ತದ ಏಕಾಗ್ರತೆಯು ಸಾಧಿಸುತ್ತ ಬಂದಹಾಗೆಲ್ಲ ವಿವಿಧ ವರ್ಗದ ಪ್ರಕಾಶಗಳು ಗೋಚರಿಸುವವು. ಅವುಗಳಲ್ಲಿ ಕೆಂಪು, ಬಿಳುಪು, ಹಳದಿ, ನೀಲಿ ಎಂದು ನಾಲ್ಕು ಪ್ರಕಾರಗಳಿವೆ. ಮೊದಲಿನ ಮೂರರ ಕ್ರಮಾಕ್ರಮಗಳ ವಿಷಯದಲ್ಲಿ, ಬೇರೆ ಬೇರೆ ಸಂತ ಮಹಾತ್ಮರ ಅಭಿಪ್ರಾಯಗಳಲ್ಲಿ ಒಂದಿಷ್ಟು ಅನೈಕ್ಯವಿದೆಯಾದರೂ ಕೊನೆಯ ನೀಲ ಬಿಂದುದರ್ಶನದ ವಿಷಯದಲ್ಲಿ ತುಂಬಾ ಏಕವಾಕ್ಯತೆಯಿದೆ. ಈ ಪ್ರಕಾಶಗಳು ನಮ್ಮ ಪಿಂಡಾಂಡದ ಚತುರ್ದೇಹಗಳಿಗೆ ಸಂಬಂಧಿಸಿದವುಗಳಾಗಿವೆ. ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣಗಳೆಂಬ ಶರೀರಗಳಲ್ಲಿ ಕ್ರಮವಾಗಿ ಒಂದೊಂದರಲ್ಲಿ ಧ್ಯಾನಕ್ರಿಯೆಯು ಪರಿಣಾಮವಾಗುತ್ತ ನಡೆದ ಹಾಗೆಲ್ಲ ಈ ಒಂದೊಂದು ಬಣ್ಣಗಳು ಒಳಗೆ ಕಾಣಿಸಲಾರಂಭಿಸುವವು. ಮೊದಮೊದಲಿಗೆ ಸ್ಥೂಲಶರೀರದ ತೀರಾ ಜಡಭಾಗದ ದ್ರವ್ಯಗಳ ಮೂಲಕ ಧ್ಯಾನದಲ್ಲಿ ಬರೀ ಒಂದು ಬಗೆಯ ಗಾಢಾಂಧಕಾರವೇ ಇರುತ್ತದೆ. ಇದಕ್ಕೆ ಅಷ್ಟಧಾ ಪ್ರಕೃತಿಯ ಅಂಧಃಕಾರವೆಂದು ಜ್ಞಾನಿಗಳು ಅನ್ನುವರು. ಆದರ ಅನಂತರದಲ್ಲಿ ಒಂದೊಂದಾಗಿ ಮೇಲೆ ಕಾಣಿಸಿದ ಬಣ್ಣಗಳು ಗೋಚರಿಸುವವು. ಆದರೆ ಆ ಬಣ್ಣಗಳು ಅಷ್ಟೊಂದು ನಿಚ್ಚಳವಾಗಿರುವುದಿಲ್ಲ. ಏಕೆಂದರೆ ಪ್ರಕೃತಿಕೋಶಗಳ ಕಾಠಿನ್ಯವು ಇನ್ನೂ ನಿಬಿಡವಾಗಿಯೇ ಇರುತ್ತದೆ. ಎಷ್ಟೋ ಜನ ಸಾಧಕರಿಗೆ ಕ್ರಮವಾಗಿ ಎಲ್ಲ ಬಣ್ಣಗಳೂ ಕಾಣುತ್ತಲೇ ಬರುವವೆಂಬ ನಿಯಮವಿಲ್ಲ. ಕೆಲವರಿಗೆ

ತೀವ್ರ ಅಭ್ಯಾಸದ ಮೂಲಕ ಒಮ್ಮೆಲೇ ಕೊನೆಯ ನೀಲಬಿಂದುವೇ ಗೋಚರಿಸುತ್ತಿರುತ್ತದೆ. ಇದಕ್ಕೆ ಅಣುಬ್ರಹ್ಮವೆಂದು ಹೆಸರು

"ಈ ನೀಲಬಿಂದುವಿನ ದರ್ಶನವಾದರೆ ಆಗ ಅಂತರಿಂದ್ರಿಯ ಜ್ಞಾನವು ಆರಂಭವಾಗಿದೆಯೆಂದು ತಿಳಿಯಬೇಕು. ಅದು ನಮ್ಮ ಪಿಂಡಾಂಡದ ಚತುರ್ಥದೇಹದ ಹಾಗೂ ಚತುರ್ಥ ಅವಸ್ಥೆಯಾದ ತೂರ್ಯದ ಕುರುಹಾಗಿದೆ. ಒಟ್ಟಾರೆ **ಈ ನೀಲಬಿಂದುದರ್ಶನ ಅಥವಾ ಅಣುಬ್ರಹ್ಮಸಾಕ್ಷಾತ್ಕಾರವು ಮಹಾರಾಷ್ಟ್ರದ ಸಾಧುಸಂತರ ದೇವಯಾನಸಂಥದ ಮೊಟ್ಟ ಮೊದಲನೆಯ ಮೆಟ್ಟಿಲಾಗಿದೆ.**

"ಆ ಮೇಲೆ ವೃತ್ತಿಲಯವು ಒಂದೊಂದು ದೇಹದಿಂದ ಇನ್ನೊಂದು ದೇಹದ ಕಡೆಗೆ ಸಾಗಿದಂತೆ ಬೇರೆ ಬೇರೆ ಪ್ರಕಾಶಮಯ ಆಕೃತಿಗಳು ಕಾಣುವುದಕ್ಕೆ ಆರಂಭವಾಗುತ್ತದೆ. ಆಗ ಒಂದೊಂದು ದೇಹಕ್ಕೆ ಸಂಬಂಧಿಸಿದ ಅವಸ್ಥಾವಿಶೇಷವು ಅದರ ಮುಂದಿನ ದೇಹದ ಅವಸ್ಥಾವಿಶೇಷದಲ್ಲಿ ಲಯವಾಗುತ್ತಿದೆಯೆಂದು ತಿಳಿಯಬೇಕು. ಜಾಗೃತ, ಸ್ವಪ್ನ, ಸುಷುಪ್ತಿ, ತೂರ್ಯಗಳೆಂಬ ಚತುರವಸ್ಥೆಗಳು ಒಂದರೊಳಗೊಂದ ಲಯವಾಗುತ್ತ ಬರುವವು. ಮಹಾರಾಷ್ಟ್ರದ ಸಂತಪರಿಭಾಷೆಯಲ್ಲಿ ಇವುಗಳಿಗೆ ಓಂಕಾರದ ಘಟಕಗಳಾದ ಅ, ಉ, ಮ, ಮತ್ತು ಅನುಸ್ವಾರಗಳೆಂಬ ನಾಲ್ಕು (ಮೂರೂವರೆ) ಮಾತ್ರೆಗಳನ್ನು ಅಂಕಿತಗಳಾಗಿ ಕಲ್ಪಿಸಿದ್ದಾರೆ. ಮತ್ತು ಒಂದೊಂದಕ್ಕೆ ಬ್ರಹ್ಮ, ವಿಷ್ಣು, ಸದಾಶಿವ, ದತ್ತಾತ್ರೇಯ ಎಂಬ ನಾಲ್ಕು ಅಧಿಷ್ಠಾತೃ ದೈವತಗಳನ್ನು ಕಲ್ಪಿಸಿದ್ದಾರೆ. ನಾಲ್ಕವಸ್ಥೆಗಳ ಲಯಕ್ರಮದಿಂದ ಗೋಚರಿಸುವ ನಾಲ್ಕು ವಿಧದ ಪ್ರಕಾಶಾಕೃತಿಗಳಿಗೆ ಮೇಲೆ ಹೇಳಿದ ನಾಲ್ಕು ದೈವತಗಳ ಇಲ್ಲವೆ ನಾಲ್ಕು ಪ್ರಣವ ಮಾತ್ರೆಗಳ ಸಾಕ್ಷಾತ್ಕಾರವೆಂದು ಹೇಳುತ್ತಾರೆ.

"ಬ್ರಹ್ಮ ಸಾಕ್ಷಾತ್ಕಾರದಲ್ಲಿ ಅಥವಾ ಪ್ರಥಮಾವಸ್ಥಾ ಲಯಕ್ರಮದಲ್ಲಿ—ಸಣ್ಣದೊಡ್ಡ ಮುತ್ತುಗಳಂಥ ಪ್ರಕಾಶಾಕೃತಿಗಳು ಕಾಣಿಸುತ್ತವೆ. ಎರಡನೆಯದಾದ ಮಕಾರ ಮಾತ್ರಾ ಅಥವಾ ವಿಷ್ಣು ಸಾಕ್ಷಾತ್ಕಾರದಲ್ಲಿ—ಎಳ್ಳಿನ ಹೂವುಗಳಂಥ ಆಕೃತಿಗಳು ಪ್ರಕಾಶಾವರಣದಲ್ಲಿ

ಸುಳಿಗಾಳಿಗೆ ತೇಲಿದಂತೆ ಮೆಲ್ಲಗೆ ಅಲೆಯುತ್ತಿರುತ್ತವೆ. ಮೂರನೆಯು ದಾದ ಶಂಕರಸಾಕ್ಷಾತ್ಕಾರಾವಸ್ಥೆಯಲ್ಲಿ— ವರ್ತುಲದೊಳಗೆ ಉಪ ವರ್ತುಲಗಳುಳ್ಳ ಪ್ರಕಾಶಾಕೃತಿಗಳು ಕಾಣಿಸುವವಲ್ಲದೆ ಅರ್ಧಚಂದ್ರಾ ಕೃತಿಗಳೂ ಗೋಚರಿಸುವವು. ಕೊನೆಯದಾದ ತೂರ್ಯಾವಸ್ಥಾಲಯ ದಲ್ಲಿ–ಸೂರ್ಯಚಂದ್ರರುದಿಸಿದಂತಾಗಿ ನವಿಲುಗರಿಗಳಲ್ಲಿ ನೀಲಮಣಿಯು ಅಡಕವಾಗಿರುವಂತಹದೊಂದು ಬೆಳಕಿನ ಸಿರಿಯು ಕಾಣಿಸುತ್ತದೆ.

" ಇಲ್ಲಿಗೆ ಬಂದಬಳಿಕ ಅಂದರೆ ಚತುರ್ದೇಹ ಚತುರವಸ್ಥೆಗಳ ಲಯವಾದ ಬಳಿಕ ಉನ್ಮನಿಯಲ್ಲಿ ಈ ಚತುರ್ದೇಹ ಮತ್ತು ಚತುರ ವಸ್ಥೆಗಳಿಗೆ ಅತೀತನಾದ ನಮ್ಮ ಅಂತರಾತ್ಮನು ಅಂಗುಷ್ಠ ಪ್ರಮಾಣದ ಪ್ರಭೆಯಾಗಿ ಪ್ರಕಾಶಿಸುವನು. **ದೇವಯಾನ ಪಂಥದ ಮೇಲೆ ನಡೆದಿರುವ ಪಾಂಥಸ್ಥನಿಗೆ ಇದು ಪರಮ ವಿಶ್ರಾಂತಿಸ್ಥಾನವು.**

" ಇಲ್ಲಿಗೆ ಪಿಂಡಾಂಡದ ಸೀಮೆ ಮುಗಿದು ಹೋಯಿತು. ಹೊರಗೆ ಬ್ರಹ್ಮಾಂಡದಲ್ಲಿ ಮಹಾಕಾಶವಿರುವಂತೆ ಒಳಗೆ ಪಿಂಡಾಂಡದಲ್ಲಿ ಚಿದಾ ಕಾಶವಿದೆ. ಅಲ್ಲಿ ಈ ಅಂತರಾತ್ಮನೆಂಬ ಚಿತ್ಸೂರ್ಯನೂ ಉದಯ ವಾದೊಡನೆ ಅಂತರಂಗದ ಅಜ್ಞಾನಾಂಧಃಕಾರವು ಹರಿದು ಹೋಗಿ ಎಲ್ಲ ಕಡೆಗೆ ಚಿತ್ಪ್ರಭೆಯು ಪಸರಿಸುವದು. ( ಅಥವಾ ಎಲ್ಲಾ ಚಿನ್ಮಯ ವಾಗಿ ತೋರುವುದು ಎಂದು ನನ್ನ ಅರ್ಥ ) ಈ ಆತ್ಮ ಪ್ರಕಾಶನದಿಂದ ಸಾಧಕನಲ್ಲಿ ಮುಂದಿನ ಮಾರ್ಗಕ್ರಮಣಕ್ಕೆ ತಕ್ಕ ಉತ್ಸಾಹ ವಿಶ್ವಾಸಗಳು ಉದಯಿಸುತ್ತವೆ. **ಆದರೆ ಈಶಕೃಪೆಯಿದ್ದರೇನೆ ಇದರ ಮುಂದಿನ ಮಾರ್ಗಕ್ರಮಣವು ಸಾಗುವದು. ಇಲ್ಲದಿದ್ದರೆ ಇಲ್ಲ.**

" ಹೀಗೆ ಪಿಂಡಾಂಡದ ಚತುರ್ದೇಹಗಳೊಳಗಿಂದ ಹಾದು ವೃತ್ತಿ ಲಯವು ಉನ್ಮನಿಗೆ ಬಂದಾಗ ಪಿಂಡಾತೀತನಾದ **ಆತ್ಮನ ಆನಂದ ಮಯ ಸಾಕ್ಷಾತ್ಕಾರವು ಹೇಗೆ ಆಯಿತೋ ಹಾಗೆಯೇ** ಇನ್ನು ಮುಂದಿನ ಬ್ರಹ್ಮಾಂಡದ ಚತುರ್ದೇಹ ಚತುರವಸ್ಥೆಗಳೊಳಗಿಂದ ಹಾದು ಹೊರಟ ಹಾಗೆ ಕೊನೆಗೆ ಬ್ರಹಾಂಡಕ್ಕೆ ಅತೀತನಾದ **ಪರಮಾತ್ಮನ ಏಕೀಭೂತ ಮಹಾ ದಿವ್ಯಾನಂದಮಯ ಸಾಕ್ಷಾತ್ಕಾರವಾಗು ತ್ತದೆ.** ಅಲ್ಲಿ ಆತ್ಮ ಪರಮಾತ್ಮರಲ್ಲಿ ಭೇದವುಳಿಯದು.

" ಆತ್ಮಸೂರ್ಯನ ಚಿತ್ಪ್ರಭೆಯಲ್ಲಿ ಆನಂದವನ್ನೂ ವಿಶ್ರಾಮವನ್ನೂ ಪಡೆದುಕೊಂಡ ಮೇಲೆ ಸಾಧಕನು ಮುಂದಿನ ಮಾರ್ಗಕ್ಕೆ ಸಿದ್ಧನಾಗುವನು. ಇಲ್ಲಿಯ ವರೆಗಿನ್ನ ಉಪಾಸನಾಪದ್ಧತಿಯು ಇನ್ನು ಮುಂದೆ ಕೇವಲ ಒಳಗೊಳಗೇ ಜಾಗೃತವಾಗಿ ಇರುವ ಅನುಸಂಧಾನದ ಹೊರತು ಅನ್ಯಸಾಧನಗಳ ರಾಜ್ಯವು ಇಲ್ಲಿಗೆ ಹಿಮ್ಮೆಟ್ಟಿತು.

" ಆತ್ಮನ ಸ್ಥೂಲದೇಹಕ್ಕೆ ಸದೃಶವಾಗಿರುವ ಈಶನ ಬಾಹ್ಯರೂಪವಾದ ಈ ಸಮಸ್ತ ಸೃಷ್ಟಿಯೆಂಬ ವಿರಾಟದೇಹದ ಸತ್ಸ್ವರೂಪದ ದರ್ಶನವಾಗುತ್ತದೆ. ಅದಕ್ಕೆ ಚಿತ್ಸೂರ್ಯ ಮಂಡಳವೆಂದು ಹೆಸರು. ಇಲ್ಲಿ ಮಹಾಪ್ರಭೆಯು ಪ್ರಕಟವಾಗುವದರಿಂದ ಜ್ಞಾನದ ಪರಿಘವು ವಿಸ್ತೃತವಾಗುತ್ತದೆ. ಇದರ ಮುಂದೆ ಈಶನ ಸೂಕ್ಷ್ಮದೇಹವಾದ ಹಿರಣ್ಯಗರ್ಭದರ್ಶನದಿಂದ ಮಹಾಶೀತಲಶಾಂತಿಯು ಅನುಭವಕ್ಕೆ ಬರುತ್ತದೆ. ಇದಕ್ಕೆ ಚಿಚ್ಚಂದ್ರಮಂಡಲವೆಂದು ಹೆಸರು. ಚಿತ್ಸೂರ್ಯ ಮಂಡಲದ ಮಹಾಪ್ರಭೆಯ ಪ್ರವಾಸದಲ್ಲಿ ಬಳಲಿದ ಸಾಧಕನಿಗೆ ಮಹಾಸಮಾಧಾನವು ಲಭಿಸುತ್ತದೆ. ಅದರ ಪರಿಣಾಮವು ಭೌತಿಕಜಗತ್ತಿನಲ್ಲಿ ಕೂಡ ಕಾಣಬಹುದು. ಕಡುಬಿಸಿಲಲ್ಲಿ ಮೈದೆರೆದು ಕುಳಿತರೂ ಮೈಗೆ ಕಾವು ತಾಕುವ ಬದಲು ಶೀತಲತೆಯು ಸ್ಪರ್ಶವೇ ಆಗುತ್ತದೆ. 'ಕಣ್ಣಿನ ಕಣ್ಣು-ಮನಸ್ಸಿನ ಮನಸ್ಸು' ಎಂದು ಉಪನಿಷತ್ತಿನಲ್ಲಿ ಹೇಳಿದ ಮಾತಿನ ಅನುಭವವು ಇಲ್ಲಿಯೇ ಬರುತ್ತದೆ. **ಆದರೆ ಈ ಚಿಚ್ಚಂದ್ರ ಮಂಡಲದಿಂದ ಅವಸ್ಥೆಯು ಪುನಃ ಹಿಂದಿನ ಸೂರ್ಯಮಂಡಲದ ಕಡೆಗೆ ಹಿಂದಿರುಗುತ್ತಿರುತ್ತದೆ.** 'ಇಲ್ಲಿ ಬಹಳೇ ಜಾಗ್ರತೆ'ಯೆಂದು ಶ್ರೀ ರಾಮದಾಸರ ಸೂಚನೆ.

" ಅದರ ಮುಂದೆ ದೇವನ ಅವ್ಯಾಕೃತವೆಂಬ ಕಾರಣದೇಹದ ಅಗ್ನಿ ಮಂಡಲದಲ್ಲಿ ಆ ಚಿಚ್ಚಂದ್ರಮಂಡಲದ ಲಯವಾಗುವದರಿಂದ ವಿಕಾರರಹಿತವಾದ ಆನಂದವುಂಟಾಗುತ್ತದೆ. ಅದರ ಮುಂದೆ ದೇವದೇವನ ಮಹಾಕಾರಣದೇಹದ ಮೂಲ ಪ್ರಕೃತಿಯಲ್ಲಿ ಹಿಂದಿನಸರ ಲಯವಾಗುವದರಿಂದ ಸೃಷ್ಟಿಯ ಮೂಲಸ್ಫುರಣದ ದರ್ಶನವಿಲ್ಲಿ ಲಭಿಸುತ್ತದೆ. ಸ್ಥಲಕಾಲಗಳ ಉಗಮಸ್ಥಾನವಿದು. ಇದಕ್ಕೆ ಧ್ರುವಮಂಡಲವೆಂದು ಹೆಸರು.

ಯಾಕೆಂದರೆ ಇಲ್ಲಿಗೆ ಬಂದ ಅವಸ್ಥೆಯು ಅಚಲಾಯತನವಾಗಿ ಬಿಡುವದು. **ಅದಕ್ಕೆ ತಿರುಗಿ ಚ್ಯುತಿಯೆಂಬುದಿಲ್ಲ.**

"ಹಿಂದೆ ಪಿಂಡದೇಹಗಳಲ್ಲಿ ವೃತ್ತಿಲಯವಾಗುತ್ತ ಬಂದ ಹಾಗೆ ವಿವಿಧ ಅನುಭವಗಳು ಬಂದು ಕೊನೆಗೆ ಚತುರ್ದೇಹಾತೀತನಾದ ಆತ್ಮನ ಸಾಕ್ಷಾತ್ಕಾರವಾದಂತೆ ಈಗ ಈ ಬ್ರಹ್ಮಾಂಡದ ಚತುರ್ದೇಹಾತೀತನಾದ ದೇವದೇವನ ಮಹಾಸಾಕ್ಷಾತ್ಕಾರವು ಇದರ ಮುಂದೆ ಆಗುತ್ತದೆ. ಇಲ್ಲಿಗೆ ನಿಶ್ಶಬ್ದಂ ಬ್ರಹ್ಮವೆಂದರೆ ತೀರಿತು !"

ಇದೀಗ ರಾತ್ರಿ ಹನ್ನೆರಡರ ಸುಮಾರು. ನಮ್ಮ ನಾಯಕನ ಅಂತರಂಗದ ಅಂತರಾಳದಲ್ಲಿ ಹೊಸ ಸ್ಫೂರ್ತಿಯು ಉದಿಸಿತು. ಅರವಿಂದರ– "Will and leave its result to god" "ಸಂಕಲ್ಪಿಸು ಆದರೆ ಫಲವನ್ನು ದೇವನ ಕಡೆಗೆ ಬಿಟ್ಟುಕೊಡು" ಎಂಬ ಮಹಾವಾಕ್ಯವು ಅಂತರ್ನಿರ್ದೇಶವಾಗಿ ಹೊರಹೊಮ್ಮಿತು. ಮತ್ತು ಆರುತಿಂಗಳಿಂದ ಉರಿಯುತ್ತಿದ್ದ ಹೋಮಕುಂಡವೀ ಕ್ಷಣದಲ್ಲಿ ಶಾಂತವಾಯಿತು !

ಓಂ ಶ್ರೀ ಓಂ!